ಮಂಗಳವಾರ, ಮಾರ್ಚ್ 31, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಟಾವು...
ಚಿಕ್ಕಮಗಳೂರಿನ ರೈತರೊಬ್ಬರು ರಾಗಿ ಕಟಾವು ಮಾಡುವುದರಲ್ಲಿ ಸೋಮವಾರ ನಿರತರಾಗಿದ್ದರು

ಬರ್ಗರ್ ಮಿಂಚು
ರಾಜಸ್ಥಾನ ರಾಯಲ್ಸ್ ತಂಡದ ವೇಗಿ ನಾಂಡ್ರೆ ಬರ್ಗರ್ ಅವರು ಸೋಮವಾರ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಎರಡು ವಿಕೆಟ್ ಪಡೆದು ಮಿಂಚಿದರು

ನೀವು **ಸುರಕ್ಷಿತ** ದಾರಿಯನ್ನು ಆರಿಸಲಿಲ್ಲ.
ನಿಮ್ಮದೇ ಒಂದು ಲೋಕವನ್ನು ಕಟ್ಟುವ ಕನಸಿನಿಂದ ಆರಂಭಿಸಿದ್ದೀರಿ.

ಆ ದಿನದಿಂದ ಪ್ರತಿದಿನವೂ ಸುಲಭವಾಗಿರಲಿಲ್ಲ.
ನಂಬಿಕೆ, ಹಠ ಮತ್ತು ಕೆಲ ಸಾಹಸಮಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು.

ಸಂಖ್ಯೆಗಳು. ಹಣ. ಅನುಸರಣೆ. - ಆಟ ಎಂದಿಗೂ ನಿಲ್ಲುವುದಿಲ್ಲ

ಆಟ ನಿಲ್ಲದಿದ್ದಾಗ,
ಅದರೊಂದಿಗೆ ಸಾಗುವ ಸ್ಪಷ್ಟತೆ ನಿಮಗೆ ಅಗತ್ಯ.

ಅಲ್ಲಿ ನಾವು ಬರುತ್ತೇವೆ.
ನಿಮ್ಮ ವ್ಯವಹಾರವನ್ನು ನಿಯಂತ್ರಣದಲ್ಲಿ ಇಡುತ್ತಾ, ಶಾಂತವಾಗಿ ಕೆಲಸ ಮಾಡುತ್ತೇವೆ,
ನಿಮ್ಮ **ನಿರ್ಧಾರಗಳನ್ನು ಗಟ್ಟಿಯಾಗಿಸುತ್ತೇವೆ.**

ಟ್ಯಾಲಿಪ್ರೈಮ್ - ಭಾರತದ ಅತ್ಯಂತ ನೆಚ್ಚಿನ ಬಿಸಿನೆಸ್ ಸಾಫ್ಟ್‌ವೇರ್.
ದಿಟ್ಟ ಬಿಸಿನೆಸ್ ಗಳಿಗಾಗಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಜೊತೆಗೆ.

Tally Prime
RCB
Official Business Management Platform

Behind Bold Businesses

e-Invoicing | GST | Banking | Cloud

93536 91824
91875 59310

Scan here

ಬಿಜೆಪಿ ಆಡಳಿತದಲ್ಲಿ ಶಾಂತಿ ಸ್ಥಾಪನೆ

ದೀರ್ಘಾವಧಿಯ ಅಸ್ಥಿರತೆ ಕಂಡಿದ್ದ ಅಸ್ಸಾಂ ಈಗ ಬದಲಾಗಿದೆ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): 'ಅಸ್ಸಾಂ ರಾಜ್ಯವು ಸುದೀರ್ಘ ಕಾಲ ಅಸ್ಥಿರತೆಯನ್ನು ಕಂಡಿದೆ. ಆದರೆ, ಬಿಜೆಪಿಯ ಡಬಲ್ ಎಂಜಿನ್ ಸರ್ಕಾರವು ರಾಜ್ಯದಲ್ಲಿ ಶಾಂತಿ ಸ್ಥಾಪನೆಗೆ ಎಲ್ಲ ಪ್ರಯತ್ನಗಳನ್ನು ಮಾಡಿದ್ದರಿಂದ ಕಳೆದ ದಶಕದಲ್ಲಿ ಪರಿಸ್ಥಿತಿ ಬದಲಾಯಿತು' ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

ಬಿಜೆಪಿ ಅಸ್ಸಾಂ ರಾಜ್ಯ ಘಟಕದ ಬೂತ್ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ, ಈಶಾನ್ಯ ಭಾಗದ ವಿವಿಧ ಸಂಘಟನೆಗಳೊಂದಿಗೆ ಹನ್ನೆರಡು ಶಾಂತಿ ಒಪ್ಪಂದಗಳಿಗೆ ಸರ್ಕಾರ ಸಹಿ ಹಾಕಿದೆ ಎಂದು ತಿಳಿಸಿದ್ದಾರೆ.

'ಕಾಂಗ್ರೆಸ್ ಪಕ್ಷವು ಈ ಹಿಂದೆ ಪ್ರಚಾರ ಗಿಟ್ಟಿಸುವ ಮತ್ತು ಜನರ ದಾರಿ ತಪ್ಪಿಸುವ ಉದ್ದೇಶದಿಂದ ಮಾತ್ರ ಶಾಂತಿ ಒಪ್ಪಂದ ಮಾಡಿತ್ತು ಎಂಬುದನ್ನು ಬಿಜೆಪಿ ಕಾರ್ಯಕರ್ತರು ಜನರಿಗೆ ನೆನಪಿಸಬೇಕು' ಎಂದು ಪ್ರಧಾನಿ ಹೇಳಿದ್ದಾರೆ.

'ಅಸ್ಸಾಂ ರಾಜ್ಯವು ಹಿಂಸಾಚಾರದಲ್ಲಿ ಹೊತ್ತಿ ಉರಿಯುತ್ತಿದ್ದ ಕಾಲವನ್ನು ನಾವು ನೋಡಿದ್ದೇವೆ. ಈ ರಾಜ್ಯ ದೀರ್ಘಾವಧಿಯ ಅಸ್ಥಿರತೆಯನ್ನು ಕಂಡಿದೆ. ಆದರೆ ಕಳೆದ ದಶಕದಲ್ಲಿ ಪರಿಸ್ಥಿತಿ ಬದಲಾಗಿದ್ದು, ಶಾಂತಿ ಸ್ಥಾಪನೆಯಾಗಿರುವುದರಿಂದ ಜನರಲ್ಲಿ ನಾವು ಹೊಸ ಆತ್ಮವಿಶ್ವಾಸವನ್ನು ಕಾಣಬಹುದು' ಎಂದಿದ್ದಾರೆ.

'ಅಸ್ಸಾಂನಲ್ಲಿ ಕಾಂಗ್ರೆಸ್ ಆಡಳಿತದಲ್ಲಿ ಶಾಂತಿ ಒಪ್ಪಂದಗಳನ್ನು ಕಡೆಗಣಿಸಲಾಗಿತ್ತು ಮತ್ತು ಯುವ ಜನರು ಹಲವು ತೊಂದರೆ ಅನುಭವಿಸಿದ್ದಾರೆ. ಬಂಡುಕೋರರು ಮತ್ತು ವಿದ್ಯಾರ್ಥಿ ಸಂಘಟನೆಗಳೊಂದಿಗಿನ ಯಾವುದೇ ಒಪ್ಪಂದ ಕೂಡಾ ಕಾಂಗ್ರೆಸ್ ಇದ್ದ ಸಂದರ್ಭದಲ್ಲಿ ಪರಿಣಾಮಕಾರಿ ಎನಿಸಲಿಲ್ಲ' ಎಂದು ಆರೋಪಿಸಿದ್ದಾರೆ.

'ರಾಜ್ಯದಲ್ಲಿ ಶಾಂತಿ ಸ್ಥಾಪಿಸಲು ಮತ್ತು ಯುವಕರ ಭವಿಷ್ಯವನ್ನು ಉಜ್ವಲಗೊಳಿಸಲು ಬಿಜೆಪಿ ಸಾಕಷ್ಟು ಕೆಲಸ ಮಾಡಿದೆ. ನಾವು ಶಾಂತಿ ಒಪ್ಪಂದಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುತ್ತಿದ್ದೇವೆ. ಕಳೆದ ದಶಕದಲ್ಲಿ ಪ್ರಾಮಾಣಿಕ ಪ್ರಯತ್ನದ ಮೂಲಕ ಶಾಂತಿ ಹೇಗೆ ಸ್ಥಾಪಿಸಲಾಗಿದೆ ಎಂಬುದಕ್ಕೆ ಅಸ್ಸಾಂ ಸಾಕ್ಷಿಯಾಗಿದೆ' ಎಂದು ಹೇಳಿದ್ದಾರೆ.

ಬಾಂಗ್ಲಾ ನುಸುಳುಕೋರರಿಗೆ ಕಾಂಗ್ರೆಸ್ ರಕ್ಷಣೆ: ನಿತಿನ್

ಜಾಗೀರೋಡ್ (ಅಸ್ಸಾಂ) (ಪಿಟಿಐ): 'ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿದ್ದಾಗ ಬಾಂಗ್ಲಾದೇಶದ ಪ್ರಜೆಗಳಿಗೆ ಅಕ್ರಮವಾಗಿ ಅಸ್ಸಾಂ ಪ್ರವೇಶಿಸಲು ಅನುಕೂಲ ಮಾಡಿಕೊಟ್ಟಿದೆ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೋಮವಾರ ಆರೋಪಿಸಿದರು.

ಮೊರೀಗಾಂವ್ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, 'ದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಅಸ್ಸಾಂನ ಸಾಂಪ್ರದಾಯಿಕ ಸ್ಕಾರ್ಫ್ 'ಗಮ್ಛಾ' ನೀಡಿದಾಗ ಅದನ್ನು ಧರಿಸಲಿಲ್ಲ. ಆ ಮೂಲಕ ರಾಜ್ಯದ ಜನರ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ್ದಾರೆ' ಎಂದು ಟೀಕಿಸಿದರು.

'ಆದರೆ, ರಾಹುಲ್ ಅವರು ಆಗಿಂದಾಗ್ಗೆ ಮಸೀದಿಗೆ ಭೇಟಿ ನೀಡುತ್ತಾರೆ ಮತ್ತು ಬಹಳ ಸಂತೋಷದಿಂದ ಟೋಪಿ ಧರಿಸುತ್ತಾರೆ' ಎಂದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಮೊರೀಗಾಂವ್ ಜಿಲ್ಲೆಯಲ್ಲಿ ಸೋಮವಾರ ಚುನಾವಣಾ ರ್‍ಯಾಲಿಯಲ್ಲಿ ಪಾಲ್ಗೊಂಡರು
ಪಿಟಿಐ ಚಿತ್ರ

'ಕಾಂಗ್ರೆಸ್ ಅವಧಿಯಲ್ಲಿ ಅಕ್ರಮವಾಗಿ ಪ್ರವೇಶಿಸಿರುವ ಬಾಂಗ್ಲಾದೇಶಿ ನುಸುಳುಕೋರರಿಗೆ ನಿರ್ಗಮನದ ಬಾಗಿಲನ್ನು ಬಿಜೆಪಿ ಸರ್ಕಾರ ತೋರಿಸುತ್ತಿದೆ. ಬಿಜೆಪಿ ಆಡಳಿತದ 10 ವರ್ಷಗಳಲ್ಲಿ ಅಸ್ಸಾಂ ಸಾಕಷ್ಟು ಅಭಿವೃದ್ಧಿಯನ್ನು ಕಂಡಿದೆ' ಎಂದು ಪ್ರತಿಪಾದಿಸಿದರು.

ಸವಾಲು ಸ್ವೀಕರಿಸಿದ ಪಿಣರಾಯಿ

ತಿರುವನಂತಪುರ (ಪಿಟಿಐ): ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ವಿಪಕ್ಷದ ನಾಯಕ ವಿ.ಡಿ. ಸತೀಶನ್ ಅವರು ಮುಂದಿಟ್ಟ 'ಬಹಿರಂಗ ಚರ್ಚೆ'ಯ ಸವಾಲನ್ನು ಸ್ವೀಕರಿಸಿದ್ದು, ಚುನಾವಣೆಗೆ ಮುನ್ನ ರಾಜಕೀಯ ಕಾವು ಏರುವಂತೆ ಮಾಡಿದ್ದಾರೆ.

'ಅಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಜತೆ ಬಹಿರಂಗ ಚರ್ಚೆಗೆ ಸಿದ್ಧ' ಎಂದು ಸತೀಶನ್ ಅವರು ಭಾನುವಾರ ಸವಾಲು ಹಾಕಿದ್ದರು.

ಸೋಮವಾರ ಸಾಮಾಜಿಕ ಮಾಧ್ಯಮದಲ್ಲಿ ಸರ್ಕಾರದ ಅಭಿವೃದ್ಧಿ ಕೆಲಸಗಳ ಪಟ್ಟಿಯನ್ನು ಪೋಸ್ಟ್ ಮಾಡಿರುವ ಪಿಣರಾಯಿ, 'ಇಲ್ಲಿ ಪಟ್ಟಿ ಮಾಡಲಾದ ಸಾಧನೆಗಳ ಆಧಾರದ ಮೇಲೆ ಚರ್ಚೆಗೆ ಸಿದ್ಧ' ಎಂದಿದ್ದಾರೆ.

ಪಿಣರಾಯಿ ಅವರ ಪೋಸ್ಟ್‌ಗೆ ತಕ್ಷಣ ಪ್ರತಿಕ್ರಿಯಿಸಿರುವ ಸತೀಶನ್, 'ಮುಖ್ಯಮಂತ್ರಿ ಅವರು ತಿಳಿಸುವ ಸಮಯ ಮತ್ತು ಸ್ಥಳದಲ್ಲಿ ಚರ್ಚೆಯಲ್ಲಿ ಭಾಗವಹಿಸಲು ನಾನೂ ಸಿದ್ಧ' ಎಂದಿದ್ದಾರೆ.

'ಈಗ ಮುಖ್ಯಮಂತ್ರಿ ಅವರು ಚರ್ಚೆಗೆ ಸಿದ್ಧ ಎಂದು ಹೇಳಿರುವುದರಿಂದ ಸ್ಥಳ ಮತ್ತು ಸಮಯವನ್ನು ಅವರೇ ನಿರ್ಧರಿಸಲಿ. ಅದಕ್ಕೆ ತಕ್ಕಂತೆ ನಾನು ಚರ್ಚೆಯಲ್ಲಿ ಪಾಲ್ಗೊಳ್ಳುವೆ. ಉಳಿದದ್ದನ್ನು ಜನರೇ ನಿರ್ಧರಿಸಲಿ' ಎಂದು ಸತೀಶನ್ ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಉಚಿತ ಕೊಡುಗೆಯಲ್ಲ ಅದು ಸಾಮಾಜಿಕ ನ್ಯಾಯ'

ಚೆನ್ನೈ (ಪಿಟಿಐ): 'ಚುನಾವಣೆ ವೇಳೆ ಘೋಷಿಸುವ ಉಚಿತ ಕೊಡುಗೆಗಳು ಕಲ್ಯಾಣ ಕಾರ್ಯಕ್ರಮಗಳಾಗಿವೆ. ಅವು ಸಾಮಾಜಿಕ ನ್ಯಾಯಕ್ಕಾಗಿ ಮಾಡುವ ಹೂಡಿಕೆಗಳು' ಎಂದು ಡಿಎಂಕೆಯ ನಾಯಕಿ ಕನಿಮೊಳಿ ಪ್ರತಿಪಾದಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ಮಹಿಳೆಯರಿಗೆ ಶುಲ್ಕರಹಿತ ಬಸ್ ಪ್ರಯಾಣ ಸೇವೆ ಒದಗಿಸುವುದು, ಸಾಮಾಜಿಕ ನ್ಯಾಯವನ್ನು ಭದ್ರಪಡಿಸುವ ಸಾಮಾಜಿಕ ಹೂಡಿಕೆಯಾಗಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಸಾಮಾಜಿಕ ನ್ಯಾಯವನ್ನು ವಿರೋಧಿಸುವವರು ಇವು ಉಚಿತ ಕೊಡುಗೆಗಳು ಎಂದು ಟೀಕಿಸುತ್ತಾರೆ' ಎಂದರು.

'ಕಲ್ಯಾಣ ಕಾರ್ಯಕ್ರಮಗಳು ಜನರಿಗೆ ಪ್ರೋತ್ಸಾಹ ನೀಡುತ್ತವೆ ಹಾಗೂ ಆರ್ಥಿಕ ಬೆಳವಣಿಗೆಗೆ ಸಹಾಯ ಮಾಡುತ್ತವೆ. ಏಕೆಂದರೆ ಇದು ಜನರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ' ಎಂದರು.

ಕಾಂಗ್ರೆಸ್ ಸೇರಿದ ಟಿಎಂಸಿ ಶಾಸಕ ಖಾಜಿ ಅಬ್ದುರ್ ರಹೀಂ

ನವದೆಹಲಿ (ಪಿಟಿಐ): ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ರಾಜೀನಾಮೆ ನೀಡಿದ್ದ ಶಾಸಕ ಖಾಜಿ ಅಬ್ದುರ್ ರಹೀಂ ಅವರು ಕಾಂಗ್ರೆಸ್ ಸೇರ್ಪಡೆಯಾಗಿದ್ದಾರೆ.

24 ಪರಗಣ ಜಿಲ್ಲೆಯ ಬದುರಿಯಾ ಕ್ಷೇತ್ರದ ಶಾಸಕರಾಗಿರುವ ರಹೀಂ ಅವರಿಗೆ ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಎಂಸಿ ಟಿಕೆಟ್ ನಿರಾಕರಿಸಿತು. ಅವರು ಪಕ್ಷದಲ್ಲಿನ ತಮ್ಮ ಎಲ್ಲಾ ಹುದ್ದೆಗಳಿಗೂ ಭಾನುವಾರ ರಾಜೀನಾಮೆ ನೀಡಿದರು.

ಇದೀಗ ಬದುರಿಯಾದಲ್ಲಿ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಅಬ್ದುರ್ ರಹೀಂ ಅವರು ಟಿಕೆಟ್ ಪಡೆದುಕೊಂಡಿದ್ದಾರೆ. ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಸೋಮವಾರ ಕಾಂಗ್ರೆಸ್‌ಗೆ ಅವರು ಸೇರ್ಪಡೆಗೊಂಡರು.

'ಅಸ್ಸಾಂ ಯುವಕರಿಗೆ ಉದ್ಯೋಗ'

ಗುವಾಹಟಿ (ಪಿಟಿಐ): 'ಅಸ್ಸಾಂ ಯುವಕರಿಗೆ ಉದ್ಯೋಗ ಸೃಷ್ಟಿಸುವುದೇ ಕಾಂಗ್ರೆಸ್ ಕಾರ್ಯಸೂಚಿ ಆಗಿದೆ' ಎಂದು ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಪುತ್ರ ಸೇರಿದಂತೆ ಅಸಂಖ್ಯಾತ ಯುವಕರು ಉತ್ತಮ ಗುಣಮಟ್ಟದ ಜೀವನದ ಹುಡುಕಾಟದಲ್ಲಿ ಈಶಾನ್ಯ ರಾಜ್ಯ ತೊರೆದಿದ್ದಾರೆ' ಎಂದು ಕಾಂಗ್ರೆಸ್‌ನ ಕೇಂದ್ರ ವೀಕ್ಷಕರೂ ಆಗಿರುವ ಅವರು ತಿಳಿಸಿದರು.

'ಬಹಳಷ್ಟು ತೊಂದರೆಗಳ ನಡುವೆಯೂ ಶಿಕ್ಷಣ ಪೂರೈಸುವ ಯುವಕರಿಗೆ ನಮ್ಮ ಭರವಸೆ ಉದ್ಯೋಗವಾಗಿದೆ. ಇಲ್ಲಿಯೇ ಶಿಕ್ಷಣ ಪೂರೈಸುವ ಅಸಂಖ್ಯಾತ ಯುವಕರು ಉದ್ಯೋಗಕ್ಕಾಗಿ ದಕ್ಷಿಣದ ರಾಜ್ಯಗಳು, ಮುಂಬೈ, ದೆಹಲಿಗೆ ಹೋಗುತ್ತಿದ್ದಾರೆ' ಎಂದು ಸುದ್ದಿಸಂಸ್ಥೆಗೆ ಹೇಳಿದರು.

'ಮುಖ್ಯಮಂತ್ರಿ ಹಿಮಂತ ಅವರ ಪುತ್ರನೂ ಬೆಂಗಳೂರಿನಲ್ಲಿ ಓದುತ್ತಿದ್ದಾನೆ. ಏಕೆಂದರೆ ಇದು 'ಸುರಕ್ಷಿತ' ಮತ್ತು ಅವಕಾಶಗಳನ್ನು ಹುಡುಕುವ ಯುವ ಸಮೂಹಕ್ಕೆ ಆಕರ್ಷಕವಾಗಿದೆ' ಎಂದರು.

'ಬೆಂಗಳೂರಿನಲ್ಲಿರುವ ಅಸ್ಸಾಂನ ಜನರೊಂದಿಗೆ ಕಳೆದ ಮೂರು ತಿಂಗಳುಗಳಿಂದಲೂ ಹಲವು ಗೋಪ್ಯ ಸಭೆ ನಡೆಸಿದ್ದೇನೆ. ಕಾರ್ಮಿಕರಿಗೆ ಕನಿಷ್ಠ ವೇತನವೂ ಸಿಗುತ್ತಿಲ್ಲದಿರುವುದರಿಂದ, ಅವರ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದು ಪಕ್ಷದ ಪ್ರಮುಖ ಕಾಳಜಿಯಾಗಿದೆ' ಎಂದು ಹೇಳಿದರು.

'ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ದಶಕದ ಆಡಳಿತದಲ್ಲಿ ಜನರ ಆಶೋತ್ತರ ಈಡೇರಿಸುವಲ್ಲಿ ವಿಫಲವಾಗಿದೆ. ಇದು ಡಬಲ್ ಎಂಜಿನ್ ಸರ್ಕಾರ. ಅವರನ್ನು ಯಾರೂ ಪ್ರಶ್ನಿಸುವುದಿಲ್ಲ. ತಮಗಾಗಿ ಹಣ ಸಂಪಾದಿಸುವುದೇ ಅವರ ಕಾಯಕವಾಗಿದೆ' ಎಂದು ದೂರಿದರು.

ಬೆಂಗಳೂರಿನಿಂದ ಹೊರಹಾಕಲು ಸಾಧ್ಯವೇ?

'ನೀವು ಯಾವುದೇ ರಾಜ್ಯಕ್ಕೆ ಸೇರಿದವರೇ ಆಗಿರಲಿ, ನೀವೂ ಭಾರತೀಯರೇ. ಈ ದೇಶದಿಂದ ಹೊರಬರುವ ತನಕವೂ ನಿಮ್ಮನ್ನು ಯಾರಿಗೂ ಹೊರಹಾಕಲು ಸಾಧ್ಯವಿಲ್ಲ. ಬೆಂಗಳೂರಿನಲ್ಲಿರುವ ಅಸ್ಸಾಂ ಜನರನ್ನು ನಾನು ಹೊರಹಾಕಬಹುದೇ? ನಾವು ಅವರಿಗೆ ಉದ್ಯೋಗ, ಉಳಿಯಲು ವಸತಿ ನೀಡಿದ್ದೇವೆ. ತಮ್ಮ ಜೀವನೋಪಾಯಕ್ಕಾಗಿ ಅವರು ಶ್ರಮಿಸುತ್ತಿದ್ದಾರೆ' ಎಂದು ಶಿವಕುಮಾರ್ ಹೇಳಿದರು.

ಪ್ರಧಾನಿಗೆ ಧರ್ಮದ ಬಗ್ಗೆ ಕಾಳಜಿ ಇಲ್ಲ: ರಾಹುಲ್ ಗಾಂಧಿ ಆರೋಪ

'ಶಬರಿಮಲೆ: ಮೋದಿ ಮೌನ ಏಕೆ?'

ಪತ್ತನಂತಿಟ್ಟ (ಕೇರಳ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಶಬರಿಮಲೆ ವಿಚಾರದಲ್ಲಿ ಪ್ರಧಾನಿ ಮೌನ ವಹಿಸಿರುವುದು ಏಕೆ' ಎಂದು ಪ್ರಶ್ನಿಸಿದ್ದಾರೆ.

ಅಡೂರ್‌ನಲ್ಲಿ ಪಕ್ಷದ ಅಭ್ಯರ್ಥಿ ಪರ ಸೋಮವಾರ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, ಏಪ್ರಿಲ್ 9ರ ಚುನಾವಣೆಯಲ್ಲಿ ಪಕ್ಷವು ಸಿಪಿಎಂ–ಬಿಜೆಪಿ 'ಕೂಟ'ವನ್ನು ಎದುರಿಸುತ್ತಿದೆ ಎಂದು ಹೇಳಿದ್ದಾರೆ.

ಮೋದಿ ಅವರು ಭಾನುವಾರ ಪಾಲಕ್ಕಾಡ್‌ನಲ್ಲಿ ಮಾಡಿದ ಭಾಷಣವನ್ನು ಉಲ್ಲೇಖಿಸಿದ ರಾಹುಲ್ ಗಾಂಧಿ ಅವರು, 'ಪ್ರಧಾನಿಯು ಆಗಾಗ್ಗೆ ದೇವಾಲಯಗಳು ಮತ್ತು ಧರ್ಮದ ಬಗ್ಗೆ ಮಾತನಾಡುತ್ತಾರೆ. ಆದರೆ, ಶಬರಿಮಲೆ ಕ್ಷೇತ್ರದ ಬಗ್ಗೆ ಮೌನವಾಗಿದ್ದಾರೆ. ಅಯ್ಯಪ್ಪ ದೇಗುಲಕ್ಕೆ ಸಂಬಂಧಿಸಿದ ವಿಚಾರಗಳ ಬಗ್ಗೆ ಅವರು ಪ್ರಸ್ತಾಪಿಸಲಿಲ್ಲ. ಬಿಜೆಪಿ– ಎಲ್‌ಡಿಎಫ್ ಜತೆಯಾಗಿ ಕೆಲಸ ಮಾಡುತ್ತಿದೆ ಎಂಬುದನ್ನು ಇದು ಸೂಚಿಸುತ್ತದೆ' ಎಂದಿದ್ದಾರೆ.

'ಚುನಾವಣಾ ಹಿತಾಸಕ್ತಿಗಳಿಗೆ ಹೊಂದಿಕೆಯಾದಾಗ ಮಾತ್ರ ಪ್ರಧಾನಿ ಅವರು ಧಾರ್ಮಿಕ ವಿಷಯ ಎತ್ತುತ್ತಾರೆ. ಮತಗಳು ಸಿಗುವುದಾದರೆ ಮಾತ್ರ ದೇವಸ್ಥಾನಗಳ ಬಗ್ಗೆ ಮಾತನಾಡುತ್ತಾರೆ. ಮತಗಳು ಸಿಗುವುದಿಲ್ಲ ಎಂದಾದರೆ ಸುಮ್ಮನಿರುತ್ತಾರೆ' ಎಂದಿದ್ದಾರೆ.

ಯುದ್ಧ: ರಾಜಕೀಯ ಸರಿಯಲ್ಲ– ಪ್ರಿಯಾಂಕಾ ಗಾಂಧಿ

ನವದೆಹಲಿ (ಪಿಟಿಐ): 'ಯುದ್ಧದ ವಿಷಯದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಿರುಗೇಟು ನೀಡಿದ್ದಾರೆ.

ಕಾಂಗ್ರೆಸ್ ರಾಜಕೀಯ ಲಾಭ ಪಡೆಯಲು ಗಲ್ಫ್‌ನಲ್ಲಿ ನೆಲಸಿರುವ ಭಾರತೀಯರನ್ನು ಅಪಾಯಕ್ಕೆ ಸಿಲುಕಿಸುವ ಹೇಳಿಕೆ ನೀಡುತ್ತಿದೆ ಎಂದು ಮೋದಿ ಅವರು ಆರೋಪಿಸಿದ ಮರುದಿನ ಪ್ರಿಯಾಂಕಾ ಈ ಹೇಳಿಕೆ ನೀಡಿದ್ದಾರೆ.

'ಗಲ್ಫ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ' ಎಂದೂ ಪ್ರಶ್ನಿಸಿದ್ದಾರೆ.

ಸಂಸತ್ ಭವನದ ಆವರಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೇಲಿನಿಂದ ಬಾಂಬ್‌ಗಳ ಮಳೆಯಾಗುತ್ತಿರುವುದರಿಂದ ಜನರ ಜೀವಕ್ಕೆ ಅಪಾಯವಿದೆ. ಅವರು (ಪ್ರಧಾನಿ) ಏನು ಮಾಡುತ್ತಿದ್ದಾರೆ? ಭಾರತೀಯರನ್ನು ಅಲ್ಲಿಂದ ಕರೆತರಲು ಸರ್ಕಾರ ಯಾವ ಯೋಜನೆ ರೂಪಿಸಿದೆ? ಇಂತಹ ವಿಷಯಗಳಲ್ಲಿ ರಾಜಕೀಯ ಮಾಡುವುದು ಸರಿಯಲ್ಲ' ಎಂದಿದ್ದಾರೆ.

'ಬಿಜೆಪಿಯ ಪೂರ್ಣ ಬೆಂಬಲ ಪಡೆದಿರುವ ಎಲ್‌ಡಿಎಫ್ ವಿರುದ್ಧ ನಾವು ಚುನಾವಣೆಯಲ್ಲಿ ಹೋರಾಡುತ್ತಿದ್ದೇವೆ. ಇಲ್ಲಿ ಯುಡಿಎಫ್ ಅಧಿಕಾರಕ್ಕೆ ಬರುವುದು ಬಿಜೆಪಿಗೆ ಬೇಡವಾಗಿದೆ. ಏಕೆಂದರೆ, ರಾಷ್ಟ್ರಮಟ್ಟದಲ್ಲಿ ಬಿಜೆಪಿಗೆ ಸವಾಲು ಹಾಕುವ ಏಕೈಕ ಶಕ್ತಿ ಕಾಂಗ್ರೆಸ್ ಎಂಬುದು ಅವರಿಗೆ ತಿಳಿದಿದೆ. ನಾವು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನೊಂದಿಗೆ ಸೈದ್ಧಾಂತಿಕ ಹೋರಾಟ ನಡೆಸುತ್ತಿದ್ದೇವೆ' ಎಂದು ಹೇಳಿದ್ದಾರೆ.

ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿ ಕೇಂದ್ರದ ತನಿಖಾ ಸಂಸ್ಥೆಗಳು ದಾಳಿ ನಡೆಸುತ್ತಿರುವಾಗ, ಕೇರಳದ ಎಲ್‌ಡಿಎಫ್ ನಾಯಕರ ಮೇಲೆ ಅಂತಹ ಯಾವುದೇ ಒತ್ತಡವನ್ನು ಹೇರಲಾಗುತ್ತಿಲ್ಲ ಎಂದಿದ್ದಾರೆ.

'ನನ್ನ ಮೇಲೆ 36 ಪ್ರಕರಣಗಳು ಇದ್ದು, 55 ಗಂಟೆಗಳ ನಿರಂತರ ವಿಚಾರಣೆ ಎದುರಿಸಿದ್ದೇನೆ. ಆದರೆ ಕೇರಳ ಮುಖ್ಯಮಂತ್ರಿ ಅಥವಾ ಎಲ್‌ಡಿಎಫ್ ನಾಯಕರ ವಿರುದ್ಧ ಅಂತಹ ಯಾವುದೇ ಪ್ರಕರಣಗಳು ಇಲ್ಲ' ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಕೇರಳದ ಕೋಟ್ಟಯಂ ಜಿಲ್ಲೆಯ ಪುದುಪ್ಪಳ್ಳಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಚಾಂಡಿ ಉಮ್ಮನ್ ಅವರು ಪ್ರಚಾರದ ವೇಳೆ ಸೈಕಲ್ ಸವಾರಿ ಮಾಡಿದರು
ಪಿಟಿಐ ಚಿತ್ರ

ಪ್ರಧಾನಿ, ಶಾ ವಿರುದ್ಧ ಆರೋಪ ಪಟ್ಟಿ ದಾಖಲಿಸಬೇಕು: ಮಮತಾ ಬ್ಯಾನರ್ಜಿ

ಬೆಲ್ಡಾ/ಕೋಲ್ಕತ್ತ/ನವದೆಹಲಿ (ಪಿಟಿಐ): 'ಆರೋಪ ಪಟ್ಟಿ' ಇರುವ ಪುಸ್ತಕವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಬಿಡುಗಡೆ ಮಾಡಿದ್ದರ ಕುರಿತು ತಮ್ಮ ವಾಗ್ದಾಳಿ ಮುಂದುವರಿಸಿರುವ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಸಮುದಾಯಗಳ ಮಧ್ಯೆ ಜಗಳವಾಡಿಸಿ, ಅದರಲ್ಲಿ ಬೇಳೆ ಬೇಯಿಸಿಕೊಂಡು ಅಧಿಕಾರಕ್ಕೆ ಬಂದಿರುವ ಪ್ರಧಾನಿ ಮೋದಿ, ಅಮಿತ್ ಶಾ ವಿರುದ್ಧ ಮೊದಲು ಆರೋಪ ಪಟ್ಟಿ ದಾಖಲಿಸಬೇಕು' ಎಂದರು.

ಪಶ್ಚಿಮ ಮೇಧಿನಿಪುರದಲ್ಲಿ ಚುನಾವಣಾ ರ್‍ಯಾಲಿಯಲ್ಲಿ ಸೋಮವಾರ ಮಾತನಾಡಿ, 'ಬಿಜೆಪಿಯು ಸಮಾಜದಲ್ಲಿ ಜಗಳ ಸೃಷ್ಟಿಸುತ್ತದೆ. ಸಮಾಜದಲ್ಲಿನ ಅಶಾಂತಿಯ ಪರಿಸ್ಥಿತಿ ಬಳಸಿಕೊಂಡು, ಅದರ ಅನುಕೂಲತೆಯನ್ನು ಪಡೆದುಕೊಂಡು ದೇಶವನ್ನು ಕೊಳ್ಳೆ ಹೊಡೆಯಬೇಕು ಎಂಬುದು ಅದರ ಬಯಕೆ' ಎಂದು ಆರೋಪಿಸಿದರು.

'ಹಿಂದೂ–ಮುಸ್ಲಿಂಮರಿಂದ ಹಿಡಿದು ಆಡಳಿತ ವರ್ಗ ಮತ್ತು ಪೊಲೀಸರವರೆಗೂ ಜನರನ್ನು ಬಿಜೆಪಿ ವಿಭಜಿಸುತ್ತದೆ. ಉತ್ತಮ ಕೆಲಸ ಮಾಡುವ ಅಧಿಕಾರಿಗಳನ್ನೂ ಅವಮಾನಿಸಲಾಗುತ್ತದೆ. ಇಲ್ಲಿನ ಹಲವು ಹಿರಿಯ ಅಧಿಕಾರಿಗಳನ್ನು ಹೇಳದೇ ಕೇಳದೇ ಅವರ ಹುದ್ದೆಯಿಂದ ವಜಾ ಮಾಡಿ, ಚುನಾವಣೆ ನಡೆಯುವ ಇತರೆ ರಾಜ್ಯಗಳಿಗೆ ಕಳುಹಿಸಲಾಗುತ್ತದೆ. ಬಿಜೆಪಿ ನಿರ್ದೇಶನದಂತೆಯೇ ಇದು ನಡೆಯುತ್ತದೆ' ಎಂದರು.

ದಿನದ ಬೆಳವಣಿಗೆ

- ಎಸ್‌ಐಆರ್ ಪ್ರಕ್ರಿಯೆ ಬಳಿಕ ಮತದಾರರ ನಾಲ್ಕನೇ ಪೂರಕ ಪಟ್ಟಿಯನ್ನು ಚುನಾವಣಾ ಆಯೋಗವು ಭಾನುವಾರ ಪ್ರಕಟಿಸಿದೆ
- ರಾಜ್ಯದಾದ್ಯಂತ 173 ಪೊಲೀಸ್ ಠಾಣೆಗಳಲ್ಲಿನ ಮುಖ್ಯಸ್ಥರು ಮತ್ತು ಇನ್‌ಸ್ಪೆಕ್ಟರ್‌ಗಳನ್ನು ಚುನಾವಣಾ ಆಯೋಗ ವರ್ಗಾವಣೆ ಮಾಡಿದೆ. ಕೋಲ್ಕತ್ತದ 31 ಪೊಲೀಸರನ್ನೂ ವರ್ಗಾವಣೆ ಮಾಡಲಾಗಿದೆ. 'ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವ ಉದ್ದೇಶದಿಂದ ವರ್ಗಾವಣೆ ಮಾಡಲಾಗಿದೆ' ಎಂದು ಹೇಳಿದೆ

ಬಿಜೆಪಿ ಪರ ಪ್ರಚಾರ: ಯತ್ನಾಳಗೆ ಸಿಕ್ಕಿತಾ ಸಮ್ಮತಿ?

• ಬಸವರಾಜ ಹವಾಲ್ದಾರ

ಬಾಗಲಕೋಟೆ: 'ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ಮಾಡಲು ಬಿಜೆಪಿ ನಾಯಕರು ಪರೋಕ್ಷವಾಗಿ ಸಮ್ಮತಿ ನೀಡಿದ್ದಾರಾ' ಎಂಬ ಪ್ರಶ್ನೆ ಕ್ಷೇತ್ರದಲ್ಲಿ ಚರ್ಚೆಯಾಗುತ್ತಿದೆ.

ನಾಮಪತ್ರ ಸಲ್ಲಿಕೆ ದಿನ ಬೃಹತ್ ರ್‍ಯಾಲಿಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತಿತರರು ಭಾಗವಹಿಸಿದ್ದರು.

ಬಿಜೆಪಿ ಕೆಲ ಕಾರ್ಯಕರ್ತರು 'ಮುಂದಿನ ಸಿಎಂ ಯತ್ನಾಳ' ಎಂಬ ಭಿತ್ತಿಚಿತ್ರ ಪ್ರದರ್ಶಿಸಿದ್ದರು. ಕೂಡಲೇ ಕೆಲ ನಾಯಕರು ಅದನ್ನು ಕಸಿದುಕೊಂಡಿದ್ದರು.

ನಂತರ ದಿನಗಳಲ್ಲೂ ಯುವಕರ, ಹಿಂದುತ್ವದ ಪರ ಒಲವುಳ್ಳವರ ಮತ ಸೆಳೆಯಲು ಶಾಸಕ ಯತ್ನಾಳ ಅವರನ್ನು ಪ್ರಚಾರಕ್ಕೆ ಕರೆಯಿಸಬೇಕು ಎಂಬ ಕೂಗು ಪಕ್ಷದ ವೇದಿಕೆಗಳಲ್ಲಿ ಕೇಳಿ ಬಂದಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿದ್ದ ಶಾಸಕ ಯತ್ನಾಳ ಅವರೂ, 'ವೀರಣ್ಣ ಚರಂತಿಮಠ ಹಲವು ಸಂದರ್ಭಗಳಲ್ಲಿ ನೆರವು ನೀಡಿದ್ದಾರೆ. ನಮ್ಮಿಬ್ಬರದು ಹಳೆಯ ಸಂಬಂಧ. ಅವಶ್ಯಕತೆ ಬಿದ್ದರೆ ನೋಡೋಣ' ಎಂದಿದ್ದರು.

'ಪಕ್ಷದಿಂದ ಉಚ್ಚಾಟನೆಗೊಂಡಿರುವ ಯತ್ನಾಳ ಅವರನ್ನು ಪ್ರಚಾರಕ್ಕೆ ಕರೆಯಿಸುವುದು ಹೇಗೆ' ಎಂಬ ಪ್ರಶ್ನೆ ಬಿಜೆಪಿ ನಾಯಕರನ್ನು ಕಾಡುತ್ತಿತ್ತು. ಕರೆಸದಿದ್ದರೆ, ಕಾರ್ಯಕರ್ತರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಕರೆಯಿಸಿದರೆ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕ ಅಧ್ಯಕ್ಷ ವಿಜಯೇಂದ್ರ ಅವರನ್ನು ಎದುರು ಹಾಕಿಕೊಳ್ಳಬೇಕಾಗುತ್ತದೆ ಎಂಬ ಸಂಕಟಕ್ಕೆ ಸಿಲುಕಿದ್ದರು.

ಜಿಲ್ಲೆಯ ಬಿಜೆಪಿ ನಾಯಕರು ಬಾಗಲಕೋಟೆ ಕ್ಷೇತ್ರದಲ್ಲಿ ಗೆಲುವಿನ ಯಾವುದೇ ಪ್ರಯತ್ನವನ್ನು ಬಿಡುವುದು ಬೇಡ ಎಂಬ ಕಾರಣಕ್ಕೆ ಕೊನೆಗೂ ಬಿ.ವೈ. ವಿಜಯೇಂದ್ರ ಅವರನ್ನು ಮನವೊಲಿಸುವಲ್ಲಿ ಯಶಸ್ವಿ ಆಗಿದ್ದಾರೆ ಎನ್ನಲಾಗಿದೆ. ಪಕ್ಷದ ಹೆಸರಿನಲ್ಲಿ ಪ್ರಚಾರ ಮಾಡುವಂತಿಲ್ಲ. ಮುಖಂಡರೂ ಭಾಗವಹಿಸಬಾರದು ಎಂದು ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ.

'ಶಾಸಕ ಯತ್ನಾಳ ಅವರು ನಮ್ಮ ನಾಯಕರು. ಅವರು ಪ್ರಚಾರಕ್ಕೆ ಬಂದರೆ ಶಕ್ತಿಯೇ. ಹಿಂದುತ್ವ ಗೆಲ್ಲಬೇಕು' ಎಂದು ಮಾಜಿ ಸಚಿವ ಶ್ರೀರಾಮುಲು ಪ್ರತಿಕ್ರಿಯಿಸಿದ್ದರು.

ಯತ್ನಾಳ ಪ್ರಚಾರ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ವಿಜಯೇಂದ್ರ, 'ಕೆಲ ಕಾಂಗ್ರೆಸ್ ಮುಖಂಡರೇ ಬಿಜೆಪಿ ಅಭ್ಯರ್ಥಿಗೆ ಬೆಂಬಲ ನೀಡುತ್ತಿದ್ದಾರೆ. ಬಿಜೆಪಿ ಗೆಲುವಿಗೆ ಯಾರೇ ಸಹಕರಿಸಿದರೂ ಸ್ವಾಗತಿಸುವೆ' ಎಂದಿದ್ದಾರೆ.

ಸೋತರೆ ವಿಜಯೇಂದ್ರ ಸ್ಥಾನ ಬದಲು: ಎಂ.ಬಿ.ಪಾಟೀಲ

ವಿಜಯಪುರ: 'ದಾವಣಗೆರೆ, ಬಾಗಲಕೋಟೆ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿ ಸೋತರೆ ಬಿ.ವೈ.ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕುವುದು ನಿಶ್ಚಿತ' ಎಂದು ಸಚಿವ ಎಂ.ಬಿ. ಪಾಟೀಲ ಸೋಮವಾರ ಇಲ್ಲಿ ಹೇಳಿದರು.

'ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ತೆಗೆಯಲು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳಗೆ ಇದು ಸುವರ್ಣ ಅವಕಾಶ. ಬಳಸಿಕೊಳ್ಳಬೇಕು' ಎಂದು ಸಲಹೆ ಮಾಡಿದರು.

ಸುದ್ದಿಗಾರರ ಜೊತೆ ಮಾತನಾಡುತ್ತಾ, ಯತ್ನಾಳ ಅವರು ಬಿಜೆಪಿ ಪರ ಪ್ರಚಾರ ಮಾಡಿ ಬಿಜೆಪಿ ಗೆದ್ದರೆ ಅದರ ಕೀರ್ತಿ ವಿಜಯೇಂದ್ರ ಅವರಿಗೆ ಸಲ್ಲುತ್ತದೆ' ಎಂದರು.

'ಯತ್ನಾಳಗೆ ಸ್ವಾಭಿಮಾನ, ಮಾನ ಮರ್ಯಾದೆ ಇದ್ದರೆ ಬಿಜೆಪಿ ಪರ ಪ್ರಚಾರಕ್ಕೆ ಹೋಗಬಾರದು' ಎಂದು ಹೇಳಿದರು.

'ಆರ್ಥಿಕ ಸ್ಥಿತಿಗತಿ: ಶ್ವೇತಪತ್ರ ಹೊರಡಿಸಿ'

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬಾಗಲಕೋಟೆ: 'ರಾಜ್ಯದ ಹಣಕಾಸಿನ ಸ್ಥಿತಿ ಕುರಿತು ರಾಜ್ಯ ಸರ್ಕಾರ ಶ್ವೇತಪತ್ರ ಹೊರಡಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸೋಮವಾರ ಆಗ್ರಹಿಸಿದರು.

ಇಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 'ಪೊಲೀಸ್ ಸಿಬ್ಬಂದಿಗೆ ವೇತನ ತಡ ಆಗುತ್ತಿದೆ. ಶಿವಮೊಗ್ಗದ ಕುವೆಂಪು ವಿ.ವಿ ಅತಿಥಿ ಉಪನ್ಯಾಸಕರಿಗೆ ಎರಡು ತಿಂಗಳಿನಿಂದ ವೇತನ ನೀಡಿಲ್ಲ' ಎಂದು ಆರೋಪಿಸಿದರು.

'ಬಿಜೆಪಿ ಸರ್ಕಾರದಲ್ಲಿ ಮಂಜೂರಾಗಿದ್ದ ಕಾಮಗಾರಿಗಳಿಗೆ ಮುಖ್ಯಮಂತ್ರಿ ಅವರು ಶಂಕುಸ್ಥಾಪನೆ ಮಾಡುತ್ತಿದ್ದಾರೆ. ಹೊಸ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ ಎಂದು ಟೀಕಿಸಿದರು.

'ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲಲಿದೆ ಎಂಬ ಗುಪ್ತಚರ ವರದಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಐದು ದಿನ ಪ್ರಚಾರ ಮಾಡಲು ನಿರ್ಧರಿಸಿದ್ದಾರೆ' ಎಂದರು.

'ಕಾಂಗ್ರೆಸ್ ಆಡಳಿತದಲ್ಲಿ ಹಿಂದೂ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣ ದಾಖಲಿಸುವ ಪ್ರಕರಣ ಹೆಚ್ಚಿವೆ. ವಿವಿಧೆಡೆ ಹಿಂದೂ ಮೆರವಣಿಗೆಗಳ ಮೇಲೆ ಕಲ್ಲು ತೂರಾಟ ನಡೆದಿದೆ. ದೇಶದ್ರೋಹಿಗಳಿಗೆ ರಕ್ಷಣೆ ನೀಡುವ ಕಾರ್ಯ ಸರ್ಕಾರದಿಂದ ನಡೆದಿದೆ' ಎಂದು ವಾಗ್ದಾಳಿ ನಡೆಸಿದರು.

'ದಲಿತರ ಮೇಲೆ ಹಲ್ಲೆಗಳು ನಡೆಯುತ್ತಿದ್ದರೂ, ಗಂಭೀರವಾಗಿ ಪರಿಗಣಿಸಲಾಗುತ್ತಿಲ್ಲ. ಉದ್ಯೋಗ ಆಕಾಂಕ್ಷಿಗಳ ಮೇಲೆ ಲಾಠಿ ಪ್ರಹಾರ ಮಾಡಲಾಗುತ್ತದೆ' ಎಂದು ಟೀಕಿಸಿದರು.

ಸ್ಟಾಲಿನ್, ವಿಜಯ್ ನಾಮಪತ್ರ ಸಲ್ಲಿಕೆ

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ, ಡಿಎಂಕೆ ವರಿಷ್ಠ ಎಂ.ಕೆ. ಸ್ಟಾಲಿನ್ ಹಾಗೂ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸಂಸ್ಥಾಪಕ ಅಧ್ಯಕ್ಷ, ಚಿತ್ರನಟ ವಿಜಯ್ ಅವರು ಸೋಮವಾರ ನಾಮಪತ್ರ ಸಲ್ಲಿಸಿದರು.

ಚೆನ್ನೈನ ಕೊಳತ್ತೂರು ವಿಧಾನಸಭಾ ಕ್ಷೇತ್ರದಿಂದ ಸ್ಟಾಲಿನ್ ಅವರು ನಾಮಪತ್ರ ಸಲ್ಲಿಸಿದರೆ, ಪೆರಂಬೂರು ಕ್ಷೇತ್ರದಿಂದ ವಿಧಾನಸಭಾ ಚುನಾವಣೆಗೆ ಸ್ಪರ್ಧೆ ಬಯಸಿ ವಿಜಯ್ ಅವರು ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ವಿಜಯ್‌ಗೆ ಇದು ಚೊಚ್ಚಲ ಚುನಾವಣೆ. ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಉತ್ತರ ಚೆನ್ನೈನ ಪೆರಂಬೂರಿನಿಂದ ಸ್ಪರ್ಧಿಸುತ್ತಿದ್ದಾರೆ.

ಕೊಳತ್ತೂರಿನಿಂದ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಸ್ಟಾಲಿನ್, 4ನೇ ಬಾರಿಗೂ ವಿಜಯಿಯಾಗುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಾಳೆಯಿಂದ ಡಿಕೆಶಿ ಪ್ರಚಾರ

ಬೆಂಗಳೂರು: 'ಉಪ ಚುನಾವಣೆ ನಡೆಯಲಿರುವ ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನಾನು ಮತ್ತು ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮಂಗಳವಾರ ಹೋಗುತ್ತಿದ್ದೇವೆ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬಾಗಲಕೋಟೆಗೆ ಬುಧವಾರ ತೆರಳುತ್ತೇನೆ. ಆನಂತರ ಎರಡೂ ಕ್ಷೇತ್ರಗಳಿಗೆ ಮತ್ತೊಂದು ಸುತ್ತು ತೆರಳಿ ಪ್ರಚಾರ ಮಾಡುತ್ತೇನೆ. ಏಪ್ರಿಲ್ 5 ಮತ್ತು 6ರಂದು ಕೇರಳ ಚುನಾವಣಾ ಪ್ರಚಾರಕ್ಕೆ ತೆರಳುತ್ತಿದ್ದೇನೆ. ಈಸ್ಟರ್ ಹಾಗೂ ಗುಡ್ ಫ್ರೈಡೆ ಕಾರಣ ಕೇರಳ ಪ್ರವಾಸವನ್ನು 5ಕ್ಕೆ ಮುಂದೂಡಿದ್ದೇನೆ' ಎಂದು ಹೇಳಿದರು.

ನುಡಿದಂತೆ ನಡೆವ ಕಾಂಗ್ರೆಸ್: 'ಅಸ್ಸಾಂನಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗ್ಯಾರಂಟಿ ಯೋಜನೆ ಘೋಷಣೆ ಮಾಡಿರುವ ಬಗ್ಗೆ ಕೇಳಿದಾಗ, 'ಅವರು ಘೋಷಣೆ ಪ್ರಕಟಿಸಿದ ಬಳಿಕ ನಾನು ಭಾಷಣಗಳನ್ನು ಮಾಡಿ ಬಂದಿದ್ದೇನೆ. ನಾವು ನುಡಿದಂತೆ ನಡೆಯುತ್ತೇವೆ. ನಾವು ಭೂಮಿ ಹಕ್ಕು ಘೋಷಣೆ ಮಾಡಿದ್ದೇವೆ. ₹ 25 ಲಕ್ಷದವರೆಗೂ ಆರೋಗ್ಯ ಕಾರ್ಯಕ್ರಮ ಘೋಷಿಸಿದ್ದೇವೆ' ಎಂದರು.

'ಅಧಿಸೂಚನೆ ಹೊರಡಿಸಿ, ಮತ ಕೇಳಲಿ'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಆಲಮಟ್ಟಿ ಜಲಾಶಯದ ಗೇಟ್ ಎತ್ತರಿಸಲು ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆ ಹೊರಡಿಸಿ, ಮತ ಕೇಳಲು ಬರುವಂತೆ ಬಿಜೆಪಿಯವರಿಗೆ ತಾಕೀತು ಮಾಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಜನರಿಗೆ ಕರೆ ನೀಡಿದರು.

ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ಸುತಗುಂಡಾರದಲ್ಲಿ ಬಹಿರಂಗ ಸಭೆಯಲ್ಲಿ ಅವರು, 'ಅಧಿಸೂಚನೆಗೆ ಅಡೆತಡೆ ಇಲ್ಲದಿದ್ದರೂ ಕ್ರಮ ಕೈಗೊಳ್ಳುತ್ತಿಲ್ಲ. ಕೇಂದ್ರ ಸರ್ಕಾರಕ್ಕೆ ಬುದ್ಧಿ ಕಲಿಸಬೇಕಿದ್ದರೆ, ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರನ್ನು ಸೋಲಿಸಿ' ಎಂದರು.

'ನಾನು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರದ ಹಲವು ಸಚಿವರಿಗೆ ಅನೇಕ ಬಾರಿ ಗೋಗರೆದರೂ ಅಧಿಸೂಚನೆ ಹೊರಡಿಸುತ್ತಿಲ್ಲ. ಅಧಿಸೂಚನೆ ಹೊರಡಿಸಿದರೆ, ನೀರು ಶೇಖರಿಸಿ ಕೃಷಿ ಜಮೀನಿಗೆ ಹರಿಸುತ್ತೇವೆ' ಎಂದರು.

'ರಾಜ್ಯದಲ್ಲಿ ನಾಲ್ಕು ವರ್ಷ ಬಿಜೆಪಿ ಅಧಿಕಾರದಲ್ಲಿದ್ದರೂ ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) 3ನೇ ಹಂತದ ಜಾರಿಗೆ ಪ್ರಯತ್ನಿಸಲಿಲ್ಲ. ಭೂ ಪರಿಹಾರಕ್ಕೆ ದರ ಕಡಿಮೆ ನಿಗದಿದ್ದರಿಂದ ರೈತರು ಒಪ್ಪಲಿಲ್ಲ. ನಾವು ಭೂ ಪರಿಹಾರ ಹೆಚ್ಚಿಸಿ ಪರಿಹಾರ ನೀಡಲು ಆರಂಭಿಸಿದ್ದೇವೆ. ಮೂರು ವರ್ಷಗಳಲ್ಲಿ ಪರಿಹಾರ ನೀಡಿ, ಸ್ಥಳಾಂತರ ಮಾಡಲಾಗುವುದು' ಎಂದು ಹೇಳಿದರು.

ಗ್ಯಾರಂಟಿ ಸೇರಿ ಎಲ್ಲ ಯೋಜನೆಗಳನ್ನು ಇನ್ನು ಎರಡು ವರ್ಷ ಮುಂದುವರಿಸಬೇಕಲ್ವಾ? ಹಾಗಿದ್ದರೆ, ನನ್ನ ಕೈ ಬಲ ಪಡಿಸಿ, ಸರ್ಕಾರಕ್ಕೆ ಶಕ್ತಿ ತುಂಬಿ
ಸಿದ್ದರಾಮಯ್ಯ
ಮುಖ್ಯಮಂತ್ರಿ

'ಐದು ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ವಿರೋಧಿಸಿದ್ದರು. ಲೋಕಸಭೆ ಚುನಾವಣೆ ಬಳಿಕ ಸ್ಥಗಿತವಾಗಲಿದೆ ಎಂದು ಅಪಪ್ರಚಾರ ಮಾಡಿದ್ದರು. ಮೂರು ವರ್ಷಗಳಿಂದ ನೀಡುತ್ತಿದ್ದೇವೆ. ಅದಕ್ಕಾಗಿ ₹1.40 ಲಕ್ಷ ಕೋಟಿ ಖರ್ಚು ಮಾಡಿದ್ದೇವೆ' ಎಂದು ಪ್ರತಿಪಾದಿಸಿದರು.

ರಾಜ್ಯ, ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಭಾಗಿ: ಅವಕಾಶಕ್ಕೆ ಹಲವು ಬಾಗಿಲು

ಏ.4, 5ರಂದು 'ಎಡ್ಯುವರ್ಸ್' ಮೇಳ

ಪ್ರಜಾವಾಣಿ ವಾರ್ತೆ

ಎಡ್ಯುವರ್ಸ್ — ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಬೆಂಗಳೂರು: ಶಿಕ್ಷಣ ಮತ್ತು ವೃತ್ತಿ ಮಾರ್ಗದರ್ಶನದ ಪ್ರಮುಖ ಪ್ರದರ್ಶನವಾದ 'ಎಡ್ಯುವರ್ಸ್' ಮೇಳವನ್ನು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಏಪ್ರಿಲ್ 4 ಮತ್ತು 5ರಂದು ಇಲ್ಲಿನ ಅರಮನೆ ಮೈದಾನದ ಗಾಯತ್ರಿ ವಿಹಾರ್‌ನಲ್ಲಿ (ಗೇಟ್ ನಂಬರ್ 4) ಆಯೋಜಿಸಿವೆ.

ಈ ಮೇಳದಲ್ಲಿ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳು ಭಾಗವಹಿಸಲಿದ್ದು, ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತವಾಗಿದೆ. ಮೇಳದಲ್ಲಿ ಭಾಗವಹಿಸುವ ಸಂಸ್ಥೆಗಳು ಯಾವ ಕೋರ್ಸ್‌ಗಳನ್ನು ನೀಡುತ್ತಿವೆ ಎಂಬ ವಿವರ ಇಲ್ಲಿದೆ.

ಅಮಿಟಿ ವಿಶ್ವವಿದ್ಯಾಲಯ: ನಿರ್ವಹಣೆ, ಎಂಜಿನಿಯರಿಂಗ್, ಜೈವಿಕ ತಂತ್ರಜ್ಞಾನ, ಕಾನೂನು, ಆನ್ವಯಿಕ ವಿಜ್ಞಾನಗಳು, ಲಿಬರಲ್ ಆರ್ಟ್ಸ್, ಮನೋವಿಜ್ಞಾನ, ಫ್ಯಾಷನ್, ಇಂಗ್ಲಿಷ್ ಸಾಹಿತ್ಯ ಮತ್ತು ಸಮೂಹ ಸಂವಹನ ಸೇರಿದಂತೆ ವಿಭಾಗಗಳಲ್ಲಿ 50 ಕೋರ್ಸ್‌ಗಳು ಇಲ್ಲಿವೆ. ಅಂತರ್‌ಶಿಸ್ತೀಯ ಸಂಶೋಧನೆ ಮತ್ತು ನಾವೀನ್ಯಕ್ಕೆ ಒತ್ತು ನೀಡುವುದು ವಿಶ್ವವಿದ್ಯಾಲಯದ ಪ್ರಮುಖ ಅಂಶವಾಗಿದೆ. ಇದರ ಉದ್ಯಮ-ಸಂಯೋಜಿತ ಪಠ್ಯಕ್ರಮವು ವಿದ್ಯಾರ್ಥಿಗಳು ಕಾರ್ಪೊರೇಟ್ ವಲಯಕ್ಕೆ ಸಂಬಂಧಿಸಿದ ಪ್ರಾಯೋಗಿಕ ಜ್ಞಾನ ಮತ್ತು ಕೌಶಲಗಳನ್ನು ಹೊಂದಿದ್ದಾರೆಯೇ ಎಂಬುದನ್ನು ಖಚಿತಪಡಿಸುತ್ತದೆ.

ಶಿವ ನಾಡಾರ್ ವಿಶ್ವವಿದ್ಯಾಲಯ, ದೆಹಲಿ-ಎನ್‌ಸಿಆರ್: ಪ್ರಗತಿಪರ, ನವೀನ ಕಲಿಕೆ ಮತ್ತು ಸಂಶೋಧನೆಯ ಸ್ಥಳವಾಗಿದೆ. ವಿಶ್ವವಿದ್ಯಾಲಯವು ಬಹುಶಿಸ್ತೀಯ ಸಂಶೋಧನೆ ಮತ್ತು ಶಿಕ್ಷಣದಲ್ಲಿ ಮುಂಚೂಣಿಯಲ್ಲಿದೆ. ಸಂಶೋಧನಾ ಶ್ರೇಷ್ಠತೆ ಮತ್ತು ಸೃಜನಶೀಲತೆಯ ವಾತಾವರಣವನ್ನು ಬೆಳೆಸುತ್ತದೆ. ವಿಶ್ವವಿದ್ಯಾಲಯದ ನಾಲ್ಕು ಸಂಸ್ಥೆಗಳಾದ ಸ್ಕೂಲ್ ಆಫ್ ಎಂಜಿನಿಯರಿಂಗ್, ಸ್ಕೂಲ್ ಆಫ್ ನ್ಯಾಚುರಲ್ ಸೈನ್ಸ್, ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಎಂಟರ್‌ಪ್ರಿನರ್‌ಶಿಪ್, ಸ್ಕೂಲ್ ಆಫ್ ಹ್ಯುಮಾನಿಟೀಸ್ ಆಂಡ್ ಸೋಶಿಯಲ್ ಸೈನ್ಸಸ್ ಮತ್ತು ಅಕಾಡೆಮಿ ಆಫ್ ಕಂಟಿನ್ಯೂಯಿಂಗ್ ಎಜುಕೇಶನ್ ಕ್ರಿಯಾತ್ಮಕ ಕಲಿಕಾ ಕೇಂದ್ರವಾಗಿವೆ.

ಸಿಎಂಆರ್ ವಿಶ್ವವಿದ್ಯಾಲಯ: ನ್ಯಾಕ್ 'ಎ' ಮಾನ್ಯತೆ ಪಡೆದಿರುವ ಈ ವಿಶ್ವವಿದ್ಯಾಲಯವು ಉತ್ತಮ ಮೂಲಸೌಕರ್ಯ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದೆ. 'ಯಶಸ್ಸಿಗೆ ಸಿದ್ಧತೆ, ಸಮಾಜಕ್ಕೆ ಕೊಡುಗೆ ಮತ್ತು ಸ್ವಯಂ ಹಾಗೂ ಸಮುದಾಯದ ಅರಿವು' ಎಂಬ ಮೂರು ಸ್ತಂಭಗಳ ಮೇಲೆ ಇದರ ಶೈಕ್ಷಣಿಕ ಅಡಿಪಾಯವಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಸೈದ್ಧಾಂತಿಕ ಜ್ಞಾನವನ್ನಷ್ಟೇ ಅಲ್ಲದೆ, ನೈಜ ಜಗತ್ತಿನ ಸವಾಲುಗಳನ್ನು ಎದುರಿಸಲು ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ.

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ: ನ್ಯಾಕ್ ಮತ್ತು ಎನ್‌ಐಆರ್‌ಎಫ್ ರ್‍ಯಾಂಕ್ ಪಡೆದ ಈ ವಿಶ್ವವಿದ್ಯಾಲಯವು ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಕಾನೂನು, ಮಾಹಿತಿ ವಿಜ್ಞಾನ, ವಾಣಿಜ್ಯ ಮತ್ತು ಅರ್ಥವಿಜ್ಞಾನ, ಡಿಸೈನ್, ಮಾಧ್ಯಮ ಅಧ್ಯಯನಗಳು ಮತ್ತು ಅಲೈಡ್ ಹೆಲ್ತ್ ಕೇರ್ ಶಾಲೆಗಳ ಮೂಲಕ ಪದವಿಪೂರ್ವ, ಸ್ನಾತಕೋತ್ತರ ಮತ್ತು ಪಿಎಚ್‌ಡಿ ಸೇರಿದಂತೆ ವಿವಿಧ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ನೀಡುತ್ತದೆ.

ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ: ಪರಂಪರಾಗತ ಕೋರ್ಸ್‌ಗಳ ಬದಲಿಗೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಐಒಟಿ, ಸೈಬರ್ ಸೆಕ್ಯೂರಿಟಿ ಮತ್ತು ಬ್ಲಾಕ್‌ಚೈನ್‌ನಂತಹ ನವ ತಂತ್ರಜ್ಞಾನಗಳಿಗೆ ಪ್ರಾಮುಖ್ಯ ನೀಡಲಾಗಿದೆ. ಸ್ಯಾಮ್‌ಸಂಗ್, ಮೈಕ್ರೋಸಾಫ್ಟ್ ಮತ್ತು ವಿಪ್ರೋದಂತಹ ಜಾಗತಿಕ ಕಂಪನಿಗಳ ಸಹಯೋಗದೊಂದಿಗೆ ಇಲ್ಲಿ ನವೀನ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ.

ಅಣಕು ಪರೀಕ್ಷೆ

ಎಡ್ಯುವರ್ಸ್ ಬೆಳಿಗ್ಗೆ 9ರಿಂದ ಸಂಜೆ 6 ರವರೆಗೆ ನಡೆಯುವ ಮೇಳದಲ್ಲಿ ವಿದ್ಯಾರ್ಥಿಗಳು ಈ ಮತ್ತು ಇತರ ಹಲವು ಸಂಸ್ಥೆಗಳ ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿ, ಮಾರ್ಗದರ್ಶನ ಪಡೆಯಬಹುದು. ಸಿಇಟಿ ಮತ್ತು ನೀಟ್ ಅಣಕು ಪರೀಕ್ಷೆಗಳನ್ನು ಬರೆಯಬಹುದು.

ಈ ಪರೀಕ್ಷೆಗೆ ನೋಂದಾಯಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಬಹುದು. ಬಹುಮಾನ ಗೆಲ್ಲುವ ಅವಕಾಶ ನೀಡಲಾಗಿದೆ. ಈ ಕಾರ್ಯಕ್ರಮಕ್ಕೆ ಎಡಿ 6 ಸಂಸ್ಥೆ ಪ್ರೋತ್ಸಾಹ ನೀಡಿದೆ.

ಮಂಗಳವಾರ, ಮಾರ್ಚ್ 31, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 89 | ಪುಟ 14

prajavani.net prajavani | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 71,947 | ನಿಫ್ಟಿ 22,331 | $/₹ 94.70

ಶೀತಲ್‌ಗೆ ಗೌರವ

ಕಾಲುಗಳ ನೆರವಿನಿಂದ ಬಾಣ ಪ್ರಯೋಗಿಸುವ ಭಾರತದ ಬಿಲ್ಲಾರ್ತಿ ಶೀತಲ್ ದೇವಿ ಅವರನ್ನು ವಿಶ್ವ ಆರ್ಚರಿ ಸಂಸ್ಥೆಯು '2025ರ ವರ್ಷದ ಪ್ಯಾರಾ ಆರ್ಚರ್' ಗೌರವಕ್ಕೆ ಆಯ್ಕೆ ಮಾಡಿದೆ

'ಒಪ್ಪಂದ ಬೇಡವೆಂದರೆ ವಿನಾಶ'

ಖಾರ್ಗ್ ದ್ವೀಪದ ತೈಲ ಘಟಕ–ವಿದ್ಯುತ್ ಘಟಕಗಳ ಸ್ಫೋಟ–ಇರಾನ್‌ಗೆ ಟ್ರಂಪ್ ಎಚ್ಚರಿಕೆ

ದುಬೈ (ಪಿಟಿಐ): 'ಇರಾನ್ ಜೊತೆಗೆ ಶಾಂತಿ ಒಪ್ಪಂದ ಏರ್ಪಡದಿದ್ದರೆ, ಖಾರ್ಗ್ ದ್ವೀಪದಲ್ಲಿರುವ ತೈಲ ಘಟಕಗಳು ಹಾಗೂ ದೇಶದ ವಿದ್ಯುತ್ ಘಟಕಗಳನ್ನು ಅಮೆರಿಕ ಸ್ಫೋಟಿಸಲಿದೆ' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಆ ಮೂಲಕ ಕೊಲ್ಲಿಯ ಪ್ರಮುಖ ತೈಲ ಘಟಕಗಳ ಪ್ರದೇಶವನ್ನು ನಿಯಂತ್ರಣಕ್ಕೆ ಪಡೆಯಲು ಪ್ರಯತ್ನಿಸುವ ಸುಳಿವು ನೀಡಿದ್ದಾರೆ.

'ನಾವು ಖಾರ್ಗ್ ದ್ವೀಪವನ್ನು ವಶಕ್ಕೆ ಪಡೆಯಬಹುದು ಅಥವಾ ಪಡೆಯದೇ ಇರಬಹುದು. ನಮಗೆ ಬಹಳಷ್ಟು ಆಯ್ಕೆಗಳಿವೆ' ಎಂದು 'ಫೈನಾನ್ಶಿಯಲ್ ಟೈಮ್ಸ್‌'ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ಇರಾನ್‌ನಲ್ಲಿ ಸೇನಾ ಕಾರ್ಯಾಚರಣೆ ಕೊನೆಗೊಳಿಸುವ ದಿಸೆಯಲ್ಲಿ ಗಂಭೀರ ಮಾತುಕತೆ ನಡೆಯುತ್ತಿದೆ. ಒಂದೊಮ್ಮೆ ಶೀಘ್ರ ಒಪ್ಪಂದ ಏರ್ಪಡದೇ ಇದ್ದರೆ, ಇರಾನ್‌ನ ಇಂಧನ ಕೇಂದ್ರಗಳನ್ನು ಸಾಮೂಹಿಕವಾಗಿ ನಾಶಪಡಿಸಲಾಗುವುದು' ಎಂದು ಎಚ್ಚರಿಸಿದ್ದಾರೆ.

ತನ್ನ ಮೇಲೆ ದಾಳಿ ನಡೆಸಿದರೆ, ಪರ್ಷಿಯನ್ ಕೊಲ್ಲಿಯಲ್ಲಿ ಜಲಬಾಂಬ್ ಇರಿಸಲಾಗುವುದು ಎಂದು ಇರಾನ್ ಎಚ್ಚರಿಕೆ ನೀಡುತ್ತಲೇ ಬಂದಿದೆ. ಇರಾನ್ ಜೊತೆಗೆ ಕದನ ವಿರಾಮ ಮಾತುಕತೆ ಪ್ರಗತಿ ಕಾಣುತ್ತಿರುವ ಬೆನ್ನಲ್ಲೇ, ಅಮೆರಿಕ ಹಾಗೂ ಇಸ್ರೇಲ್ ದಾಳಿ ಮುಂದುವರಿಸಿವೆ. ಇದಕ್ಕೆ ಪ್ರತಿಯಾಗಿ, ಕುವೈತ್‌ನ ನಿರ್ಲವಣೀಕರಣ, ಕಚ್ಚಾತೈಲ ಹಾಗೂ ವಿದ್ಯುತ್ ಘಟಕಗಳನ್ನು ಗುರಿಯಾಗಿರಿಸಿ ಇರಾನ್ ದಾಳಿ ನಡೆಸುತ್ತಿದೆ.

'ಹೊರ್ಮುಜ್ ಜಲಸಂಧಿಯ ಮೂಲಕ ಕಚ್ಚಾತೈಲ ತುಂಬಿದ 20 ಹಡಗುಗಳು ಸಾಗಲು ಇರಾನ್ ಒಪ್ಪಿಗೆ ಸೂಚಿಸಿದೆ. ಶಾಂತಿ ಒಪ್ಪಂದ ಹೊರತುಪಡಿಸಿ ಗೌರವದ ಸಂಕೇತವಾಗಿ ಸೋಮವಾರದಿಂದಲೇ ಹಡಗುಗಳು ಜಲಸಂಧಿ ಮೂಲಕ ಸಾಗಲಿವೆ' ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

'ನಾನು ಈ ಹಿಂದೆ ವ್ಯವಹರಿಸದೇ ಇದ್ದ ಜನರ ಜೊತೆಗೆ ಈಗ ಮಾತುಕತೆ ನಡೆಸುತ್ತಿದ್ದೇನೆ. ಹೀಗಾಗಿ ಇರಾನ್‌ನ ಆಡಳಿತದಲ್ಲಿಯೂ ಬದಲಾವಣೆ ಆಗಬಹುದು' ಎಂದಿದ್ದಾರೆ.

'ಇದುವರೆಗೆ ಮಾತುಕತೆಯಲ್ಲಿ ಉತ್ತಮ ಬೆಳವಣಿಗೆ ನಡೆದಿದೆ. ಯಾವುದೋ ಕಾರಣದಿಂದ ಶೀಘ್ರವಾಗಿ ಒಪ್ಪಂದಕ್ಕೆ ಬರಲಾಗದಿದ್ದರೆ, ಹೊರ್ಮುಜ್ ಜಲಸಂಧಿಯನ್ನು ತಕ್ಷಣವೇ ವ್ಯವಹಾರಕ್ಕೆ ತೆರೆಯದಿದ್ದರೆ, ನಾವು ಇರಾನ್‌ಗೆ ತಕ್ಕ ಉತ್ತರ ನೀಡಲಿದ್ದೇವೆ. ಅಲ್ಲಿನ ವಿದ್ಯುತ್ ಉತ್ಪಾದನಾ ಘಟಕ, ಖಾರ್ಗ್ ದ್ವೀಪದಲ್ಲಿರುವ ತೈಲ ಘಟಕಗಳನ್ನು (ಸಾಧ್ಯವಾದರೆ ಎಲ್ಲ ನೀರು ನಿರ್ಲವಣೀಕರಣ ಘಟಕಗಳನ್ನು) ಸ್ಫೋಟಿಸಲಿದ್ದೇವೆ' ಎಂದು ಟ್ರಂಪ್ 'ಟ್ರೂತ್ ಸೋಷಿಯಲ್‌'ನಲ್ಲಿ ಪೋಸ್ಟ್ ಮಾಡಿದ್ದಾರೆ.



▶9

ಸೋಮವಾರದ ಬೆಳವಣಿಗೆಗಳು

- ಟೆಹರಾನ್‌ನಲ್ಲಿರುವ, ನೆಲದಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ತಯಾರಿಕಾ ಕೇಂದ್ರದ ಮೇಲೆ ದಾಳಿ: ಇಸ್ರೇಲ್
- ದಾಳಿಯಿಂದ ಹಾನಿಗೊಳಗಾಗಿದ್ದ ಟೆಹರಾನ್ ಹಾಗೂ ಸುತ್ತಲಿನ ನಗರಗಳಲ್ಲಿ ವಿದ್ಯುತ್ ಸಂಪರ್ಕ ಸಹಜ ಸ್ಥಿತಿಗೆ
- ಬೈರೂತ್ ನಗರ, ಹೊರವಲಯದ ಮೇಲೆ ಇಸ್ರೇಲ್ ದಾಳಿ ಮುಂದುವರಿಕೆ
- ಲೆಬನಾನ್‌ನಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನೆ ಪಡೆಯಲ್ಲಿದ್ದ ಇಂಡೊನೇಷ್ಯಾದ ಯೋಧ ಸಾವು
- ಇರಾನ್ ಹಾರಿಸಿದ ಐದು ಖಂಡಾಂತರ ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ– ಸೌದಿ ಅರೇಬಿಯಾ
- ಕುವೈತ್‌ನ ವಿದ್ಯುತ್ ಘಟಕ, ವಿಮಾನ ನಿಲ್ದಾಣದ ಮೇಲೆ ಇರಾನ್ ದಾಳಿ– ಭಾರತೀಯ ಕಾರ್ಮಿಕ ಸಾವು
- ಇರಾನ್‌ನ ಮಶ್ಹದ್ ವಿಮಾನ ನಿಲ್ದಾಣದ ಮೇಲೆ ಅಮೆರಿಕ ದಾಳಿ. ಮಾನವೀಯ ನೆರವು, ಔಷಧ ಸಂಗ್ರಹಿಸಲು ಭಾರತಕ್ಕೆ ಬರಲಿದ್ದ 'ಮಹಾನ್ ಏರ್' ವಿಮಾನಕ್ಕೆ ಹಾನಿ

ಲೆಬನಾನ್‌ನ ರಾಜಧಾನಿ ಬೈರೂತ್‌ನ ಮೇಲೆ ಇಸ್ರೇಲ್ ಸೇನೆಯು ನಡೆಸಿದ ದಾಳಿಯ ಬಳಿಕ ವಾಹನಗಳು ಜಖಂಗೊಂಡಿರುವುದನ್ನು ಪರಿಶೀಲಿಸಿದ ಸ್ಥಳೀಯರು —ಎಎಫ್‌ಪಿ ಚಿತ್ರ

ಬಾಗ್ದಾದ್ ವಿಮಾನ ನಿಲ್ದಾಣದ ಮೇಲೆ ರಾಕೆಟ್ ದಾಳಿ

ಬಾಗ್ದಾದ್ (ಎಎಫ್‌ಪಿ): ಇಲ್ಲಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಮೊಹಮ್ಮದ್ ಅಲಾ ವಾಯುನೆಲೆ ಮೇಲೆ ರಾಕೆಟ್ ದಾಳಿ ನಡೆದಿದ್ದು, ವಿಮಾನ ನಾಶಗೊಂಡಿದೆ ಎಂದು ಇರಾಕ್‌ನ ರಕ್ಷಣಾ ಇಲಾಖೆ ತಿಳಿಸಿದೆ. ಯಾವುದೇ ಸಾವು–ನೋವಿನ ಕುರಿತಂತೆ ವರದಿಯಾಗಿಲ್ಲ. ನಷ್ಟದ ಕುರಿತು ಅಂದಾಜಿಸುತ್ತಿದ್ದು, ದಾಳಿ ನಡೆಸಿದವರ ಮೂಲ ಪತ್ತೆ ಹಚ್ಚಲಾಗುತ್ತಿದೆ ಎಂದು ತಿಳಿಸಿದ್ದಾರೆ. ▶9

ಅಲಿರೇಜಾ ತಂಕಸೀರಿ ಸಾವು– ದೃಢಪಡಿಸಿದ ಇರಾನ್



ಅಲಿರೇಜಾ ತಂಕಸೀರಿ

ಟೆಹರಾನ್ (ಎಎಫ್‌ಪಿ): 'ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನ್ ರೆವಲ್ಯೂಷನರಿಯ ನೌಕಾಪಡೆಯ ಮುಖ್ಯಸ್ಥ ಅಲಿರೇಜಾ ತಂಕಸೀರಿ ಅವರು ಮೃತಪಟ್ಟಿದ್ದಾರೆ' ಎಂದು ಇರಾನ್ ಖಚಿತಪಡಿಸಿದೆ.

ಹೊರ್ಮುಜ್ ಜಲಸಂಧಿಯಲ್ಲಿ ಕಚ್ಚಾತೈಲಗಳ ಸಾಗಣೆಯನ್ನು ತಡೆಯುವಲ್ಲಿ ಅಲಿರೇಜಾ ಅವರೇ ನೇರ ಹೊಣೆಗಾರರಾಗಿದ್ದರು ಎಂದು ಇಸ್ರೇಲ್ ಆರೋಪಿಸಿದೆ. ಕಳೆದ ವಾರ ಇಸ್ರೇಲ್ ನಡೆಸಿದ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಅಲಿರೇಜಾ ಅವರು ಮೃತಪಟ್ಟಿದ್ದಾರೆ ಎಂದು ಸೇನೆಯ ಹೇಳಿಕೆಯನ್ನು ಉಲ್ಲೇಖಿಸಿ 'ಸೆಫಾ ನ್ಯೂಸ್' ವರದಿ ಮಾಡಿದೆ.

ಮಹಾವೀರ ಜಯಂತಿ

ಪಿಟಿಐ ಚಿತ್ರ:

ಬೆಳಗಾವಿಯಲ್ಲಿ ಮಹಾವೀರ ಜಯಂತಿಯ ಅಂಗವಾಗಿ ಸೋಮವಾರ ನಡೆದ ಮೆರವಣಿಗೆಯಲ್ಲಿ ಮಹಿಳೆಯರು ಸಾಂಪ್ರದಾಯಿಕ ನೃತ್ಯ ಪ್ರದರ್ಶಿಸಿದರು

ನಾಳೆಯಿಂದ ಜನಗಣತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಏಪ್ರಿಲ್ 1ರಿಂದ ಸ್ವಯಂ ಗಣತಿಯೊಂದಿಗೆ 'ಜನಗಣತಿ–2027' ಆರಂಭವಾಗಲಿದೆ. ಏಪ್ರಿಲ್ 16ರಿಂದ ಒಂದು ತಿಂಗಳು 'ಮನೆಗಳ ಪಟ್ಟಿ ತಯಾರಿಕೆ ಮತ್ತು ವಸತಿ ಗಣತಿ' ನಡೆಯಲಿದೆ.

'ಮನೆಗಳ ಪಟ್ಟಿ ತಯಾರಿಕೆ ಮತ್ತು ವಸತಿ ಗಣತಿ'ಯು ಜನಗಣತಿಯ ಮೊದಲ ಹಂತವಾಗಿದ್ದು, ದೇಶದಾದ್ಯಂತ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರವರೆಗೆ ನಡೆಸಲಾಗುವುದು. ಈ ಸಮಯದಲ್ಲಿ ಮನೆಗಳ ಸ್ಥಿತಿಗತಿಗಳು, ಆಸ್ತಿಗಳು ಮತ್ತು ಮನೆಗಳ ಸೌಕರ್ಯಗಳಿಗೆ ಸಂಬಂಧಿಸಿದ ವಿವರಗಳನ್ನು ಕಲೆ ಹಾಕಲಾಗುತ್ತದೆ.

ಮುಂದಿನ ವರ್ಷದ ಫೆಬ್ರುವರಿಯಲ್ಲಿ ಎರಡನೇ ಹಂತದ ಗಣತಿ ನಡೆಯಲಿದೆ. ಆಗ ಜನಸಂಖ್ಯೆ ಎಣಿಕೆ ಮಾಡಲಾಗುತ್ತದೆ. ಆಗ ಪ್ರತಿಯೊಂದು ಮನೆಯ ಪ್ರತಿ ವ್ಯಕ್ತಿಯ ಜಾತಿ, ಸಾಮಾಜಿಕ-ಆರ್ಥಿಕ, ಸಾಮಾಜಿಕ ಮತ್ತು ಇತರ ವಿವರ ಸಂಗ್ರಹಿಸಲಾಗುತ್ತದೆ. ಕರ್ನಾಟಕದೊಂದಿಗೆ ಇತರ ಏಳು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಪ್ರಕ್ರಿಯೆ ಆರಂಭವಾಗಲಿದೆ. ಕರ್ನಾಟಕದಲ್ಲಿ ಏಪ್ರಿಲ್ 1ರಿಂದ 15ರ ವರೆಗೆ ಸ್ವಯಂ ಗಣತಿ ಜರುಗಲಿದೆ. ಮನೆ-ಮನೆಗೆ ತೆರಳಿ ಮಾಹಿತಿ ಕಲೆ ಹಾಕುವ ಪ್ರಕ್ರಿಯೆ ಏಪ್ರಿಲ್ 16ರಂದು ಪ್ರಾರಂಭವಾಗಿ ಮೇ 15ರಂದು ಕೊನೆಗೊಳ್ಳಲಿದೆ. ▶9

> ಗಣತಿಯ ಸಂದರ್ಭದಲ್ಲಿ ಸಂಗ್ರಹಿಸುವ ಎಲ್ಲ ವೈಯಕ್ತಿಕ ದತ್ತಾಂಶಗಳ ಗೋಪ್ಯತೆ ಕಾಪಾಡಲಾಗುವುದು. ಇದನ್ನು ಮಾಹಿತಿ ಹಕ್ಕು ಕಾಯ್ದೆಯಡಿ ನೀಡುವುದಿಲ್ಲ. ನ್ಯಾಯಾಲಯದಲ್ಲಿ ಸಾಕ್ಷಿಯಾಗಿ ಬಳಸುವುದಿಲ್ಲ ಮತ್ತು ಯಾವುದೇ ಸಂಸ್ಥೆಯೊಂದಿಗೆ ಹಂಚಿಕೊಳ್ಳುವುದಿಲ್ಲ. ದತ್ತಾಂಶ ದುರುಪಯೋಗವಾಗುತ್ತದೆ ಎಂದು ಜನರು ಭಯ ಪಡುವುದು ಬೇಡ. ಹೀಗಾಗಿ, ಜನರು ಗಣತಿದಾರರಿಗೆ ನಿಖರವಾದ ಮಾಹಿತಿ ಒದಗಿಸಬೇಕು
>
> **ಮೃತ್ಯುಂಜಯ್ ಕುಮಾರ್ ನಾರಾಯಣ್,** ಜನಗಣತಿ ಆಯುಕ್ತ

ಸಹಜೀವನ ಸಂಗಾತಿಗಳನ್ನು ವಿವಾಹಿತರೆಂದೇ ಪರಿಗಣನೆ

ಸಹ ಜೀವನ (ಲಿವ್-ಇನ್) ನಡೆಸುವವರನ್ನೂ ವಿವಾಹಿತರೆಂದೇ ಜನಗಣತಿಯಲ್ಲಿ ಪರಿಗಣಿಸಲಾಗುತ್ತದೆ. ಸಹ ಜೀವನ ನಡೆಸುವವರು ತಮ್ಮದು ಶಾಶ್ವತ ಅಥವಾ ಸ್ಥಿರವಾದ ಸಂಬಂಧ ಎಂದು ಪರಿಗಣಿಸಿದರೆ, ಜನಗಣತಿ ವೇಳೆ ಅವರನ್ನು ವಿವಾಹಿತರೆಂದು ಪರಿಗಣಿಸಲಾಗು ವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಜನಗಣತಿಯ ಸಮಯದಲ್ಲಿ ಸ್ವಯಂ-ಗಣತಿಯನ್ನು ಆಯ್ಕೆ ಮಾಡಿಕೊಳ್ಳುವ ಜನರಿಗೆ ಪೋರ್ಟಲ್ ತೆರೆಯಲಾಗಿದೆ. ಇದು ಜನಗಣತಿಯ ಎರಡೂ ಹಂತಗಳಿಗೆ ಲಭ್ಯವಿರುತ್ತದೆ. ಜನಗಣತಿಯ ಸಮಯದಲ್ಲಿ ಸಾರ್ವಜನಿಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ಸುಲಭವಾಗುವಂತೆ ಪೋರ್ಟಲ್‌ನಲ್ಲಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳ (ಎಫ್‌ಎಕ್ಯು) ಪಟ್ಟಿ ಲಭ್ಯ ಇದೆ.

'ಐಪಿಎಲ್: ಶಾಸಕರಿಗೆ 3 ಟಿಕೆಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರಿಗೆ ಐಪಿಎಲ್ ಕ್ರಿಕೆಟ್ ಪಂದ್ಯಗಳ ತಲಾ ಮೂರು ಟಿಕೆಟ್ ಹಾಗೂ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ತಲಾ ಎರಡು ಟಿಕೆಟ್ ಉಚಿತವಾಗಿ ನೀಡಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಒಪ್ಪಿದೆ. ಅಲ್ಲದೆ, ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಎರಡು ಹೆಚ್ಚುವರಿ ಟಿಕೆಟ್ ಖರೀದಿಸಲು ಅವಕಾಶ ನೀಡಿದೆ.

ಕೆಎಸ್‌ಸಿಎ ಪದಾಧಿಕಾರಿಗಳು, ಆರ್‌ಸಿಬಿ ಹಾಗೂ ಡಿಎನ್‌ಎ ಸಂಸ್ಥೆಯ ಪ್ರತಿನಿಧಿಗಳ ಜೊತೆ ಸೋಮವಾರ ಚರ್ಚೆ ನಡೆಸಿದ ಬಳಿಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಮಾಹಿತಿ ನೀಡಿದರು.

ಶಿವಕುಮಾರ್

'ಕಳೆದ ವಾರ ಮೊದಲ ಪಂದ್ಯದ ಟಿಕೆಟ್ ಮಾರಾಟವಾಗಿದ್ದ ಕಾರಣ ಎರಡು ಟಿಕೆಟ್ ನೀಡಲು ಕೆಎಸ್‌ಸಿಎಯವರು ಒಪ್ಪಿದ್ದರು. ಕ್ರಿಕೆಟ್ ಸಂಸ್ಥೆಯವರು ಅನೇಕ ಒಪ್ಪಂದಗಳನ್ನು ಮಾಡಿಕೊಂಡಿರುತ್ತಾರೆ. ಹೀಗಾಗಿ, ಈ ತೀರ್ಮಾನಕ್ಕೆ ಬರಲಾಗಿದೆ. ಐಪಿಎಲ್ ಕ್ರಿಕೆಟ್ ಬಗ್ಗೆ ಆಸಕ್ತಿ ಇಲ್ಲದವರು ಲಿಖಿತವಾಗಿ ತಿಳಿಸಿದರೆ, ಅಂಥವರಿಗೆ ಟಿಕೆಟ್ ನೀಡುವುದಿಲ್ಲ. ಯಾರಿಗೂ ಬಲವಂತವಿಲ್ಲ' ಎಂದರು.

ಶಾಸಕರು ಹೆಚ್ಚಿನ ಟಿಕೆಟ್‌ಗಳಿಗೆ ಬೇಡಿಕೆ ಇಟ್ಟಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಅನೇಕ ಬೇಡಿಕೆಗಳು ಬರುತ್ತವೆ. ಎಲ್ಲವನ್ನೂ ಈಡೇರಿಸಲು ಸಾಧ್ಯವಿಲ್ಲ. ಅವರ ಬೇಡಿಕೆಗಳ ಆಧಾರದಲ್ಲಿ ಚರ್ಚೆ ಮಾಡಿ, ಪರಿಸ್ಥಿತಿಗೆ ಅನುಗುಣವಾಗಿ ಈ ತೀರ್ಮಾನ ಮಾಡಲಾಗಿದೆ. ನಾನು ರಾಜಸ್ಥಾನ, ಮುಂಬೈ, ದೆಹಲಿ, ಕೊಲ್ಕತ್ತ ಹಾಗೂ ಗುಜರಾತ್ ಅಧಿಕಾರಿಗಳ ಜತೆಗೂ ಚರ್ಚೆ ಮಾಡಿದ್ದೇನೆ' ಎಂದರು. ▶10

> ಐಪಿಎಲ್ ಕ್ರಿಕೆಟ್ ಪಂದ್ಯಗಳ ಉಚಿತ ಟಿಕೆಟ್ ಕೊಡಿ ಎಂದು ಶಾಸಕರು ಕೇಳುವುದು ತಪ್ಪು. ಪಂದ್ಯ ವೀಕ್ಷಿಸುವ ಆಸೆ ಇರುವವರು ಹಣ ಕೊಟ್ಟು ನೋಡಲಿ. ಅದೇ ಒಳ್ಳೆಯದು
>
> **ಡಿ.ಕೆ. ಸುರೇಶ್,** ಬಮೂಲ್ ಅಧ್ಯಕ್ಷ

ಪಶ್ಚಿಮ ಏಷ್ಯಾ ಸಂಘರ್ಷ; 8 ಭಾರತೀಯರ ಸಾವು

ಇನ್ನಷ್ಟು ಸುದ್ದಿಗಳು ▶9

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸೀಮೆಎಣ್ಣೆ ವಿತರಣೆಗೆ ಮುಂದಾದ ಕೇಂದ್ರ

ನವದೆಹಲಿ (ಪಿಟಿಐ): ಇಂಧನ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯದಿಂದ ತೊಂದರೆ ಅನುಭವಿಸುತ್ತಿರುವ ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಗೃಹ ಬಳಕೆ ಉದ್ದೇಶಗಳಿಗಾಗಿ ತಾತ್ಕಾಲಿಕವಾಗಿ ಸೀಮೆಎಣ್ಣೆ ವಿತರಣೆಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಮುಂದಾಗಿದೆ.

'ಸೀಮೆಎಣ್ಣೆ ಮುಕ್ತ' ಎಂದು ಘೋಷಿಸಿರುವ ರಾಜ್ಯಗಳೂ ಸೇರಿದಂತೆ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಾರ್ವಜನಿಕ ವಿತರಣೆ ವ್ಯವಸ್ಥೆಯ (ಪಿಡಿಎಸ್) ಅಡಿಯಲ್ಲಿ ತಾತ್ಕಾಲಿಕವಾಗಿ ಸೀಮೆಎಣ್ಣೆ ಹಂಚಿಕೆ ಮಾಡಲಾಗುವುದು. ಎಲ್‌ಪಿಜಿ ಮೇಲಿನ ಒತ್ತಡವನ್ನು ಕಡಿಮೆ ಮಾಡಲು, ಮನೆಗಳಲ್ಲಿ ಅಡುಗೆ ಮಾಡಲು ಮತ್ತು ದೀಪದ ಅಗತ್ಯಗಳನ್ನು ಪೂರೈಸಿಕೊಳ್ಳಲು ಇದು ನೆರವಾಗಲಿದೆ ಎಂದು ಅಧಿಸೂಚನೆಯಲ್ಲಿ ಸಚಿವಾಲಯ ಹೇಳಿದೆ.

ಅಧಿಸೂಚನೆ ಪ್ರಕಾರ, ಪ್ರತಿ ಜಿಲ್ಲೆಗೆ ಗೊತ್ತುಪಡಿಸಿದ ಎರಡು ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳ ಮಾಲೀಕತ್ವದ ಸೇವಾ ಕೇಂದ್ರಗಳು 5 ಸಾವಿರ ಲೀಟರ್‌ವರೆಗೆ ಸೀಮೆಎಣ್ಣೆ ದಾಸ್ತಾನು ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಇದಕ್ಕೆ ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದೆ.

ಈ ಆದೇಶವು ತಕ್ಷಣದಿಂದಲೇ ಜಾರಿಗೆ ಬರಲಿದ್ದು, ಮುಂದಿನ 60 ದಿನದವರೆಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿ ಇರಲಿದೆ ಎಂದು ಸಚಿವಾಲಯ ಹೇಳಿದೆ.

ಒಂದು ತಿಂಗಳಿನಿಂದ ನಡೆಯುತ್ತಿರುವ ಪಶ್ಚಿಮ ಏಷ್ಯಾದ ಸಂಘರ್ಷದಿಂದ ಅಡುಗೆ ಅನಿಲ ಸೇರಿದಂತೆ ಇಂಧನ ಪೂರೈಕೆ ಸರಪಳಿಯಲ್ಲಿ ಅಡಚಣೆ ಉಂಟಾಗಿದೆ.

ಭಾರತವು ತನ್ನ ಅಡುಗೆ ಅನಿಲದ ಅಗತ್ಯದ ಪೈಕಿ ಶೇ 60ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಇದರಲ್ಲಿ ಶೇ 90ರಷ್ಟು ಕೊಲ್ಲಿ ರಾಷ್ಟ್ರಗಳಿಂದ ಬರುತ್ತದೆ. ಸಂಘರ್ಷದಿಂದ ಪೂರೈಕೆಗೆ ಸಮಸ್ಯೆಯಾಗಿದ್ದು, ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಂತಹ ವಾಣಿಜ್ಯ ಬಳಕೆದಾರರಿಗೆ ಅನಿಲ ಪೂರೈಕೆಯಲ್ಲಿ ಕಡಿತ ಉಂಟಾಗಿದೆ.

ಲಭ್ಯವಿರುವ ಎಲ್‌ಪಿಜಿಯಲ್ಲಿ ಗೃಹ ಬಳಕೆಗೆ ಆದ್ಯತೆ ನೀಡಲಾಗಿದ್ದರೂ, ಸೀಮಿತ ದಾಸ್ತಾನಿನ ಆತಂಕದಿಂದ ಜನರು ಭೀತಿಗೊಂಡು ಖರೀದಿಸಲು ಮುಂದಾಗಿದ್ದಾರೆ. ಎಲ್‌ಪಿಜಿ ಮೇಲಿನ ಒತ್ತಡ ಕಡಿಮೆ ಮಾಡಲು ಇದೀಗ ಸೀಮೆಎಣ್ಣೆ ವಿತರಣೆಗೆ ಸರ್ಕಾರ ಮುಂದಾಗಿದೆ.

ನಾಳೆಯಿಂದ ಏನೆಲ್ಲಾ ಬದಲಾವಣೆ

2026-27ನೇ ಆರ್ಥಿಕ ವರ್ಷ ಬುಧವಾರ (ಏಪ್ರಿಲ್ 1) ಆರಂಭವಾಗಲಿದೆ. ಹಣಕಾಸಿಗೆ ಸಂಬಂಧಿಸಿದ ಹಲವು ಬದಲಾವಣೆಗಳು ಜಾರಿಗೆ ಬರಲಿವೆ. ಜನರ ಜೀವನದ ಮೇಲೆ ನೇರವಾಗಿ ಪರಿಣಾಮ ಬೀರಬಲ್ಲ ಬದಲಾವಣೆಗಳು ಯಾವುವು ಎಂಬುದರ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ವಾರ್ಷಿಕ ಫಾಸ್ಟ್ಯಾಗ್ ಪಾಸ್ ಶುಲ್ಕ ಹೆಚ್ಚಳ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ನೀಡುವ ವಾರ್ಷಿಕ ಫಾಸ್ಟ್ಯಾಗ್ ಪಾಸ್ ಶುಲ್ಕ ಇಲ್ಲಿಯವರೆಗೆ ₹3 ಸಾವಿರ ಇತ್ತು. ಇದು ಏಪ್ರಿಲ್ 1ರಿಂದ ₹3,075 ಆಗಲಿದೆ. ಹೊಸ ದರವು 2026–27ನೆಯ ಹಣಕಾಸು ವರ್ಷದ ಉದ್ದಕ್ಕೂ ಜಾರಿಯಲ್ಲಿ ಇರಲಿದೆ.

ಎಂಎಸ್‌ಇಗಳಿಗೆ ಅಡಮಾನ ರಹಿತ ಸಾಲ: ಬ್ಯಾಂಕ್‌ಗಳು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ (ಎಂಎಸ್‌ಇ) ಉದ್ಯಮಗಳ ಹಣಕಾಸಿನ ಸ್ಥಿತಿ ಹಾಗೂ ಅವುಗಳ ಹಣಕಾಸಿನ ಹಿನ್ನೆಲೆಯನ್ನು ಪರಿಗಣಿಸಿ ಯಾವುದೇ ಅಡಮಾನ ಇಲ್ಲದೆ ₹25 ಲಕ್ಷದವರೆಗೆ ಸಾಲ ನೀಡಬಹುದು. ಈ ನಿಯಮಗಳು ಏ.1ರಿಂದ ಅನ್ವಯ ಆಗಲಿವೆ.

ಹೊಸ ಆದಾಯ ತೆರಿಗೆ ಕಾಯ್ದೆ: ಆದಾಯ ತೆರಿಗೆ ಕಾಯ್ದೆ – 1961ರ ಬದಲಿಗೆ ಹೊಸ ಆದಾಯ ತೆರಿಗೆ ಕಾಯ್ದೆ ಏ. 1ರಿಂದ ಜಾರಿ ಆಗಲಿದೆ. ಕೇಂದ್ರ ಸರ್ಕಾರವು ಈ ಕಾಯ್ದೆಯಲ್ಲಿ ಕೆಲವು ಬದಲಾವಣೆಗಳನ್ನು ತಂದಿದೆ. ಹಣಕಾಸು ವರ್ಷ ಮತ್ತು ಮೌಲ್ಯಮಾಪನ ವರ್ಷ ಎಂಬ ಪದಗಳನ್ನು 'ತೆರಿಗೆ ವರ್ಷ' ಎಂದು ಕರೆಯಲಾಗುತ್ತದೆ. ಕಾಯ್ದೆಯ ಭಾಷೆಯನ್ನು ಸರಳಗೊಳಿಸಲಾಗಿದೆ ಎಂದು ಕೇಂದ್ರ ಹೇಳಿದೆ.

ವಾಹನ ಬೆಲೆ ಏರಿಕೆ: ಮರ್ಸಿಡಿಸ್ ಬೆಂಜ್, ಟಾಟಾ ಮೋಟರ್ಸ್, ಜೆಎಸ್‌ಡಬ್ಲ್ಯು ಎಂ.ಜಿ ಮೋಟರ್ ಸೇರಿದಂತೆ ಹಲವು ಕಂಪನಿಗಳು ವಾಹನಗಳ ಬೆಲೆಯನ್ನು ಏರಿಕೆ ಮಾಡಿವೆ. ಪರಿಷ್ಕೃತ ಬೆಲೆ ಏ.1ರಿಂದ ಜಾರಿಗೆ ಬರಲಿದೆ. ಕರೆನ್ಸಿ ಮೌಲ್ಯದಲ್ಲಿನ ಏರಿಳಿತ ಮತ್ತು ತಯಾರಿಕಾ ವೆಚ್ಚದ ಹೆಚ್ಚಳವು ವಾಹನಗಳ ಬೆಲೆ ಏರಿಕೆಗೆ ಕಾರಣವಾಗಿದೆ.



ಎಸ್‌ಟಿಟಿ ಶುಲ್ಕ ಹೆಚ್ಚಳ: ಪ್ರಸಕ್ತ ಆರ್ಥಿಕ ವರ್ಷಕ್ಕೆ ಅನ್ವಯವಾಗುವ ಬಜೆಟ್‌ನಲ್ಲಿ ಫ್ಯೂಚರ್ಸ್ ಟ್ರೇಡಿಂಗ್‌ನ ಷೇರು ವಹಿವಾಟು ತೆರಿಗೆಯನ್ನು (ಎಸ್‌ಟಿಟಿ) ಶೇ 0.02ರಿಂದ ಶೇ 0.05ಕ್ಕೆ ಮತ್ತು ಆಪ್ಷನ್ಸ್ ಟ್ರೇಡಿಂಗ್‌ನ ಎಸ್‌ಟಿಟಿಯನ್ನು ಶೇ 0.1ರಿಂದ ಶೇ 0.15ಕ್ಕೆ ಹೆಚ್ಚಿಸಲಾಗಿದೆ. ಇದು ಏ. 1ರಿಂದ ಜಾರಿಗೆ ಬರಲಿದೆ.

ಮೋಟಾರು ಅಪಘಾತ ಕ್ಲೇಮ್‌ಗಳಿಗೆ ತೆರಿಗೆ ವಿನಾಯಿತಿ: ಮೋಟಾರು ಅಪಘಾತ ಕ್ಲೇಮ್‌ಗಳಿಗೆ ತೆರಿಗೆ ವಿನಾಯಿತಿಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಅಪಘಾತ ಪ್ರಕರಣಗಳಲ್ಲಿ ಮೋಟಾರು ಅಪಘಾತ ಕ್ಲೇಮ್ ನ್ಯಾಯಮಂಡಳಿಯಿಂದ ಪಡೆದುಕೊಳ್ಳುವ ಬಡ್ಡಿ ರೂಪದಲ್ಲಿನ ಯಾವುದೇ ಆದಾಯಕ್ಕೆ ತೆರಿಗೆ ಇರುವುದಿಲ್ಲ. ಈ ತಿದ್ದುಪಡಿಯು ಪ್ರಸಕ್ತ ವರ್ಷದ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ಸೂರ್ಯೋದಯ: 6:17 ಸೂರ್ಯಾಸ್ತ : 6:31 | ಚಂದ್ರೋದಯ: ಸಂ. 4:21 ಚಂದ್ರಾಸ್ತ: ರಾ. 4:16 | ಸೋಮವಾರದ ಉಷ್ಣಾಂಶ : ಗರಿಷ್ಠ 34° ಕನಿಷ್ಠ 21°

ಮಂಗಳವಾರದ ಉಷ್ಣಾಂಶ 34° ಗರಿಷ್ಠ 20° ಕನಿಷ್ಠ | ಬುಧವಾರ 34° : 20° | ಗುರುವಾರ 34° : 20° | ಶುಕ್ರವಾರ 33° : 21°

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

‘ಸದ್ಯ ಡೀಸೆಲ್ ಸಮಸ್ಯೆ ಇಲ್ಲ’

ಬೆಂಗಳೂರು: ‘ರಸ್ತೆ ಸಾರಿಗೆ ನಿಗಮಗಳಿಗೆ ಸದ್ಯ ಡೀಸೆಲ್ ಕೊರತೆಯ ಸಮಸ್ಯೆ ಇಲ್ಲ. ಯುದ್ಧ ಹೀಗೆಯೇ ಮುಂದುವರಿದರೆ ಸಮಸ್ಯೆ ಆಗಬಹುದು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

ಆನ್‌ಲೈನ್‌ನಲ್ಲಿ ‘ಸ್ವಯಂ ಗಣತಿ’ ಏ.1ರಿಂದ

ರಾಷ್ಟ್ರೀಯ ಜನಗಣತಿ: ಏಪ್ರಿಲ್ 16ರಿಂದ ಒಂದು ತಿಂಗಳು ಮನೆ-ಮನೆಗೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಏಪ್ರಿಲ್ 1ರಿಂದ ರಾಷ್ಟ್ರೀಯ ಜನಗಣತಿ- 2027 ಪ್ರಕ್ರಿಯೆ ಆರಂಭವಾಗಲಿದ್ದು, ಮೊದಲ 15 ದಿನ ನಾಗರಿಕರಿಗೆ ವೆಬ್ ಪೋರ್ಟಲ್‌ನಲ್ಲಿ ‘ಸ್ವಯಂ-ಗಣತಿ’ಗೆ ಅವಕಾಶ ಕಲ್ಪಿಸಲಾಗಿದೆ.

‘ರಾಜ್ಯ ಸರ್ಕಾರದ ಆದೇಶದ ಮೇರೆಗೆ ಜನಗಣತಿ-2027ರ ಮೊದಲ ಹಂತದಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಪೂರ್ವ ಸಿದ್ಧತಾ ಕಾರ್ಯಗಳನ್ನು ತ್ವರಿತಗೊಳಿಸಲಾಗಿದೆ. ನಾಗರಿಕರು ತಮ್ಮ ಮನೆ ಹಾಗೂ ಕುಟುಂಬದ ಮಾಹಿತಿಯನ್ನು ನಿಖರವಾಗಿ ದಾಖಲಿಸುವುದು ಅತ್ಯಂತ ಮಹತ್ವದ್ದಾಗಿರುತ್ತದೆ’ ಎಂದು ನಗರ ಪಾಲಿಕೆಗಳ ಆಯುಕ್ತರು ತಿಳಿಸಿದರು.

ಕೇಂದ್ರ ಗೃಹ ಸಚಿವಾಲಯ 2027ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲು ಉದ್ದೇಶಿಸಿದ್ದು, ಮೊದಲ ಹಂತದಲ್ಲಿ ಮನೆಪಟ್ಟಿ ಮತ್ತು ಮನೆ ಗಣತಿಯನ್ನು ಏಪ್ರಿಲ್ 1ರಿಂದ 15 ರವರೆಗೆ ವೆಬ್ ಪೋರ್ಟಲ್ (https://se.census.gov.in) ಮೂಲಕ ಸ್ವಯಂ-ಗಣತಿಗೆ ಅವಕಾಶ ಕಲ್ಪಿಸಿರುತ್ತದೆ. ಮನೆಯ ಯಾವುದೇ ಒಬ್ಬ ಸದಸ್ಯ ಸುಮಾರು 15ರಿಂದ 20 ನಿಮಿಷಗಳಲ್ಲಿ ಸ್ವಯಂ-ಗಣತಿ ಮಾಡಿ, ಮನೆಯ ವಿವರಗಳನ್ನು ಒದಗಿಸಬಹುದು ಮತ್ತು ಮೊಬೈಲ್/ಇಮೇಲ್‌ನಲ್ಲಿ ‘ಸ್ವಯಂ-ಗಣತಿ ಐಡಿ’ಯನ್ನು ಪಡೆಯಬಹುದಾಗಿರುತ್ತದೆ. ಸ್ವಯಂ ಗಣತಿ ಪ್ರಕ್ರಿಯೆಗಾಗಿ ನಿಗದಿಪಡಿಸಿರುವ ಅವಧಿಯಲ್ಲಿ ನಾಗರಿಕರು ತಮ್ಮ ಮಾಹಿತಿಯನ್ನು ದಾಖಲಿಸಲು ಅವಕಾಶವಿದ್ದು, ಇದರಿಂದ ಜನಗಣತಿ ಕಾರ್ಯದಲ್ಲಿ ಪಾರದರ್ಶಕತೆ, ವೇಗ ಮತ್ತು ನಿಖರತೆ ಹೆಚ್ಚಲಿದೆ.

ಜನಗಣತಿಯ ಎರಡನೇ ಹಂತ ಏಪ್ರಿಲ್ 16ರಿಂದ ಮೇ 15ರವರೆಗೆ ನಡೆಯಲಿದ್ದು, ಗಣತಿದಾರರು ಮನೆ-ಮನೆಗೆ ಭೇಟಿ ನೀಡಿ ಮನೆಪಟ್ಟಿ ಮತ್ತು ಮನೆ ಗಣತಿ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ, ದೃಢೀಕರಿಸಲು ಮತ್ತು ಸ್ವಯಂ-ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಸ್ವಯಂ-ಗಣತಿ ಐಡಿಯನ್ನು ಗಣತಿದಾರರೊಂದಿಗೆ ಹಂಚಿಕೊಳ್ಳಬೇಕಾಗಿರುತ್ತದೆ ಎಂದು ಆಯುಕ್ತರು ತಿಳಿಸಿದರು.

ಜನಗಣತಿ ಮಾಹಿತಿಯ ಆಧಾರದ ಮೇಲೆ ಭವಿಷ್ಯದ ನಗರ ಯೋಜನೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಆದ್ದರಿಂದ, ಎಲ್ಲ ನಾಗರಿಕರು ಸ್ವಯಂ ಗಣತಿಯಲ್ಲಿ ತಮ್ಮ ಸರಿಯಾದ ಮಾಹಿತಿಯನ್ನು ಒದಗಿಸಬೇಕು ಎಂದರು.

ತರಬೇತಿ: ಗಣತಿ ಕಾರ್ಯದಲ್ಲಿ ಮುಖ್ಯ ಪಾತ್ರ ವಹಿಸುವವರಿಗೆ ಕ್ಷೇತ್ರ ತರಬೇತುದಾರರು, ಚಾರ್ಜ್ ಆಫೀಸರ್, ಕಂದಾಯ ವಿಭಾಗದ ಅಧಿಕಾರಿಗಳು, ತಾಂತ್ರಿಕ ಸಹಾಯಕರುಗಳಿಗೆ ಮಾಸ್ಟರ್ ತರಬೇತುದಾರರಿಂದ ಅಗತ್ಯ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ಮುಖ್ಯಾಂಶಗಳು

- ಪಾರದರ್ಶಕತೆ, ನಿಖರತೆ ಹೆಚ್ಚಲಿದೆ: ಜಿಬಿಎ
- ಏ.16ರಿಂದ ಎರಡನೇ ಹಂತದ ಗಣತಿ ಕಾರ್ಯ
- ಗಣತಿದಾರರಿಗೆ ಸಂಪೂರ್ಣ ಮಾಹಿತಿ ನೀಡಲು ಮನವಿ

ಸುದ್ದಿ 2 ನಿಮಿಷ

‘ಬೆಂಗಳೂರು ಕರಗ ನಾಳೆ’

ಬೆಂಗಳೂರು: ‘ಬೆಂಗಳೂರು ಕರಗ ಬುಧವಾರ (ಏ. 1ರಂದು) ಮಧ್ಯರಾತ್ರಿ 12.30ಕ್ಕೆ ನಡೆಯಲಿದೆ’ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕಳೆದ ಬಾರಿ ಕರಗ ವೀಕ್ಷಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಬಂದಿದ್ದರು. ಈ ಬಾರಿಯೂ ಅವರಿಗೆ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೂ ಆಹ್ವಾನ ನೀಡಿದ್ದೇನೆ’ ಎಂದರು.

‘ಈ ಬಾರಿ ವಿಶೇಷ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಉತ್ಸವಕ್ಕೆ ಅಗತ್ಯವಾದ ವಿಧಿವಿಧಾನಗಳನ್ನು ಈಗಾಗಲೇ ಆರಂಭಿಸಲಾಗಿದೆ. ರಾಜ್ಯದ ಬೇರೆ ಬೇರೆ ಜಿಲ್ಲೆಯವರು, ಅನ್ಯ ರಾಜ್ಯದವರು ಕರಗ ನೋಡಲು ಬರಬೇಕು’ ಎಂದು ಆಶಿಸಿದರು.

‘ಕರಗ ಸಂದರ್ಭದಲ್ಲಿ ಯಾವುದೇ ರೀತಿ ಸಂಚಾರ ದಟ್ಟಣೆ ಆಗದಂತೆ ವ್ಯವಸ್ಥೆ ಮಾಡಲಾಗುವುದು. ಕಡಲೆಕಾಯಿ ಪರಿಷೆಯನ್ನು ನಾವು ಐದು ದಿನ ಮಾಡಿದ್ದೆವು. ಅದಕ್ಕೆ ವ್ಯಾಪಕ ಪ್ರಚಾರ ನೀಡಿದ್ದೆವು. ಅಂದಾಜು 15 ಲಕ್ಷ ಜನ ಬಂದಿದ್ದರು. ಬೆಂಗಳೂರಿನವರು ಕರಗಕ್ಕೆ ಹೆಚ್ಚು ಸಂಖ್ಯೆಯಲ್ಲಿ ಬರಬೇಕು’ ಎಂದು ಮನವಿ ಮಾಡಿದರು.

ಪಾಲಿಕೆ ಬಜೆಟ್‌ಗೆ ಸರ್ಕಾರದ ಅವಲಂಬನೆ ಕುರಿತು ಕೇಳಿದ ಪ್ರಶ್ನೆಗೆ, ‘ಮೊದಲಿನಿಂದಲೂ ಹೀಗೆ ನಡೆದುಕೊಂಡು ಬಂದಿದೆ. ಕಡಿಮೆಯಾಗುವ ಹಣವನ್ನು ಸರ್ಕಾರ ಕೊಡುತ್ತಿದೆ’ ಎಂದರು.

‘ವಿದ್ಯಾರ್ಥಿನಿಯರು ಹೆಚ್ಚು ಕ್ರಿಯಾಶೀಲರಾಗಬೇಕು’

ಬೆಂಗಳೂರು: ‘ಈಗ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಇಡೀ ಜಗತ್ತನ್ನೇ ಆಳುತ್ತಿದ್ದು, ವಿದ್ಯಾರ್ಥಿನಿಯರು ಹಿಂದೆಂದಿಗಿಂತಲೂ ಹೆಚ್ಚು ಕ್ರಿಯಾಶೀಲರಾಗಬೇಕು’ ಎಂದು ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜಿನ (ಎಂಲ್ಯಾಕ್) ಟ್ರಸ್ಟಿ ಗೀತಾ ನಾರಾಯಣ್ ಹೇಳಿದರು.

ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜಿನ ಕೆ.ಎನ್.ವಿ.ಶಾಸ್ತ್ರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ಜಗತ್ತಿನ ಕೆಲವು ಭಾಗದಲ್ಲಿ ಯುದ್ಧದ ವಾತಾವರಣವಿದೆ. ಈಗ ಎಲ್ಲರೂ ಶಾಂತಿ ಮಂತ್ರ ಪಠಿಸಬೇಕಿದೆ’ ಎಂದರು.

ಎಂಲ್ಯಾಕ್ ಅಧ್ಯಕ್ಷ ಎಸ್.ಎಸ್.ನಾಗಾನಂದ ಮಾತನಾಡಿ, ‘ಡಾ.ಕೆ.ಎನ್.ವಿ.ಶಾಸ್ತ್ರಿ ಅವರು ಸಹಿತ ಹಲವರ ಕನಸಿನ ಫಲವಾಗಿ ಶಿಕ್ಷಣ ಸಂಸ್ಥೆ ಆರಂಭಗೊಂಡು 54 ವರ್ಷಗಳಿಂದ ಸೇವೆ ನೀಡುತ್ತಾ ಬಂದಿದೆ. ಇದರಿಂದ ಸಹಸ್ರಾರು ಮಂದಿ ಇದರ ಉಪಯೋಗ ಪಡೆದುಕೊಂಡಿದ್ದಾರೆ. ಭವಿಷ್ಯದ ಕುರಿತು ಯೋಚಿಸುತ್ತಲೇ ವರ್ತಮಾನವನ್ನು ಮರೆಯಬಾರದು’ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಕೆ.ಜೈರಾಜ್, ಪದವಿ ಕಾಲೇಜಿನ ಪ್ರಾಂಶುಪಾಲರಾದ ನಂದಾ ಕುಲಕರ್ಣಿ, ಪಿಯುಸಿ ವಿಭಾಗದ ಪ್ರಾಂಶುಪಾಲ ವಾದಿರಾಜ್ ಮಾನ್ವಿ, ಮುಖ್ಯ ಆಡಳಿತಾಧಿಕಾರಿ ಗಂಗಾಧರಮೂರ್ತಿ, ಶೈಕ್ಷಣಿಕ ಆಡಳಿತಾಧಿಕಾರಿ ಬಿ.ಎ.ಅನ್ನದಾನೇಶ ಉಪಸ್ಥಿತರಿದ್ದರು.

‘ವಿಜ್ಞಾನ ವಿಷಯಗಳ ಸಂಶೋಧನೆಗೆ ಒತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಜ್ಞಾನ ಕ್ಯಾಂಪಸ್ ಎಂದೇ ಹೆಸರಾಗಿದ್ದ ಸೆಂಟ್ರಲ್ ಕಾಲೇಜಿನ ಶೈಕ್ಷಣಿಕ ಪರಂಪರೆ ಮುಂದುವರಿಸಲು ವಿಜ್ಞಾನ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಗೆ ವಿಶೇಷ ಉತ್ತೇಜನ ನೀಡಲಾಗುವುದು’ ಎಂದು ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ರಮೇಶ್ ಭರವಸೆ ನೀಡಿದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ಮೂಲ ವಿಜ್ಞಾನ ವಿಷಯಗಳ ಕಲಿಕೆಯ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಎಂದರು.

ಶ್ರೀದೇವಿ ಜಾಡೇ ಅವರನ್ನು ಬಿ.ರಮೇಶ್ ಸನ್ಮಾನಿಸಿದರು. ಪ್ರೊ.ರಮೇಶ ಬಿ.ಕುಡೇನಟ್ಟಿ, ಎಂ.ವಿ.ವಿಜಯಲಕ್ಷ್ಮಿ ಉಪಸ್ಥಿತರಿದ್ದರು

‘ಸಮಾಜದ ಕೆಳಸ್ತರಗಳ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರಲ್ಲಿ ಆಳವಾಗಿ ಬೇರೂರಿರುವ ಮೌಢ್ಯವನ್ನು ನಿವಾರಿಸಿ ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು ಕಾರ್ಯೋನ್ಮುಖವಾಗಬೇಕು’ ಎಂದು ಅವರು ಅಭಿಪ್ರಾಯಪಟ್ಟರು.

ಎಸಿಎಸ್‌ಐಆರ್ ಪ್ರಾಧ್ಯಾಪಕಿ ಶ್ರೀದೇವಿ ಜಾಡೇ, ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಡೀನ್ ಪ್ರೊ. ಪಿ.ಆರ್.ಚೇತನ ಮಾತನಾಡಿದರು.

ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ ಬಿ.ಕುಡೇನಟ್ಟಿ, ವಿತ್ತಾಧಿಕಾರಿ ಎಂ.ವಿ.ವಿಜಯಲಕ್ಷ್ಮಿ ಹಾಜರಿದ್ದರು.

ವಿಜ್ಞಾನ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಭಿತ್ತಿಚಿತ್ರ ರಚನೆ, ಚರ್ಚಾ ಸ್ಪರ್ಧೆ ಮತ್ತು ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಂಸಾ ಪತ್ರಗಳನ್ನು ವಿತರಿಸಲಾಯಿತು.

‘ಮೀಸಲಾತಿ ಪಟ್ಟಿ: ಅನರ್ಹ ಜಾತಿಗಳಿಗೆ ಅವಕಾಶ ಬೇಡ’

ಬೆಂಗಳೂರು: ನ್ಯಾಯಮೂರ್ತಿ ಒ.ಚಿನ್ನಪ್ಪರೆಡ್ಡಿ ವರದಿಯಲ್ಲಿ ಹಿಂದುಳಿದ ವರ್ಗಗಳು ಎಂದು ಗುರುತಿಸದಿರುವ ಅನರ್ಹ ಜಾತಿಗಳನ್ನು ಮೀಸಲಾತಿ ಪಟ್ಟಿಯಲ್ಲಿ ಸೇರಿಸಿರುವುದನ್ನು ಕರ್ನಾಟಕ ರಾಜ್ಯ ದಮನಿತ ಹಿಂದುಳಿದ ಜಾತಿಗಳ ಒಕ್ಕೂಟ ವಿರೋಧಿಸಿದೆ.

ನಗರದಲ್ಲಿ ನಡೆದ ಒಕ್ಕೂಟದ ಸಭೆಯಲ್ಲಿ ಆರು ನಿರ್ಣಯ ಕೈಗೊಳ್ಳಲಾಗಿದೆ ಎಂದು ಒಕ್ಕೂಟದ ಗೌರವ ಅಧ್ಯಕ್ಷ ಕೆ.ಎನ್.ಲಿಂಗಪ್ಪ ತಿಳಿಸಿದ್ದಾರೆ.

‘ಟ್ರಿಪಲ್ ಟೆಸ್ಟ್ ಇಲ್ಲದೆ ನಗರಪಾಲಿಕೆ ಸಹಿತ ಇತರೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸಿದರೆ ದಮನಿತ ಹಿಂದುಳಿದ ಜಾತಿಗಳಿಗೆ ಅನ್ಯಾಯವಾಗುತ್ತದೆ. ಟ್ರಿಪಲ್ ಟೆಸ್ಟ್ ಕಾರ್ಯ ಕೈಗೆತ್ತಿಕೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಲು ಕಾನೂನು ಮೊರೆ ಹೋಗಲೂ ತೀರ್ಮಾನಿಸಲಾಗಿದೆ’ ಎಂದಿದ್ದಾರೆ.

‘ಜಿಲ್ಲಾಮಟ್ಟದ ಸಮಿತಿ ರಚಿಸಿ ದಮನಿತ ಹಿಂದುಳಿದ ಜಾತಿಗಳಿಗೆ ಸೇರಿದ ಕನಿಷ್ಠ 500 ಜನರನ್ನು ಸದಸ್ಯರ ನೋಂದಣಿ, ಪದಾಧಿಕಾರಿಗಳ ಸಭೆಯನ್ನು ಬೆಂಗಳೂರಿನಲ್ಲಿ ನಡೆಸುವುದು, ಒಕ್ಕೂಟದ ಧ್ಯೇಯೋದ್ದೇಶಗಳನ್ನು ತಿಳಿಸಲು 3 ಲಕ್ಷ ಮನವಿ ಪತ್ರಗಳ ವಿತರಣೆಗೆ ತೀರ್ಮಾನಿಸಲಾಗಿದೆ’ ಎಂದು ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: SWR-CEE-P-ORH-SBC
ದಿನಾಂಕ: 23.03.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಎಂಡಿಡಿಟಿಐ/ಬೆಂಗಳೂರು ಹತ್ತಿರದಲ್ಲಿರುವ ಸಿಇಇ/ಯೋಜನೆ/ನೈಋತ್ಯ ರೈಲ್ವೆಯ ಅಸ್ತಿತ್ವದಲ್ಲಿರುವ ವಿಶ್ರಾಂತಿ ಗೃಹದ ದುರಸ್ತಿ / ಮಾರ್ಪಾಡು ಕಾಮಗಾರಿಗಳು ಹಾಗೂ 36 ತಿಂಗಳುಗಳ ನಿರ್ವಹಣೆ ಅವಧಿಯೊಂದಿಗೆ ಬೆಂಗಳೂರು ನಗರದಲ್ಲಿ ಲಿಫ್ಟ್‌ನ ವ್ಯವಸ್ಥೆ ಮಾಡುವುದು.	ರೂ. 1,00,88,672.72

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.04.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ರೈಲ್ವೆ ವಿದ್ಯುತೀಕರಣ ಬೆಂಗಳೂರು
PUB/1021/AAF/PRB/SWR/2025-26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್ ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.

South Western Railway - SWR | SWRRLY | SWRRLY

IN THE COURT OF THE 5th ADDL., DISTRICT & SESSION JUDGE, AT HASSAN
R.A.135/2025

APPELLANT: H.M Shivaputrappa & another.
V/S
RESPONDENTDS: Mrs.Rathna & others.
Notice of Appeal to Respondents No.5, 6(a) 6(b), 6(c) 10(a) and 10(b)

R-5: Mr. H.M Anand, aged 76 years, S/o Late Mahanthappa, R/o Lakshmipuram Extention, Sakaleshpur Town, Hassan District. R-6(a): Smt. Madhumathi Harish, W/o late H.M.Harish, aged 43 years, 6(b): Sahana Harish D/o Late H.M.Harish, aged 21 years, 6(c): Anish Harish S/o Late H.M Harish, aged 19 years, (a), (6b) and 6(c), are residents of Kaltippe Estate, Henly Village, Hebbasale Post, Sakaleshpur Taluk. Presently residing at No.362/3, 5th Main HAL 3rd stage, Bengaluru-75. R-10(a): Smt. Yashoda W/o Late H.S Chandrashekar, aged 65 years, 10(b): Akshatha D/o late H.S Chandrashekar, aged 42years. 10(a) and 10(b), are residents of No.154, 2nd Cross, Bannerugatta Road, Arakere BTS Layout Bengaluru.

Take Notice.... that an appeal from the second preliminary decree passed in FDP10/2007, dated: 24-02-2023, of the Senior Civil Judge, Sakaleshpur, in this case an appeal is presented by H.N Shivaputrappa and another and registered in this court and that, the 27th day of April-2026, at 11.00, O'clock, has been fixed by this court for hearing this appeal. If no appearance is made, on your behalf by yourself, your pleader or someone by law authorized to act for you in this appeal; it will be heard and decided, in your absence.

Given under my hand and the seal of the court, on this 25th day of March 2026.

By Order of Court: Chief Administrative Officer, District & Session Court Hassan.
Advocate: H.D Vishwanath, Advocate

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064.
ವೆಬ್ ಸೈಟ್ : www.Indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ:
ಆರ್ ಡಬ್ಲ್ಯೂಎಫ್ / ಡಬ್ಲ್ಯೂ /25-26/22
ದಿನಾಂಕ: 28/03/2026

ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಮುಖ್ಯ ಇಂಜಿನಿಯರ್ ಈ ಕೆಳಗಿನ ಕಾಮಗಾರಿಗಳಿಗಾಗಿ http://www.ireps.gov.in ವೆಬ್ ಸೈಟ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಆಸಕ್ತ ಗುತ್ತಿಗೆದಾರರು ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು.

ವಿವರಗಳು:

ಸಂಖ್ಯೆ: 1–**ಟೆಂಡರ್ ಸಂಖ್ಯೆ:** ಡಬ್ಲ್ಯೂ .496/ ಆರ್ ಡಬ್ಲ್ಯೂ ಎಫ್ / ವೈ ಎನ್ ಕೆ /1077, **ಕಾಮಗಾರಿಯ ವಿವರ:** ಎಸ್ ಡಬ್ಲ್ಯೂ :1 – ಆರ್ ಡಬ್ಲ್ಯೂ ಎಫ್ ಕಾರ್ಖಾನೆ ಆವರಣದಲ್ಲಿ ಇರುವ PC ಬೇಯಲ್ಲಿ ಗ್ಯಾಂಟ್ರಿ ಗಿರ್ಡರ್‌ಗಳು, ಗ್ಯಾಂಟ್ರಿ ರೈಲುಗಳು ಮತ್ತು ಡಯಾಫ್ರಾಗಂ ಸಂಪರ್ಕಗಳ ನವೀಕರಣ ಮತ್ತು ಸುಧಾರಣೆ. ಎಸ್ ಡಬ್ಲ್ಯೂ :2 – ಆಡಳಿತ ಕಟ್ಟಡದಿಂದ ರೈಲ್ವೆ ಆಸ್ಪತ್ರೆಯವರೆಗೆ (ವೆಸ್ಟ್ ಕಾಲೋನಿ) ಕಾಲ್ನಡಿಗೆ ಸೇತುವೆ ನಿರ್ಮಾಣ. **ಅಂದಾಜು ವೆಚ್ಚ :** ರೂ. 5,42,66,637.15, **ಇ.ಎಂ.ಡಿ ಮೊತ್ತ:** ರೂ. 10,85,300.00, **ಟೆಂಡರ್ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ:** 20/04/2026 ಮಧ್ಯಾಹ್ನ 3:00 ಗಂಟೆ

ಸಂಖ್ಯೆ: 2–**ಟೆಂಡರ್ ಸಂಖ್ಯೆ:** ಡಬ್ಲ್ಯೂ .496/ ಆರ್ ಡಬ್ಲ್ಯೂ ಎಫ್ /ವೈ ಎನ್ ಕೆ /1078 **ಕಾಮಗಾರಿಯ ವಿವರ:** ಆರ್ ಡಬ್ಲ್ಯೂ ಎಫ್, ವೆಸ್ಟ್ ಕಾಲೋನಿಯಲ್ಲಿ ಮಳೆನೀರು ಹರಿವುಗಾಗಿ ಸಿಲ್ಟ್ ಚೆಂಬರ್‌ಗಳೊಂದಿಗೆ ಕಲ್ಲಿನ ಸ್ಲ್ಯಾಬ್ ಡ್ರೈನ್ ನಿರ್ಮಾಣ ಮತ್ತು ಮರುಸ್ಥಾಪನೆ. **ಅಂದಾಜು ವೆಚ್ಚ:** ರೂ. 2,30,21,862.70, **ಇ.ಎಂ.ಡಿ:** ರೂ. 4,60,400.00, **ಟೆಂಡರ್ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ:** 20/04/2026 ಮಧ್ಯಾಹ್ನ 3:00 ಗಂಟೆ, **ಸೂಚನೆ:** ಇ-ಟೆಂಡರ್ ಸಲ್ಲಿಸಲು ಅಗತ್ಯವಿರುವ ಎಲ್ಲಾ ವಿವರಗಳನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಉಪ ಮುಖ್ಯ ಇಂಜಿನಿಯರ್

ನೈಋತ್ಯ ರೈಲ್ವೆ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರು ಸೂಚನೆ ಸಂ. SWR/W/TS/USFD/2026/03/E ದಿನಾಂಕ: 25.03.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
ಮೈಸೂರು ವಿಭಾಗದಲ್ಲಿ ಲೂಪ್‌ಲೈನುಗಳಲ್ಲಿ ಎಟಿ ವೆಲ್ಡ್‌ಗಳ ಅಲ್ಟ್ರಾಸೋನಿಕ್ ಪರಿಶೀಲನೆ. (ಇ-ಟೆಂಡರು ಸಂಖ್ಯೆ: SWR-MYS-USFD-ATW-202602)	ರೂ. 15,36,480/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.04.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ಟ್ರ್ಯಾಕ್ ಪ್ರೊಕ್ಯೂರ್‌ಮೆಂಟ್ ಪ್ರಧಾನ ಕಚೇರಿ/ಹುಬ್ಬಳ್ಳಿ
PUB/1026/AAF/PRB/SWR/2025-26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್ ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. CAO/CN/BNC/178/2026, ದಿನಾಂಕ: 25.03.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ	ಕೊನೆಯ ದಿನಾಂಕ
1	ಶಿವಮೊಗ್ಗ ಟೌನ್-ರಾಣೆಬೆನ್ನೂರು ಹೊಸ ಲೈನ್ ಯೋಜನೆ (ಕಿಮೀ. 48/000 ರಿಂದ 103/175) ಗಾಗಿ ಸೈಟ್ ಕ್ಲಿಯರೆನ್ಸ್ ಮತ್ತು ಮರಗಳನ್ನು ಕಡಿಯುವುದು, ಸಾಗಣೆ, ಭೂಮಿಯ ಗಡಿಯನ್ನು ಗುರುತಿಸುವುದು ಮತ್ತು ಪಿಲ್ಲರ್‌ಗಳನ್ನು ನಿಲ್ಲಿಸುವುದು, ಭೂಸ್ವಾಧೀನ, ಸಂಪರ್ಕ ಮತ್ತು ರೂಪಾಂತರ ಕಾಮಗಾರಿಗಳು. (ಟೆಂಡರು ಉಲ್ಲೇಖ ಸಂಖ್ಯೆ: SMET-RNR-SITE-CLEARANCE)	ರೂ. 13,86,22,502/-	17.04.2026 (15:00 ಗಂಟೆಯವರೆಗೆ)
2	ನೈಋತ್ಯ ರೈಲ್ವೆಯಲ್ಲಿ ವಿವಿಧ ಯೋಜನೆಗಳಿಗೆ ಇಂಟಿಗ್ರೇಟೆಡ್ ಯೋಜನಾ ನಿರ್ವಹಣೆ ಮತ್ತು ಮಾಹಿತಿ ವ್ಯವಸ್ಥೆ (ಪಿಎಂಐಎಸ್)ಯ ವಿನ್ಯಾಸ, ಕಸ್ಟಮೈಸೇಶನ್, ಅಳವಡಿಸುವುದು, ಕಾರ್ಯಾಚರಣೆ ಮತ್ತು ನಿರ್ವಹಣೆ. (ಟೆಂಡರು ಉಲ್ಲೇಖ ಸಂಖ್ಯೆ: PMIS-SWR-01R)	ರೂ. 4,26,03,321/-	24.04.2026 (15:00 ಗಂಟೆಯವರೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ಕಂಟೋನ್ಮೆಂಟ್
PUB/1027/AAF/PRB/SWR/2025-26

RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ. RailOne ಭಾರತೀಯ ರೈಲ್ವೆಯ ಆಲ್-ಇನ್-ಒನ್ ರೈಲ್ವೆ ಅಪ್ಲಿಕೇಶನ್ ಆಗಿದೆ. ಪ್ರಯಾಣಿಕರು ಕಾಯ್ದಿರಿಸಿದ ಟಿಕೆಟ್‌ಗಳು, ಕಾಯ್ದಿರಿಸದ ಟಿಕೆಟ್‌ಗಳು, ಪ್ಲಾಟ್ ಫಾರ್ಮ್ ಟಿಕೆಟ್‌ಗಳು ಮತ್ತು ಸೀಸನ್ ಪಾಸ್‌ಗಳನ್ನು ಬುಕ್ ಮಾಡಬಹುದು, PNR ಸ್ಥಿತಿಯನ್ನು ಪರಿಶೀಲಿಸಬಹುದು, ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ತಮ್ಮ ಬೆರಳ ತುದಿಯಲ್ಲಿ ಇನ್ನೂ ಅನೇಕ ಸೇವೆಗಳನ್ನು ಪ್ರವೇಶಿಸಬಹುದು. RailOne ಅಪ್ಲಿಕೇಶನ್ ಮೂಲಕ ಕಾಯ್ದಿರಿಸದ ಟಿಕೆಟ್‌ಗಳನ್ನು ಬುಕ್ ಮಾಡಲು ಡಿಜಿಟಲ್ ಪಾವತಿಗಳನ್ನು ಬಳಸಿ ಹಾಗೂ 3% ವರೆಗೆ ರಿಯಾಯಿತಿಯನ್ನು ಆನಂದಿಸಿ.

South Western Railway - SWR | SWRRLY | SWRAILWAYHQ | sw_railways

ಚಿಟಿಕೆ ಸುದ್ದಿ

ರಾತ್ರಿ 10ರವರೆಗೆ ಪಾಲಿಕೆ ಕಚೇರಿ ಕಾರ್ಯಾಚರಣೆ

ಬೆಂಗಳೂರು: ಆರ್ಥಿಕ ವರ್ಷ ಅಂತ್ಯವಾಗುವ ಮಾರ್ಚ್ 31ರಂದು ರಾತ್ರಿ 10ವರೆಗೆ ನಗರ ಪಾಲಿಕೆಗಳ ಕಚೇರಿಗಳು ಕಾರ್ಯನಿರ್ವಹಿಸಬೇಕು ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಸೂಚಿಸಿದ್ದಾರೆ.

ನಾಗರಿಕರು ಅಥವಾ ಆಸ್ತಿ ಮಾಲೀಕರು ತೆರಿಗೆ ಪಾವತಿಸಲು ಅನುಕೂಲವಾಗುವಂತೆ, ಎಲ್ಲ ನಗರ ಪಾಲಿಕೆಗಳು ಹಸ್ತಚಾಲಿತ ಡಿಮ್ಯಾಂಡ್ ಡ್ರಾಫ್ಟ್ ಮತ್ತು ಭಾಗಶಃ ಪಾವತಿಗಳನ್ನು ರಾತ್ರಿ 10ರವರೆಗೆ ಸ್ವೀಕರಿಸಲಿವೆ ಎಂದು ತಿಳಿಸಿದ್ದಾರೆ.

ಆನ್‌ಲೈನ್‌ನಲ್ಲಿ ಮಂಗಳವಾರ ರಾತ್ರಿ 11.59ರವರೆಗೂ ಪಾವತಿಸಬಹುದಾಗಿದೆ. ಆಸ್ತಿ ತೆರಿಗೆಯನ್ನು ಪಾವತಿಸಿ, ದಂಡ ಹಾಗೂ ಬಡ್ಡಿಯಿಂದ ತಪ್ಪಿಸಿಕೊಳ್ಳಿ ಎಂದು ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ರಾಮ ಪಲ್ಲಕ್ಕಿ ಉತ್ಸವ

ಬೆಂಗಳೂರು: ರಾಮನವಮಿ ಹಬ್ಬದ ಅಂಗವಾಗಿ ಎಚ್‌ಬಿಆರ್ ಲೇಔಟ್‌ನ ಇಸ್ಕಾನ್‌ನಲ್ಲಿ ಶ್ರದ್ಧಾ- ಭಕ್ತಿಯಿಂದ ರಾಮ ಪಲ್ಲಕ್ಕಿ ಉತ್ಸವ ವಿಜೃಂಭಣೆ ನಡೆಯಿತು.

ಈ ಸಂದರ್ಭದಲ್ಲಿ ಇಸ್ಕಾನ್ ಕೇಂದ್ರದ ಅಧ್ಯಕ್ಷ ವರದಕೃಷ್ಣ ಪ್ರಭು, ಸಾರ್ವಜನಿಕ ಸಂಪರ್ಕ ಅಧಿಕಾರಿ ಅಶುತೋಷ್ ಸಿದಪ್ಪ ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

ಅಲಂಕರಿಸಿದ ಪಲ್ಲಕಿಯಲ್ಲಿ ಶ್ರೀರಾಮ, ಸೀತಾ ದೇವಿ, ಲಕ್ಷ್ಮಣ ಮತ್ತು ಹನುಮಂತನ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಕಮ್ಮನಹಳ್ಳಿ ವರ್ತುಲ ರಸ್ತೆ ಮೂಲಕ ಮೆರವಣಿಗೆ ನಡೆಸಲಾಯಿತು. ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಸಾಗಿತು. ಭಕ್ತರು ಕೀರ್ತನೆ, ನೃತ್ಯ ಹಾಗೂ ಭಜನೆಯಲ್ಲಿ ಪಾಲ್ಗೊಂಡು, ರಾಮನಾಮ ಸ್ಮರಣೆ ಮಾಡಿದರು. ಮೆರವಣಿಗೆಯ ನಂತರ ನಡೆದ ಅಭಿಷೇಕ ಕಾರ್ಯಕ್ರಮ ವಿಶೇಷ ಆಕರ್ಷಣೆಯಾಗಿತ್ತು.

ಬೇಸ್ ಘಟಿಕೋತ್ಸವ: ಅರ್ಜಿ ಸಲ್ಲಿಕೆ

ಬೆಂಗಳೂರು: ನಗರದ ಜ್ಞಾನಭಾರತಿ ಕ್ಯಾಂಪಸ್‌ನ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (ಬೇಸ್) ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಹ ವಿದ್ಯಾರ್ಥಿಗಳು ಏಪ್ರಿಲ್ 10ರೊಳಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

ಏ.27ರಂದು ಬೆಳಿಗ್ಗೆ 11.30ಕ್ಕೆ ಬೇಸ್ ಸಭಾಂಗಣದಲ್ಲಿ ಘಟಿಕೋತ್ಸವಕ್ಕೆ ಚಾಲನೆ ದೊರೆಯಲಿದೆ. 2023-24 ಮತ್ತು 2024-25ನೇ ಸಾಲಿನ ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಅರ್ಹರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ. ಏಪ್ರಿಲ್ 10ರೊಳಗೆ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸುವಂತೆ ಬೇಸ್ ಕುಲಸಚಿವರಾದ ಜಿ.ಎಸ್.ಮಮತಾದೇವಿ ತಿಳಿಸಿದ್ದಾರೆ.

ಕಳ್ಳನೆಂದು ಭಾವಿಸಿ ಮರಕ್ಕೆ ಕಟ್ಟಿ ಥಳಿತ

ಚಿಕ್ಕಬಳ್ಳಾಪುರ: ಅಪರಿಚಿತ ವ್ಯಕ್ತಿಯೊಬ್ಬನನ್ನು ಕಳ್ಳ ಎಂದು ಭಾವಿಸಿದ ತಾಲ್ಲೂಕಿನ ಗಿಡ್ನಹಳ್ಳಿ ಗ್ರಾಮಸ್ಥರು ಆ ವ್ಯಕ್ತಿಯನ್ನು ಹಿಡಿದು, ಮರಕ್ಕೆ ಕಟ್ಟಿ ಹಾಕಿ ಮನಸೋ ಇಚ್ಛೆ ಥಳಿಸಿದ್ದಾರೆ. ಆ ಬಳಿಕ ಆತನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ.

ಕಳೆದ 20 ದಿನಗಳಲ್ಲಿ ಗ್ರಾಮದ ಎರಡು ದೇವಸ್ಥಾನಗಳಲ್ಲಿ ಕಳ್ಳತನವಾಗಿದೆ. ಇದರಿಂದಾಗಿ ಅಪರಿಚಿತ ವ್ಯಕ್ತಿಯನ್ನು ಕಳ್ಳ ಎಂದು ಭಾವಿಸಿ, ಗ್ರಾಮಸ್ಥರು ಈ ಕೃತ್ಯ ಎಸಗಿದ್ದಾರೆ ಎಂದು ತಿಳಿದುಬಂದಿದೆ.

ಥಳಿತಕ್ಕೊಳಗಾದ ವ್ಯಕ್ತಿಯನ್ನು ತಾಲ್ಲೂಕಿನ ಹನುಮಂತಪುರ ಗ್ರಾಮದ ಬಾಲರಾಜು ಎಂದು ಗುರುತಿಸಲಾಗಿದೆ.

ಈತ ರಾತ್ರಿ ಮತ್ತು ಬೆಳಿಗ್ಗೆ ವೇಳೆ ಗ್ರಾಮದಲ್ಲಿ, ದೇವಸ್ಥಾನದ ಬಳಿ ಅನುಮಾನಾಸ್ಪದವಾಗಿ ಸುತ್ತಾಡುವುದನ್ನು ಕಂಡು ಗ್ರಾಮಸ್ಥರು ಈತ ಕಳ್ಳ ಇರಬಹುದು ಎಂದು ಶಂಕಿಸಿದ್ದರು ಎನ್ನಲಾಗಿದೆ.

ಬಿಬಿಸಿ: ಜಾಗತಿಕ ಟೆಂಡರ್ ಆಹ್ವಾನ

ಪಿಆರ್‌ಆರ್ ಯೋಜನೆ ಈಗ 'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಬಹುನಿರೀಕ್ಷಿತ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ–ಪಿಆರ್‌ಆರ್–1) ಯೋಜನೆಗೆ ಸಂಬಂಧಿಸಿದಂತೆ ತುಮಕೂರು ರಸ್ತೆ ಮತ್ತು ನಗರದ ಹೊರವಲಯದಲ್ಲಿರುವ ಬಳ್ಳಾರಿ ರಸ್ತೆ ಸಂಪರ್ಕಿಸುವ 19.80 ಕಿಮೀ ಉದ್ದದ ಯೋಜನೆಯ ನಿರ್ಮಾಣಕ್ಕಾಗಿ ಜಾಗತಿಕ ಟೆಂಡರ್ ಆಹ್ವಾನಿಸಿದೆ.

> ಯೋಜನೆಯ ಮೊದಲ ಹಂತಕ್ಕೆ ಅಗತ್ಯವಿರುವ ಶೇಕಡ 83 ರಷ್ಟು ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಯೋಜನೆಯಲ್ಲಿ ಪ್ರಮುಖ ಬದಲಾವಣೆ ಆಗಿದ್ದು, ರಸ್ತೆ ಅಗಲ 65 ಮೀಟರ್‌ಗೆ ಸೀಮಿತವಾಗಿದೆ.
> **ಎಲ್.ಕೆ.ಅತೀಕ್,** ಬಿಬಿಸಿ ವಿಶೇಷ ಉದ್ದೇಶದ ಘಟಕದ (ಎಸ್‌ಪಿವಿ) ಅಧ್ಯಕ್ಷ

ಒಟ್ಟು 74 ಕಿಲೋ ಮೀಟರ್ ಉದ್ದದ ಯೋಜನೆಯ ಮೊದಲ ಹಂತವಾಗಿದ್ದು, ಭೂಸ್ವಾಧೀನ ಪ್ರಗತಿಯ ಆಧಾರದ ಮೇಲೆ ಮೂರು ಪ್ಯಾಕೇಜುಗಳಾಗಿ ವಿಭಜಿಸಲಾಗಿದೆ. ಪಿಆರ್‌ಆರ್ ಯೋಜನೆಯನ್ನು ಈಗ 'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್' ಎಂದು ಮರು ನಾಮಕರಣ ಮಾಡಲಾಗಿದೆ.

ದಾಖಲೆಗಳ ಪ್ರಕಾರ, ಮೊದಲ ಹಂತದಲ್ಲಿ ಅಂದಾಜು ₹3,348 ಕೋಟಿ ವೆಚ್ಚವಾಗಲಿದೆ. ಮಾದಾವರ (ನೈಸ್ ರಸ್ತೆ ಸಂಪರ್ಕ), ದೊಡ್ಡಬಳ್ಳಾಪುರ ಜಂಕ್ಷನ್ ಮತ್ತು ಬಳ್ಳಾರಿ ರಸ್ತೆ (ಕಾಲಿನ್ಸ್ ಏರೋಸ್ಪೇಸ್ ಬಳಿ) ಗಳಲ್ಲಿ ಮೂರು ಪ್ರಮುಖ ಇಂಟರ್‌ಚೇಂಜ್ ಒಳಗೊಂಡಿದೆ.

ಹೆಸರಘಟ್ಟ ಜಂಕ್ಷನ್ ಬಳಿ ಗ್ರೇಡ್ ಸಪರೇಟರ್ (ಅಂಡರ್‌ಪಾಸ್), ಸುಮಾರು 5 ಕಿ.ಮೀ. ಮೇಲ್ಸೇತುವೆ ಮತ್ತು ಪ್ರಮುಖ ಸೇತುವೆಗಳು. ತುಮಕೂರು, ದೊಡ್ಡಬಳ್ಳಾಪುರ ಮತ್ತು ಚಿಕ್ಕಬಳ್ಳಾಪುರ ಮಾರ್ಗಗಳಲ್ಲಿ ಮೂರು ರೈಲ್ವೆ ಮೇಲ್ಸೇತುವೆ ಯೋಜನೆಯ ಭಾಗವಾಗಿದೆ.

ಈ ಯೋಜನೆಯನ್ನು ಡಿಬಿಒಟಿ (ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ, ವರ್ಗಾವಣೆ) ಮಾದರಿಯಲ್ಲಿ ಕಾರ್ಯಗತಗೊಳಿಸಲಾಗುವುದು. 36 ತಿಂಗಳ ನಿರ್ಮಾಣ ಅವಧಿಯ ಜೊತೆಗೆ 10 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಪ್ಪಂದದಲ್ಲಿ ಒಳಗೊಂಡಿದೆ.

ಈ ಕಾರಿಡಾರ್ ಅನ್ನು ಹೆಚ್ಚಿನ ಸಾಮರ್ಥ್ಯ ಹೊಂದಿದ, ಪ್ರವೇಶ ನಿಯಂತ್ರಿತ ರಸ್ತೆಯಾಗಿ ವಿನ್ಯಾಸಗೊಳಿಸಲಾಗಿದ್ದು, ಟ್ರಾಫಿಕ್ ಸಿಗ್ನಲ್‌ಗಳನ್ನು ತಪ್ಪಿಸಲು ಅನೇಕ ಗ್ರೇಡ್-ಸೆಪರೇಟೆಡ್ ಇಂಟರ್‌ಚೇಂಜ್‌ಗಳು ಒಳಗೊಂಡಿದೆ.

ಭವಿಷ್ಯದಲ್ಲಿ ಕಾರಿಡಾರ್‌ನ ಉದ್ದಕ್ಕೂ 'ನಮ್ಮ ಮೆಟ್ರೊ' ಜೋಡಣೆ ಸಂಯೋಜಿಸಲು ಬಿಡಿಎ ಅವಕಾಶ ಕಲ್ಪಿಸಿದೆ. ಒಟ್ಟಾರೆ ಈ ಮಾರ್ಗದಲ್ಲಿ ಒಟ್ಟು 12 ಪಥಗಳು ಇರಲಿವೆ. ಇದರಲ್ಲಿ ಎಂಟು ಪಥಗಳು ಮುಖ್ಯ ರಸ್ತೆ ಭಾಗವಾಗಿದ್ದು, ಎರಡೂ ಬದಿಗಳಲ್ಲಿ ನಾಲ್ಕು ಪಥಗಳು ಸರ್ವೀಸ್ ರಸ್ತೆಗಳಾಗಿ ಇರಲಿವೆ. ಸುಮಾರು ಆರು ಟೋಲ್ ಪ್ಲಾಜಾಗಳನ್ನು ಯೋಜಿಸಲಾಗಿದೆ.

ಬಿಡಿಎ: 4,251 ಫ್ಲ್ಯಾಟ್ ನಿರ್ಮಾಣ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ನಗರದ ವಿವಿಧೆಡೆ ಕೈಗೆತ್ತಿಕೊಂಡಿರುವ ವಸತಿ ಯೋಜನೆಗಳಿಗೆ ₹3,747 ಕೋಟಿ ಹೂಡಿಕೆ ಮಾಡಿದ್ದು, ಅಂದಾಜು 4,251 ಫ್ಲ್ಯಾಟ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ವಸತಿ ಯೋಜನೆ ವಿವರ

ಯೋಜನೆ	ಗುತ್ತಿಗೆ ಮೊತ್ತ (₹ಕೋಟಿಗಳಲ್ಲಿ)
ಕೋನದಾಸಪುರ ಹಂತ–1	842
ಕೋನದಾಸಪುರ ಹಂತ–3	442
ವಳಗೇರಹಳ್ಳಿ ಹಂತ–7	104.54
ಕೆಂಚನಪುರ	387.04
ಕಾಳತಮ್ಮನಹಳ್ಳಿ	652.42
ದೊಡ್ಡತೋಗೂರು	1320.90

ಕೋನದಾಸಪುರ, ವಳಗೇರಹಳ್ಳಿ, ಕಾಳತಮ್ಮನಹಳ್ಳಿ, ಕೆಂಚನಪುರ ಮತ್ತು ದೊಡ್ಡತೋಗೂರು ಪ್ರದೇಶಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಬಿದರಹಳ್ಳಿ ಹೋಬಳಿಯ ಕೋನದಾಸಪುರ ಹಂತ ಒಂದು ವಸತಿ ಯೋಜನೆಯಲ್ಲಿ 1,928 ಫ್ಲ್ಯಾಟ್‌ಗಳನ್ನು ನಿರ್ಮಿಸುತ್ತಿದ್ದು, ಇದರಲ್ಲಿ 480– ಒಂದು ಬಿಎಚ್‌ಕೆ ಮತ್ತು 1,448– ಮೂರು ಬಿಎಚ್‌ಕೆ ಸೇರಿವೆ.

ಕೋನದಾಸಪುರ ಹಂತ 3 ರಲ್ಲಿ ಒಟ್ಟು 532 ಫ್ಲ್ಯಾಟ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, 336– ಎರಡು ಬಿಎಚ್‌ಕೆ, 112– ಮೂರು ಬಿಎಚ್‌ಕೆ ಸೇರಿವೆ. ವಳಗೇರಹಳ್ಳಿಯಲ್ಲಿ 7ನೇ ಹಂತದ ವಸತಿ ಯೋಜನೆಯಲ್ಲಿ 200 ಫ್ಲ್ಯಾಟ್‌ಗಳು ನಿರ್ಮಾಣವಾಗುತ್ತಿವೆ. ಈ ಪೈಕಿ 100– ಎರಡು ಬಿಎಚ್‌ಕೆ ಮತ್ತು 100– ಎರಡು ಬಿಎಚ್‌ಕೆ ಸೇರಿವೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ವ್ಯಾಪ್ತಿಯಲ್ಲಿರುವ ಕೆಂಚನಪುರ ಗ್ರಾಮದಲ್ಲಿ 210– ಎರಡು ಬಿಎಚ್‌ಕೆ ಮತ್ತು 153– ಮೂರು ಬಿಎಚ್‌ಕೆ ಒಳಗೊಂಡ 363 ಫ್ಲ್ಯಾಟ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಹೆಸರಘಟ್ಟದ ಕಾಳತಮ್ಮನಹಳ್ಳಿಯಲ್ಲಿ ಮತ್ತೊಂದು ಪ್ರಮುಖ ವಸತಿ ಯೋಜನೆ ಕೈಗೆತ್ತಿಕೊಂಡಿದ್ದು, 264– ಮೂರು ಬಿಎಚ್‌ಕೆ ಮತ್ತು 132– ನಾಲ್ಕು ಬಿಎಚ್‌ಕೆ ಸೇರಿದಂತೆ 396 ಫ್ಲ್ಯಾಟ್‌ಗಳನ್ನು ನಿರ್ಮಿಸಲು ಯೋಜಿಸಿದೆ. ಎಲೆಕ್ಟ್ರಾನಿಕ್ಸ್ ಸಿಟಿ ಬಳಿಯ ದೊಡ್ಡತೋಗೂರುನಲ್ಲಿ ಬೃಹತ್ ಯೋಜನೆ ಕೈಗೆತ್ತಿಕೊಂಡಿರುವ ಪ್ರಾಧಿಕಾರ, 832 ಫ್ಲ್ಯಾಟ್‌ಗಳನ್ನು ನಿರ್ಮಿಸಲು ಯೋಜಿಸಿದೆ. ಇದರಲ್ಲಿ 416– ಮೂರು ಬಿಎಚ್‌ಕೆ ಮತ್ತು 416– ನಾಲ್ಕು ಬಿಎಚ್‌ಕೆ ಸೇರಿವೆ.

'ಯೋಜನೆ ಮುಕ್ತಾಯ ಬಳಿಕ ಎಲ್ಲಾ ಖರ್ಚು ಹಾಗೂ ಭೂಮಿಯ ಬೆಲೆ ಸಹಿತ ಲೆಕ್ಕಾಚಾರ ಮಾಡಿ ದರಗಳನ್ನು ನಿರ್ಧರಿಸಿ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗುತ್ತಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

ಬ್ಯುಸಿನೆಸ್ ಕಾರಿಡಾರ್ ಮಾರ್ಗ

ತುಮಕೂರು ರಸ್ತೆಯ ಮಾದನಾಯಕಹಳ್ಳಿ ಬಳಿಯ ನೈಸ್ ಜಂಕ್ಷನ್ ಸಮೀಪದಿಂದ ಆರಂಭವಾಗುವ ಬ್ಯುಸಿನೆಸ್ ಕಾರಿಡಾರ್ ಹೆಸರುಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು, ಹಳೇ ಮದ್ರಾಸ್ ರಸ್ತೆ, ವೈಟ್‌ಫೀಲ್ಡ್, ಚನ್ನಸಂದ್ರ, ಸರ್ಜಾಪುರ ರಸ್ತೆ ಮಾರ್ಗವಾಗಿ ಹೊಸೂರು ರಸ್ತೆ ತಲುಪಲಿದೆ.

ಹೆಸರಘಟ್ಟ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ವೈಟ್‌ಫೀಲ್ಡ್, ಹೊಸೂರು ರಸ್ತೆಗಳಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಹಾಗೂ 395 ಸಣ್ಣ ಜಂಕ್ಷನ್‌ಗಳ ಮೇಲೆ ಪಿಆರ್‌ಆರ್ ಹಾದು ಹೋಗಲಿದೆ. ಜಾರಕಬಂಡೆ ಕೆರೆ, ತಿರುಮೇನಹಳ್ಳಿ ಕೆರೆ, ಚಿನ್ನಗಾನಹಳ್ಳಿ ಕೆರೆ, ಗುಂಜೂರು ಕೆರೆ, ಚಿಕ್ಕತೋಗೂರು ಕೆರೆಗಳ ಮೇಲೆ ಸೇರಿದಂತೆ ಒಟ್ಟು 16 ಮೇಲ್ಸೇತುವೆಗಳನ್ನು ನಿರ್ಮಿಸುವ ಯೋಜನೆ ಇದಾಗಿದೆ.

ಈ ಯೋಜನೆಯು ನಗರದ ಹೊರವಲಯದಲ್ಲಿ ರಿಯಲ್ ಎಸ್ಟೇಟ್ ಅಭಿವೃದ್ಧಿಗೆ ಉತ್ತೇಜನ ನೀಡುವುದರ ಜತೆಗೆ ಸಂಚಾರ ದಟ್ಟಣೆಯನ್ನು ಗಣನೀಯವಾಗಿ ಕಡಿಮೆ ಮಾಡುವ ನಿರೀಕ್ಷೆಯಿದೆ. ಎರಡನೇ ಹಂತದಲ್ಲಿ, ಬಳ್ಳಾರಿ ರಸ್ತೆ ಮತ್ತು ಹೆಣ್ಣೂರು ರಸ್ತೆಯ ಮೂಲಕ ಹೊರ ಮದ್ರಾಸ್ ರಸ್ತೆಯ ನಡುವಿನ ಮಾರ್ಗವನ್ನು ಕೈಗೆತ್ತಿಕೊಳ್ಳಲು ಬಿಡಿಎ ಯೋಜಿಸಿದೆ. ಮೂರನೇ ಹಂತದಲ್ಲಿ ಈ ಮಾರ್ಗವನ್ನು ಹೊಸೂರು ರಸ್ತೆಯವರೆಗೆ ವಿಸ್ತರಿಸಲಾಗುತ್ತದೆ.

ಕಾವೇರಿ ಕೊಳ್ಳದಲ್ಲಿ ಶೇ 3.5ರಷ್ಟು ನೀರಿನ ಕೊರತೆ: ಅಧ್ಯಯನ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ತಜ್ಞರು ನಡೆಸಿದ ಅಧ್ಯಯನದ ವರದಿಯ ಪ್ರಕಾರ 2026ರಿಂದ 2050ರವರೆಗೆ ಕಾವೇರಿ ಕೊಳ್ಳದಲ್ಲಿ ಶೇಕಡ 3.5ರಷ್ಟು ನೀರಿನ ಕೊರತೆ ಆಗಲಿದೆ ಎಂದು ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ತಿಳಿಸಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಪ್ರಧಾನ ಕಾರ್ಯದರ್ಶಿ ಸುನಂದಾ ಜಯರಾಂ, ಉಪಾಧ್ಯಕ್ಷ ಕೆ. ಬೋರಯ್ಯ, ಖಜಾಂಚಿ ಮುದ್ದೇಗೌಡ, 'ಕಾವೇರಿ ಕೊಳ್ಳದಲ್ಲಿ ತಜ್ಞರು ಈ ಅಧ್ಯಯನ ನಡೆಸಿದ್ದು, ನೀರಿನ ಕೊರತೆಯಾಗಲಿದೆ ಎಂಬ ವರದಿ ನೀಡಿದ್ದಾರೆ. ಮುಂದಿನ 25 ವರ್ಷಗಳಲ್ಲಿ ಕಾವೇರಿ ನದಿಯಲ್ಲಿ ನೀರಿನ ಸಮಸ್ಯೆಯಾದರೆ ಸಾವಿರಾರು ರೈತರಿಗೆ ಸಮಸ್ಯೆ ಆಗಲಿದೆ' ಎಂದು ತಿಳಿಸಿದರು.

'ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆಯಲಾಗಿದೆ. ಪತ್ರದಲ್ಲಿ ತಮಿಳುನಾಡು, ಕೇರಳ ಹಾಗೂ ಪುದುಚೆರಿಯ ಮುಖ್ಯಮಂತ್ರಿಗಳನ್ನೊಳಗೊಂಡ ಒಂದು ಸಮಿತಿ ರಚಿಸಿ, ಎಲ್ಲ ರಾಜ್ಯದ ರೈತರಿಗೆ ಆಗಬಹುದಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ಕೋರಲಾಗಿದೆ' ಎಂದು ಮಾಹಿತಿ ನೀಡಿದರು.

ಹೈದರಾಬಾದ್ ರೇಸ್

ನೈಟ್ ಕ್ರುಸಾಡರ್ ಗೆಲ್ಲುವ ನಿರೀಕ್ಷೆ

ಕ್ಯಾಬರೇಟ್ ಪ್ಲೇಟ್ ಮಂಗಳವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನೈಟ್ ಕ್ರುಸಾಡರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಫಾರ್ಕ್ಸ್ ವರ್ತ್ 1, ಅನಾಲೈಸಿಸ್ 4, ಜಿಂದಾಬಾದ್ 6
2ನೇ ರೇಸ್: ಎನ್‌ಆರ್‌ಐ ರೇಂಜ್ 4, ಫಸ್ಟ್ ಲೇಡಿ 2, ಡ್ರೀಮ್ ಟು ಫ್ಲೈ 6
3ನೇ ರೇಸ್: ಲೇಕ್ ಮಿಷಿಗನ್ 1, ಸ್ಪೆಷಲ್ ಸ್ಟಾರ್ 5, ಕ್ವಿಂಟ್ ಎಸೆನ್ಸಿಯಲ್ 7
4ನೇ ರೇಸ್: ಅಥಾರಿಟೇರಿಯನ್ 4, ನೈಟ್ ರೀಜೆಂಟ್ 2, ಕೋರ್ಟೆ ಮಡೆರಾ 1
5ನೇ ರೇಸ್: ಗ್ರಿಟ್ ಆ್ಯನ್ ಗ್ರೇಸ್ 5, ಡಿವೈನ್ ಟೈಗರ್ 2, ಕ್ವೀನ್ ಎಟರ್ನಲ್ 9
6ನೇ ರೇಸ್: ನೈಟ್ ಕ್ರುಸಾಡರ್ 1, ನಾಟಿ ಸೆನೊರಿಟಾ 13, ಡೆಕ್ಕನ್ ಸ್ಪಿರಿಟ್ 8
7ನೇ ರೇಸ್: ಗೋಲ್ಡನ್ ಬೋರ್ಬನ್ 3, ಬೋಲ್ಡ್ ಇಂಡಿಯನ್ 5, ಡಾಲೀಸ್ ಚಾಂಪಿಯನ್ 2

ಉತ್ತಮ ಬೆಟ್: ಗ್ರಿಟ್ ಆ್ಯನ್ ಗ್ರೇಸ್

ಜಾಕ್‌ಪಾಟ್	1ನೇ ಟ್ರಿಬಲ್	3ನೇ ಟ್ರಿಬಲ್
3,4,5,6,7	2,3,4	5,6,7

ಲಗ್ಗೆರೆ: ಸೀಮಂತ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಸ್ತ್ರೀಯನ್ನು ಗೌರವಿಸುವುದು ಎಂದರೆ ಇಡೀ ಮಾನವಕುಲದ ಪ್ರಗತಿಯನ್ನು ಗೌರವಿಸಿದಂತೆ' ಎಂದು ಚಿತ್ರದುರ್ಗದ ಸಿದ್ದರಾಮೇಶ್ವರ ಮಹಾಸಂಸ್ಥಾನ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಸೋಮವಾರ ಹೇಳಿದರು.

ಲಗ್ಗೆರೆಯ ಬಸವೇಶ್ವರ ಭವನದಲ್ಲಿ ಲಗ್ಗೆರೆ ನಾರಾಯಣಸ್ವಾಮಿ ಮತ್ತು ಕುಟುಂಬ 308 ಗರ್ಭಿಣಿಯರಿಗೆ ಹಮ್ಮಿಕೊಂಡಿದ್ದ ಸೀಮಂತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮಹಿಳೆಯರ ಮೇಲಿನ ದೌರ್ಜನ್ಯ ಕಡಿಮೆಯಾಗಿ ಅವರಿಗೆ ಸಮಾನ ಅವಕಾಶಗಳು ಸಿಕ್ಕಾಗ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ' ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, 'ಹೆಣ್ಣಿಗೆ ಸುಖ–ದುಃಖ, ಅರ್ಥ ಮಾಡಿಕೊಳ್ಳುವ ಗುಣವಿರುತ್ತದೆ. ನಮ್ಮ ಸರ್ಕಾರ ಗೃಹಲಕ್ಷ್ಮಿ ಯೋಜನೆಗಳನ್ನು ಜಾರಿಗೆ ತಂದಿದ್ದರಿಂದ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳುವಷ್ಟರ ಮಟ್ಟಿಗೆ ಹೆಣ್ಣು ಇಂದು ಬೆಳೆದಿದ್ದಾಳೆ' ಎಂದರು.

ಸೀಮಂತ ಕಾರ್ಯಕ್ರಮದಲ್ಲಿ ಫಲ ತಾಂಬೂಲವನ್ನು ಎಚ್.ಕುಸುಮಾ ನೀಡಿದರು. ಮಂಜುಳ ನಾರಾಯಣಸ್ವಾಮಿ, ಲಕ್ಷ್ಮೀ ಹೆಬ್ಬಾಳ್ಕರ್, ಅಶ್ವಿನಿ ಗೌಡ ಉಪಸ್ಥಿತರಿದ್ದರು

ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಮಾತನಾಡಿ, 'ಸೇಡಿನ ರಾಜಕೀಯದಿಂದ ಅನೇಕ ಸಾಧಕಿಯರು ಕಣ್ಣೀರಿನಿಂದ ಕೈ ತೊಳೆಯುತ್ತಿದ್ದಾರೆ. ಇಂದಿಗೂ ಕೆಲವು ಸಾಧಕಿಯರು ಎಲ್ಲವನ್ನು ಮೆಟ್ಟಿನಿಂತು ಮಹಾನ್ ಸಾಧನೆ ಮಾಡುತ್ತಿದ್ದಾರೆ' ಎಂದರು.

ಶಿವಮೊಗ್ಗದ ಈಡಿಗ ಪೀಠದ ರೇಣುಕಾನಂದ ಸ್ವಾಮೀಜಿ, ಮಡಿವಾಳ ಮಾಚಿದೇವ ಮಠದ ಮಾಚಿದೇವ ಸ್ವಾಮೀಜಿ, ಯಾದವ ಗುರು ಪೀಠಾಧ್ಯಕ್ಷ ಕೃಷ್ಣ ಯಾದವಾನಂದ ಸ್ವಾಮೀಜಿ, ಬಿಬಿಎಂಪಿ ಮಾಜಿ ಸದಸ್ಯರಾದ ಮಂಜುಳ ನಾರಾಯಣಸ್ವಾಮಿ, ಬಿ.ಆರ್. ನಂಜುಂಡಪ್ಪ, ನಟಿ ಅಶ್ವಿನಿ ಗೌಡ, ರೂಪ ಲಿಂಗೇಶ್, ಲಗ್ಗೆರೆ ವಾರ್ಡ್ ಅಧ್ಯಕ್ಷ ಪಾರ್ಥಗೌಡ, ಕಾಂಗ್ರೆಸ್ ಹಿಂದುಳಿದ ವಿಭಾಗದ ಕಾಂಗ್ರೆಸ್ ಅಧ್ಯಕ್ಷ ರವಿಕುಮಾರ್ ಉಪಸ್ಥಿತರಿದ್ದರು.

ಮಿನಿ ಟೆಂಪೊ ಮಾಲೀಕ ಶಂಕಾಸ್ಪದ ಸಾವು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಆರೂರು ಗ್ರಾಮದ ಬಳಿ ಮಿನಿಟೆಂಪೊ ಮಾಲೀಕ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ದೇವನಹಳ್ಳಿ ತಾಲ್ಲೂಕಿನ ಕುರುಬರಕುಂಟೆ ಕಾಲೊನಿ ನಿವಾಸಿ ಸುಬ್ರಮಣಿ (48) ಮೃತ ವ್ಯಕ್ತಿ. ಕಳೆದ ಶನಿವಾರ ಮನೆಯಿಂದ ತುಮಕೂರಿಗೆ ಬಾಡಿಗೆ ಇದೆ ಎಂದು ಹೊರಬಂದಿದ್ದ ಸುಬ್ರಮಣಿ ಮತ್ತೆ ಮನೆಗೆ ಬಂದಿರಲಿಲ್ಲ. ಕರೆ ಮಾಡಿದರೂ ಫೋನ್ ಸ್ವಿಚ್ಡ್ ಅಫ್ ಆಗಿತ್ತು. ಇದರಿಂದ ಆತನ ಸಂಬಂಧಿಕರು ಹುಡುಕಾಟ ನಡೆಸಿದಾಗ ಮಿನಿ ಟೆಂಪೊ ಆರೂರು ಬಳಿ ಹೆದ್ದಾರಿ ಪಕ್ಕದಲ್ಲೇ ತುಳಸಿ ಗ್ರಾಂಡ್ ಹೋಟೆಲ್ ಸಮೀಪ ಪತ್ತೆಯಾಗಿದೆ.

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಪೆರೇಸಂದ್ರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

'ಕಳಪೆ ಆಡಳಿತ ವ್ಯವಸ್ಥೆ ಬದಲಾಗಲಿ'

ಜನಾಗ್ರಹ ಸಂಸ್ಥೆ ಸಿಇಒ ಶ್ರೀಕಾಂತ್ ವಿಶ್ವನಾಥನ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರಕ್ಕೆ ಬಜೆಟ್ ರೂಪಿಸುವಾಗ ಉತ್ತಮವಾದ ಕಲ್ಪನೆ ಅಗತ್ಯವಾಗಿದೆ. ರಾಜ್ಯ ಸರ್ಕಾರ, ಜಿಬಿಎ ಮತ್ತು ಹೊಸ ನಗರ ಪಾಲಿಕೆಗಳು ಇಂದಿನ ಕಳಪೆ ಆಡಳಿತ ವ್ಯವಸ್ಥೆಯನ್ನು ಬದಲಾಯಿಸುವ ಬಗ್ಗೆ ಗಂಭೀರ ಚಿಂತನೆ ಮಾಡಬೇಕು' ಎಂದು ಜನಾಗ್ರಹ ಸಂಸ್ಥೆಯ ಸಿಇಒ ಶ್ರೀಕಾಂತ್ ವಿಶ್ವನಾಥನ್ ಅಭಿಪ್ರಾಯಪಟ್ಟಿದ್ದಾರೆ.

5 ನಗರ ಪಾಲಿಕೆಗಳ ಬಗ್ಗೆ ವಿಮರ್ಶೆ ಮಾಡಿರುವ ಅವರು,'ನಗರದಲ್ಲಿ ನಡೆಯುವ ಕಾಮಗಾರಿಗಳಿಗೆ ಮಾಡುವ ವೆಚ್ಚದಲ್ಲಿ ಆಮೂಲಾಗ್ರ ಪಾರದರ್ಶಕತೆ ಇರಬೇಕು. ರಸ್ತೆ ಹಾಗೂ ನೆರೆಹೊರೆಯಲ್ಲಿ ಮಾಡುತ್ತಿರುವ ವೆಚ್ಚದ ಬಗ್ಗೆ ನೈಜ ಸಮಯದಲ್ಲಿ ಮಾಹಿತಿ ನಾಗರಿಕರನ್ನು ತಲುಪಬೇಕು' ಎಂದು ಹೇಳಿದ್ದಾರೆ.

'ಬಿಬಿಎಂಪಿಯ ಕೊನೆಯ ಬಜೆಟ್‌ಗಿಂತ ಶೇ 1ರಷ್ಟು ಹೆಚ್ಚಾಗಿರುವ ಐದು ನಗರ ಪಾಲಿಕೆಗಳ ಬಜೆಟ್ ಅನ್ನು ಚುನಾಯಿತ ಪ್ರತಿನಿಧಿಗಳು ಇಲ್ಲದೇ ಪ್ರಸ್ತುತಪಡಿಸಲಾಗಿದೆ. ಇದು ಪ್ರಜಾಸತ್ತಾತ್ಮಕ ಮಾನ್ಯತೆ ಬಗ್ಗೆ ಆತಂಕ ಮೂಡಿಸಿದ' ಎಂದಿದ್ದಾರೆ.

'ಒಟ್ಟು ವೆಚ್ಚದಲ್ಲಿ ಬಂಡವಾಳ ವೆಚ್ಚವು ಸುಮಾರು ಶೇ 60ರಷ್ಟಿದೆ. ಎಲ್ಲ ಪಾಲಿಕೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚವು ಅತಿ ಹೆಚ್ಚಿನ ಪಾಲನ್ನು ಹೊಂದಿದೆ (ಶೇ 41ರಿಂದ ಶೇ 63). ಪೂರ್ವ ನಗರ ಪಾಲಿಕೆಯಲ್ಲಿ ಕೇವಲ ಶೇ 10ರಷ್ಟು ಸರ್ಕಾರಿ ಅನುದಾನವಿದ್ದರೆ, ಉತ್ತರ (ಶೇ 23) ಮತ್ತು ಪಶ್ಚಿಮ ನಗರ ಪಾಲಿಕೆಗಳು (ಶೇ 31), ರಾಜ್ಯ ಸರ್ಕಾರದ ಬಂಡವಾಳ ಅನುದಾನದ ಮೇಲೆ ಹೆಚ್ಚು ಅವಲಂಬಿತವಾಗಿವೆ' ಎಂದು ಹೇಳಿದ್ದಾರೆ.

'ರಾಜ್ಯ, ಕೇಂದ್ರ ಬಜೆಟ್‌ಗಳನ್ನು ಜನಪ್ರತಿನಿಧಿಗಳು ಮಂಡಿಸಿ, ಚರ್ಚಿಸಿ ಅನುಮೋದನೆ ನೀಡುತ್ತಾರೆ. ಆದರೆ, ನಗರ ಪಾಲಿಕೆಗಳ ಬಜೆಟ್ ಅನ್ನು ಅಧಿಕಾರಿಗಳು ಪ್ರಸ್ತುತಪಡಿಸಿದ್ದಾರೆ. ಆದ್ದರಿಂದ, ಚುನಾಯಿತ ಕೌನ್ಸಿಲ್‌ಗಳ ಅನುಪಸ್ಥಿತಿಯಲ್ಲಿ ಮಂಡಿಸಲಾಗಿರುವ ನಗರ ಪಾಲಿಕೆಗಳ ಬಜೆಟ್ ಎಷ್ಟು ಪ್ರಸ್ತುತ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮುಂಬರುವ ನಗರ ಪಾಲಿಕೆಯಿಂದ ಚುನಾಯಿತವಾಗುವ ಕೌನ್ಸಿಲ್ ಈ ಹಣಕಾಸಿನ ಆದ್ಯತೆಯನ್ನು ಮರುಪರಿಶೀಲಿಸುವ ಅಥವಾ ಬದಲಾಯಿಸುವ ಅಧಿಕಾರವನ್ನು ಹೊಂದಿರುತ್ತದೆ' ಎಂದಿದ್ದಾರೆ.

'ಎಲ್ಲ ನಗರ ಪಾಲಿಕೆಗಳಲ್ಲಿ ಬಂಡವಾಳ ಪಾವತಿಗಳು (₹10,401 ಕೋಟಿ) ಆದಾಯ ಸ್ವೀಕೃತಿಗಿಂತ (₹7,149 ಕೋಟಿ) ಹೆಚ್ಚಿವೆ. ಒಟ್ಟಾರೆ ವೆಚ್ಚದಲ್ಲಿ ಶೇ 60ರಷ್ಟು ಬಂಡವಾಳ ವೆಚ್ಚವಾಗಿದೆ. ಶೇ 50ರಿಂದ ಶೇ 69ರಷ್ಟನ್ನು ಸಾರ್ವಜನಿಕ ಅಭಿವೃದ್ಧಿ ಕಾಮಗಾರಿಗಳಿಗೆ ಹಂಚಿಕೆ ಮಾಡಲಾಗಿದೆ. ಘನತ್ಯಾಜ್ಯ ನಿರ್ವಹಣೆಗೆ ಶೇ 10ರಿಂದ ಶೇ 12ರಷ್ಟು ಮೀಸಲಿಡಲಾಗಿದೆ. ರಸ್ತೆ, ಚರಂಡಿ, ಮೇಲ್ಸೇತುವೆ ಮತ್ತು ಇತರೆ ಮೂಲಸೌಕರ್ಯಕ್ಕೆ ಹಣವನ್ನು ಅಸಮವಾಗಿ ವೆಚ್ಚ ಮಾಡಲಾಗುತ್ತಿದೆ' ಎಂದು ದೂರಿದ್ದಾರೆ.

'ಪೂರ್ವ ನಗರ ಪಾಲಿಕೆಯಲ್ಲಿ ತಲಾ ಆದಾಯವು ₹45,455 ಇದ್ದರೆ, ಪಶ್ಚಿಮದಲ್ಲಿ ₹39,007, ಉತ್ತರದಲ್ಲಿ ₹38,313, ಕೇಂದ್ರ ನಗರ ಪಾಲಿಕೆಯಲ್ಲಿ ₹27,367 ತಲಾ ಆದಾಯ ಇದೆ' ಎಂದು ಹೇಳಿದ್ದಾರೆ.

'ಐಪಿಎಲ್: ಹೆಚ್ಚು ಮಾತು ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐಪಿಎಲ್ ಕ್ರಿಕೆಟ್ ಬಗ್ಗೆ ಮಾತನಾಡುವುದು ಮಹಾಪರಾಧ. ಈಗ ಟಿಕೆಟ್ ಕೇಳುವವರು ಐಪಿಎಲ್ ದುರ್ಘಟನೆ ಸಂದರ್ಭದಲ್ಲಿ ಅವರು ಯಾವ ರೀತಿ ವಾಗ್ದಾಳಿ ಮಾಡಿದ್ದರು, ಪದ ಬಳಸಿದ್ದರು ಎಂದು ತೆಗೆದು ನೋಡಲಿ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿ, 'ಐಪಿಎಲ್ ಕ್ರಿಕೆಟ್ ವಾಣಿಜ್ಯ ಉದ್ದೇಶಿತ ಪಂದ್ಯಾವಳಿ. ಅವುಗಳ ಬಗ್ಗೆ ಜನಪ್ರತಿನಿಧಿಗಳು ಹೆಚ್ಚು ಗಮನ ಹರಿಸುವುದು ಒಳ್ಳೆಯದಲ್ಲ' ಎಂದರು.

4 ಕ್ರೀಡಾಂಗಣ: 'ಚಿನ್ನಸ್ವಾಮಿ ಕ್ರೀಡಾಂಗಣವನ್ನು ಬೇರೆಡೆ ಸ್ಥಳಾಂತರಿಸಲು ಮತ್ತು ನಾನು ಆಯ್ಕೆ ಮಾಡಿ ಸೂಚಿಸಿದ ಜಾಗದಲ್ಲಿ ಹೊಸ ಕ್ರೀಡಾಂಗಣ ಮಾಡಲು ಸರ್ಕಾರ ಮನ್ನಣೆ ನೀಡಿದೆ. ಸೂರ್ಯ ಸಿಟಿಯಲ್ಲಿ ಕ್ರೀಡಾಂಗಣಕ್ಕೆ ಪ್ರಸ್ತಾವ ಸಲ್ಲಿಸಿದ್ದು ನಾನೇ' ಎಂದರು.

'ದ್ವಿಭಾಷಾ ನೀತಿ ಒಳ್ಳೆಯದು'

'ಮಕ್ಕಳ ಮೇಲೆ ಮೂರು ಭಾಷೆಗಳ ಕಲಿಕೆ ಒತ್ತಡ ಹಾಕಿದರೆ, ಅವರ ಕಲಿಕೆ ಹಾಗೂ ಗ್ರಹಿಕೆ ಕಡಿಮೆಯಾಗುತ್ತದೆ. ಮಕ್ಕಳು ಎರಡು ಭಾಷೆ ಕಡ್ಡಾಯವಾಗಿ ಕಲಿಯಬೇಕು ಎಂಬುದು ಉತ್ತಮ ನಿರ್ಧಾರ' ಎಂದು ಡಿ.ಕೆ. ಸುರೇಶ್ ಹೇಳಿದರು.

'ತ್ರಿಭಾಷಾ ನೀತಿ ಜಾರಿಗೆ ತಂದಿದ್ದು ಕಾಂಗ್ರೆಸ್, ಈ ನಿರ್ಧಾರ ರಾಜಕೀಯವೇ' ಎಂಬ ಪ್ರಶ್ನೆಗೆ, 'ಅಂದಿನ ಪರಿಸ್ಥಿತಿ ಬೇರೆ, ಈಗಿನ ಪರಿಸ್ಥಿತಿ ಬೇರೆ. ಇಂದು ಗುಣಮಟ್ಟದ ಶಿಕ್ಷಣ ಅಗತ್ಯವಿದ್ದು, 2 ಭಾಷೆಗಳಲ್ಲಿ ಕಲಿಕೆ ಆಗಬೇಕು. ಕನ್ನಡವನ್ನು ಪ್ರಧಾನ ಭಾಷೆಯಾಗಿ ಇಟ್ಟುಕೊಂಡು ಉಳಿದ ಮತ್ತೊಂದು ಭಾಷೆ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗಿದ್ದು, ಇದು ಪೋಷಕರು, ವಿದ್ಯಾರ್ಥಿಗಳಿಗೆ ಬಿಟ್ಟ ವಿಚಾರ' ಎಂದರು.

'ಬೆಂಗಳೂರಿನ ನಾಲ್ಕು ದಿಕ್ಕಿನಲ್ಲಿಯೂ 4 ಕ್ರೀಡಾಂಗಣ ಮಾಡಬೇಕು. ಕಂಠೀರವ ಕ್ರೀಡಾಂಗಣ, ಕೆಎಸ್‌ಸಿಎ, ಫುಟ್ಬಾಲ್ ಕ್ರೀಡಾಂಗಣ ಹೊರತಾಗಿ ಬೇರೆ ಯಾವುದೇ ಕ್ರೀಡಾಂಗಣ ಇಲ್ಲ. ಇಷ್ಟು ದೊಡ್ಡ ಜನಸಂಖ್ಯೆ ಇರುವ ನಗರದಲ್ಲಿ ಯುವಕರಿಗೆ ಕ್ರೀಡೆಯಲ್ಲಿ ಪ್ರೋತ್ಸಾಹ ನೀಡಬೇಕಾದರೆ ನಾಲ್ಕು ದಿಕ್ಕಿನಲ್ಲಿ ಕ್ರೀಡಾಂಗಣ ನಿರ್ಮಿಸಬೇಕೆಂದು ಸಲಹೆ ನೀಡಿದ್ದೆ' ಎಂದರು. 'ಬಿಡಿಎ ಮೂಲಕ ಶಿವರಾಮ ಕಾರಂತ ಬಡಾವಣೆಯಲ್ಲೂ ಕ್ರೀಡಾಂಗಣ ಮಾಡಬೇಕೆಂದು ಡಿಸಿಎಂಗೆ ಮನವಿ ಮಾಡಿದ್ದೇನೆ. ಅಲ್ಲೂ 40 ಎಕರೆ ಮೀಸಲಿಡಲಾಗಿದೆ. ಬಿಡದಿಯಲ್ಲೂ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ಮೀಸಲಿಡಲು ಸಂಬಂಧಪಟ್ಟವರ ಜತೆ ಚರ್ಚೆ ಮಾಡುತ್ತೇನೆ' ಎಂದರು.

ಹಿಂದಿ ಹೇರಿಕೆಗೆ ಕರವೇ ಆಕ್ರೋಶ • ಪ್ರತಿಕೃತಿ ದಹಿಸಲು ಯತ್ನ,

ಸಚಿವೆ ಶೋಭಾ ಹೇಳಿಕೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತಂದಿರುವ ರಾಜ್ಯ ಸರ್ಕಾರದ ಕ್ರಮದ ವಿರುದ್ಧ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನೀಡಿರುವ ಹೇಳಿಕೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ಸದಸ್ಯರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಆನಂದರಾವ್ ವೃತ್ತದಲ್ಲಿ ಜಮಾವಣೆಗೊಂಡ ಕರ್ನಾಟಕ ರಕ್ಷಣಾ ವೇದಿಕೆ ನಗರ ಜಿಲ್ಲಾ ಘಟಕದ ಮಹಿಳಾ ಕಾರ್ಯಕರ್ತರು ಶೋಭಾ ಕರಂದ್ಲಾಜೆ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಶೋಭಾ ಅವರ ಪ್ರತಿಕೃತಿ ದಹಿಸಲು ಯತ್ನಿಸಿದರು. ಪ್ರತಿಭಟನಕಾರರನ್ನು ಸ್ಥಳದಲ್ಲಿದ್ದ ಪೊಲೀಸರು ವಶಕ್ಕೆ ಪಡೆದುಕೊಂಡು ಬಳಿಕ ಬಿಡುಗಡೆ ಮಾಡಿದರು.

'ಹಿಂದಿ ಹೇರಿಕೆ ಪರವಾಗಿ ಬಿಜೆಪಿಯ ಬಿ.ವೈ.ವಿಜಯೇಂದ್ರ, ವಿಶ್ವೇಶ್ವರ ಹೆಗಡೆ ಕಾಗೇರಿ, ಆರ್. ಅಶೋಕ,ಬಿ. ಶ್ರೀರಾಮುಲು, ಸುರೇಶ್ ಕುಮಾರ್ ಅವರು ಕೂಡ ಮಾತನಾಡುತ್ತಿದ್ದಾರೆ' ಎಂದು ಆರೋಪಿಸಿದ ಕಾರ್ಯಕರ್ತರು, ಅವರ ವಿರುದ್ಧವೂ ಘೋಷಣೆಗಳನ್ನು ಕೂಗಿದರು.

ಕರವೇ ಮಹಿಳಾ ಘಟಕದ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷೆ ಶ್ವೇತಾ ಮೋಹನ್ ಮಾತನಾಡಿ, 'ಸಚಿವೆ ಶೋಭಾ ಕರಂದ್ಲಾಜೆ ಹಿಂದಿ ಪರವಾಗಿ ಮಾತನಾಡುತ್ತಿದ್ದಾರೆ. ಅವರು ಮೊದಲು ಕನ್ನಡ ನುಡಿಯನ್ನು ಪ್ರೀತಿಸುವುದನ್ನು ಕಲಿಯಲಿ. ಅವರಿಗೆ ಮತ ಹಾಕಿ ಗೆಲ್ಲಿಸಿರುವುದು ಕನ್ನಡದ ಜನರೇ ಹೊರತು ಹಿಂದಿ ಭಾಷಿಕರು ಅಲ್ಲ' ಎಂದು ಎಚ್ಚರಿಸಿದರು.

'ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಇಂಗ್ಲಿಷ್ ಮತ್ತು ಹಿಂದಿ ಎರಡೇ ಭಾಷೆಗಳನ್ನು ಕಲಿಸಲಾಗುತ್ತಿದೆ. ಅಲ್ಲಿನ ಮಕ್ಕಳು ಎರಡು ಭಾಷೆ ಕಲಿಯುತ್ತಿರುವಾಗ ಕರ್ನಾಟಕದ ಮಕ್ಕಳು ಯಾಕೆ ಮೂರನೇ ಭಾಷೆಯ ಹೊರೆಯನ್ನು ಹೊತ್ತುಕೊಳ್ಳಬೇಕು. ಬಿಜೆಪಿ ನಾಯಕರಿಗೆ ಈ ಸಾಮಾನ್ಯ ಜ್ಞಾನವಿಲ್ಲವೇ? ರೈಲ್ವೆ ಉದ್ಯೋಗದಲ್ಲಿ ಕನ್ನಡಿಗರಿಗೆ ಅನ್ಯಾಯ ಆಗುತ್ತಿದ್ದಾಗ ಶೋಭಾ ಅವರು ಯಾವ ರಾಜ್ಯದ ಪ್ರವಾಸದಲ್ಲಿದ್ದರು' ಎಂದು ಪ್ರಶ್ನಿಸಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ಹೇಳಿಕೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಮಹಿಳಾ ಕಾರ್ಯಕರ್ತರು ನಗರದ ಆನಂದರಾವ್ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

‘ಯುದ್ಧಕ್ಕೆ ಮಹಾವೀರರ ಬೋಧನೆ ಮದ್ದು’

ಜೈನ ಅಸೋಸಿಯೇಷನ್‌ನಿಂದ ಜನ್ಮ ಕಲ್ಯಾಣ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತಿನ ಹಲವು ದೇಶಗಳಲ್ಲಿ ಕವಿದಿರುವ ಯುದ್ಧದ ಕಾರ್ಮೋಡ ಸರಿಸಲು ಮಹಾವೀರರ ಅಹಿಂಸಾ ನೀತಿಗಳೇ ಪರಿಹಾರವಾಗಬಲ್ಲವು’ ಎಂದು ಸಾಹಿತಿ ಹಂಪ ನಾಗರಾಜಯ್ಯ ಹೇಳಿದರು.

ಕರ್ನಾಟಕ ಜೈನ ಅಸೋಸಿಯೇಷನ್ ಕೆ.ಆರ್. ರಸ್ತೆಯ ಕರ್ನಾಟಕ ಜೈನ ಭವನದಲ್ಲಿ ಸೋಮವಾರ ಆಯೋಜಿಸಿದ್ದ ಭಗವಾನ್ ಮಹಾವೀರ ಜನ್ಮ ಕಲ್ಯಾಣ ಮಹೋತ್ಸವದಲ್ಲಿ ಅವರು ಮಾತನಾಡಿದರು.

‘ರಷ್ಯಾ ಹಾಗೂ ಉಕ್ರೇನ್, ಅಮೆರಿಕ, ಇಸ್ರೇಲ್ ಹಾಗೂ ಇರಾನ್ ದೇಶಗಳಲ್ಲಿ ಈಗ ಯುದ್ಧದ ವಾತಾವರಣವಿದೆ. ಇದು ಇಡೀ ಜಗತ್ತಿನಲ್ಲಿ ಆತಂಕ ಸೃಷ್ಟಿಸಿದೆ. ಯುದ್ಧೋನ್ಮಾದದಿಂದ ರಕ್ತಪಾತ ಉಂಟಾಗಿ ಹಲವರು ಜೀವ ಕಳೆದುಕೊಂಡಿದ್ದಾರೆ. ಪತಿಯನ್ನು ಕಳೆದುಕೊಂಡ ಮಹಿಳೆಯರ, ಅಪ್ಪ-ಅಮ್ಮನನ್ನು ಕಳೆದುಕೊಂಡ ಮಕ್ಕಳ ಸ್ಥಿತಿ ಹೇಳತೀರದ್ದು’ ಎಂದು ಬೇಸರ ವ್ಯಕ್ತಪಡಿಸಿದರು.

‘ಮಹಾವೀರರು ಶತಮಾನಗಳ ಹಿಂದೆಯೇ ಅಹಿಂಸೆಯ ಸಂದೇಶವನ್ನು ಸಾರಿದ್ದರು. ಇದರಿಂದ ಜಗತ್ತಿನಲ್ಲಿ ಆಗಬಹುದಾದ ಅದೆಷ್ಟೋ ಅನಾಹುತಗಳು ತಪ್ಪಿವೆ. ಭಾರತದಲ್ಲಿ ಸ್ವಾತಂತ್ರ್ಯ ಪಡೆಯಲು ಮಹಾತ್ಮ ಗಾಂಧಿ ಅನುಸರಿಸಿದ ಅಹಿಂಸೆಯ ಮಂತ್ರವೂ ಕೂಡ ಜಗತ್ತಿಗೆ ಮಾದರಿ. ಇದನ್ನು ಎಲ್ಲಾ ದೇಶಗಳು ಅನುಸರಿಸಿದರೆ ಯುದ್ಧವೇ ಇರುವುದಿಲ್ಲ’ ಎಂದು ಹೇಳಿದರು.

ಯುಪಿಎಸ್‌ಸಿ ಪರೀಕ್ಷೆಗೆ ತರಬೇತಿ ನೀಡಿ: ‘ದೇಶದಲ್ಲಿಯೇ ಅತಿ ಹೆಚ್ಚು ತೆರಿಗೆ ಪಾವತಿಸುವುದರಲ್ಲಿ ಜೈನ ಸಮುದಾಯ ಮುಂಚೂಣಿಯಲ್ಲಿದೆ. ಆಮದು, ರಫ್ತು ವ್ಯಾಪಾರದಲ್ಲೂ ಮುಂದಿದೆ. ಆದರೆ, ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಿದ್ದರೂ ಸಾರ್ವಜನಿಕ ಸೇವೆಗೆ ಹೆಚ್ಚು ಮಂದಿ ಬರುತ್ತಿಲ್ಲ. ಕರ್ನಾಟಕದಲ್ಲಿ ಒಂದು ಕಾಲಕ್ಕೆ ಜೈನ ಸಮುದಾಯದ ಏಳು ಐಎಎಸ್ ಅಧಿಕಾರಿಗಳಿದ್ದರು. ಈಗ ಒಬ್ಬರೇ ಇದ್ದಾರೆ. ಯುಪಿಎಸ್‌ಸಿ ಪರೀಕ್ಷೆಗಳಿಗೂ ಸಮುದಾಯದಿಂದ ತರಬೇತಿ ನೀಡಲು ಒತ್ತು ಕೊಡಬೇಕು’ ಎಂದು ಸಲಹೆ ನೀಡಿದರು.

ಶಿಕ್ಷಣ ತಜ್ಞ ಮುನಿರಾಜ ರೆಂಜಾಳ ಉಪನ್ಯಾಸ ನೀಡಿದರು.

ಭಗವಾನ್ ಮಹಾವೀರ ಜನ್ಮ ಕಲ್ಯಾಣ ಮಹೋತ್ಸವದಲ್ಲಿ (ಕುಳಿತವರು ಎಡದಿಂದ) ನಿವೃತ್ತ ಎಂಜಿನಿಯರ್ ರಾಜಕೀರ್ತಿ, ಲೋಕಾಯುಕ್ತದ ನಿವೃತ್ತ ರಿಜಿಸ್ಟ್ರಾರ್ ಎಂ.ಜೆ.ಇಂದ್ರಕುಮಾರ್ ಮತ್ತು ಎಸ್‌ಬಿಐ ನಿವೃತ್ತ ಸಹಾಯಕ ಮಹಾ ಪ್ರಬಂಧಕ ವೈ. ಎಸ್. ರಾಜೇಂದ್ರ ಕುಮಾರ್ ಅವರಿಗೆ ‘ಜೈನ ಸಮಾಜ ರತ್ನ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯದರ್ಶಿ ಆಶಾ ಪ್ರಭು, ಶಿಕ್ಷಣ ತಜ್ಞ ಮುನಿರಾಜ ರೆಂಜಾಳ, ಐಎಎಸ್ ಅಧಿಕಾರಿ ಮನೋಜ್ ಜೈನ್, ಕನಕಗಿರಿ ಜೈನಪೀಠದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ನ್ಯಾಯಮೂರ್ತಿ ಎಂ.ಐ.ಅರುಣ್, ಹಂಪ ನಾಗರಾಜಯ್ಯ, ಸಹ ಕಾರ್ಯದರ್ಶಿ ನೀರಜಾ ರಾಜೇಂದ್ರಕುಮಾರ್, ಕರ್ನಾಟಕ ಜೈನ ಅಸೋಸಿಯೇಷನ್ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಬ್ರಾಹ್ಮಿಲಿಪಿ: ಆದಿತೀರ್ಥಂಕರರ ಕೊಡುಗೆ’

ಕನ್ನಡ– ಸಂಸ್ಕೃತಿ ಇಲಾಖೆಯಿಂದ ಮಹಾವೀರ ಜಯಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆದಿತೀರ್ಥಂಕರರು ತನ್ನ ಪುತ್ರರಿಗೆ ರಾಜ್ಯವನ್ನು ನೀಡಿದರೂ ಲಿಪಿಯನ್ನು, ಅಂಕ ಗಣಿತವನ್ನು ಪುತ್ರಿಯರಿಗೆ ಕಲಿಸಿಕೊಟ್ಟರು. ಹಾಗಾಗಿ ನಮ್ಮ ದೇಶದ ಮೊದಲ ಲಿಪಿ ಬ್ರಾಹ್ಮಿಲಿಪಿ ಹೆಣ್ಣು ಮಕ್ಕಳಿಂದ ಪ್ರಸಾರವಾಯಿತು’ ಎಂದು ಸಾಹಿತಿ ಹಂಪ ನಾಗರಾಜಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ಹಮ್ಮಿಕೊಂಡಿದ್ದ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

‘ಈ ದೇಶಕ್ಕೆ ಭಾರತ ಎಂಬ ಹೆಸರು ಕೂಡ ಭರತ ಚಕ್ರವರ್ತಿಯಿಂದಲೇ ಬಂದಿದೆ. ಆದಿತೀರ್ಥಂಕರರ ಮಗನೇ ಈ ಭರತ’ ಎಂದು ತಿಳಿಸಿದರು.

‘ಮಹಾವೀರರನ್ನು ಜೈನಧರ್ಮದ ಸ್ಥಾಪಕರು ಎಂದು ಹಲವರು ತಿಳಿದಿದ್ದಾರೆ. ಇದು ತಪ್ಪು. ಜೈನ ಧರ್ಮದ 24ನೇ ತೀರ್ಥಂಕರ ಮಹಾವೀರರು. ಅದಕ್ಕಿಂತ ಮೊದಲು 23 ತೀರ್ಥಂಕರರು ಆಗಿ ಹೋಗಿದ್ದರು. ಸತ್ಯ, ಅಹಿಂಸೆ, ಆಸ್ತೇಯ ಅಪರಿಗ್ರಹ ತತ್ವಗಳನ್ನು ಹಿಂದಿನ ತೀರ್ಥಂಕರರು ಬೋಧಿಸಿದ್ದರು. ಅದಕ್ಕೆ ಬ್ರಹ್ಮಚರ್ಯ ತತ್ವವನ್ನು ಮಹಾವೀರರು ಸೇರಿಸಿದ್ದರು. ಬ್ರಹ್ಮಚರ್ಯ ಅಂದರೆ ಅಖಂಡ ಬ್ರಹ್ಮಚರ್ಯ ಅಲ್ಲ. ತನ್ನ ಕುಟುಂಬಕ್ಕೆ ಸೀಮಿತವಾಗಿ ನೆಮ್ಮದಿಯ ಜೀವನ ನಡೆಸುತ್ತಾ ಹೇಗೆ ಬ್ರಹ್ಮಚರ್ಯ ಪಾಲನೆ ಮಾಡಬೇಕು ಎಂಬುದು ತತ್ವವಾಗಿದೆ’ ಎಂದು ವಿವರಿಸಿದರು.

‘ಕ್ರಿಸ್ತಪೂರ್ವ 599ನೇ ಇಸವಿಯಲ್ಲಿ ಜನಿಸಿದ್ದ ಮಹಾವೀರ 30ನೇ ವರ್ಷದಲ್ಲಿ ದೀಕ್ಷೆ ಪಡೆದು 12 ವರ್ಷ ತಪಸ್ಸು ಮಾಡಿದರು. ಬಳಿಕ ದೇಶದಾದ್ಯಂತ ಸುತ್ತಿ ಬಿಡುಗಡೆಯ ದಾರಿಯನ್ನು ತೋರಿಸಿದರು. 72 ವರ್ಷ ಅವರು ಬದುಕಿದ್ದರು. ದಾರ್ಶನಿಕರು ಎಲ್ಲೇ ಹುಟ್ಟಿರಬಹುದು. ಅವರು ಆಚಾರ್ಯರಾಗಿದ್ದು ದಕ್ಷಿಣ ಭಾರತದಿಂದಲೇ ಆಗಿದೆ. ಅವರ ತತ್ವಗಳನ್ನು ಸಾರಿದ ಶಿಷ್ಯರು ದಕ್ಷಿಣದವರೇ. ಅದೇ ರೀತಿ ಜೈನಧರ್ಮ ದಕ್ಷಿಣದ ಕರ್ನಾಟಕದಲ್ಲಿ ಹೆಚ್ಚು ಪ್ರಚಾರವಾಯಿತು’ ಎಂದರು.

‘ಜೈನರು ಅಲ್ಪಸಂಖ್ಯಾತರಾಗಿರಬಹುದು. ಆದರೆ, ಸಮಾಜಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಈ ಸಮುದಾಯ ನೀಡಿದೆ. ಸರ್ಕಾರದಿಂದ ಸರಿಯಾಗಿ ಗುರುತಿಸುವ ಕೆಲಸ ಆಗಬೇಕು’ ಎಂದರು.

ಚಾಮರಾಜನಗರದ ಕನಕಗಿರಿಯ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮಂಜುನಾಥ ಸ್ವಾಮಿ, ಜೈನ ಯುವ ಸಂಘಟನೆಯ ಅಧ್ಯಕ್ಷ ಮುಖೇಶ್ ಸುರಾನಾ, ಜೈನ್ ಅಸೋಸಿಯೇಷನ್ ಕಾರ್ಯದರ್ಶಿ ಆಶಾ ಪ್ರಭು, ಪತ್ರಕರ್ತ ಪದ್ಮರಾಜ ದಂಡಾವತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಕಾರ್ಯದರ್ಶಿ ಬಲವಂತರಾವ್ ಪಾಟೀಲ ಇದ್ದರು.

ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು

ಸಾಧಕ ಮಹಿಳೆಯರಿಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ. ನಗರದ ಮಾರೇನಹಳ್ಳಿ ಕಲಾಭವನದಲ್ಲಿ ಮಹಿಳಾ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವೈದ್ಯೆ ದೀಪ ದೇವರಾಜ್, ನೃತ್ಯಪಟು ಮಂದಸ್ಮಿತಾ ಭಟ್, ಹಿನ್ನೆಲೆ ಗಾಯಕಿ ಚಂದ್ರಿಕಾ ಗುರುರಾಜ್, ಯೋಗ ಪಟು ಕೃಷ್ಣವೇಣಿ, ಸಂಗೀತ-ಗಮಕ ಕ್ಷೇತ್ರದಲ್ಲಿ ಕಮಲ ಶ್ರೀನಿವಾಸ್ ಹಾಗೂ ಸಾಮಾಜಿಕ ಕಾರ್ಯಕರ್ತೆ ನಾಗರತ್ನ ರಾಮಮೂರ್ತಿ ಅವರನ್ನು ಗೌರವಿಸಲಾಯಿತು.

ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ ಮಾತನಾಡಿದರು. ತೀರ್ಥಹಳ್ಳಿ ರಮೇಶ್ ಮತ್ತು ತಂಡ, ಮಂದಸ್ಮಿತಾ ಭಟ್ ನೃತ್ಯ ತಂಡದವರು ಕಾರ್ಯಕ್ರಮ ನೀಡಿದರು.

ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ನಾಗರತ್ನ ರಾಮಮೂರ್ತಿ, ಚಂದ್ರಶೇಖರ್ ರಾಜು, ವಾರ್ಡ್ ಅಧ್ಯಕ್ಷ ಬಿ. ಆನಂದ್ ಹಾಗೂ ಸಂಘಟಕರಾದ ನೇತ್ರಾವತಿ ಉಪಸ್ಥಿತರಿದ್ದರು. ರಾಧಾ ಕೇಶವ ಹೆಬ್ಬಾರ್ ನಿರೂಪಿಸಿದರು.

ಐಐಎಂಬಿ ಘಟಿಕೋತ್ಸವ: 785 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಐಐಎಂನ 51ನೇ ಘಟಿಕೋತ್ಸವದಲ್ಲಿ ಒಂಬತ್ತು ಚಿನ್ನದ ಪದಕಗಳೊಂದಿಗೆ ವಿವಿಧ ಕೋರ್ಸ್‌ಗಳ 785 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಎಚ್‌ಡಿಎಫ್‌ಸಿ ಲೈಫ್‌ನ ವ್ಯವಸ್ಥಾಪಕ ನಿರ್ದೇಶಕಿ ವಿಭಾ ಪದಲ್ಕರ್ ಪದವಿ ಪ್ರದಾನ ಮಾಡಿ ಮಾತನಾಡಿ, ‘ಸ್ಥಿರವಾದ ಆಯ್ಕೆಯಲ್ಲಿ ನಿರಂತರವಾದ ಯಶಸ್ಸು ಇದೆ. ದೀರ್ಘಾವಧಿಯಾದ ಮೌಲ್ಯ ಸೃಷ್ಟಿಯೊಂದಿಗೆ ಅಲ್ಪಾವಧಿಯ ಕಾರ್ಯಕ್ಷಮತೆಯನ್ನು ಸಮತೋಲನಗೊಳಿಸುವುದೇ ನಿಜವಾದ ನಾಯಕತ್ವ’ ಎಂದು ಹೇಳಿದರು.

ಮಾನಸಿ ಅಂಜು ಮೆರ್ಟಿಯಾ, ಧ್ವಿತ್ ಜಾಯೆನ್ ಮೆಹ್ತಾ, ಮಯೂರ್ ದತ್ತಾತ್ರೇಯ ಖುಲೆ, ಭರತ್ ಮುಂದ್ರಾ, ಆಯ್ಶಾ ಶಾಬಾ ಪಿಪಿ, ರಾಜಸಿಲ್ಪಿ ಎಸ್.ಪಿ, ಲಕ್ಷ್ಮಿ ಆರ್, ಬಿಸ್ವರಂಜನ್ ಮಿಶ್ರಾ, ಅನಿರುದ್ಧ್, ದಿವ್ಯಾ ದ್ವಿವೇದಿ ಚಿನ್ನದ ಪದಕಗಳನ್ನು ಪಡೆದರು.

ಐಐಎಂನ 51ನೇ ಘಟಿಕೋತ್ಸವದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು

ಸಿಲಿಂಡರ್ ಅಭಾವ ಸಣ್ಣ ಹೋಟೆಲ್ ಬಂದ್

ಪ್ರಜಾವಾಣಿ ವಾರ್ತೆ

ಆನೇಕಲ್: ವಾಣಿಜ್ಯ ಸಿಲಿಂಡರ್ ಅಭಾವದಿಂದ ಹೋಟೆಲ್ ಉದ್ಯಮ ತತ್ತರಿಸಿದ್ದು ಆನೇಕಲ್ ಪಟ್ಟಣದಲ್ಲಿ ಅಂದಾಜು 10ಕ್ಕೂ ಹೆಚ್ಚು ಸಣ್ಣ ಹೋಟೆಲ್‌ಗಳನ್ನು ಮುಚ್ಚಲಾಗಿದೆ. ಅತ್ತಿಬೆಲೆ, ಸರ್ಜಾಪುರ, ಜಿಗಣಿಯಲ್ಲಿಯೂ ಹಲವು ಹೋಟೆಲ್‌ಗಳಿಗೆ ಬೀಗ ಹಾಕಲಾಗಿದೆ.

ಹೋಟೆಲ್‌ನಲ್ಲಿ ಕೆಲಸ ಮಾಡುವ ಮ್ಯಾನೇಜರ್, ಬಾಣಸಿಗರು, ಸಪ್ಲೈಯರ್, ಸ್ವಚ್ಛತಾ ಸಿಬ್ಬಂದಿ ಸೇರಿದಂತೆ ಎಲ್ಲರಿಗೂ ಅಡುಗೆ ಅನಿಲದ ಕೊರತೆ ಬಿಸಿ ತಟ್ಟಿದೆ. ಸಿಬ್ಬಂದಿಯ ವೇತನ ಕಡಿತಗೊಳಿಸಲಾಗಿದೆ.

ಸಿಲಿಂಡರ್ ಅಭಾವದಿಂದ ಬಹುತೇಕ ಹೋಟೆಲ್‌ಗಳು ತತ್ತರಿಸಿವೆ. ಹೋಟೆಲ್ ಉದ್ಯಮ ಆನೇಕಲ್‌ನಲ್ಲಿ ನೆಲಕಚ್ಚುವ ಸಾಧ್ಯತೆಗಳಿದ್ದು ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆಯನ್ನು ಸರಳೀಕರಣಗೊಳಿಸಬೇಕು ಎಂಬುದು ಹೋಟೆಲ್ ಮಾಲೀಕರ ಒತ್ತಾಯವಾಗಿದೆ.

ಗುಡ್ ಫ್ರೈಡೆ, ಈಸ್ಟರ್: ಬೆಂಗಳೂರು– ಮಡಗಾಂವ್ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಮೈಸೂರು: ‘ಗುಡ್ ಫ್ರೈಡೆ ಹಾಗೂ ಈಸ್ಟರ್ ಹಬ್ಬದ ಕಾರಣದಿಂದ, ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ಕಡಿಮೆ ಮಾಡಲು ನೈರುತ್ಯ ರೈಲ್ವೆಯು ಯಶವಂತಪುರ, ಮಡಗಾಂವ್ ಮತ್ತು ಬೆಂಗಳೂರು ಕಂಟೋನ್ಮೆಂಟ್ ನಡುವೆ ವಿಶೇಷ ರೈಲುಗಳನ್ನು ಓಡಿಸಲು ನಿರ್ಧರಿಸಿದೆ ಎಂದು ಮೈಸೂರು ವಿಭಾಗದ ಹಿರಿಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.

ರೈಲು ಸಂಖ್ಯೆ 06271 ಯಶವಂತಪುರ–ಮಡಗಾಂವ್ ವಿಶೇಷ ಎಕ್ಸ್‌ಪ್ರೆಸ್ ಏ. 2ರಂದು ರಾತ್ರಿ 11.55ಕ್ಕೆ ಯಶವಂತಪುರದಿಂದ ಹೊರಟು, ಏ.3ರಂದು ಸಂಜೆ 5.30ಕ್ಕೆ ಮಡಗಾಂವ್ ತಲುಪಲಿದೆ. ಹಿಂದಿರುಗುವ ಪ್ರಯಾಣದಲ್ಲಿ, ರೈಲು ಸಂಖ್ಯೆ 06272 ಮಡಗಾಂವ್–ಬೆಂಗಳೂರು ಕಂಟೋನ್ಮೆಂಟ್ ವಿಶೇಷ ಎಕ್ಸ್‌ಪ್ರೆಸ್ ಏ. 5ರಂದು ಬೆಳಿಗ್ಗೆ 11ಕ್ಕೆ ಮಡಗಾಂವ್‌ನಿಂದ ಹೊರಟು ಏ.6ರಂದು ಬೆಳಗಿನ ಜಾವ 5.20ಕ್ಕೆ ಬೆಂಗಳೂರು ಕಂಟೋನ್ಮೆಂಟ್ ತಲುಪಲಿದೆ.

ಈ ವಿಶೇಷ ರೈಲುಗಳು ಮಾರ್ಗ ಮಧ್ಯೆ ಕುಣಿಗಲ್, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ ಪುತ್ತೂರು, ಬಂಟ್ವಾಳ, ಸುರತ್ಕಲ್, ಮೂಲ್ಕಿ, ಉಡುಪಿ, ಬಾರ್ಕೂರು, ಕುಂದಾಪುರ, ಬೈಂದೂರು, ಭಟ್ಕಳ, ಮುರುಡೇಶ್ವರ, ಹೊನ್ನಾವರ, ಕುಮಟಾ, ಗೋಕರ್ಣ ರೋಡ್, ಅಂಕೋಲಾ, ಕಾರವಾರ, ಕಾಣಕೋಣ ನಿಲ್ದಾಣಗಳಲ್ಲಿ ನಿಲ್ಲಲಿವೆ. ಹಿಂದಿರುಗುವ ಪ್ರಯಾಣದಲ್ಲಿ ರೈಲು ಸಂಖ್ಯೆ 06272 ಯಶವಂತಪುರ ನಿಲ್ದಾಣದಲ್ಲಿ ನಿಲುಗಡೆ ಇರುವುದಿಲ್ಲ. ಎಸ್‌ಎಂವಿಟಿ ಬೆಂಗಳೂರು ನಿಲ್ದಾಣದಲ್ಲಿ ರೈಲು ನಿಲ್ಲಲಿದೆ.

ಈ ವಿಶೇಷ ರೈಲು ಒಟ್ಟು 19 ಬೋಗಿಗಳನ್ನು ಹೊಂದಿರಲಿದೆ. ಇದರಲ್ಲಿ 2 ಎಸಿ 2-ಟೈರ್, 2 ಎಸಿ 3-ಟೈರ್, 9 ಸ್ಲೀಪರ್ ಕ್ಲಾಸ್, 4 ಸಾಮಾನ್ಯ ದ್ವಿತೀಯ ದರ್ಜೆ, 2 ಎಸ್‌ಎಲ್‌ಆರ್/ಡಿ ಬೋಗಿಗಳು ಇರಲಿವೆ ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

PRIYA CEMENT
STRENGTH THAT ROARS
VENDORS REQUIRED
WITH EXPERTISE IN WALL PAINTING, DEALER BOARDS & POSM
We are a large and reputed cement manufacturing company, inviting vendors with experience in:
High-Rise Wall Paints - Shop Paints - Dealer Boards (ACP Boards, Glow Sign Boards, Non-Lit Flex Boards, Foam Boards etc.)
In-store branding at dealer outlets, Printing Leaflets, Certificates, Brochures etc.
Interested vendors may apply / call
Srikanth Marri - 7022030619, srikanth.marri@priyacement.com
Abhimanyu Singh - 8517979409, abhimanyu.s@priyacement.com

Manager

WANTED BRANCH MANAGER (FTL) for RCI Logistics Pvt Ltd, Bangalore Branch. Candidates must have min. 5 years experience in a reputed Surface Transport company (mainly FTL). Job Role: Managing branch activities, client interaction, hiring vehicles from brokers, quoting rates for RFQs/Tenders. Contact: 9347501033. Email: hrd@rcilogistics.co.in

PERSONAL

Lost

DOCUMENT LOST
I, Savithramma, residing at No. 149, Dayanand Nagar, Jayanagar 1st Block, Near Ganesh Temple, Bangalore-560011, have lost my Karnataka Housing Board Intimation of Allotment Letter Document No./ Identification: Registration No. ES000004011. While in transit. If found please contact: 9986333304

Change of Name

I, PARSOTTAM BHAI PIPALIYA PAVIN BHAI. R/a #.1903, Shapoorji Pallonji Parkwest Tower 4 Maple Magadi road, Binnypet Bengaluru -560024 Have Changed My Name From PARSOTTAM BHAI PIPALIYA PAVIN BHAI To PARSOTAMBHAI PRAVINBHAI PIPALIYA vide Affidavit Dated 28/03/2026 before Notary Mohammed Hussain.K Bangalore.

I, JAGRUTI BEN PIPALIYA R/a. #1903, Shapoorji Pallonji Parkwest Tower 4 Maple Magadi road, Binnypet Bengaluru -560024 Have Changed My Name From JAGRUTI BEN PIPALIYA To JAGRUTIBEN PARSOTAMBHAI PIPALIYA vide Affidavit Dated 28/03/2026 before Notary Mohammed Hussain.K Bangalore

EDUCATION
To Place your Classified Ads Contact:
9845114560

CONNECT

ಅದ್ಧೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ
MYSORE SILKS ಸೀರೆ ಉತ್ಸವ By Sulakshmi Silks
Opening Offer 60% off
ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 1 ರಿಂದ 10ನೇ ಏಪ್ರಿಲ್ 2026
SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Kalakruthi
Confluence of Arts, Crafts & Textiles
presents
ಸಂತೆ santhe
SHOPPING FESTIVAL
FREE ENTRY & PARKING
MAR 27TH TO APR 5TH
11 AM - 9 PM
V.V Convention Hall
BANASWADI RING ROAD, BABUSAPALYA, HORAMAVU
SCAN FOR LOCATION
CONTACT - 8553836868

I, MALHAR PIPALIYA. R/a #.1903, Shapoorji Pallonji Parkwest Tower 4 Maple Magadi road, Binnypet Bengaluru -560024 Have Changed My Name From MALHAR PIPALIYA To MALHAR PARSOTAMBHAI PIPALIYA vide Affidavit Dated 28/03/2026 before Notary Mohammed Hussain.K Bangalore

CHANGE OF NAME
I, Nagesh M, M Nagesh, Nagesh Mallikarjunaiah, residing at No. 214/6, 14th Main B.S.K. 1st Stage, 2nd Block, Bengaluru-560050, declare that the above names pertain to me only & henceforth I shall be known as NAGESH MALLIKARJUN vide affidavit dated 30-03-2026 before notary B.M. Chandrashekar, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

‘ಕಲ್ಚರಾ- 26’ ರಾಷ್ಟ್ರೀಯ ಕಲಾ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ (ಸಿಎಂಆರ್‌ಐಟಿ) ‘ಕಲ್ಚರಾ- 26’ ರಾಷ್ಟ್ರಮಟ್ಟದ ‘ಸಾಂಸ್ಕೃತಿಕ ಮತ್ತು ತಾಂತ್ರಿಕ ಉತ್ಸವ’ ನೆರವೇರಿತು. ಎರಡು ದಿನ ನಡೆದ ಸಾಂಸ್ಕೃತಿಕ ವೈವಿಧ್ಯಮಯ ಕಲವರಗಳ ಸಂಭ್ರಮದಲ್ಲಿ ಯುವಜನರು ಪಾಲ್ಗೊಂಡರು.

2026ರ ‘ಮಿಸ್ ಗ್ರ್ಯಾಂಡ್ ತಮಿಳುನಾಡು’ ಕಿರೀಟ ಮುಡಿಗೇರಿಸಿಕೊಂಡಿರುವ ಸಿಎಂಆರ್‌ಐಟಿ ಅಂತಿಮ ವರ್ಷದ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿನಿ ಲಕ್ಷಿತಾ ತಿಲಗರಾಜ್ ಉದ್ಘಾಟಿಸಿದರು. ಪ್ರಾಂಶುಪಾಲ ಸಂಜಯ್ ಜೈನ್, ಉಪ ಪ್ರಾಂಶುಪಾಲ ಬಿ. ನರಸಿಂಹ ಮೂರ್ತಿ, ವಿವಿಧ ವಿಭಾಗಗಳ ಡೀನ್ ಮತ್ತು ನಿರ್ದೇಶಕರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಕಲರವದಲ್ಲಿ 100ಕ್ಕೂ ಹೆಚ್ಚು ಕಾಲೇಜುಗಳಿಂದ 5 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. 52ಕ್ಕೂ ಹೆಚ್ಚು ವಿವಿಧ ಸ್ಪರ್ಧೆಗಳಲ್ಲಿ ತಮ್ಮ ಕೌಶಲ ಪ್ರದರ್ಶಿಸಿದರು.

‘ಮಾಫಿಯಾ ಥೀಮ್’ನಲ್ಲಿ ನಡೆದ ಫ್ಯಾಷನ್ ಶೋ ನೋಡುಗರ ಗಮನ ಸೆಳೆಯಿತು. ಹತ್ತು ತಂಡಗಳು ಸ್ಪರ್ಧಿಸಿದ್ದು, ಚೆನ್ನೈನ ಎ.ಎಂ ಜೈನ್ ಕಾಲೇಜಿನ ಇಟಾಲಿಯನ್ ಶೈಲಿಯ ಉಡುಪುಗಳ ಪ್ರದರ್ಶನ ವಿಶೇಷ ಮೆಚ್ಚುಗೆ ಪಡೆಯಿತು. ಡಿಜೆ ನೈಟ್, ಹೆಮ್ಮೆಯ ಕನ್ನಡಿಗ, ಅಭಿನಯ ಚಕ್ರವರ್ತಿ, ಕನ್ನಡ ಕುವರ, ಸ್ಟ್ಯಾಂಡಪ್ ಕಾಮಿಡಿ, ರೋಬೊ ರೇಸ್ ಹಾಗೂ ಫಿಫಾ ಫೋಟೊಗ್ರಫಿಯಂತಹ ವಿನೂತನ ಸ್ಪರ್ಧೆಗಳು ನಡೆದವು.

ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಕೆ.ಸಿ. ರಾಮಮೂರ್ತಿ ಮಾತನಾಡಿ, ‘ಕಲ್ಚರಾ ನಮ್ಮ ಸಂಸ್ಥೆಯ ಹೆಮ್ಮೆಯ ಹಬ್ಬ. ಓದಿನ ಜೊತೆಗೆ ಕಲೆಯನ್ನೂ ಮೈಗೂಡಿಸಿಕೊಳ್ಳುವುದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕ’ ಎಂದು ಹೇಳಿದರು.

ಚಿತ್ರ ನಟ ಸಿಂಧು ಮಹೇಶ್ ಮತ್ತು ನಟ ಭರತ್ ಸಾಗರ್ ಸ್ಪರ್ಧಾ ವಿಜೇತರಿಗೆ ನಗದು ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಿದರು.

‘ಕಲ್ಚರಾ– 26’ ರಾಷ್ಟ್ರಮಟ್ಟದ ‘ಸಾಂಸ್ಕೃತಿಕ ಮತ್ತು ತಾಂತ್ರಿಕ ಉತ್ಸವ’ದಲ್ಲಿ ನಡೆದ ಕಲಾ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು

ತುರ್ತುಚಿಕಿತ್ಸೆ: ₹5 ಲಕ್ಷ ನೆರವು

ಬೆಂಗಳೂರು: ರಾಜ್ಯ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಕೆ.ಶಂಭುಲಿಂಗ ಅವರ ತುರ್ತು ಚಿಕಿತ್ಸೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ₹5 ಲಕ್ಷ ನೆರವು ನೀಡಿದ್ದಾರೆ.

ಪತ್ರಿಕಾ ವಿತರಕರ ಸಂಘಟನೆಗಾಗಿ ಅವಿರತವಾಗಿ ದುಡಿದ ಕೆ.ಶಂಭುಲಿಂಗ ಅವರು ತೀವ್ರ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿದ್ದಾರೆ. ಈಗಾಗಲೇ ₹16 ಲಕ್ಷಕ್ಕೂ ಹೆಚ್ಚು ವೆಚ್ಚವಾಗಿದ್ದು, ಇನ್ನೂ ₹20 ಲಕ್ಷ ಅಗತ್ಯವಿದೆ. ಸಂಕಷ್ಟದ ಹೊತ್ತಿನಲ್ಲಿ ಚಿಕಿತ್ಸಾ ವೆಚ್ಚಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿದ್ದು, ಮುಖ್ಯಮಂತ್ರಿ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಆಸ್ಪತ್ರೆಗೆ ತಲುಪಿಸಿದ್ದಾರೆ.

‘ಮೊಗೇರ ಕ್ರೀಡಾಕೂಟ’ 18ರಿಂದ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲಾ ಮೊಗೇರ ಸೇವಾ ಸಮಾಜದಿಂದ ಏ. 18,19ರಂದು 10ನೇ ವರ್ಷದ ರಾಜ್ಯಮಟ್ಟದ ‘ಮೊಗೇರ ಕ್ರೀಡಾಕೂಟ’ ಇಲ್ಲಿನ ಜನರಲ್ ಕೆ.ಎಸ್. ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

‘ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ ಮತ್ತು ಕೇರಳದ ಕಾಸರಗೋಡು ಜಿಲ್ಲಾ ವ್ಯಾಪ್ತಿಯ ಸಮುದಾಯವರು ಭಾಗ ವಹಿಸಲಿದ್ದಾರೆ’ ಎಂದು ಸಮಾಜದ ಗೌರವಾಧ್ಯಕ್ಷ ಪಿ.ಎಂ.ರವಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕ್ರಿಕೆಟ್ ಟೂರ್ನಿಗೆ 60 ತಂಡಗಳು ನೋಂದಣಿಯಾಗಿವೆ. ವಿಜೇತ ತಂಡಗಳಿಗೆ ನಗದು ಬಹುಮಾನ ನೀಡಲಾಗುವುದು. ಆಸಕ್ತ ತಂಡಗಳು ಏ.10ರ ಒಳಗಾಗಿ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ 8277277730 ಸಂಪರ್ಕಿಸಬಹುದು’ ಎಂದರು.

ನಗರದಲ್ಲಿ ಇಂದು

ಭಗವಾನ್ ಮಹಾವೀರ್ ಜನ್ಮ ಕಲ್ಯಾಣ ಮಹೋತ್ಸವ: ಅತಿಥಿಗಳು: ಡಿ.ಕೆ. ಶಿವಕುಮಾರ್, ದಿನೇಶ್ ಗುಂಡೂರಾವ್, ಭೈರತಿ ಸುರೇಶ್, ಕೆ.ಎಚ್. ಮುನಿಯಪ್ಪ, ಡಿ. ಸುಧಾಕರ್, ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಆಯೋಜನೆ: ಜೈನ್ ಯುವ ಸಂಘಟನೆ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 10.30

ಉಮಾ ಶರ್ಮ ಆರ್. ಅವರು ಹಿಂದಿಗೆ ಅನುವಾದಿಸಿರುವ ‘ದೂರದರ್ಶಿ ರಾಜನೇತ ಎಸ್. ನಿಜಲಿಂಗಪ್ಪ’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ರಾಣಿ ಸತೀಶ್, ಪುಸ್ತಕ ಬಿಡುಗಡೆ: ವಿ. ರೇಣುಕ ಪ್ರಸನ್ನ, ಎಸ್.ಜಿ. ಸುಶೀಲಮ್ಮ, ಅಧ್ಯಕ್ಷತೆ: ಎನ್. ರಾಮನಾಥ್, ಆಯೋಜನೆ: ತೇಜು ಪ್ರಕಾಶನ, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಎಂಟನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30

‘ಸಂಯಮ’ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಎಚ್.ಕೆ. ಪಾಟೀಲ, ಶರಣಬಸಪ್ಪ ದರ್ಶನಾಪುರ, ಪ್ರಿಯಾಂಕ್ ಖರ್ಗೆ, ಎನ್.ಎಸ್. ಬೋಸರಾಜು, ಡಾ. ಶರಣಪ್ರಕಾಶ ಆರ್. ಪಾಟೀಲ, ಶರಣಪ್ಪ ಸಲಾದಪುರ, ಪ್ರಶಸ್ತಿ ಸ್ವೀಕರಿಸುವವರು: ಡಿ.ಆರ್. ಪಾಟೀಲ, ಬಿ.ಆರ್. ಪಾಟೀಲ, ವೂಡೇ ಪಿ. ಕೃಷ್ಣ, ಆಯೋಜನೆ: ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಟ್ರಸ್ಟ್ ಉದ್ಘಾಟನೆ ಮತ್ತು ವೆಬ್‌ಸೈಟ್ ಬಿಡುಗಡೆ, ನಾಡಿನ ಶ್ರೇಷ್ಠ ಹಿರಿಯ ಕಲಾವಿದರಿಗೆ ‘ಜೀವಮಾನದ ಶ್ರೇಷ್ಠ ಕಲಾ ಸಾಧಕರ’ ಪ್ರಶಸ್ತಿ ಪ್ರದಾನ, ಚಿತ್ರಕಲಾ ಪ್ರದರ್ಶನ: ಉದ್ಘಾಟನೆ: ಎಚ್.ಕೆ. ಪಾಟೀಲ, ಪುಟ್ಟಣ್ಣ, ಪ.ಸ. ಕುಮಾರ್, ಪ್ರಶಸ್ತಿ ಪ್ರದಾನ: ಸಿ. ಸೋಮಶೇಖರ್, ಅತಿಥಿಗಳು: ರಾಮ್ ನಾರಾಯಣ್, ರಮೇಶ್ ಕೃಷ್ಣ, ಅಧ್ಯಕ್ಷತೆ: ಬಿ.ಜಿ. ಅವಟಿ, ಪ್ರಶಸ್ತಿ ಸ್ವೀಕರಿಸುವವರು: ಚಿ.ಸು. ಕೃಷ್ಣಶೆಟ್ಟಿ, ವಿ.ಟಿ. ಕಾಳೆ, ಪ್ರಭಾ ಮಲ್ಲೇಶ್, ಮಹಾವೀರ ರಾಯಪ್ಪ ಬಾಳಿಕಾಯಿ, ಆಯೋಜನೆ: ಕರ್ನಾಟಕ ಇಂಟರ್‌ನ್ಯಾಷನಲ್ ಆರ್ಟಿಸ್ಟ್ ವಿಲೇಜ್ ಚಾರಿಟಬಲ್ ಟ್ರಸ್ಟ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಸರ್ವೇಶ್ ಡಿ. ಮತ್ತು ತಂಡ, ಕರ್ನಾಟಕ ಸಂಗೀತ ಕಛೇರಿ: ಮಲ್ಲಾಡಿ ಸಹೋದರರು, ಎಂಬಾರ್ ಎಸ್. ಕಣ್ಣನ್, ತುಮಕೂರು ರವಿಶಂಕರ್, ಜಿ. ಗುರುಪ್ರಸನ್ನ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಕರಗ ಶಕ್ತ್ಯೋತ್ಸವ: ಮಧ್ಯಾಹ್ನ 12.30ಕ್ಕೆ ಮರಿಸ್ವಾಮಿ ಮಠ (ಕಲಾಸಿಪಾಳ್ಯ), ರಾತ್ರಿ 3.30ಕ್ಕೆ ಹಸಿಕರಗ ಪೊಂಗಲು ಸೇವೆ, ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ಆವರಣ, ತಿಗಳರಪೇಟೆ.

ದತ್ತಿಗಳ ಉದ್ಘಾಟನೆ, ಚುಟುಕು ಕವಿಗೋಷ್ಠಿ: ಉದ್ಘಾಟನೆ: ಕೆ. ಮೋಹನ್‌ದೇವ್ ಆಳ್ವ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಕವಿಗೋಷ್ಠಿ ಅಧ್ಯಕ್ಷತೆ: ಪತ್ತಂಗಿ ಎಸ್. ಮುರಳಿ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4

‘ಕನ್ನಡ ನುಡಿಯೋಧ’ ಬಾ.ಹ. ಉಪೇಂದ್ರ ಮಾಸದ ನೆನಪು: ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಅತಿಥಿ: ಎಲ್. ಹನುಮಂತಯ್ಯ, ನುಡಿನಮನ: ಜಿ. ರಾಮಕೃಷ್ಣ, ವಿಜಯಾ, ಆರ್. ಶೇಷಶಾಸ್ತ್ರಿ, ಬಾ.ಹ. ರಮಾಕುಮಾರಿ, ವ.ಚ. ಚನ್ನೇಗೌಡ, ರಾ.ನಂ. ಚಂದ್ರಶೇಖರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಕರ್ನಾಟಕ ಸಂಭ್ರಮ, ಸುಗಮ ಸಂಗೀತ, ಜನಪದ ಗೀತೆ, ನಾಟಕ, ರಂಗ ಗೌರವ ಸಮಾರಂಭ: ಉದ್ಘಾಟನೆ: ಜಾಣಗೆರೆ ವೆಂಕಟರಾಮಯ್ಯ, ಅಧ್ಯಕ್ಷತೆ: ಕೆ.ಎ. ದಯಾನಂದ, ರಂಗ ಗೌರವ ಪ್ರದಾನ: ಕೆ.ವಿ. ನಾಗರಾಜಮೂರ್ತಿ, ರಂಗ ಗೌರವ ಸ್ವೀಕರಿಸುವವರು: ಆಶಾಲತಾ, ‘ಜಲಗಾರ’ ನಾಟಕ ಪ್ರದರ್ಶನ: ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

33ನೇ ಶ್ರೀರಾಮನವಮಿ ಸಂಗೀತೋತ್ಸವ: ಕೊಳಲು ಮತ್ತು ಪಿಟೀಲು: ಎನ್. ರಾಜ್‌ಕಮಲ್, ಕೆ.ಜಿ. ದಿಲೀಪ್, ಮೃದಂಗ: ಬೆಂಗಳೂರು ವಿ. ಪ್ರವೀಣ್, ಘಟಂ: ಗಿರಿಧರ ಉಡುಪ, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

ಮುತ್ಯಾಲಮ್ಮ ದೇವಿ ರಥೋತ್ಸವ: ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

‘ರೊಶೊಮನ್’ ನಾಟಕ ಪ್ರದರ್ಶನ: ನಿರ್ದೇಶನ: ಮಂಗಳಾ ಎನ್., ರಚನೆ: ರಘುವೀರ್ ಸಾಹೆ, ಆಯೋಜನೆ: ಸಂಚಾರಿ ಥಿಯೇಟರ್, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕೈದಿಗೆ ಡ್ರಗ್ಸ್ ತಂದಿದ್ದ ಯುವತಿ ಬಂಧನ

ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗೆ ನೀಡಲು ಡ್ರಗ್ಸ್ ತಂದಿದ್ದ ಯುವತಿಯನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಿತಿಕಾ ರೈ ಬಂಧಿತ ಯುವತಿ. ಜೈಲಿನ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಯುವತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪರಪ್ಪನ ಅಗ್ರಹಾರ ಜೈಲಿನ ವಿಚಾರಣಾಧೀನ ಕೈದಿ ಫರ್ಹಾನ್ ಖಾನ್ ಅವರನ್ನು ಭೇಟಿಯಾಗಲು ಮಾರ್ಚ್ 26ರಂದು ಯುವತಿ ಬಂದಿದ್ದರು. ಯುವತಿಯನ್ನು ಸಿಬ್ಬಂದಿ ತಪಾಸಣೆಗೆ ಒಳಪಡಿಸಿದಾಗ ಅನುಮಾನಾಸ್ಪದ ವಸ್ತುಗಳು ಇರುವುದು ಪತ್ತೆಯಾಗಿತ್ತು. ಪರಿಶೀಲಿಸಿದಾಗ ಡ್ರಗ್ಸ್, ಬೀಡಿ ಹಾಗೂ ಮೂರು ಏರ್‌ಟೆಲ್ ಸಿಮ್ ಕಾರ್ಡ್‌ಗಳನ್ನು ಬಿಳಿ ಬಣ್ಣದ ಕವರ್‌ನಲ್ಲಿ ಅಡಗಿಸಿಕೊಂಡಿರುವುದು ಪತ್ತೆ ಯಾಗಿತ್ತು ಎಂದು ಪೊಲೀಸರು ಹೇಳಿದರು.

ಕಾರಾಗೃಹದ ಪ್ರಭಾರ ಅಧೀಕ್ಷಕ ಶಿವಾನಂದ ಶಿವಪುರ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ. ಈ ಹಿಂದೆ ಇದೇ ಮಾದರಿಯಲ್ಲಿ ನಿಷೇಧಿತ ವಸ್ತುಗಳನ್ನು ಸಾಗಣೆ ಯತ್ನ ಆರೋಪದ ಅಡಿ ಯುವತಿಯನ್ನು ಬಂಧಿಸಲಾಗಿತ್ತು. ನ್ಯಾಯಾಲಯದಿಂದ ಜಾಮೀನು ಪಡೆದು ಹೊರಬಂದಿದ್ದ ರಿತಿಕಾ ಮತ್ತೆ ಅದೇ ಮಾದರಿಯ ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ಹೇಳಿದರು.

ಎರಡು ಮೊಬೈಲ್ ಜಪ್ತಿ: ನಿಷೇಧಿತ ವಸ್ತುಗಳ ಬಳಕೆ ವಿರುದ್ಧ ಕಾರ್ಯಾಚರಣೆ ಬಿಗಿಗೊಳಿಸಿರುವ ಜೈಲು ಅಧಿಕಾರಿಗಳು ಅನಿರೀಕ್ಷಿತ ತಪಾಸಣೆ ವೇಳೆ ಎರಡು ಮೊಬೈಲ್ ಹಾಗೂ ಎರಡು ಸಿಮ್ ಕಾರ್ಡ್‌ಗಳು ಪತ್ತೆಯಾಗಿವೆ.

ಈ ಸಂಬಂಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿ ಜೈಲಿನಲ್ಲಿರುವ ರಿಜ್ವಾನ್ ಅಲಿ ಹಾಗೂ ಮೊಹಮ್ಮದ್ ಸಾಧಿಕ್ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾರ್ಚ್ 27ರಂದು ಸಹಾಯಕ ಅಧೀಕ್ಷಕಿ ಸುನಂದಾ ಅವರ ನೇತೃತ್ವದಲ್ಲಿ ಭದ್ರತಾ ವಿಭಾಗ-3ರಲ್ಲಿ 1ನೇ ಕೊಠಡಿಯಲ್ಲಿ ತಪಾಸಣೆ ನಡೆಸುವಾಗ ಮೊಬೈಲ್‌ಗಳು ಪತ್ತೆ ಆಗಿದ್ದವು. ಸಿಬ್ಬಂದಿ ಮಹೇಶ್ ನಾಯಕ್ ಅವರು ವಶಕ್ಕೆ ಪಡೆಯಲು ಮುಂದಾದಾಗ ಆರೋಪಿಗಳು ಏರುಧ್ವನಿಯಲ್ಲಿ ಮಾತನಾಡಿದ್ದಾರೆ.

'ಮನೆಗೆ ಹೋಗಲ್ಲ. ಸ್ಮಶಾನಕ್ಕೆ ಕಳುಹಿಸುವುದಾಗಿ ಕೈದಿಗಳು ಜೀವ ಬೆದರಿಕೆ ಹಾಕಿದ್ದಾರೆ' ಎಂದು ಕಾರಾಗೃಹದ ಪ್ರಭಾರ ಅಧೀಕ್ಷಕ ಶಿವಾನಂದ ಶಿವಪುರ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಐಪಿಎಲ್: ಬಾಲಕರನ್ನು ಕಳುಹಿಸಿ ಮೊಬೈಲ್ ಕಳ್ಳತನ?



ಬೆಂಗಳೂರು: ಆರ್‌ಸಿಬಿ ಮತ್ತು ಎಸ್‌ಆರ್‌ಎಚ್ ತಂಡಗಳ ನಡುವೆ ಮಾರ್ಚ್ 28ರಂದು ನಗರದ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದ ವೇಳೆ ಪ್ರೇಕ್ಷಕರ 50ಕ್ಕೂ ಹೆಚ್ಚು ಮೊಬೈಲ್‌ಗಳು ಕಳ್ಳತನವಾಗಿವೆ.

ಕ್ರೀಡಾಂಗಣದ ಪಿ-3 ಸ್ಟ್ಯಾಂಡ್‌ನಲ್ಲೇ ಹೆಚ್ಚಿನ ಮೊಬೈಲ್‌ಗಳು ಕಳ್ಳತನವಾಗಿವೆ ಎಂದು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ. ಪ್ರವೇಶದ್ವಾರ ಹಾಗೂ ಸ್ಟ್ಯಾಂಡ್ ಬಳಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಬಾಲಕರಿಗೆ ಐಪಿಎಲ್ ಟಿಕೆಟ್ ಕೊಟ್ಟು ಪಂದ್ಯ ವೀಕ್ಷಣೆಗೆ ಕಳುಹಿಸಲಾಗಿದೆ. ಅವರೇ ಕೃತ್ಯ ಎಸಗಿರುವ ಅನುಮಾನವಿದೆ. ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಪಂದ್ಯದ ಮೊದಲ ಇನಿಂಗ್ಸ್ ವೇಳೆ ಪತಿ ನೀರು ತರಲು ಹೋಗಿದ್ದರು. ಆಗ ಅವರ ಫೋನ್ ಕಳ್ಳತನವಾಗಿದೆ. ನಮ್ಮಂತೆಯೇ ಹಲವರು ಅದೇ ಸಮಯದಲ್ಲಿ ತಮ್ಮ ಫೋನ್ ಕಳೆದುಕೊಂಡಿದ್ದಾರೆ' ಎಂದು ಮಹಿಳೆಯೊಬ್ಬರು 'ಎಕ್ಸ್' ಖಾತೆಯಲ್ಲಿ ವಿಡಿಯೊ ಹಾಕಿದ್ದಾರೆ.

'ಮಾರ್ಚ್ 28ರಂದು ಕ್ರೀಡಾಂಗಣದಲ್ಲಿ ದೊಡ್ಡಮಟ್ಟದ ಭದ್ರತೆ ಇತ್ತು. ಅದರ ನಡುವೆಯೂ ಮೊಬೈಲ್‌ಗಳನ್ನು ಕಳ್ಳತನ ಮಾಡಲಾಗಿದೆ. ಮೊಬೈಲ್ ಕಳ್ಳತನದ ಹಿಂದೆ ದೊಡ್ಡ ಜಾಲವೇ ಇದೆ' ಎಂದು ಪ್ರೇಕ್ಷಕರು ಆರೋಪಿಸಿದರು.

ಪಂದ್ಯ ಮುಗಿದ ಬಳಿಕವೂ ಕ್ರಿಕೆಟ್ ಪ್ರೇಮಿಗಳು ಹೊರಗೆ ಬರುವ ವೇಳೆ ಕಳ್ಳರು ಮೊಬೈಲ್ ಹಾಗೂ ಪರ್ಸ್‌ಗಳನ್ನು ಕಳವು ಮಾಡಿದ್ದಾರೆ. ಗೇಟ್ ನಂ. 1, 2 ಮತ್ತು 3ರಲ್ಲಿ ಅತಿ ಹೆಚ್ಚು ಕಳ್ಳತನವಾಗಿದೆ. ಠಾಣೆಯಲ್ಲಿ 8 ಮಂದಿ ದೂರು ಸಲ್ಲಿಸಿದ್ದು, ಇ-ಲಾಸ್ಟ್‌ನಲ್ಲಿ 12ಕ್ಕೂ ಹೆಚ್ಚು ದೂರು ಸಲ್ಲಿಕೆಯಾಗಿದೆ.

ಸಂಚಾರ ನಿಯಮ ಉಲ್ಲಂಘನೆ: 985 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯಪಾನ ಮಾಡಿ ವಾಹನ ಚಾಲನೆ ಹಾಗೂ ಅತಿ ವೇಗದಿಂದ ವಾಹನ ಚಲಾಯಿಸುವವರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸುತ್ತಿರುವ ನಗರ ಸಂಚಾರ ವಿಭಾಗದ ಪೊಲೀಸರು, ಏಳು ದಿನದಲ್ಲಿ ಒಟ್ಟು 985 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಮಾರ್ಚ್ 23ರಿಂದ 29ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು. ಈ ಅವಧಿಯಲ್ಲಿ ವಿವಿಧ ಮಾದರಿಯ 42,642 ವಾಹನಗಳನ್ನು ತಪಾಸಣೆ ನಡೆಸಿ, ಮದ್ಯ ಸೇವಿಸಿ ವಾಹನ ಚಾಲನೆ ಮಾಡಿದ್ದ 616 ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

ಇದೇ ಅವಧಿಯಲ್ಲಿ ಅತಿವೇಗದಿಂದ ವಾಹನ ಚಲಾಯಿಸುವವರ ವಿರುದ್ಧವೂ ಕಾರ್ಯಾಚರಣೆ ನಡೆಸಲಾಯಿತು. ಅತಿವೇಗದಿಂದ ವಾಹನ ಚಾಲನೆ ಮಾಡಿ, ಸಂಚಾರ ನಿಯಮ ಉಲ್ಲಂಘಿಸಿದ 279 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿ ₹2.80 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಅಪಘಾತ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವ, ಅತಿವೇಗದಿಂದ ವಾಹನ ಚಾಲನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಸಂಚಾರ ಪೊಲೀಸರು ಹೇಳಿದರು.

ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆಯಲ್ಲಿ ಸಿಮೆಂಟ್ ಮಿಕ್ಸರ್ ವಾಹನ ಹಾಗೂ ಬೈಕ್ ನಡುವೆ ಸೋಮವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ದೊಡ್ಡಬಳ್ಳಾಪುರ ರಾಜಘಟ್ಟದ ನಿವಾಸಿ ಅನಿಲ್‌ಗೌಡ (24) ಮೃತಪಟ್ಟ ಬೈಕ್ ಸವಾರ. ಅನಿಲ್‌ಗೌಡ ಅವರು ಆರ್‌ಎಂಸಿ ಯಾರ್ಡ್‌ನಲ್ಲಿ ರೈಟರ್ ಆಗಿ ಕೆಲಸ ಮಾಡುತ್ತಿದ್ದರು. ಸೋಮವಾರ ಕೆಲಸಕ್ಕೆಂದು ಹೆಬ್ಬಾಳ ಮೇಲ್ಸೇತುವೆಯಲ್ಲಿ ಬೈಕ್‌ನಲ್ಲಿ ಹೋಗುತ್ತಿದ್ದರು. ಬ್ಯಾಟರಾಯನಪುರದ ಬಳಿ, ಮುಂದೆ ಸಾಗುತ್ತಿದ್ದ ಸಿಮೆಂಟ್ ಮಿಕ್ಸರ್ ವಾಹನಕ್ಕೆ ನಿಯಂತ್ರಣ ತಪ್ಪಿ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದರು. ಅನಿಲ್‌ಗೌಡ ಅವರನ್ನು ತಕ್ಷಣವೇ ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು. ಹೆಬ್ಬಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ತವ್ಯ ಲೋಪ: ಎಎಸ್‌ಐ ಸೇರಿ ಮೂವರ ಅಮಾನತು

ಬೆಂಗಳೂರು: ಕರ್ತವ್ಯಲೋಪದ ಆರೋಪದಡಿ ಹೈಗ್ರೌಂಡ್ ಸಂಚಾರ ಪೊಲೀಸ್ ಠಾಣೆಯ ಎಎಸ್‌ಐ ಸೇರಿದಂತೆ ಮೂವರನ್ನು ಅಮಾನತು ಮಾಡಲಾಗಿದೆ.

ಠಾಣೆಯ ಎಎಸ್‌ಐ ಜಿ.ಸುರೇಶ್, ಕಾನ್‌ಸ್ಟೆಬಲ್‌ಗಳಾದ ಪ್ರಶಾಂತ್ ಹಾಗೂ ಸಾದಿಕ್ ಪಾಷಾ ಅವರನ್ನು ಅಮಾನತು ಮಾಡಿ ಪಶ್ಚಿಮ (ಸಂಚಾರ) ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಆದೇಶ ಹೊರಡಿಸಿದ್ದಾರೆ.

ಕಾನೂನು ಸುವ್ಯವಸ್ಥೆ, ಮೇಲ್ವಿಚಾರಣೆ ದೃಷ್ಟಿಯಿಂದ ಕರ್ತವ್ಯನಿರತ ಪೊಲೀಸ್ ಸಿಬ್ಬಂದಿ ಬಾಡಿವೋರ್ನ್ ಕ್ಯಾಮರಾ ಬಳಸುವುದು ಕಡ್ಡಾಯ. ಆದರೆ, ಮೂವರು ಬಾಡಿವೋರ್ನ್ ಕ್ಯಾಮರಾ ಆಫ್ ಮಾಡಿಕೊಂಡು ದ್ವಿಚಕ್ರ ವಾಹನಗಳನ್ನು ತಡೆದು ಹಣ ವಸೂಲಿ ಮಾಡುತ್ತಿದ್ದರು ಎಂದು ನಾಗರಿಕರು ದೂರಿದ್ದರು' ಎಂದು ಪೊಲೀಸರು ಹೇಳಿದರು.

'ದೂರುಗಳ ಆಧಾರದಲ್ಲಿ ಆಂತರಿಕ ತನಿಖೆಗೆ ಆದೇಶಿಸಲಾಗಿತ್ತು. ತನಿಖೆ ವೇಳೆ ಈ ಮೂವರು ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿದೆ' ಎಂದು ತಿಳಿಸಿದರು.

ಬಾಡಿಗೆದಾರರು, ಮನೆ ಮಾಲೀಕರ ಹೊಡೆದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಡಿಹಳ್ಳಿಯ ಮನೆಯೊಂದರಲ್ಲಿ ಬಾಡಿಗೆ ಹೆಚ್ಚಳದ ವಿಚಾರವಾಗಿ ನಡೆದ ಗಲಾಟೆಯ ಸಂಬಂಧ ಜೀವನ್‌ಬಿಮಾ ನಗರ ಪೊಲೀಸ್ ಠಾಣೆಯಲ್ಲಿ ದೂರು-ಪ್ರತಿದೂರು ದಾಖಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮನೆಯ ಮಾಲೀಕರಾದ ಶೋಭಾ-ದೇವರಾಜ್ ಹಾಗೂ ಬಾಡಿಗೆದಾರರಾದ ಉತ್ತರ ಪ್ರದೇಶದ ನರೇಶ್, ಸಚಿನ್ ಹಾಗೂ ಅವರ ಸಹೋದರಿ ರೇಖಾ ವಿರುದ್ಧ ಪ್ರಕರಣ ದಾಖಲಾಗಿದೆ.

'ಸೌಟು, ಚಾಕು ಹಿಡಿದು ಪರಸ್ಪರ ಹೊಡೆದಾಟ ಮಾಡಿಕೊಂಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಬಾಡಿಗೆದಾರರು ಮನೆಗೆ ಬಂದ ವಾರಕ್ಕೇ ಬಾಡಿಗೆ ಹೆಚ್ಚಳ ಮಾಡುವುದಾಗಿ ಹೇಳಿದ್ದು, ಮುಂಗಡವಾಗಿ ಬಾಡಿಗೆ ನೀಡುವಂತೆ ಕೇಳಿದ್ದು ಗಲಾಟೆಗೆ ಕಾರಣವಾಗಿದೆ' ಎಂದು ಪೊಲೀಸರು ಹೇಳಿದರು.

'ಉತ್ತರ ಪ್ರದೇಶದ ನರೇಶ್, ಸಚಿನ್ ಮತ್ತು ರೇಖಾ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಬಾಡಿಗೆ ಮನೆಯ ಹುಡುಕಾಟದಲ್ಲಿ ಇದ್ದರು. ಶೋಭಾ, ದೇವರಾಜ್ ಅವರ ಕಟ್ಟಡದ ಎರಡನೇ ಮಹಡಿಯಲ್ಲಿ ಒಂದು ಮಲಗುವ ಕೋಣೆಯುಳ್ಳ ಮನೆ ಸಿಕ್ಕಿತ್ತು. ಪ್ರತಿ ತಿಂಗಳು ₹8 ಸಾವಿರ ಬಾಡಿಗೆಗೆ ಒಪ್ಪಂದ ಆಗಿತ್ತು' ಎಂದು ಪೊಲೀಸರು ಹೇಳಿದರು.

ಎಲ್‌ಪಿಜಿ ದರ ಹೆಚ್ಚಾಗಿದೆ ಎಂದು ಹೇಳಿ ಕಿರುಕುಳ?

'ಮನೆಗೆ ಬಂದು ಒಂದು ವಾರ ಆಗಿತ್ತು. ಅಷ್ಟರಲ್ಲಿಯೇ ಕಿರುಕುಳ ನೀಡಲು ಆರಂಭಿಸಿದ್ದರು. ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಾಗಿದೆ. ₹10 ಸಾವಿರ ಬಾಡಿಗೆ ನೀಡಬೇಕೆಂದು ಒತ್ತಾಯಿಸಿದ್ದರು. ಮನೆಗೆ ಬಂದು ಒಂದು ವಾರ ಅಷ್ಟೇ ಆಗಿದೆ. ಈಗಲೇ ಬಾಡಿಗೆ ಹೆಚ್ಚು ಮಾಡುವುದು ಯಾವ ನ್ಯಾಯ ಎಂದು ಪ್ರಶ್ನಿಸಿದ್ದೆವು. ಆಗ ಮನೆ ಖಾಲಿ ಮಾಡುವಂತೆ ಬೆದರಿಕೆ ಹಾಕಿದ್ದರು. ಅದಾದ ಮೇಲೆ 15 ದಿನ ಸಮಯ ಕೇಳಿದ್ದೆವು' ಎಂದು ಬಾಡಿಗೆದಾರರು ದೂರಿದರು.

'ಬಾಡಿಗೆದಾರರು ಸಮಯ ಕೇಳಿದ್ದಕ್ಕೆ ಮನೆಯ ಮಾಲೀಕರು ಒಪ್ಪಿಗೆ ನೀಡಲಿಲ್ಲ. ಆ ವಿಚಾರವಾಗಿ ಬಾಡಿಗೆದಾರರು ಮತ್ತು ಮಾಲೀಕರ ಮಧ್ಯೆ ಗಲಾಟೆ ಆಗಿತ್ತು. ಶೋಭಾ ಹಾಗೂ ರೇಖಾ ಜುಟ್ಟು ಹಿಡಿದುಕೊಂಡು ಹೊಡೆದಾಟ ಮಾಡಿಕೊಂಡಿದ್ದಾರೆ. ಅಲ್ಲದೇ ಮನೆಯ ಮಾಲೀಕರು, ಪರಿಚಯಸ್ಥರನ್ನೂ ಕರೆಸಿ ಹಲ್ಲೆ ನಡೆಸಿದ್ದಾರೆ ಎಂದೂ ದೂರು ನೀಡಲಾಗಿದೆ. ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

'ಬಾಡಿಗೆದಾರರು ಆಧಾರ್ ಕಾರ್ಡ್ ಕೊಟ್ಟಿರಲಿಲ್ಲ. ಐದು ದಿನ ಕಳೆದರೂ ಒಪ್ಪಂದದ ಪತ್ರ ಮಾಡಿಸಿರಲಿಲ್ಲ. ಅನುಮಾನ ಬಂದು ಮನೆ ಖಾಲಿ ಮಾಡುವಂತೆ ಕೇಳಿದ್ದೆವು. ಆಗ ನಮ್ಮ ಮೇಲೆ ಹಲ್ಲೆ ನಡೆಸಿದ್ದರು' ಎಂದು ಮನೆಯ ಮಾಲೀಕರು ಹೇಳಿದರು.

ಏಳು ಮಂದಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯನ್ನು ಗುಂಡಿಕ್ಕಿ ಕೊಲೆ ಮಾಡಿದ್ದ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಮಾಗಡಿ ಠಾಣೆ ಪೊಲೀಸರು, ಏಳು ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ 495 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

2025ರ ಡಿ.23ರಂದು ಪತ್ನಿ ಭುವನೇಶ್ವರಿ (39) ಅವರ ಕೊಲೆ ಮಾಡಿದ್ದ ಆರೋಪದಡಿ ಪತಿ, ತಮಿಳುನಾಡಿನ ಸೆಲ್ವ ಬಾಲಮುರುಗನ್, ಸಹಚರರಾದ ಅಭಿಮನ್ಯು ಸಿಂಗ್, ಮೌಲೇಶ್ ಕುಮಾರ್, ಪೆರಿಯಾಸ್ವಾಮಿ ಅವರನ್ನು ಮಾಗಡಿ ಠಾಣೆಯ ಪೊಲೀಸರು ಬಂಧಿಸಿದ್ದರು. ಈ ಪ್ರಕರಣದಲ್ಲಿ ರಾಹುಲ್, ಹರೀಶ್ ಮತ್ತು ಸೂರ್ಯ ತಲೆಮರೆಸಿಕೊಂಡಿದ್ದಾರೆ. ಈ ಎಲ್ಲಾ ಆರೋಪಿಗಳ ವಿರುದ್ಧ 24ನೇ ಎಸಿಎಂಎಂ ನ್ಯಾಯಾಲಯಕ್ಕೆ ತನಿಖಾಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಕೊಲೆಯಾದ ಭುವನೇಶ್ವರಿ ಅವರು ಬ್ಯಾಂಕ್‌ವೊಂದರಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ವೈಟ್‌ಫೀಲ್ಡ್ ಬಳಿ ಖಾಸಗಿ ಕಂಪನಿ ಯೊಂದರಲ್ಲಿ ಟೆಕಿಯಾಗಿ ಕೆಲಸ ಮಾಡುತ್ತಿದ್ದ ಪತಿ ಬಾಲಮುರುಗನ್ 13 ವರ್ಷಗಳ ಹಿಂದೆ ಭುವನೇಶ್ವರಿ ಅವರನ್ನು ಮದುವೆ ಆಗಿದ್ದರು. ಕೌಟುಂಬಿಕ ಕಲಹದಿಂದ ಕಳೆದ ಒಂದೂವರೆ ವರ್ಷದಿಂದ ದಂಪತಿ ಪ್ರತ್ಯೇಕವಾಗಿ ವಾಸವಾಗಿದ್ದರು. ಈ ಮಧ್ಯೆ ವಿಚ್ಛೇದನ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದ ಪತ್ನಿ, ಪತಿಗೆ ನೋಟಿಸ್ ಕಳುಹಿಸಿದ್ದರು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ನಡುವೆ ಜಗಳವಾಗಿತ್ತು. ಸಂಚು ರೂಪಿಸಿ ಡಿಸೆಂಬರ್ 23ರಂದು ಪತ್ನಿಗೆ ಗುಂಡಿಕ್ಕಿ ಕೊಲೆ ಮಾಡಿದ ಬಳಿಕ ಸೆಲ್ವ ಬಾಲಮುರುಗನ್ ಠಾಣೆಗೆ ಬಂದು ಶರಣಾಗಿದ್ದರು.

ಬಿಗ್ ಬಾಸ್ಕೆಟ್ ದಾಸ್ತಾನು ಘಟಕಕ್ಕೆ ಬೆಂಕಿ

ಸರ್ಜಾಪುರ (ಆನೇಕಲ್): ತಾಲ್ಲೂಕಿನ ಸರ್ಜಾಪುರ ಸಮೀಪದ ಸೋಂಪುರ ಗೇಟ್‌ನಲ್ಲಿ ಸೋಮವಾರ ಬೆಳಿಗ್ಗೆ ಬಿಗ್ ಬಾಸ್ಕೆಟ್ ಇ-ಕಾಮರ್ಸ್ ಸಂಸ್ಥೆಯ ದಾಸ್ತಾನು ಘಟಕದಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿದೆ.

ಕಟ್ಟಡದ ಸುತ್ತಮುತ್ತ ದಟ್ಟವಾದ ಹೊಗೆ ಆವರಿಸಿತ್ತು. ಘಟಕದಲ್ಲಿ ಬೆಂಕಿ ಕಾಣಿಸಿಕೊಂಡ ತಕ್ಷಣ ಸಿಬ್ಬಂದಿ ಹೊರಗೆ ಓಡಿ ಬಂದು ಪ್ರಾಣ ಉಳಿಸಿಕೊಂಡರು.

ಕಟ್ಟಡದಲ್ಲಿ ನಿಲ್ಲಿಸಿದ್ದ ಕಾರು, ಬೈಕ್ ಹಾಗೂ ಇತರ ವಾಹನಗಳು ಭಾಗಶಃ ಸುಟ್ಟು ಹೋಗಿವೆ. ₹6 ಲಕ್ಷಕ್ಕೂ ಹೆಚ್ಚು ಮೌಲ್ಯದ ವಿವಿಧ ವಸ್ತುಗಳು ಭಸ್ಮವಾಗಿವೆ. ಅಗ್ನಿಶಾಮಕ ದಳದ ಸಿಬ್ಬಂದಿ ಮೂರು ತಾಸಿಗೂ ಹೆಚ್ಚು ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಿದರು.

ಶಂಕರ ಕ್ಯಾನ್ಸರ್ ಆಸ್ಪತ್ರೆಗೆ ದೇಣಿಗೆ

ಪ್ರಜಾವಾಣಿ ವಾರ್ತೆ

ಎಲ್‌ಐಸಿಯ ಗೋಲ್ಡನ್ ಜ್ಯೂಬಿಲಿ ಫೌಂಡೇಷನ್‌ನಿಂದ ಶ್ರೀ ಶಂಕರ ಕ್ಯಾನ್ಸರ್ ಫೌಂಡೇಷನ್‌ಗೆ ಆತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ದೇಣಿಗೆ ನೀಡಲಾಯಿತು. ಆರ್‌ ದೊರೆಸ್ವಾಮಿ, ಡಾ. ಬಿ.ಎಸ್‌.ಶ್ರೀನಾಥ್, ಪುನೀತ್ ಕುಮಾರ್ ಇದ್ದಾರೆ

ಬೆಂಗಳೂರು: ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಲ್‌ಐಸಿ) ಸಂಸ್ಥೆಯ ಗೋಲ್ಡನ್ ಜ್ಯೂಬಿಲಿ ಫೌಂಡೇಷನ್ ವತಿಯಿಂದ ಕ್ಯಾನ್ಸರ್ ಚಿಕಿತ್ಸಾ ಕೇಂದ್ರವಾದ ಶ್ರೀ ಶಂಕರ ಕ್ಯಾನ್ಸರ್ ಫೌಂಡೇಷನ್‌ಗೆ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ದೇಣಿಗೆ ನೀಡಲಾಗಿದೆ.

ಸುಮಾರು ₹4.31 ಕೋಟಿ ಮೌಲ್ಯದ 64-ಸ್ಲೈಸ್ ಸಿಟಿ ಸ್ಕ್ಯಾನ್ ಯಂತ್ರ ಹಾಗೂ ಹಾರ್ಟ್-ಲಂಗ್ ಮಷಿನ್ ಅನ್ನು ಆಸ್ಪತ್ರೆಗೆ ಹಸ್ತಾಂತರಿಸಲಾಯಿತು. ಈ ಉಪಕರಣಗಳು ಕ್ಯಾನ್ಸರ್ ರೋಗಿಗಳ ತಪಾಸಣೆ ಮತ್ತು ಚಿಕಿತ್ಸೆಯಲ್ಲಿ ನೆರವಾಗಲಿದ್ದು, ಬೆಂಗಳೂರು ಹಾಗೂ ರಾಜ್ಯದ ವಿವಿಧ ಭಾಗಗಳಿಂದ ಬರುವ ಸಾವಿರಾರು ರೋಗಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ.

ಎಲ್‌ಐಸಿಯ ಸಿಇಒ, ವ್ಯವಸ್ಥಾಪಕ ನಿರ್ದೇಶಕ ಆರ್. ದೊರೆಸ್ವಾಮಿ ಮಾತನಾಡಿ, 'ಸಮಾಜಕ್ಕೆ ಉಪಕಾರವಾಗುವ ಸಂಸ್ಥೆಗಳೊಂದಿಗೆ ಕೈಜೋಡಿಸುವುದು ಎಲ್‌ಐಸಿ ಗೋಲ್ಡನ್ ಜ್ಯೂಬಿಲಿ ಫೌಂಡೇಷನ್‌ನ ಮುಖ್ಯ ಉದ್ದೇಶವಾಗಿದೆ. ಈ ಆಸ್ಪತ್ರೆ ಕಡಿಮೆ ವೆಚ್ಚದಲ್ಲಿ ಮತ್ತು ಉಚಿತವಾಗಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವುದು ಶ್ಲಾಘನೀಯ. ಈ ದೇಣಿಗೆಯಿಂದ ಇನ್ನಷ್ಟು ಜನರಿಗೆ ಗುಣಮಟ್ಟದ ಚಿಕಿತ್ಸೆ ಸಿಗಲಿದೆ' ಎಂದರು.

ಶ್ರೀ ಶಂಕರ ಕ್ಯಾನ್ಸರ್ ಆಸ್ಪತ್ರೆ ಪರವಾಗಿ ಮಾತನಾಡಿದ ಡಾ. ಬಿ. ಎಸ್. ಶ್ರೀನಾಥ್, 'ಯಂತ್ರಗಳ ದೇಣಿಗೆಯಿಂದ ಚಿಕಿತ್ಸಾ ಸಾಮರ್ಥ್ಯ ಬಹಳಷ್ಟು ವೃದ್ಧಿಯಾಗಲಿದೆ. ಸಾವಿರಾರು ರೋಗಿಗಳಿಗೆ ನೇರ ಪ್ರಯೋಜನವಾಗಲಿದೆ' ಎಂದರು.

ಎಲ್‌ಐಸಿಯ ಹಿರಿಯ ಅಧಿಕಾರಿಗಳಾದ ಪುನೀತ್ ಕುಮಾರ್, ಆಶಿಶ್ ಕುಮಾರ್, ಪರಸ್‌ನಾಥ್ ಹಾಜರಿದ್ದರು.

ಮೆಟ್ರೊ ರೈಲಿನಲ್ಲಿ 22 ಸಾವಿರ ಮಂದಿ ಪ್ರಯಾಣ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯವನ್ನು ವೀಕ್ಷಿಸಲು ಟಿಕೆಟ್ ಪಡೆದಿದ್ದವರಲ್ಲಿ 22 ಸಾವಿರ ಜನರು ನಮ್ಮ ಮೆಟ್ರೊದಲ್ಲಿ ಸಂಚರಿಸಿದ್ದಾರೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಐಪಿಎಲ್ ಟಿಕೆಟ್‌ನಲ್ಲಿ ಮೆಟ್ರೊ ಕ್ಯೂಆರ್ ಕೋಡ್‌ಗಳನ್ನು ಅಳವಡಿಸಲಾಗಿತ್ತು. ಪ್ರೇಕ್ಷಕರು ಯಾವುದೇ ಮೆಟ್ರೊ ನಿಲ್ದಾಣದಿಂದ ಕಬ್ಬನ್ ಪಾರ್ಕ್ ಹಾಗೂ ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದವರೆಗೆ ಉಚಿತವಾಗಿ ಪ್ರಯಾಣ ಮಾಡಲು, ಪಂದ್ಯ ನಂತರ ವಾಪಸ್ಸಾಗಲು ಅವಕಾಶ ಕಲ್ಪಿಸಲಾಗಿತ್ತು.

ಶನಿವಾರ ರಾತ್ರಿ 11.05ರಿಂದ ಸುಮಾರು 50 ನಿಮಿಷಗಳಲ್ಲಿ 22 ಸಾವಿರಕ್ಕೂ ಅಧಿಕ ಮಂದಿ ಪ್ರಯಾಣಿಸಿದ್ದರು. ಪಂದ್ಯ ಮುಗಿಯುವ ಮೊದಲು ರೈಲುಗಳನ್ನು ಎರಡೂ ದಿಕ್ಕುಗಳಲ್ಲಿ ಸಿದ್ಧಪಡಿಸಿ, ನಂತರ ಮೂರು ನಿಮಿಷಗಳ ಅಂತರದಲ್ಲಿ ಸಂಚಾರ ಒದಗಿಸಲಾಯಿತು.

ಈ ಅವಧಿಯಲ್ಲಿ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದಿಂದ ಮೆಜೆಸ್ಟಿಕ್ ಕಡೆಗೆ 13 ರೈಲುಗಳು ಹಾಗೂ ವೈಟ್‌ಫೀಲ್ಡ್ ಕಡೆಗೆ 9 ರೈಲುಗಳು ಸಂಚರಿಸಿದವು. ಒಟ್ಟು 39 ರೌಂಡ್ ಟ್ರಿಪ್‌ಗಳನ್ನು ನಡೆಸಲಾಗಿದ್ದು, ಅವುಗಳಲ್ಲಿ ನೇರಳೆ ಮಾರ್ಗದಲ್ಲಿ 18, ಹಸಿರು ಮಾರ್ಗದಲ್ಲಿ 15 ಮತ್ತು ಹಳದಿ ಮಾರ್ಗದಲ್ಲಿ 6 ಟ್ರಿಪ್ ನಡೆಸಲಾಯಿತು.

ಬೆಂಗಳೂರು ನಗರ ಪೊಲೀಸರು ಮತ್ತು ಬಿಎಂಆರ್‌ಸಿಎಲ್ ಸಿಬ್ಬಂದಿಯಿಂದ ಪಡೆದ ಪ್ರತಿಕ್ರಿಯೆಗಳ ಆಧಾರದ ಮೇಲೆ, ಮುಂದಿನ ಪಂದ್ಯಗಳಿಗೆ ಹೆಚ್ಚಿನ ಸೌಲಭ್ಯಗಳು ಮತ್ತು ಕ್ರಮಗಳನ್ನು ಇನ್ನಷ್ಟು ಬಲಪಡಿಸಲು ನಿರ್ಧರಿಸಲಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ಪ್ರೇಕ್ಷಕರು ಮುಂದಿನ ಐಪಿಎಲ್ ಪಂದ್ಯಗಳ ವೀಕ್ಷಣೆಗೆ ತೆರಳಲು ಮೆಟ್ರೊ ಬಳಸಬೇಕು. ಸಮೀಪದ ಮೆಟ್ರೊ ನಿಲ್ದಾಣಗಳಲ್ಲಿ ವಾಹನಗಳನ್ನು ನಿಲ್ಲಿಸಿ ಸುಗಮ, ಸುರಕ್ಷಿತ ಪ್ರಯಾಣವನ್ನು ಆಯ್ಕೆ ಮಾಡಿಕೊಳ್ಳಬೇಕು. ಬಿಐಇಸಿ, ಕರ್ನಾಟಕ ಟ್ರೇಡ್ ಪ್ರಮೋಶನ್ ಆರ್ಗನೈಜೇಶನ್, ವೈಟ್‌ಫೀಲ್ಡ್ ಮುಂತಾದ ಸ್ಥಳಗಳಲ್ಲಿ ನಡೆಯುವ ಸಾರ್ವಜನಿಕ ಕಾರ್ಯಕ್ರಮಗಳಿಗೂ ಮೆಟ್ರೊ ಬಳಸುವಂತೆ ಮನವಿ ಮಾಡಿದರು.

ನಯೀಮ್– ರಾಯನ್ ಮಿಂಚು; ಆ್ಯಷ್ಕೊ ತಂಡಕ್ಕೆ ಜಯ

ಬೆಂಗಳೂರು: ನಯೀಮ್ ಹಾಗೂ ರಾಯನ್ ಅವರ ಹ್ಯಾಟ್ರಿಕ್ ಗೋಲುಗಳ ಬಲದಿಂದ ಆ್ಯಷ್ಕೊ ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ 'ಬಿ' ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಸೋಮವಾರ 14–0ಯಿಂದ ಧಾರವಾಡದ ಮೇಜರ್ ಧ್ಯಾನ್‌ಚಂದ್ ಕ್ಲಬ್ ತಂಡದ ವಿರುದ್ಧ ಏಕಪಕ್ಷೀಯ ಗೆಲುವು ಸಾಧಿಸಿತು.

ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ (ಕೆಎಸ್‌ಎಚ್‌ಎ) ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಆ್ಯಷ್ಕೊ ತಂಡದ ಆಟಗಾರರು ಗೋಲುಗಳ ಮಳೆಗರೆದರು. ನಯೀಮ್ (2ನೇ, 49ನೇ, 55ನೇ ಹಾಗೂ 56ನೇ ನಿ.) ನಾಲ್ಕು ಗೋಲು ಹೊಡೆದರೆ ರಾಯನ್ (31ನೇ, 35ನೇ ಹಾಗೂ 45ನೇ ನಿ.) ಮೂರು ಗೋಲು ದಾಖಲಿಸಿದರು. ಸುಂದರ್ ರಾಜ್ (12ನೇ ಹಾಗೂ 14ನೇ ನಿ.) ಮತ್ತು ಗೋವಿಂದ್ (26ನೇ ಹಾಗೂ 54ನೇ ನಿ.) ತಲಾ ಎರಡು ಗೋಲು ಗಳಿಸಿದರು. ಜಾನ್ ಬಾಸ್ಕೊ (6ನೇ ನಿ.), ಶ್ಯಾಮ್ (16ನೇ ನಿ.) ಮತ್ತು ಶ್ರೀಧರ್ (28ನೇ ನಿ.) ತಲಾ ಒಮ್ಮೆ ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿದರು.

ರಕ್ಷಣಾ ಸಚಿವಾಲಯ
(ಡಿಆರ್‌ಡಿಒ)
ನೌಕಾ ಸಾಮಗ್ರಿಗಳ ಸಂಶೋಧನಾ ಪ್ರಯೋಗಾಲಯ
ಶಿಲ್ ಬದ್ಲಾಪುರ ರಸ್ತೆ, ಆನಂದನಗರ ಅಂಚೆ ಕಛೇರಿ
ಅಂಬರ್‌ನಾಥ್–421 506. ಥಾಣೆ ಜಿಲ್ಲೆ
(ದೂರವಾಣಿ: 0251 2623039, 079/ಫ್ಯಾಕ್ಸ್ 0251 2623004)

ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ನೌಕಾ ಸಾಮಗ್ರಿಗಳ ಸಂಶೋಧನಾ ಪ್ರಯೋಗಾಲಯದ ಹೆಚ್ಚುವರಿ ನಿರ್ದೇಶಕರು, ಅಂಬರ್‌ನಾಥ್ ಇವರು, ಕೆಳಕಂಡ ಸಾಮಗ್ರಿಗಳ ಖರೀದಿಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಉಲ್ಲೆಖ ಸಂಖ್ಯೆ	ಸಾಮಗ್ರಿಯ ನಾಮೆನ್‌ಕ್ಲೇಚರ್
1	ದಿನಾಂಕ 16ನೇ ಮಾರ್ಚ್ 2026ರ NMRL/ MMG/ 0401/04/EOI/CEC/ 153/2025-2026	ಇಂಪ್ರೆಸ್ಡ್ ಕರಂಟ್ ಕ್ಯಾಥೊಡಿಕ್ ಪ್ರೊಟೆಕ್ಷನ್ (ಐಸಿಸಿಪಿ) ಮತ್ತು ರೆಫರೆನ್ಸ್ ಇಲೆಕ್ಟ್ರೋಡ್ (ಆರ್‌ಇ) ಸಿಸ್ಟಮ್‌ಗಳ ಆರೋಗ್ಯ ಮೇಲ್ವಿಚಾರಣೆಯ ಜೊತೆಗೆ ಸಮನಾದ ಶಿಪ್ ಹಲ್ ಪೊಟೆನ್ಷಿಯಲ್ ವಿತರಣೆಯನ್ನು ಸಾಧಿಸುವುದಕ್ಕಾಗಿ ಮೇಧಾವಿ ತಂತ್ರಾಂಶ ಅಭಿವೃದ್ಧಿ

1. ಪೀಠಿಕೆ:

1.1 ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಅಡಿಯಲ್ಲಿನ ಒಂದು ಪ್ರೀಮಿಯರ್ ಪ್ರಯೋಗಾಲಯ ಆಗಿರುವ ನೌಕಾ ಸಾಮಗ್ರಿಗಳ ಸಂಶೋಧನಾ ಪ್ರಯೋಗಾಲಯ, ಅಂಬರ್‌ರನಾಥ್ ಸಂಸ್ಥೆಯ ನಿರ್ದೇಶಕರು, ಭಾರತದ ರಾಷ್ಟ್ರಪತಿಗಳ ಪರವಾಗಿ, ಕ್ಯಾಥೊಡಿಕ್ ಪ್ರೊಟೆಕ್ಷನ್ ಅಡಿಯಲ್ಲಿ ಐಸೊ–ಪೊಟೆನ್ಷಿಯಲ್ ಶಿಪ್ ಹಲ್ ಸಾಧಿಸುವುದಕ್ಕಾಗಿ ಒಂದು ಮೇಧಾವಿ ತಂತ್ರಾಂಶ ಅಭಿವೃದ್ಧಿಪಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವುದಕ್ಕಾಗಿ, ಸಾಕಷ್ಟು ಅನುಭವವುಳ್ಳ, ಪ್ರಾವಿಣ್ಯತೆಯುಳ್ಳ ಮತ್ತು ಸಾಮರ್ಥ್ಯವುಳ್ಳ ಭಾರತೀಯ ಕೈಗಾರಿಕೆಗಳನ್ನು ಆಸಕ್ತಿ ವ್ಯಕ್ತಪಡಿಸಲು ಆಹ್ವಾನಿಸಿದ್ದಾರೆ.

1.2 ಇಒಐ'ನ ಸಂಕ್ಷಿಪ್ತ ಪರಿಚಯ: ಐಸೊ–ಪೊಟೆನ್ಷಿಯಲ್ ಶಿಪ್ ಹಲ್ ಸಾಧನೆಗಾಗಿ ಒಂದು ಮೇಧಾವಿ ತಂತ್ರಾಂಶ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಒಬ್ಬ ಅಭಿವೃದ್ಧಿ ಪಾಲುದಾರರ ಅಗತ್ಯವಿರುತ್ತದೆ.

1.3 ಇದೇ ತರಹದ ಅಥವಾ ಇದೇ ರೀತಿಯ ಗುತ್ತಿಗೆಗಳನ್ನು ಯಶಸ್ವಿಯಾಗಿ ಪೂರೈಸಿರುವ ದಾಖಲೆಯುಳ್ಳ ಮತ್ತು ಆಳವಾದ ಜ್ಞಾನ ಹೊಂದಿರುವ, ತಾಂತ್ರಿಕವಾಗಿ ಸೂಕ್ತವಾಗಿರುವ ಮತ್ತು ಸಮರ್ಥವಾಗಿರುವ ಅರ್ಜಿದಾರರನ್ನು ಪಟ್ಟಿ ಮಾಡುವ ಉದ್ದೇಶದಿಂದ, ಸದರಿ ಇಒಐ ಆಹ್ವಾನಿಸಲಾಗಿರುತ್ತದೆ. ಅನುಬಂಧ–1 ರಲ್ಲಿ ಉಲ್ಲೇಖಿಸಲಾಗಿರುವ ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ನಿಬಂಧನೆಗೆ ಒಳಪಟ್ಟಂತೆ, ಅರ್ಜಿದಾರರ ಕಡ್ಡಾಯವಾಗಿ ಸದರಿ ಗುತ್ತಿಗೆಯನ್ನು ಪೂರೈಸಬಲ್ಲ ಸಾಮರ್ಥ್ಯ ಹೊಂದಿರತಕ್ಕದ್ದು.

ದಸ್ತಾವೇಜುಗಳು ಡೆಫ್‌ಪ್ರಾಕ್ ಪೋರ್ಟಲ್‌ನಲ್ಲಿ ಲಭ್ಯವಿರುತ್ತವೆ (defproc.gov.in)

2. ಕಾರ್ಯ ಸ್ವರೂಪ: ಇಂಪ್ರೆಸ್ಡ್ ಕರಂಟ್ ಕ್ಯಾಥೊಡಿಕ್ ಪ್ರೊಟೆಕ್ಷನ್ (ಐಸಿಸಿಪಿ) ಮತ್ತು ರೆಫರೆನ್ಸ್ ಇಲೆಕ್ಟ್ರೋಡ್ (ಆರ್‌ಇ) ಸಿಸ್ಟಮ್‌ಗಳ ಆರೋಗ್ಯ ಮೇಲ್ವಿಚಾರಣೆಯ ಜೊತೆಗೆ ಸಮನಾದ ಶಿಪ್ ಹಲ್ ಪೊಟೆನ್ಷಿಯಲ್ ವಿತರಣೆಯ ಸಾಧನೆಗಾಗಿ ಮೇಧಾವಿ ತಂತ್ರಾಂಶ ಅಭಿವೃದ್ಧಿಗಾಗಿ ಭಾರತೀಯ ಕೈಗಾರಿಕೆಯನ್ನು ಗುರುತಿಸುವುದು.

ಅನುಬಂಧ 2ರಲ್ಲಿ ತಿಳಿಸಿರುವಂತೆ ಕಾರ್ಯಸ್ವರೂಪ ಇರುತ್ತದೆ. ದಸ್ತಾವೇಜುಗಳು ಡೆಫ್‌ಪ್ರಾಕ್ ಪೋರ್ಟಲ್‌ನಲ್ಲಿ ಲಭ್ಯವಿರುತ್ತವೆ (defproc.gov.in). ಅರ್ಹ ಕೈಗಾರಿಕೆಗಳೊಂದಿಗೆ ಬಿಡ್ ಪೂರ್ವ ಸಭೆ ಪೂರೈಸಿದ ನಂತರ, ಅಂತಿಮ ಕಾರ್ಯ ಸ್ವರೂಪವನ್ನು ರೂಪಿಸಲಾಗುತ್ತದೆ.

3. ಈ ವಿಷಯಕ್ಕೆ ಸಂಬಂಧಿತ ಯಾವುದೇ ಮಾಹಿತಿ/ಸ್ಪಷ್ಟೀಕರಣಕ್ಕಾಗಿ ಕೆಳಗಿನವರನ್ನು ಸಂಪರ್ಕಿಸಬಹುದು:
ಡಾ. ಎ ಕೆ ಸತಪತಿ, ಎಸ್‌ಸಿ–ಎಫ್, ಎನ್‌ಎಂಆರ್‌ಎಲ್
ಡಿಆರ್‌ಡಿಒ, ರಕ್ಷಣಾ ಸಚಿವಾಲಯ,
ಎಂಐಇಡಿಸಿ, ಶಿಲ್–ಬದ್ಲಾಪುರ ರಸ್ತೆ, ಅಂಬರ್‌ನಾಥ್,
ಥಾಣೆ, ಮಹಾರಾಷ್ಟ್ರ–421506
ದೂರವಾಣಿ ಸಂ. 0251–2623158 ಇಮೇಲ್: akshayk.nmrl@gov.in, mmg.nmrl@gov.in

4. ಆಸಕ್ತಿಯುಳ್ಳ ಸಂಸ್ಥೆಗಳು, ಸದರಿ ಇಒಐ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗೆ, ಡೆಫ್‌ಪ್ರಾಕ್ ಪೋರ್ಟಲ್‌ನಲ್ಲಿ (defproc.gov.in) ಆನ್‌ಲೈನ್ ವಿಧಾನದ ಮೂಲಕ, ಕಂಪ್ಲಾಯನ್ಸ್ ಸ್ಟೇಟ್‌ಮೆಂಟ್ (ಅನುಬಂಧ–1ರಲ್ಲಿ ನಮೂನೆಯನ್ನು ಲಗತ್ತಿಸಲಾಗಿದೆ) ಸಮೇತ ತಮ್ಮ ಆಸಕ್ತಿಯನ್ನು ಅಗತ್ಯ ದಾಖಲಾತಿಗಳ ಜೊತೆಗೆ ಸಲ್ಲಿಸುವುದು. ಭಾರಿ ಗಾತ್ರದ ದಸ್ತಾವೇಜುಗಳಿದ್ದಲ್ಲಿ ಆಫ್‌ಲೈನ್ ವಿಧಾನದಲ್ಲಿ ಕೂಡ ಸಲ್ಲಿಸಬಹುದು.

ಸೂಚನೆ:

1. ದಸ್ತಾವೇಜುಗಳು ಡೆಫ್‌ಪ್ರಾಕ್ ಪೋರ್ಟಲ್‌ನಲ್ಲಿ (defproc.gov.in) ಪ್ರಕಟಿಸಲಾಗಿರುವ ದಿನಾಂಕ 16ನೇ ಮಾರ್ಚ್, 2026ರ ಎನ್‌ಎಂಆರ್‌ಎಲ್'ನ ಉಲ್ಲೇಖ ಸಂ. NMRL/MMG/0401/04/EOI/CEC/153/2025-2026 ರಲ್ಲಿ ಲಭ್ಯವಿರುತ್ತವೆ ಮತ್ತು ಸಂಬಂಧಿತ ನಮೂನೆಗಳು ದಿನಾಂಕ 16ನೇ ಮಾರ್ಚ್, 2026ರ ಎನ್‌ಎಂಆರ್‌ಎಲ್'ನ ಉಲ್ಲೇಖ ಸಂ. NMRL/MMG/0401/04/EOI/CEC/153/ 2025-2026 ಭಾಗ 1 ಮತ್ತು ಭಾಗ 2 ರಲ್ಲಿ ಲಭ್ಯವಿದ್ದು, ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವವರು ಇವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

CBC 10301/11/0184/2526

ಭಾರತ ಸರ್ಕಾರ
ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ–ಪೇಸ್),
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ–6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್, ಹರಿಯಾಣ–122050. Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ–6

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದುಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ/ಸಿ–ಪೇಸ್/ಎಸ್‌ಟಿಕೆ–2/248(2)/2025–26/2252 ದಿ:19.03.2026

ಉಲ್ಲೇಖ:

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248 ಅಡಿಯಲ್ಲಿ, ಕರ್ನಾಟಕ ರಾಜ್ಯದಲ್ಲಿರುವ ಕೆಳಕಂಡ (94) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

ಕ್ರ. ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AC2515689	U85110KA1983PTC005245	ರಿವರ್ ರೆಸಾರ್ಟ್ ಪ್ರೈವೇಟ್ ಲಿಮಿಟೆಡ್
2	AC2496006	U24119KA1979PTC003478	ನಂದಿ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್
3	AC2524283	U36102KA2002PTC031296	ಟಚ್‌ಸ್ಟೀಲ್ ಮಾಡ್ಯೂಲಾರ್ ಫರ್ನಿಚರ್ ಪ್ರೈವೇಟ್ ಲಿಮಿಟೆಡ್
4	AC2418234	U70109KA2023PTC170550	ಪ್ರಾಪೆಕ್ಸಿ ಪ್ರಾಪ್ಟೆಕ್ ಪ್ರೈವೇಟ್ ಲಿಮಿಟೆಡ್
5	AC2565094	U72200KA2017PTC107784	ಅನೊರಿಸ್ ವೆಲ್‌ನೆಸ್ ಪ್ರೈವೇಟ್ ಲಿಮಿಟೆಡ್
6	AC2458085	U72900KA2022PTC166744	ಡಿಜಿಟ್ರಾ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
7	AC2597829	U43299KA2024OPC185275	ಒಮ್‌ಲ್ಯಾಂಡ್ಸ್ ಪ್ರಾಜೆಕ್ಟ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
8	AC2591550	U62099KA2024OPC186321	ಜೆನೊವೇವ್ ಎಐ (ಒಪಿಸಿ) ಪ್ರೈವೇಟ್ ಲಿಮಿಟೆಡ್
9	AC2618283	U72900KA2022PTC162198	ಓಡೇಟ್ಕ್ಸ್ ಪ್ರೈವೇಟ್ ಲಿಮಿಟೆಡ್
10	AC2605166	U85110KA1985ULT006836	ಎಸ್.ಎಸ್. ಟೂರಿಸ್ಟ್ ಇಂಡಸ್ಟ್ರಿ ಪ್ರೈವೇಟ್ ಲಿಮಿಟೆಡ್
11	AC2632227	U80904KA2019PTC124755	ಕಾಸಾ ಇನ್ನೋವೇಟಿವ್ ಲರ್ನಿಂಗ್ ಅಕಾಡೆಮಿ ಪ್ರೈವೇಟ್ ಲಿಮಿಟೆಡ್
12	AC2622001	U86909KA2023OPC176456	ಕಾಸ್ಮಿಬ್ಲೂ ಸೋಲ್‌ಟಾಕ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
13	AC2659321	U47990KA2024PTC195204	ಕಾಶಿ ಪ್ಯಾಕೇಜಿಂಗ್ ಇಂಡಸ್ಟ್ರಿ ಪ್ರೈವೇಟ್ ಲಿಮಿಟೆಡ್
14	AC2578181	U74999KA2021PTC155321	ಎಆರ್ ನಂದಿ ಪ್ಲಂಬಿಂಗ್ ಪ್ರೈವೇಟ್ ಲಿಮಿಟೆಡ್
15	AC2418503	U72900KA2017PTC100273	3ಬೀಸ್ ಐಒ ಪ್ರೈವೇಟ್ ಲಿಮಿಟೆಡ್
16	AC2489828	U05000KA2021PTC154920	ಕ್ಲಿಯರ್‌ಶ್ರಿಂಪ್ ಪ್ರೈವೇಟ್ ಲಿಮಿಟೆಡ್
17	AC2491664	U72900KA2020PTC132054	ಅತಿಂದ್ರಿಯೊ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
18	AC2479497	U92413KA2022PTC162918	ಗೇಮಿಂಗ್ ಗ್ರೀಕ್ಸ್ ಮೀಡಿಯಾ ಅಂಡ್ ಟೆಕ್ ಪ್ರೈವೇಟ್ ಲಿಮಿಟೆಡ್
19	AC2515717	U85110KA1992PTC013639	ವೈಷ್ಣವಿ ಕಮ್ಯುನಿಕೇಶನ್ಸ್ ಪ್ರೈವೇಟ್ ಲಿಮಿಟೆಡ್
20	AC2296544	U72900KA2019PTC125353	ಆಯು ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್
21	AC2492527	U74999KA2011PTC056916	ಆಡ್‌ರೋಡ್ ಹಾಲಿಡೇಸ್ ಪ್ರೈವೇಟ್ ಲಿಮಿಟೆಡ್
22	AC2490524	U72900KA2022PTC167767	ಪಿಫಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
23	AC2485929	U74900KA2015PTC080157	ಐಬಿ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
24	AC2324952	U68100KA2022PTC156673	ನಿವಾ ಲ್ಯಾಂಡ್‌ಮಾರ್ಕ್ಸ್ ಪ್ರೈವೇಟ್ ಲಿಮಿಟೆಡ್
25	AC2320478	U10794KA2026PTC214837	ನ್ಯೂಟ್ರಿಲ್ಯಾಕ್ಟಾ ಲೈಫ್ ಸೈನ್ಸಸ್ ಪ್ರೈವೇಟ್ ಲಿಮಿಟೆಡ್
26	AC2530358	U45309KA2022PTC164672	ಎಲ್ಬಿಯಾ ಡಿಸೈನ್ ಪ್ರೈವೇಟ್ ಲಿಮಿಟೆಡ್
27	AC2472996	U72200KA2012PTC062425	ಸ್ಟಾರ್ಟ್‌ಅಂಸಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
28	AC2296154	U72900KA2021PTC148379	ಜಿಯು ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
29	AC2330438	U70200KA2024PTC193375	ಸೆನ್ಸ್ ಸ್ಟ್ರಾಟಜಿ ಪ್ರೈವೇಟ್ ಲಿಮಿಟೆಡ್
30	AC2334583	U70200KA2023PTC180539	ಹೈಎಕ್ಸ್‌ಎಂ ಕನ್ಸಲ್ಟನ್ಸಿ ಪ್ರೈವೇಟ್ ಲಿಮಿಟೆಡ್
31	AC2290344	U70200KA2025OPC197455	ಹಂಸಿಕಾ ಸಿಂಗ್ ಕನ್ಸಲ್ಟೆಂಟ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
32	AC2334241	U74999KA2022PTC165823	ಆಕ್ಸೆಸ್ ಸರ್ಟಿಟ್ಯೂಡ್ ಪ್ರೈವೇಟ್ ಲಿಮಿಟೆಡ್
33	AC2495360	U02411KA1981PTC004133	ನಂದಿ ಆರೋಮ್ಯಾಟಿಕ್ಸ್ ಪ್ರೈವೇಟ್ ಲಿಮಿಟೆಡ್
34	AC2497226	U62010KA2024PTC191073	ಸೋಲ್‌ಸ್ಫಿಯರ್ ಹಾರಿಜಾನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
35	AC2500936	U68200KA2023OPC172009	ಕೋಭೇಶ್ ಕನ್ಸ್‌ಸ್ಟ್ರಕ್ಷನ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
36	AC2506133	U92490KA2021PTC144302	ವಿರಾನ್ ಮೀಡಿಯಾ ಪ್ರೈವೇಟ್ ಲಿಮಿಟೆಡ್
37	AC2515594	U85110KA1989PTC009841	ನ್ಯಾಷನಲ್ ಡಿಸ್ಟಿಲ್ಲರೀಸ್ ಪ್ರೈವೇಟ್ ಲಿಮಿಟೆಡ್
38	AC2522507	U43299KA2024PTC186801	ವುಂಶ್‌ವ್ಯೂ5 ಇನ್ಫ್ರಾ ಪ್ರೈವೇಟ್ ಲಿಮಿಟೆಡ್
39	AC2515653	U85110KA1982PTC004793	ಸೂರ್ಯ ವಾಚ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್
40	AC2370993	U72900KA2021PTC150592	ಬಿಕ್ರಿಟೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
41	AC2320513	U72200KA2007PTC043983	ಮಣಿಪಾಲ್ ಎಜುಕೇಶನ್ ಅಂಡ್ ಹೆಲ್ತ್‌ಕೇರ್ ಇನಿಶಿಯೇಟಿವ್ ಪ್ರೈವೇಟ್ ಲಿಮಿಟೆಡ್
42	AC2285460	U29256KA2021PTC148834	ಕ್ರಿವೆನೊ ಪ್ರೈವೇಟ್ ಲಿಮಿಟೆಡ್
43	AC2367325	U51909KA2021PTC153112	ಇಂಡಿಕ್‌ಬಜಾರ್ ಪ್ರೈವೇಟ್ ಲಿಮಿಟೆಡ್
44	AC2515323	U85110KA1982PTC004794	ಫಾರೆಸ್ಟ್ ರೆಸಾರ್ಟ್ (ಬಂಡಿಪುರ) ಪ್ರೈವೇಟ್ ಲಿಮಿಟೆಡ್
45	AC2399703	U74999KA2022PTC167219	ಐ2ಬಿ ಕನ್ಸಲ್ಟನ್ಸಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
46	AC2375653	U62099KA2023PTC181013	ಧ್ರುತಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
47	AC2417529	U51506KA1994PTC016764	ಬ್ಯೂಯಾಂಟ್ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್
48	AC2288280	U72900KA2013PTC070498	ಸ್ಫರ್ಡಿನ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
49	AC2376084	U80904KA2016PTC094946	ಪ್ಲಸ್ ಮೈನಸ್ ಎಜುಟೆಕ್ ಪ್ರೈವೇಟ್ ಲಿಮಿಟೆಡ್
50	AC2515261	U85110KA1985PTC006797	ಎಂಸಿ ಡೊನಾಲ್ಡ್ ಡಿಸ್ಟಿಲ್ಲರೀಸ್ ಪ್ರೈವೇಟ್ ಲಿಮಿಟೆಡ್
51	AC2410621	U74997KA2016PTC092747	ವಿದ್ಯಾಸಂಗಮ ಇ–ಲರ್ನಿಂಗ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
52	AC2477386	U74999KA2023PTC170206	ಬ್ರಹಾಸ್ ಅಕೌಂಟಿಂಗ್ ಪ್ರೈವೇಟ್ ಲಿಮಿಟೆಡ್
53	AC2532428	U62091KA2025PTC197751	ಟ್ಯಾಬ್‌ಪೆ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
54	AC2532261	U72900KA2020OPC139852	ಮೆಧರಿ ಟೆಕ್ ಸೊಲ್ಯೂಷನ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
55	AC2532014	U35200KA2025PTC208552	ನೆಲ್ಸಾ ರಿನ್ಯೂಯೇಬಲ್ಸ್ ಪ್ರೈವೇಟ್ ಲಿಮಿಟೆಡ್
56	AC2527075	U85120KA2022PTC162614	ಸಾಯಿಕಾವೇರಿ ಮೆಡಿಕಲ್ ಕೇರ್ ಪ್ರೈವೇಟ್ ಲಿಮಿಟೆಡ್
57	AC2523722	U72200KA2015PTC083980	ಕ್ಲಾರಿಟಿಜ್ ಇನ್ನೊವೇಶನ್ಸ್ ಪ್ರೈವೇಟ್ ಲಿಮಿಟೆಡ್
58	AC2530108	U28299KA2026PTC214979	ಸೆಯಾನ್ ಗೋಪಿ ಗ್ಲೋಬಲ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್
59	AC2525733	U52609KA2018PTC116581	ಬಯೊಸ್ಪೈಸ್ ಇಂಡಿಯಾ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್
60	AC2262771	U29304KA2017PTC106542	ನಿಂಬಲ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
61	AC2526816	U79110KA2024PTC188308	ವಿಜಯನಗರ ಹಾಲಿಡೇಸ್ ಪ್ರೈವೇಟ್ ಲಿಮಿಟೆಡ್
62	AC2435909	U74999KA2017PTC107780	ಕ್ವೀನ್ಸ್ ಸ್ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್
63	AC2427247	U72900KA2021PTC149928	ಬ್ರಿಟ್ ಕ್ಲಬ್ ಪ್ರೈವೇಟ್ ಲಿಮಿಟೆಡ್
64	AC2477614	U72900KA2020PTC135316	ಪೊಲ್ಗ್ಯಾರ್ಟಿಕ್ ಪ್ರೈವೇಟ್ ಲಿಮಿಟೆಡ್
65	AC2429961	U21000KA2024PTC195363	ಯುನಿಡಾಕ್ ಫಾರ್ಮಾ ಪ್ರೈವೇಟ್ ಲಿಮಿಟೆಡ್
66	AC2626266	U45200KA2024PTC186240	ಮೆಕಾನಿಕೇರ್ ಆಟೋಮೊಬೈಲ್ಸ್ ಪ್ರೈವೇಟ್ ಲಿಮಿಟೆಡ್
67	AC2535925	U63030KA2022PTC158159	ಭಜರಂಗಿ ಟ್ರಾನ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್
68	AC2545689	U49230KA2024PTC184898	ಜೆಡ್‌ಜೆಡ್ ಲಾಜಿಸ್ಟಿಕ್ಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
69	AC2542125	U72900KA2016PTC095036	ಎಪೆಕ್ಸ್ ಟೆಕ್ ಹೋಲ್ಡಿಂಗ್ ಪ್ರೈವೇಟ್ ಲಿಮಿಟೆಡ್
70	AC2446918	U72900KA2020PTC136308	ಲೆನೆಟೆಕ್ ಪ್ರೈವೇಟ್ ಲಿಮಿಟೆಡ್
71	AC2420427	U85500KA2016PTC095591	ಎಫ್‌ಬಿಬಿ ಇಂಡಿಯಾ ಪ್ರೈವೇಟ್ ಲಿಮಿಟೆಡ್
72	AC2271539	U47912KA2023PTC178555	ಅಭಿಖಿಯಾ ಕ್ರಿಯೇಶನ್ಸ್ ಪ್ರೈವೇಟ್ ಲಿಮಿಟೆಡ್
73	AC2446451	U74900KA2015PTC080386	ಮೈತೂಫಾ ಗಿಫ್ಟಿಂಗ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
74	AC2464360	U93090KA2018OPC116620	ಅಕ್ಷೋಭ ಆರ್ಟ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
75	AC2448799	U24232KA2007PTC042413	ಯುನಿಕ್ ಲ್ಯಾಬೊರೇಟರೀಸ್ ಪ್ರೈವೇಟ್ ಲಿಮಿಟೆಡ್
76	AC2564123	U74900KA2011PTC059094	ರೆಡ್‌ಗೈಂಟ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್
77	AC2575479	U63122KA2025PTC205919	ಅರ್ತಿಮುರಗಣೇಶ್ ಟೆಕ್ ಪ್ರೈವೇಟ್ ಲಿಮಿಟೆಡ್
78	AC2566748	U72200KA2014PTC077401	ದಿಕ್ಷಿ ಸಾಫ್ಟ್‌ವೇರ್ ಅಂಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
79	AC2452339	U72900KA2020PTC135503	ಪಿಕ್11 ಫ್ಯಾಂಟಸಿ ಪ್ರೈವೇಟ್ ಲಿಮಿಟೆಡ್
80	AC2481005	U70109KA2018PTC117931	ಫ್ಲೈಯಿಂಗ್ ಸ್ಟಾರ್ಸ್ ರಿಯಾಲ್ಟಿ ಅಂಡ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್
81	AC2367520	U67120KA1994PLC016638	ಹಾರಿಜಾನ್ ಕ್ಯಾಪಿಟಲ್ ಲಿಮಿಟೆಡ್
82	AC2458567	U72900KA2017PTC104133	ಸೆಡಿರ್ ಸಾಫ್ಟ್‌ವೇರ್ ಇನ್ಫೊಸೊಲ್ ಪ್ರೈವೇಟ್ ಲಿಮಿಟೆಡ್
83	AC2584366	U55209KA2018OPC115394	ನ್ಯಾಟ್‌ಫುಡ್ ಕ್ಯಾಸಲ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
84	AC2579595	U74102KA2023PTC179460	ಟ್ರೆಂಡಿಸೈಡ್ ಪ್ರೈವೇಟ್ ಲಿಮಿಟೆಡ್
85	AC2584659	U18109KA2022PTC158525	ಬ್ರಾಡೆರಿ ಲೈಫ್‌ಸ್ಟೈಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
86	AC2604558	U74900KA2014PTC074533	ಅಡ್ವಾಂಟೈನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
87	AC2610109	U74990KA2018PTC119431	ಬೇಸ್10 ಅನಾಲಿಟಿಕ್ಸ್ ಪ್ರೈವೇಟ್ ಲಿಮಿಟೆಡ್
88	AC2610398	U62013KA2024OPC184614	ವಿಸಿ ಆಟೋಮೇಶನ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
89	AC2619062	U74999KA2008PTC047455	ಕಂಟೆಂಟ್ ಮೀಡಿಯಾ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
90	AC2625582	U10719KA2023OPC179684	ಡ್ರೀಮ್‌ಬೀನ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
91	AC2129920	U52291KA2024PTC195844	ಗ್ಲೋಬಲ್ ಸೊಟೊ ಫೇರ್ಸ್ ಪ್ರೈವೇಟ್ ಲಿಮಿಟೆಡ್
92	AC2153493	U41001KA2025PTC206528	ಮಹಮ್ಮಾಪುರ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್
93	AC2210095	U47820KA2024OPC187268	ಮಿಕ್ಕೊ ವೆಂಚರ್ಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್
94	AC2214840	U62013KA2023PTC173144	ಫ್ಯೂಚರ್ ಎಚ್‌ಎಕ್ಸ್‌ಎಂ ಗ್ಲೋಬಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್

(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೋರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೋರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು / ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು / ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.

(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಿಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

ಇರ್ಕಾನ್ ಟಿರ್ಕಿ
ಅಸಿಸ್ಟೆಂಟ್ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC 07123/11/0797/2526

ಸಣ್ಣ ಕ್ಷಣಗಳು ದೊಡ್ಡ ಸಂತೋಷ

• ಲಾವಣ್ಯಗೌರಿ ವೆಂಕಟೇಶ್

ವಿಷಯ ವಸ್ತುಗಳಲ್ಲಿ ಸುಖವನ್ನು ಹುಡುಕುವುದು ಮಾನವನ ಸಹಜ ಗುಣ. ಹೆಚ್ಚಿಗೆ ಸಂಬಳ ಬರುವ ಕೆಲಸ, ದೊಡ್ಡದಾದ ಸ್ವಂತ ಮನೆ, ಐಷರಾಮಿ ಗಾಡಿಗಳು, ದೊಡ್ಡದಾದ ಬ್ಯಾಂಕ್ ಬ್ಯಾಲೆನ್ಸ್ ಇದ್ದರೆ ಸುಖಿಗಳೆಂಬ ಭಾವನೆ ಹೆಚ್ಚಿನ ಜನರದ್ದು. ಪ್ರಾಪಂಚಿಕ ವಸ್ತುಗಳಲ್ಲದೇ ನಮ್ಮ ಸುತ್ತಮುತ್ತಲು ನಿತ್ಯ ನಡೆಯುವ ಅನೇಕ ಘಟನೆಗಳು, ಕ್ಷಣಗಳು ನಮಗೆ ಉತ್ಸಾಹವನ್ನು, ನೆಮ್ಮದಿಯನ್ನು, ಸುಖವನ್ನು ತಂದುಕೊಡಬಲ್ಲವು. ಕುಟುಂಬದೊಂದಿಗೆ ಕಳೆಯುವ ಸಮಯ, ಸ್ನೇಹಿತರೊಟ್ಟಿಗೆ ಇರುವ ಕ್ಷಣಗಳು, ಯಾರಿಗಾದರೂ ಸಹಾಯ ಮಾಡಿದಾಗ ಸಿಗುವ ತೃಪ್ತಿ, ಸಂಗೀತದಿಂದಾಗುವ ಆನಂದ, ವಿಹಾರದಿಂದ ಸಿಗುವ ಹಿಗ್ಗು – ಹೀಗೆ ಒಬ್ಬೊಬ್ಬರಿಗೆ ಒಂದೊಂದರಲ್ಲಿ ಸಂತೋಷ, ಸಮಾಧಾನ ಸಿಗುತ್ತದೆ. ಕೆಲವರಿಗೆ ಒಂಟಿಯಾಗಿರುವುದೇ ನೆಮ್ಮದಿಯನ್ನು ಕೊಡುತ್ತದೆ. ಕೆಲವೊಮ್ಮೆ ಸಣ್ಣ ಸಣ್ಣ ಪ್ರಶಂಸೆಗಳು, ಒಳ್ಳೆಯ ನುಡಿ, ಒಂದು ಕೃತಜ್ಞತೆಯ ಭಾವ– ಇಂಥವು ನಮ್ಮ ದಿನವನ್ನು ಸುಂದರವಾಗಿಸಬಲ್ಲದು. ಬೆಳಿಗ್ಗೆ ಎದ್ದ ತಕ್ಷಣ ಕಾಫಿ ಅಥವಾ ಟೀ ಕುಡಿಯುವ ಅಭ್ಯಾಸ ಹಲವರಲ್ಲಿದೆ. ಕೆಲವರಿಗೆ ಮನೆಯನ್ನು ಸ್ವಚ್ಛಗೊಳಿಸುವುದು ಉಲ್ಲಾಸವನ್ನು ನೀಡುತ್ತದೆ.

ಇವೆಲ್ಲವೂ ದಿನನಿತ್ಯ ನಡೆಯುವಂತಹ ಘಟನೆಗಳು. ಇವುಗಳಲ್ಲಿ ಸಂತೋಷ ಎಲ್ಲಿಂದ ಬರಬೇಕು? ಹೀಗೆ ಅನ್ನಿಸುವುದು ಸಹಜ. ಆದರೆ ಇವು ಅಮೂಲ್ಯ ಅನುಭವಗಳು. ಅವನ್ನು ಆಸ್ವಾದಿಸಿದರೆ ಆಗ ಅವುಗಳ ಬೆಲೆ ತಿಳಿಯುತ್ತದೆ. ಸಣ್ಣ ಸಣ್ಣ ಕ್ಷಣಗಳ ದೊಡ್ಡ ಸಂತೋಷವನ್ನು ಅರಿತವರು ಮಾತ್ರ ಜೀವನವನ್ನು ಹೆಚ್ಚು ಶಾಂತಿ ಹಾಗೂ ನೆಮ್ಮದಿಯಿಂದ ಕಳೆಯುತ್ತಾರೆ. ಕೆಲವೊಮ್ಮೆ ಅವು ಇಲ್ಲದೇ ಹೋದಾಗ ಅವುಗಳ ಬೆಲೆ ತಿಳಿಯುತ್ತದೆ. ಉದಾಹರಣೆಗೆ, ಬೆಳಗಿನ ಕಾಫಿ ಅಥವಾ ಟೀ ಕುಡಿಯುವವರಿಗೆ ಪ್ರತಿ ದಿನವೂ ಒಂದೇ ಎನ್ನುವ ಭಾವನೆ. ಕೇವಲ ಒಂದು ದಿನ ಬೆಳಿಗ್ಗೆ ಎದ್ದಾಗ, ನಿಮ್ಮ ನೆಚ್ಚಿನ ಪಾನೀಯ ಸಿಗದಿದ್ದಾಗ, ಅದರ ಮಹತ್ವದ ಅರಿವಾಗುತ್ತದೆ. ಸಣ್ಣ ಕ್ಷಣಗಳು ಕೊಡುವ ಸಂತೋಷ ಮನಸ್ಸಿಗೆ ಧೈರ್ಯ, ಶಕ್ತಿ ಹಾಗೂ ಆಶಾಭಾವನೆಯನ್ನು ತುಂಬುತ್ತವೆ. ಇದರಿಂದ ದೊಡ್ಡ ಸಾಧನೆಯನ್ನು ಮಾಡಲು ಮನಸ್ಸು ಪ್ರೇರಿತವಾಗುತ್ತದೆ.

ಜೀವನವೆನ್ನುವುದು ಅನುಭವಗಳ ಅದ್ಭುತವಾದ ಪ್ರಯಾಣ. ಈ ಪಯಣದಲ್ಲಿ ಸಂತೋಷವೇ ನಿಜವಾದ ಸಂಪತ್ತು. ಪ್ರತಿಯೊಬ್ಬರಲ್ಲೂ ಈ ಸಂತೋಷದ ಹಸಿವು ಇದ್ದೇ ಇರುತ್ತದೆ. ಯಾವುದೇ ಘಟನೆಯಾಗಲೀ ಸಂಗತಿಯಾಗಲೀ, ಅವನ್ನು ಗುರುತಿಸಿ ಮೆಚ್ಚಿದರೆ ಮಾತ್ರ ಅವುಗಳ ಬೆಲೆ ತಿಳಿಯುತ್ತದೆ. ನನಗೆ ಸಂಗೀತದಲ್ಲಿ, ಪುಸ್ತಕಗಳನ್ನು ಓದುವುದರಲ್ಲಿ, ಬರೆಯುವುದರಲ್ಲಿ, ಗಿಡಗಳ ಆರೈಕೆಯಲ್ಲಿ ಹಾಗೂ ಸೃಜನಶೀಲತೆಯಲ್ಲಿ ಸಿಗುವ ಆನಂದ ಬೇರೆಲ್ಲೂ ಸಿಗುವುದಿಲ್ಲ. ಇದು ನಾನು ಕಂಡುಕೊಂಡಿರುವ ನನ್ನ ಸಂತೋಷ ಹಾಗೂ ನೆಮ್ಮದಿ. ಇದರಲ್ಲಿಯೇ ಮತ್ತೊಬ್ಬರಿಗೂ ನೆಮ್ಮದಿ ಹಾಗೂ ಉಲ್ಲಾಸ ಸಿಗಬೇಕೆಂದಿಲ್ಲ. ಕೆಲವರಿಗೆ ಮಕ್ಕಳ ಒಡನಾಟ ಇಷ್ಟವಾದರೆ, ಮತ್ತೆ ಕೆಲವರದು ಪ್ರಕೃತಿಯಲ್ಲಿಯೇ ಮೈಮರೆಯುವ ಪ್ರವೃತ್ತಿ.

ನಮ್ಮ ಸುತ್ತಲಿರುವ, ನಾವು ನಿತ್ಯ ಅನುಭವಿಸುತ್ತಿರುವ ಬದುಕಿನಲ್ಲಿಯೇ ಸುಖ, ಸಂತೋಷ ಹಾಗೂ ನೆಮ್ಮದಿಯಿದೆ. ಅವನ್ನು ಹುಡುಕಿಕೊಂಡು ಹೋದರೆ ಸಿಗುವ ವಸ್ತುಗಳಲ್ಲ. ನಮ್ಮಲ್ಲಿ ಬಹಳಷ್ಟು ಜನರು ತಮ್ಮನ್ನು ಬೇರೆಯವರಿಗೆ ಹಾಗೂ ಬೇರೆಯವರ ಜೀವನಶೈಲಿಗೆ ತಮ್ಮ ಬದುಕನ್ನು ಹೋಲಿಸಿಕೊಂಡು, ಅವರಂತೆ ನಾನಿದ್ದರೆ ಸುಖ ಎಂದು ಅನವಶ್ಯಕವಾಗಿ ಚಿಂತಿಸುತ್ತಾರೆ. ಆದರೆ ವಾಸ್ತವದಲ್ಲಿ ಒಬ್ಬರ ಸುಖ, ನೆಮ್ಮದಿ, ಶಾಂತಿ, ಸಂತೋಷ ಮತ್ತೊಬ್ಬರ ದುಃಖವಾಗಿ ಪರಿಣಮಿಸಬಹುದು!

ಒಬ್ಬರಿದ್ದಂತೆಯೇ ಮತ್ತೊಬ್ಬರು ಇರುವುದಿಲ್ಲ. ಹಾಗಿರುವಾಗ ಒಬ್ಬರ ಸಂತೋಷ ಮತ್ತೊರ್ವರ ಸಂತೋಷವಾಗಲು ಹೇಗೆ ಸಾಧ್ಯ? ಪ್ರತಿಯೊಬ್ಬ ಮಾನವನ ರೂಪ, ಗುಣ, ನಡತೆ, ಆಕಾರ, ಚಿಂತನೆ, ದೂರದೃಷ್ಟಿ ಹೇಗೆ ಬೇರೆ ಬೇರೆ ಇರುತ್ತವೋ ಹಾಗೆಯೇ ಅವರ ಸಂತೋಷ, ನೆಮ್ಮದಿ ಹಾಗೂ ಸುಖಗಳೂ ಬೇರೆ ಬೇರೆ ಇರುತ್ತವೆ. ಹಾಗಾಗಿ ನಮ್ಮ ಜೀವನದ ಸಮಾಧಾನ, ಶಾಂತಿಯನ್ನು ನಾವೇ ಕಂಡುಕೊಳ್ಳಬೇಕು. ❖

ಇನ್‌ಫ್ಲುಯೆಂಜ ಪುನರಾವರ್ತಿತ ಪಿಡುಗು

• ಡಾ. ಕೆ.ಎಲ್. ಮಹದೇವಪ್ಪ

ಜಾಗತಿಕವಾಗಿ ಅತ್ಯಂತ ಹೆಚ್ಚು ಜನರನ್ನು ಸಾವಿಗೀಡುಮಾಡಿರುವ ಮತ್ತು ಅತ್ಯಂತ ಹೆಚ್ಚಾಗಿ ಪುನರಾವರ್ತಿತವಾಗುತ್ತಿರುವ ಪಿಡುಗು ಯಾವುದೆಂದು ಗೊತ್ತೆ?

ಇದು ಇನ್‌ಫ್ಲುಯೆಂಜ. ಸಾಮಾನ್ಯವಾಗಿ 'ಜ್ವರ' (Flu) ಎಂದು ಕರೆಯಲ್ಪಡುವ ಇನ್‌ಫ್ಲುಯೆಂಜ, ಮಾರಕವಾಗಬಲ್ಲ ಒಂದು ವೈರಾಣು ಸೋಂಕಾಗಿದ್ದು, ಮೂಗು, ಗಂಟಲು ಮತ್ತು ಶ್ವಾಸಕೋಶಗಳನ್ನು ಗಾಸಿಗೊಳಿಸುತ್ತದೆ.

ಕಾಲಾಧರಿತವಾದ (ಋತುಮಾನೀಯ) ಇನ್‌ಫ್ಲುಯೆಂಜ, ಒಂದು ತೀಕ್ಷ್ಣ ಸೋಂಕಾಗಿದ್ದು, ಈ ರೋಗದ ವೈರಾಣುವಿನ ಹೊಸ ಹೊಸ ರೂಪಾಂತರಿಗಳಿಂದ ಜಗತ್ತಿನಾದ್ಯಂತ ವೇಗವಾಗಿ ಮತ್ತು ಸುಲಭವಾಗಿ ಹರಡುವ ಹಾಗೂ ಹತೋಟಿಗೆ ಸಿಗದಂತಾಗಬಲ್ಲ ಆತಂಕಕಾರಿ ಪಿಡುಗಾಗಿದೆ. ಪ್ರಾಚೀನ ಕಾಲದಿಂದಲೂ ಗುರುತಿಸಲ್ಪಟ್ಟಿರುವ ಈ ಪಿಡುಗು ಮುಖ್ಯವಾಗಿ 1918 (ಸ್ಪ್ಯಾನಿಷ್ ಜ್ವರ), 1957 (ಏಷ್ಯನ್ ಜ್ವರ), 1968 (ಹಾಂಗ್ ಕಾಂಗ್ ಜ್ವರ), 2009 (ಹಂದಿ ಜ್ವರ-ಮೆಕ್ಸಿಕೊದಿಂದ ಆರಂಭ) ವರ್ಷಗಳಲ್ಲಿ ಜಗತ್ತಿನ ವಿವಿಧ ಭಾಗಗಳನ್ನು ತೀವ್ರವಾಗಿ ಬಾಧಿಸಿದ್ದು, 1918ರ ಪಿಡುಗು ಅತ್ಯಂತ ವಿನಾಶಕಾರಿಯಾಗಿತ್ತು. ಪ್ರಸ್ತುತ, ಜಾಗತಿಕವಾಗಿ, ಪ್ರತಿ ವರ್ಷವೂ ಸುಮಾರು ನೂರು ಕೋಟಿ ಜನರು ಈ ಪಿಡುಗಿಗೆ ಈಡಾಗುತ್ತಿದ್ದು, 3 ರಿಂದ 6.5 ಲಕ್ಷ ಜನರು ಸಾವಿಗೀಡಾಗುತ್ತಿದ್ದಾರೆ.

ಈ ರೋಗದ ವೈರಾಣುವನ್ನು ಮೊಟ್ಟಮೊದಲಿಗೆ 1892ರಲ್ಲಿ ರಿಚರ್ಡ್ ಫೈಫ್ಫರ್, ತಪ್ಪಾಗಿ, ಬ್ಯಾಕ್ಟೀರಿಯಾ ಪ್ರಭೇದ 'ಹಿಮೊಫ್ಹಿಲಸ್ ಇನ್‌ಫ್ಲುಯೆಂಜ' ಎಂದು ಗುರುತಿಸಿದರು. ಈ ಹಿನ್ನೆಲೆಯಲ್ಲಿ ಈ ವೈರಾಣುವಿಗೆ ಈ ಹೆಸರೇ ಉಳಿದಿದೆ. 'ಆರ್ಥೋಮಿಕ್ಸೆವಿರಿಡೆ' ಎನ್ನುವ ಪ್ರಜಾತಿಯ ಈ ಇನ್‌ಫ್ಲುಯೆಂಜ ವೈರಾಣುಗಳಲ್ಲಿ ಎ, ಬಿ, ಸಿ ಮತ್ತು ಡಿ ಎಂಬ ನಾಲ್ಕು ವಿಧಗಳಿದ್ದು ಅವುಗಳಲ್ಲಿ ಎ, ಬಿ ಮತ್ತು ಸಿ ವಿಧದ ವೈರಾಣು ಮಾನವರಲ್ಲಿ ಸೋಂಕು ಉಂಟು ಮಾಡುತ್ತವೆ.

'ಡಿ' ವಿಧದ ವೈರಾಣು, ಮನುಷ್ಯರಲ್ಲಿ ಆತಂಕಕಾರಿ ಸೋಂಕು ಉಂಟುಮಾಡುವುದಿಲ್ಲ. 'ಎ' ವಿಧದ ವೈರಾಣುವಿನ ಕೋಶದ ಮೇಲ್ಮೈನಲ್ಲಿರುವ ಪ್ರೋಟೀನುಗಳ ಸಂಯೋಜನೆಯ ಪ್ರಕಾರ A(H1N1), A(H3N2), A(H3N3) ಮತ್ತು A(H5N1) ಎನ್ನುವ ಉಪತಳಿಗಳನ್ನು ಗುರುತಿಸಲಾಗುತ್ತದೆ. A(H1N1) ಮತ್ತು A(H3N2) ಉಪತಳಿಗಳು ಹೆಚ್ಚು ರೋಗಕಾರಕವಾಗಿದ್ದು, ಅತ್ಯಂತ ವೇಗವಾಗಿ ರೂಪಾಂತರಗೊಂಡು ಮನುಷ್ಯರಲ್ಲಿ ಮತ್ತು ಪ್ರಾಣಿ ಪಕ್ಷಿಗಳಲ್ಲೂ ಸೋಂಕು ಉಂಟು ಮಾಡಿ, ಹೆಚ್ಚಿನ ಸಾಂಕ್ರಾಮಿಕ ಪಿಡುಗಿಗೂ ಕಾರಣವಾಗುತ್ತಿವೆ.

A(H3N3) ಮತ್ತು A(H5N1) ಉಪತಳಿಗಳು ಇತ್ತೀಚೆಗೆ ಗುರುತಿಸಲ್ಪಟ್ಟಿದ್ದು, ಮುಖ್ಯವಾಗಿ ಪ್ರಾಣಿಗಳಲ್ಲಿ ಸೋಂಕುಕಾರಕವಾಗಿವೆ. ಈ ವೈರಾಣುಗಳ ವಂಶವಾಹಿಗಳು ವಿಶೇಷವಾಗಿ, ನಿರಂತರವಾಗಿ ಬದಲಾವಣೆಗೆ ಒಳಪಡುವುದರಿಂದ ಮತ್ತು ಬಳಸಲಾಗುವ ಕಾಲಾಧಾರಿತ ಲಸಿಕೆಗಳು ಪ್ರಭೇದ ಆಧಾರಿತವಾಗಿರುವುದರಿಂದ, ಈ ಸೋಂಕಿನ ಹತೋಟಿಗೆ ಬಳಸುವ ಲಸಿಕೆಗಳು, ಸುಮಾರು ಒಂದ ವರ್ಷಕ್ಕಿಂತ ಹೆಚ್ಚಿನ ಅವಧಿಗೆ ರಕ್ಷಣೆ ನೀಡಲಾರವು. ಹೀಗಾಗಿ ಈ ಸೋಂಕಿನ ಹತೋಟಿಗೆ ಪರಿಣಾಮಕಾರಿಯಾಗಬಲ್ಲ ಹೊಸ ಹೊಸ ಲಸಿಕೆಗಳನ್ನು ತಯಾರಿಸಿಯೇ ನೀಡಬೇಕಾಗುತ್ತದೆ.

ಇನ್ನು 'ಬಿ' ವಿಧದ ವೈರಾಣು ಮುಖ್ಯವಾಗಿ ಮನುಷ್ಯರಿಗೆ ಸೋಂಕು ಉಂಟುಮಾಡುತ್ತದೆ. ಮತ್ತು 'ಎ' ವಿಧದ ವೈರಾಣುಗಳಿಗಿಂತ ನಿಧಾನವಾಗಿ ರೂಪಾಂತರಗೊಳ್ಳುತ್ತದೆ. 'ಸಿ' ವಿಧದ ವೈರಾಣುಗಳಿಂದಾಗುವ ಸೋಂಕು ಬಹಳ ಸೌಮ್ಯವಾಗಿರುತ್ತದೆ ಮತ್ತು ಪಿಡುಗುಗಳಿಗೆ ಕಾರಣವಾಗುವುದಿಲ್ಲ. 'ಡಿ' ವಿಧದ ವೈರಾಣು ಪ್ರಾಣಿಗಳನ್ನು, ಮುಖ್ಯವಾಗಿ ಜಾನುವಾರುಗಳನ್ನು ಬಾಧಿಸುತ್ತದೆ.

ಈ ಪಿಡುಗಿನ ಆಪತ್ತಿನಿಂದ, ಜಗತ್ತಿನಾದ್ಯಂತ ಜನರನ್ನು ರಕ್ಷಿಸಲು, ವಿಶ್ವ ಆರೋಗ್ಯ ಸಂಸ್ಥೆ 2019 ರಿಂದ 2030ರ ಅವಧಿಗೆ 'ಜಾಗತಿಕ ಇನ್‌ಫ್ಲುಯೆಂಜ ಕಾರ್ಯತಂತ್ರ ಯೋಜನೆ' ಜಾರಿಗೆ ತಂದಿದೆ. ಆದರೆ, ಪ್ರಸಕ್ತದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯೇ ಗಜಿಬಿಜಿಯಲ್ಲಿದೆ. ಹಾಗಾಗಿ ಈ ಯೋಜನೆಯ ಕಾರ್ಯಕ್ರಮಗಳು ಹೇಗೆ ನಡೆಯುತ್ತಿವೆ ಎನ್ನುವುದು ತಿಳಿಯದಾಗಿದೆ. ❖

ಗರ್ಭಕಂಠದ ಕ್ಯಾನ್ಸರ್‌ಗೆ ಲಸಿಕೆ

• ಡಾ. ಕುಶ್ವಂತ್ ಕೋಳಿಬೈಲು

ಇತ್ತೀಚಿನ ವರ್ಷಗಳಲ್ಲಿ ಕ್ಯಾನ್ಸರ್ ಕಾಯಿಲೆಗಳ ಪ್ರಮಾಣವು ಬಹಳಷ್ಟು ಹೆಚ್ಚಾಗುತ್ತಿದೆ. ಇದಕ್ಕೆ ಭಾರತದ ಮಹಿಳೆಯರೂ ಹೊರತಲ್ಲ. ಭಾರತದ ಗ್ರಾಮೀಣ ಭಾಗದ ಮಹಿಳೆಯರು ವೈದ್ಯಕೀಯ ತಪಾಸಣೆ ಮತ್ತು ಆಸ್ಪತ್ರೆ ಭೇಟಿಯಿಂದ ದೂರ ಉಳಿಯುವ ಕಾರಣ ಅವರಲ್ಲಿ ಕ್ಯಾನ್ಸರ್ ಕಾಯಿಲೆಯನ್ನು ಪತ್ತೆಹಚ್ಚುವುದರಲ್ಲಿ ವಿಳಂಬವಾಗುತ್ತಿದೆ. ಈ ಕಾರಣದಿಂದಾಗಿ ಅವರಿಗೆ ಕ್ಯಾನ್ಸರ್ ಚಿಕಿತ್ಸೆ ನೀಡುವುದು ಕೂಡ ಹೆಚ್ಚು ಕಷ್ಟಕರವಾಗಿರುತ್ತದೆ. ಭಾರತೀಯ ಮಹಿಳೆಯರಲ್ಲಿ ಸ್ತನದ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್ (Cervical Cancer) ಹೆಚ್ಚಾಗುತ್ತಿವೆ. ಇವನ್ನು ಪ್ರಾರಂಭಿಕ ಹಂತದಲ್ಲಿ ಪತ್ತೆ ಹಚ್ಚಿದರೆ ಅವು ಗುಣವಾಗುವ ಸಂಭವ ಹೆಚ್ಚಾಗಿರುತ್ತದೆ. ಇದನ್ನು ತಡೆಗಟ್ಟುವ ಸಲುವಾಗಿ ಹಲವು ಯೋಜನೆಗಳನ್ನು ರೂಪಿಸಲಾಗಿದೆ.

ಗರ್ಭಕಂಠದ ಕ್ಯಾನ್ಸರ್‌ಗೆ ಮುಖ್ಯ ಕಾರಣವೇನೆಂದರೆ, 'ಹ್ಯೂಮನ್ ಪ್ಯಾಪಿಲೋಮ ವೈರಸ್' (Human Papilloma Virus–HPV) ಎಂಬ ವೈರಸ್ ಉಂಟು ಮಾಡುವ ಸೋಂಕು.

ಭಾರತದ ಮಹಿಳೆಯರಲ್ಲಿ ಕಂಡುಬರುವ ಗರ್ಭಕಂಠದ ಕ್ಯಾನ್ಸರ್ ಅತಿ ಸಾಮಾನ್ಯ ಕ್ಯಾನ್ಸರ್. ಲಸಿಕೆ (HPV Vaccine) ಮತ್ತು ನಿಯಮಿತ ತಪಾಸಣೆ (Pap smear) ಮೂಲಕ ಇದನ್ನು ತಡೆಯಬಹುದು. 30 ರಿಂದ 65 ವಯೋಮಿತಿಯಲ್ಲಿರುವ ಮಹಿಳೆಯರು 'ಪ್ಯಾಪ್ ಸ್ಮಿಯರ್' ಪರೀಕ್ಷೆಯನ್ನು ನಿಯಮಿತವಾಗಿ ಮಾಡಿಸಿಕೊಳ್ಳುವುದರಿಂದ ಆರಂಭಿಕ ಹಂತದಲ್ಲಿ ಗರ್ಭಕಂಠದ ಕ್ಯಾನ್ಸರ್ ಪತ್ತೆ ಹಚ್ಚಿ, ಅದು ಸಂಪೂರ್ಣವಾಗಿ ಗುಣವಾಗುವಂತೆ ಮಾಡಬಹುದು.

ಗರ್ಭಕಂಠದ ಕ್ಯಾನ್ಸರ್ ಆರಂಭಿಕ ಹಂತದಲ್ಲಿ ಯಾವುದೇ ರೀತಿಯ ಗುಣಲಕ್ಷಣಗಳನ್ನು ತೋರಿಸದೆ ಇರಬಹುದು. ನಂತರದ ದಿನಗಳಲ್ಲಿ ಅಸಹಜ ರಕ್ತಸ್ರಾವ, ನೋವು, ಹೊಟ್ಟೆಯ ಕೆಳಭಾಗದಲ್ಲಿ ನೋವು, ಲೈಂಗಿಕ ಕ್ರಿಯೆಯ ಸಮಯದಲ್ಲಿ ನೋವಿನಂಥ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ಹಂತದಲ್ಲಿ ಕ್ಯಾನ್ಸರ್ ದೇಹದೊಳಗೆ ಹರಡಿಕೊಂಡಿರಬಹುದು.

ಆರಂಭಿಕ ಹಂತದಲ್ಲಿ ಪತ್ತೆಯಾದರೆ, ಶಸ್ತ್ರ ಚಿಕಿತ್ಸೆ, ವಿಕಿರಣ ಚಿಕಿತ್ಸೆ (Radiation) ಅಥವಾ ಕೀಮೋಥೆರಪಿ ಮೂಲಕ ಚಿಕಿತ್ಸೆ ನೀಡಬಹುದು.

ಗರ್ಭಕಂಠದ ಕ್ಯಾನ್ಸರ್‌ಗೆ 'ಹ್ಯೂಮನ್ ಪ್ಯಾಪಿಲೋಮ ವೈರಸ್' ಮಾತ್ರ ಕಾರಣವಲ್ಲ: ಅಸುರಕ್ಷಿತ ಲೈಂಗಿಕತೆ, ಅತಿಯಾದ ಗರ್ಭನಿರೋಧಕ ಮಾತ್ರೆಗಳ ಸೇವನೆ, ಕಡಿಮೆ ವಯಸ್ಸಿನಲ್ಲಿ ಮದುವೆ ಮತ್ತು ಆನುವಂಶಿಕ ಕಾರಣಗಳಿಂದಲೂ ಈ ಕ್ಯಾನ್ಸರ್ ಬರಬಹುದು. ಎಚ್‌ಪಿವಿ ವೈರಸ್‌ನಲ್ಲಿ ಹಲವು ಪ್ರಭೇದಗಳಿವೆ. ಅವುಗಳಲ್ಲಿ ಎಚ್‌ಪಿವಿ 16 ಮತ್ತು 18 ಪ್ರಭೇದದ ವೈರಸ್ ಉಂಟುಮಾಡುವ ದೀರ್ಘಕಾಲದ ಸೋಂಕಿನಿಂದ ಗರ್ಭಕಂಠದ ಕೋಶಗಳು ಕ್ಯಾನ್ಸರ್ ಆಗಿ ಮಾರ್ಪಾಡಾಗುತ್ತವೆ.

ಎಚ್‌ಪಿವಿ 6 ಮತ್ತು ಎಚ್‌ಪಿವಿ 11 ವೈರಸ್ ಕೂಡ ಗರ್ಭಕಂಠದ ಕ್ಯಾನ್ಸರ್ ಬರಲು ಕಾರಣವಾಗುತ್ತದೆ. 99 ಪ್ರತಿಶತ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳು ಹುಟ್ಟಲು ಎಚ್‌ಪಿವಿ ಸೋಂಕು ಕಾರಣವೆಂಬ ವಿಚಾರ ಬೆಳಕಿಗೆ ಬಂದ ನಂತರ ಆ ವೈರಸ್ ಕುರಿತ ಅಧ್ಯಯನಗಳು ಹೆಚ್ಚಾದವು. ಸೋಂಕು ತಗುಲಿದ ನಂತರ ಗರ್ಭಕಂಠದ ಕಣಗಳು ಕ್ಯಾನ್ಸರ್ ಮಾದರಿಯಲ್ಲಿ ಬದಲಾಗಲು ಸುಮಾರು 15ರಿಂದ 20 ವರ್ಷಗಳಷ್ಟು ದೀರ್ಘ ಸಮಯ ಬೇಕಾಗುತ್ತದೆ.

ಎಚ್‌ಪಿವಿ ವೈರಾಣುವಿಗೆ ಸೂಕ್ತ ಲಸಿಕೆ ನೀಡಿದರೆ ಹೆಣ್ಣುಮಕ್ಕಳಲ್ಲಿ ಈ ವೈರಸ್ ಸೋಂಕು ಉಂಟುಮಾಡುವುದನ್ನು ತಡೆಹಿಡಿಯಬಹುದಾಗಿದೆ. ಈ ಸೋಂಕು ಬರದಿದ್ದರೆ, 99 ಪ್ರತಿಶತ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳು ಕಡಿಮೆಯಾಗಬಹುದು.

ಈ ಸೋಂಕು ಲೈಂಗಿಕವಾಗಿ ಸಕ್ರಿಯವಿರುವ ಹೆಣ್ಣುಮಕ್ಕಳಿಗೆ ಬರುವ ಕಾರಣದಿಂದಾಗಿ ಹೆಣ್ಣುಮಕ್ಕಳು ಹದಿಹರೆಯ ತಲುಪುವ ಮೊದಲೇ ಎಚ್‌ಪಿವಿ ಲಸಿಕೆ ನೀಡುವ ಕ್ರಮವನ್ನು ಹಲವಾರು ಪಾಶ್ಚಾತ್ಯ ರಾಷ್ಟ್ರಗಳು ಅಳವಡಿಸಿಕೊಂಡಿವೆ.

ಗಂಡಸರಿಂದಲೂ ಈ ಸೋಂಕು ಹೆಣ್ಣುಮಕ್ಕಳಿಗೆ ಹರಡುವುದರಿಂದ ಹಲವು ದೇಶಗಳಲ್ಲಿ ಗಂಡಸರಿಗೂ ಈ ಲಸಿಕೆ ನೀಡುವ ಕ್ರಮವು ಜಾರಿಯಲ್ಲಿದೆ.

ನಮ್ಮ ದೇಶದಲ್ಲಿ ಈ ಹಿಂದೆ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಎಚ್‌ಪಿವಿ ಲಸಿಕೆಗಳು ಲಭ್ಯವಿದ್ದವು. ಗರ್ಭಕಂಠದ ಕ್ಯಾನ್ಸರ್ ಪ್ರಮಾಣ ಹೆಚ್ಚುತ್ತಿರುವುದನ್ನು ಗಮನಿಸಿದ ಸರ್ಕಾರವು ಹದಿನಾಲ್ಕು ವರ್ಷ ತುಂಬಿದ ಪ್ರತಿ ಯುವತಿಗೂ ಒಂದು ಲಸಿಕೆಯನ್ನು ನೀಡುವ ಕಾರ್ಯಕ್ರಮವನ್ನು ಆರಂಭಿಸಿದೆ. ❖

'ನೀಟ್' ದಿಕ್ಸೂಚಿ — ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ/ಸಿಇಟಿ ಪರೀಕ್ಷೆ

BIOLOGY

23) The theory of spontaneous generation stated that –
a) life arose from living forms only
b) life can arise from both living and non-living
c) life can arise from non-living things only.
d) life arises spontaneously, neither from living nor from the non-living.
Ans:- c

24) Animal husbandry and plant breeding programmes are the examples of –
a) reverse evolution b) artificial selection
c) mutation d) natural selection
Ans:- b

25) Paleontological evidences for evolution refer to the –
a) development of embryo
b) homologous organs c) fossils
d) analogous organs
Ans:- c

26) The bones of forelimbs of whale, bat, cheetah and man are similar in structure, because –
a) one organism has given rise to another
b) they share a common ancestor
c) they perform the same function
d) they have biological similarities
Ans:- b

27) Analogous organs arise due to -
a) divergent evolution b) artificial selection
c) genetic drift d) convergent evolution
Ans:- d

28) Appearance of antibiotic bacteria is an example of
a) adaptive radiation b) transduction
c) pre-existing variation in the population
d) divergent evolution
Ans:- c

29) A transcription unit in DNA is defined primarily by the three regions in DNA and these are with respect to upstream and down stream end;
a) Repressor, Operator gene, Structural gene
b) Structural gene, Transposons, Operator gene
c) Inducer, Repressor, Structural gene
d) Promotor, Structural gene, Terminator
Ans (d)
Expln. A transcription unit of DNA is defined primarily by the three regions in the DNA: (i) A promoter (ii) The structural gene (iii) A terminator The promoter is said to be located towards 5′-end (upstream) of the structural gene (the reference is made with respect to the polarity of coding strand) The terminator is located towards 3′-end (downstream) of the coding strand.

30). The labrum in cockroach is attached to the head capsule through the means of
(a) Clypeus (b) Genas
(c) Frons (d) All the above
Ans: (a)

31) The characteristic of pronounced cephalisation is seen in
a) Arthropoda b) Mollusca
c) Annelida d) Echinoderms
Ans: (a)

32) Family Fabaceae differs from Solanaceae and Liliaceae. With respect to the stamens, pick out the characteristics specific to family Fabaceae but not found in Solanaceae or Liliaceae................
a) Epiphyllous and Dithecous anthers
b) Diadelphous and Dithecous anthers
c) Polyadelphous and epipetalous stamens
d) Monoadelphous and Monothecous anthers
Ans:- (b)
Expln:-In fabaceae family the filaments of nine stamen are united into one bundle and tenth posterior stamen stand apart (diadelphous condition). Anther in fabaceae is of two lobes or two theca thus called dithecous anther. These two characteristics are present in the members of fabaceae family but not found in members of solanacea or liliaceae family. Androecium: ten, diadelphous, anther dithecous

33) Axile placentation is observed in.......
a) China rose, Petunia and Lemon
b) Mustard, Cucumber and Primrose
c) China rose, Beans and Lupin
d) Tomato, Dianthus and Pea
Ans:- (a)
Expln:- In axile placentation ovules are attached to multilocular ovary as in china rose, petunia and lemon.

34) A few statements describing certain features of reproduction are given below:
i) Gametic fusion takes place
ii) Transfer of genetic material takes place
iii) Reduction division takes place
iv) Progeny have some resemblance with parents
Select the options that are true for both asexual and sexual reproduction from the options given below:
a) i and ii b) ii and iii
c) ii and iv d) i and iii
Ans:- c

35) The term 'clone' cannot be applied to offspring formed by sexual reproduction because: *(Contd….)*

PHYSICS

36) The self inductance L of a solenoid of length *l* and area of cross section A, with a fixed number of turns N increases as
a) *l* and A increase.
b) *l* decreases and A increases.
c) *l* increases and A decreases.
d) both l and A decrease. **Ans:- b**

37) A body of mass 50 kg, is suspended using a spring balance inside a lift at rest. If the lift starts falling freely, the reading of the spring balance is
a) = 50 kg b) > 50 kg
c) < 50 kg d) = 0
Ans: (d)
Expln:- As the lift is falling freely, therefore its acceleration = g (downwards)
Let, the force acting on body due to spring is "F"
$\therefore (50g) - F = (50)\,a$
$50g - F = 50\,g$
$F = 0$
Thus, no force is acting on the body due to spring.
So, the reading of spring balance is zero.

38) A body starts from rest and moves with constant acceleration for *t* seconds It travels a distance x_1 in first half time and x_2 in next half of time, then
(a) $x_2 = 3x_1$ (b) $x_2 = x_1$
(c) $x_2 = 4x_1$ (d) $x_2 = 2x_1$
Ans: (a):
Expln:- As the body starts from rest,
$\therefore u = 0$
Let *a* be constant acceleration of the body.
Distance travelled by the body in(*t* /2)s is
$$x_1 = \frac{1}{2}a\left(\frac{t}{2}\right)^2 = \frac{1}{8}at^2 \quad\text{.....................(i)}$$
Distance travelled by the body in *t* s is
$$x_1 + x_2 = \frac{1}{2}at^2 = 4x_1 \qquad \text{(Using (i))}$$
$$\therefore x_2 = 4x_1 - x_1 = 3x_1$$

39). A person is driving a vehicle at uniform speed of 5 m s^{-1} on a level curved track of radius 5m. The coefficient of static friction between tyres and road is 0.1. Will the person slip while taking the turn with the same speed? (Take $g = 10$ m s^{-2}.)
Choose the correct statement.
(a) A person will slip if $v^2 < 5$ m s^{-1}.
(b) A person will slip if $v^2 = 5$ m s^{-1}.
(c) A person will slip if $v^2 > 10$ m s^{-1}.
(d) A person will slip if $v^2 > 5\ m^2 s^{-2}$.
Ans: (d): the person will not slip if
$$V^2 \le \mu_s Rg$$
Here, $\mu_s = 0.1$, $R = 5$ m, $g = 10$ m s^{-2}
$\mu_s Rg = 0.1 \times 5m \times 10m\ s^{-2}$
Or $v^2 \le 5\ m^2 s^{-2}$
Therefore the person will slip if $v^2 > 5m^2 s^{-2}$.

40) The electric field intensity produced by the radiations coming from 100 W bulb at a 3 m distance is E. The electric field intensity produced by the radiations coming from 50 W bulb at the same distance is................
a) $\frac{E}{2}$ b) 2E
c) $\frac{E}{\sqrt{2}}$ d) $\sqrt{2}\,E$
Ans: C

41) Two fly wheels are connected by a non-slipping belt as shown in the figure. 2 1_1=4kg m^2 and ,r_1=20cm, I_2 20kg m^2 and r_2 =30cm . A torque of 10 Nm is applied on the smaller wheel. Then match the entries of column I with appropriate entries of column II.

I	Quantities	II	Their numerical Values (in SI units)
(a)	Angular acceleration of smaller wheel	(i)	$\frac{5}{3}$
(b)	Torque on the larger wheel	(ii)	$\frac{100}{3}$
(c)	Angular acceleration of larger wheel	(iii)	$\frac{5}{2}$



a) a-ii , b-iii, c-i b) a-iii, b-i c-ii
c) a-ii b-I c-iii d) a-iii b-ii c-i
Ans:- d
Expln:-
$T_1 = I_1\alpha_1$ $\qquad \alpha_2 H_2 = \alpha_1 H_1$
$10 = \alpha_1 \times 4$ $\qquad \alpha_2 \times 0.3 = \frac{5}{2} \times 0.2$
$\therefore \alpha_1 = \frac{5}{2} SI$ $\qquad \alpha_2 = \frac{5}{3} SI$
$\therefore T_2 = I_2\alpha_2 = 20 \times \frac{5}{3} = \frac{100}{3} SI$

43) If E and B represent electric and magnetic field vectors of the electromagnetic wave, the direction of propagation of electromagnetic wave is along..................
a) E b) B
c) B x E d) E x B
Ans:-d

ಚಿಟಿಕೆ ಸುದ್ದಿ

24 ಜಿಲ್ಲೆಗಳಲ್ಲಿ ಇಂದು ಮಳೆ ಮುನ್ಸೂಚನೆ

ಬೆಂಗಳೂರು: ಬೆಂಗಳೂರು ನಗರ ಸೇರಿದಂತೆ ಉತ್ತರ, ದಕ್ಷಿಣ ಹಾಗೂ ಕರಾವಳಿ ಕರ್ನಾಟಕದ ಒಟ್ಟು 24 ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಾರ್ಚ್ 31ರಂದು ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬೆಂಗಳೂರು ದಕ್ಷಿಣ, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಕೊಡಗು, ಮಂಡ್ಯ, ತುಮಕೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಉತ್ತರ ಒಳನಾಡಿನ ಬೆಳಗಾವಿ, ಬಾಗಲಕೋಟೆ, ಧಾರವಾಡ, ವಿಜಯಪುರ, ಕಲಬುರಗಿ, ಬೀದರ್, ಗದಗ ಹಾಗೂ ಹಾವೇರಿ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆ ಇದೆ.

ಮುಂದಿನ ಆರು ದಿನ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಹಗುರವಾಗಿ ಮಳೆಯಾದರೆ, ಕೆಲವು ಕಡೆಗಳಲ್ಲಿ ಗುಡುಗು ಕೂಡ ಇರಲಿದೆ.

ಉತ್ತರ ಕರ್ನಾಟಕದ ಕಲಬುರಗಿಯಲ್ಲಿ ಉಷ್ಣಾಂಶದ ಪ್ರಮಾಣದಲ್ಲಿ ಏರಿಕೆ ಕಂಡುಬಂದಿದ್ದು, ಸೋಮವಾರ 39.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ರಾಯಚೂರು, ಕೊಪ್ಪಳ, ವಿಜಯಪುರ, ಬೀದರ್‌ನಲ್ಲೂ ಉಷ್ಣಾಂಶ ಪ್ರಮಾಣದಲ್ಲಿ ಹೆಚ್ಚಳವಾಗಿದೆ.

ಬಿರುಗಾಳಿ ಸಹಿತ ಮಳೆ

ಚಿಕ್ಕಮಗಳೂರು ನಗರದಲ್ಲಿ ಸೋಮವಾರ ಸಂಜೆ ಸಾಧಾರಣ ಮಳೆಯಾಯಿತು

ಚಿಕ್ಕಮಗಳೂರು: ಜಿಲ್ಲೆಯ ಹಲವೆಡೆ ಸೋಮವಾರ ಮಧ್ಯಾಹ್ನ ಮತ್ತು ಸಂಜೆ ಗುಡುಗು ಸಹಿತ ಮಳೆ ಸುರಿಯಿತು. ನರಸಿಂಹರಾಜಪುರ ಪಟ್ಟಣದ ಸುತ್ತಮುತ್ತ ಅರ್ಧಗಂಟೆಗೂ ಹೆಚ್ಚು ಕಾಲ ಮಳೆ ಆರ್ಭಟಿಸಿತು. ಕೊಪ್ಪ, ಬಾಳೆಹೊನ್ನೂರು, ಚಿಕ್ಕಮಗಳೂರು ನಗರ ವ್ಯಾಪ್ತಿಯಲ್ಲಿ ಸಾಧಾರಣ ಮಳೆ ಸುರಿಯಿತು.

ವಿಮಾನ ನಿಲ್ದಾಣದ ಆವರಣಕ್ಕೆ ಬಂದ ಕರಡಿ



ಶಿವಮೊಗ್ಗ ವಿಮಾನ ನಿಲ್ದಾಣದ ಆವರಣದಲ್ಲಿ ಕಾಣಿಸಿಕೊಂಡಿದ್ದ ಕರಡಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ನಗರದ ಹೊರವಲಯದ ಸೋಗಾನೆಯಲ್ಲಿರುವ ವಿಮಾನ ನಿಲ್ದಾಣ ಆವರಣದಲ್ಲಿ ಸೋಮವಾರ ಕಾಣಿಸಿದ್ದ ಕರಡಿಯನ್ನು ಅರಣ್ಯ ಇಲಾಖೆ ತಂಡ ಮಧ್ಯಾಹ್ನ ಸೆರೆ ಹಿಡಿಯಿತು.

ಗೋಪಾಲಗೌಡ ಬಡಾವಣೆ ಸೇರಿದಂತೆ ಈ ಹಿಂದೆಯೂ ನಗರದ ಜನನಿಬಿಡ ಪ್ರದೇಶಗಳತ್ತ ಕೆಲವು ಕರಡಿಗಳು ವಿಹಾರಕ್ಕೆ ಬಂದು ಸದ್ದು ಮಾಡಿದ್ದು, ಭೀತಿ ಮೂಡಿತ್ತು.

ತುಂಗಾನಗರ ಠಾಣೆ ಪೊಲೀಸರಿಂದ ಮಾಹಿತಿ ಬರುತ್ತಲೇ ಪಶು ವೈದ್ಯರ ಜೊತೆ ಸ್ಥಳಕ್ಕೆ ಬಂದ ಅರಣ್ಯ ಇಲಾಖೆಯ 20 ಜನರ ತಂಡ ಕರಡಿ ಸೆರೆಗೆ ಕಾರ್ಯಾಚರಣೆ ಆರಂಭಿಸಿತು.

ಬೆಳಿಗ್ಗೆ ವಿನಾಯಕ ನಗರದಲ್ಲಿ ಕಾಣಿಸಿದ್ದ ಕರಡಿ ಬಳಿಕ ವಿಮಾನ ನಿಲ್ದಾಣದ ಆವರಣ ಪ್ರವೇಶಿಸಿದೆ. ಬಳಿಕ ತಡೆಗೋಡೆ ಹಾರಿ ಪಕ್ಕದ ಜ್ಯೋತಿನಗರಕ್ಕೆ ಬಂದಿದೆ. ಮತ್ತೆ ವಿಮಾನ ನಿಲ್ದಾಣದ ಆವರಣದತ್ತ ಬಂದಾಗ, ಅಲ್ಲಿ ಸನ್ನದ್ಧರಾಗಿದ್ದ ಸಿಬ್ಬಂದಿ ಕರಡಿ ಸೆರೆಗೆ ಮುಂದಾದರು. ತಪ್ಪಿಸಿಕೊಂಡು ಮತ್ತೆ ಜ್ಯೋತಿನಗರದತ್ತ ಬಂದಾಗ ಸ್ಥಳೀಯರು ಭೀತಿಗೊಳಗಾದರು.

ಮಾಹಿತಿ ತಿಳಿದು ಅಲ್ಲಿಗೆ ಸಿಬ್ಬಂದಿ ಜೊತೆಗೆ ಧಾವಿಸಿದ ಪಶು ವೈದ್ಯಾಧಿಕಾರಿ ಡಾ.ಮುರಳಿ ಮೋಹನ್ ಕರಡಿಗೆ ಅರಿವಳಿಕೆ ಚುಚ್ಚುಮದ್ದು ನೀಡಿದ್ದಾರೆ. ಪ್ರಜ್ಞೆ ತಪ್ಪಿದ ಕರಡಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ತ್ಯಾವರೆಕೊಪ್ಪ ಮೃಗಾಲಯ ಬಳಿಯ ಪುನರ್ವಸತಿ ಕೇಂದ್ರಕ್ಕೆ ಬಿಡಲಾಯಿತು.

ಮೈಸೂರು ಜಿಲ್ಲೆ ನಂಜನಗೂಡಿನ 'ದೊಡ್ಡಜಾತ್ರೆ' ಪ್ರಯುಕ್ತ ಸೋಮವಾರ ಮುಂಜಾನೆ ನಡೆದ 'ಶ್ರೀಕಂಠೇಶ್ವರಸ್ವಾಮಿ ಪಂಚ ಮಹಾರಥೋತ್ಸವ' ನೋಡಲು ಹರಿದು ಬಂದ ಭಕ್ತಸಾಗರ –ಚಿತ್ರ/ಅನೂಪ್ ರಾಘ.ಟಿ.

ನೇರ ನೇಮಕಾತಿ: ಇನ್ನಷ್ಟು ವಿಳಂಬ

ಒಳಮೀಸಲಾತಿ ಗೊಂದಲ, ಚುನಾವಣಾ ನೀತಿ ಸಂಹಿತೆ ಅಡ್ಡಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಖಾಲಿ ಇರುವ ನೇರ ನೇಮಕಾತಿ ಹುದ್ದೆಗಳ ಪೈಕಿ 56,432 ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯು ಒಳಮೀಸಲಾತಿ ಗೊಂದಲ ಹಾಗೂ ಉಪ ಚುನಾವಣೆಯ ನೀತಿ ಸಂಹಿತೆ ಕಾರಣಕ್ಕೆ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇದೆ.

ವಿವಿಧ ಇಲಾಖೆಗಳಲ್ಲಿನ ಹುದ್ದೆಗಳ ನೇಮಕಾತಿಗೆ ವಿಳಂಬ ಮಾಡುತ್ತಿರುವ ಸರ್ಕಾರದ ಧೋರಣೆ ಖಂಡಿಸಿ ಉದ್ಯೋಗಾಕಾಂಕ್ಷಿಗಳು ಧಾರವಾಡದಲ್ಲಿ ಬೃಹತ್ ಪ್ರತಿಭಟನೆ ನಡೆಸಿದ್ದರು. ಆ ವೇಳೆ, ನೇಮಕಾತಿ ಪ್ರಕ್ರಿಯೆ ಆರಂಭಿಸಲು ಮುಂದಾಗಿದ್ದ ಸರ್ಕಾರ, ಮುಂದಿನ 30 ದಿನಗಳಲ್ಲಿ ಆರಂಭಿಸುವಂತೆ ಎಲ್ಲ ಇಲಾಖೆಗಳಿಗೆ ಹಾಗೂ ನೇಮಕಾತಿ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಿತ್ತು. ಸದ್ಯಕ್ಕೆ ನೇಮಕಾತಿ ಪ್ರಕ್ರಿಯೆಗೆ ತಡೆ ಬೀಳುವ ಎಲ್ಲ ಲಕ್ಷಣಗಳು ಕಾಣಿಸಿವೆ.

ವಿವಿಧ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇರುವಂತೆಯೇ, 100 ನಿಗಮ ಮಂಡಳಿಗಳಲ್ಲಿ 1,01,295 ಹುದ್ದೆಗಳು ಖಾಲಿ ಇವೆ. ಅತಿ ಹೆಚ್ಚು ಅಂದರೆ, ಕೆಪಿಟಿಸಿಎಲ್ 34,474, ಕೆಎಸ್‌ಆರ್‌ಟಿಸಿ 8,590, ಹೆಸ್ಕಾಂ 6,543, ಕೆಪಿಸಿಎಲ್ 4,635, ಮೆಸ್ಕಾಂ 4,028, ಚೆಸ್ಕಾಂ 4,105, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ 3,302, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ 3,211 ಹುದ್ದೆಗಳು ಭರ್ತಿಯಾಗದೇ ಉಳಿದಿವೆ.

ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ, ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲು 'ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳ ಸ್ಥಾನ ಮತ್ತು ನೇಮಕಾತಿಗಳಲ್ಲಿ ಮೀಸಲಾತಿ) ಕಾಯ್ದೆ– 2022'ರನ್ನು ಸರ್ಕಾರ ಜಾರಿ ಮಾಡಿತ್ತು. ಮೀಸಲಾತಿ ಪ್ರಮಾಣವನ್ನು ಶೇ 50ರಿಂದ ಶೇ 56ಕ್ಕೆ ಹೆಚ್ಚಿಸಿ, ರೋಸ್ಟರ್ ಬಿಂದುಗಳನ್ನು ಮರು ನಿರ್ಣಯಿಸಲಾಗಿತ್ತು.

ಕಾಯ್ದೆ ಪ್ರಶ್ನಿಸಿರುವ ಮೂರು ರಿಟ್ ಅರ್ಜಿಗಳ ಕುರಿತು ಮಧ್ಯಂತರ ಆದೇಶ ನೀಡಿರುವ ಹೈಕೋರ್ಟ್, 'ಹೆಚ್ಚಿಸಿರುವ ಮೀಸಲಾತಿ ಅನುಸಾರ ಹೊಸ ನೇಮಕಾತಿ ಮಾಡುವಂತಿಲ್ಲ. ಕಾಯ್ದೆಯ ಅನ್ವಯ ಈಗಾಗಲೇ ಆರಂಭಿಸಿರುವ ನೇಮಕಾತಿ ಪ್ರಕ್ರಿಯೆ ಮುಂದುವರಿಸಬಹುದು. ನೇಮಕಾತಿಯು ರಿಟ್ ಅರ್ಜಿಗಳ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರುತ್ತದೆ' ಎಂದು ಹೇಳಿತ್ತು. ಹೀಗಾಗಿ, ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿದೆ.

ಆದರೆ, ಶೇ 56ರಷ್ಟು ಮೀಸಲಾತಿ ಅಳವಡಿಸಿ ಈಗಾಗಲೇ 4,409 ಹುದ್ದೆಗಳಿಗೆ ನೇಮಕಾತಿ ಪೂರ್ಣಗೊಂಡಿದೆ. 3,644 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.24,300 ಹುದ್ದೆಗಳ ಭರ್ತಿಗೆ ಹೊಸ ಅಧಿಸೂಚನೆ ಹೊರಡಿಸಲು ಆರ್ಥಿಕ ಇಲಾಖೆ ಮಂಜೂರಾತಿ ನೀಡಿದೆ. 916 ಬ್ಯಾಕ್ ಲಾಗ್ ಹುದ್ದೆಗಳು ಮತ್ತು ಕಲ್ಯಾಣ ಕರ್ನಾಟಕ ಭಾಗದಲ್ಲಿ 371 (ಜೆ) ಅಡಿ 32,132 ಹುದ್ದೆಗಳ ಭರ್ತಿಗೂ ಹೊಸದಾಗಿ ಅಧಿಸೂಚನೆ ಹೊರಡಿಸಬೇಕಿದೆ.

'1995ರ ಜೂನ್ 20ರ ಆದೇಶದಂತೆ ಶೇ 50ರ ಮೀಸಲಾತಿ ಪ್ರಮಾಣ ಹಾಗೂ ರೋಸ್ಟರ್ ಬಿಂದುಗಳಂತೆ ನೇಮಕಾತಿ ಅಧಿಸೂಚನೆ ಹೊರಡಿಸುವುದು' ಎಂದು ಫೆ. 27ರಂದು ಸರ್ಕಾರ ಆದೇಶವನ್ನೂ ಹೊರಡಿಸಿತ್ತು. ಹೈಕೋರ್ಟ್‌ನ ಅಂತಿಮ ಆದೇಶಕ್ಕೆ ಒಳಪಟ್ಟು, ನೇಮಕಾತಿ ಮಾಡುವಾಗ ಶೇ 6ರಷ್ಟು (ಪರಿಶಿಷ್ಟ ಜಾತಿಗೆ ಶೇ 2, ಪಂಗಡಕ್ಕೆ ಶೇ 4) ಹುದ್ದೆಗಳನ್ನು ಕಾಯ್ದಿರಿಸಬೇಕು ಎಂದೂ ಈ ಆದೇಶದಲ್ಲಿ ತಿಳಿಸಿತ್ತು.

ಆದರೆ, ಶೇ 50ರ ಮೀಸಲಾತಿಯಡಿ ನೇಮಕಾತಿ ಮಾಡಿಕೊಳ್ಳುವಾಗಲೂ ಒಳಮೀಸಲಾತಿ ಕಲ್ಪಿಸಬೇಕೆಂದು ದಲಿತ ಎಡಗೈ ಸಮುದಾಯ ಪಟ್ಟು ಹಿಡಿದರೆ, ಒಳಮೀಸಲಾತಿ ರಹಿತವಾಗಿ ನೇಮಕಾತಿ ನಡೆಸಬೇಕು ಎಂದು ಬಲಗೈ ಸಮುದಾಯ ಮೇಲೆ ಒತ್ತಡ ಹೇರುತ್ತಲೇ ಇದೆ. ಈ ಸಮಸ್ಯೆ ಇತ್ಯರ್ಥವಾಗದೇ ನೇಮಕಾತಿ ಅಸಾಧ್ಯ ಎನ್ನುವ ಪರಿಸ್ಥಿತಿ ಇದೆ.

10 ಸಾವಿರಕ್ಕೂ ಹೆಚ್ಚು ಹುದ್ದೆ ಖಾಲಿ ಇರುವ ಇಲಾಖೆಗಳು

ಇಲಾಖೆ	ಹುದ್ದೆಗಳು
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ	79,694
ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ	37,572
ಒಳಾಡಳಿತ	28,188
ಉನ್ನತ ಶಿಕ್ಷಣ	13,599
ಪಶು ಸಂಗೋಪನೆ	11,020
ಕಂದಾಯ	10,867
ಪಂಚಾಯತ್ ರಾಜ್	10,504

ಆರ್ಥಿಕ ಇಲಾಖೆ ಮಂಜೂರಾತಿ ನೀಡಿದ ಹುದ್ದೆಗಳು

ಗ್ರೂಪ್ 'ಎ' ಹುದ್ದೆಗಳು	ಗ್ರೂಪ್ 'ಬಿ' ಹುದ್ದೆಗಳು	ಗ್ರೂಪ್ 'ಸಿ' ಹುದ್ದೆಗಳು	371 (ಜೆ) ಅಡಿ ಅಧಿಸೂಚನೆ ಹೊರಡಿಸಬೇಕಾದ ಹುದ್ದೆಗಳು	ಒಟ್ಟು ಹುದ್ದೆಗಳು
562	619	23,119	32,132	56,432

* ಹೊಸ ಅಧಿಸೂಚನೆ ಹೊರಡಿಸಲು ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳು- 916

ಸರ್ಕಾರಿ ಹುದ್ದೆ– ಸ್ಥಿತಿಗತಿ

46 ವಿವಿಧ ಇಲಾಖೆಗಳು

2,84,881 ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ

96,844 ಗುತ್ತಿಗೆ, ಹೊರಗುತ್ತಿಗೆಯಡಿ ಭರ್ತಿ

1,01,295 ನಿಗಮ– ಮಂಡಳಿಗಳಲ್ಲಿ ಖಾಲಿ ಹುದ್ದೆ

ಮುಂದಿನ 5 ವರ್ಷಗಳಲ್ಲಿ ನಿವೃತ್ತಿ ಹೊಂದಲಿರುವವರ ಸಂಖ್ಯೆ

ವರ್ಷ	ನೌಕರರ ಸಂಖ್ಯೆ
2026	16,513
2027	16,800
2028	17,726
2029	18,100
2030	17,259
ಒಟ್ಟು	86,398

5 ಸಾವಿರಕ್ಕೂ ಹೆಚ್ಚು ಹುದ್ದೆ ಖಾಲಿ ಇರುವ ಇಲಾಖೆಗಳು

ಪರಿಶಿಷ್ಟ ಜಾತಿಗಳ ಕಲ್ಯಾಣ	9,646
ಹಿಂದುಳಿದ ವರ್ಗಗಳ ಕಲ್ಯಾಣ	8,525
ಆರ್ಥಿಕ	7,668
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು	7,659
ಕೃಷಿ	6,876
ಅರಣ್ಯ	6,478
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ	6,190

₹ 6 ಲಕ್ಷ ಲಂಚ –ಉಪ ಆಯುಕ್ತ ಸೆರೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಪೆಟ್ರೋಲ್ ಬಂಕ್ ಮಾಲೀಕ ವಿಶ್ವಜಿತ್ ನಾಯಕ್ ಅವರಿಂದ ₹ 6 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ವಾಣಿಜ್ಯ ತೆರಿಗೆ ಇಲಾಖೆ ಉಪ ಆಯುಕ್ತ ಭರತ್ ಹೆಗಡೆ ಅವರನ್ನು ಸೋಮವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆ ಅಂಕೋಲಾದ ವಿಶ್ವಜಿತ್ ನಾಯಕ್, ಬೆಂಗಳೂರಿನ ಲೋಕಾಯುಕ್ತ ಕಚೇರಿಗೆ ದೂರು ನೀಡಿದ್ದರು. ಅದನ್ನು ಆಧರಿಸಿ ಬಂದ ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ ದೇವರಾಜು ನೇತೃತ್ವದ ತಂಡ ನವನಗರದ ವಾಣಿಜ್ಯ ತೆರಿಗೆ ಇಲಾಖೆ ಕಚೇರಿ ಮೇಲೆ ದಾಳಿ ನಡೆಸಿತು.

'ವಿಶ್ವಜಿತ್ ನಾಯಕ್ 2019ರಲ್ಲಿ 8 ಟಿಪ್ಪರ್ ಖರೀದಿಸಿದ್ದರು. ಅದರ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ₹60 ಲಕ್ಷ ಬಂದಿತ್ತು. ಈ ಕುರಿತು ವಿಶ್ವಜಿತ್ ಅವರಿಗೆ ನೋಟಿಸ್ ನೀಡಿದ್ದ ಭರತ್, ಅದರ ತೆರಿಗೆ ತಗ್ಗಿಸಲು ₹10 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ.

'ಭರತ್ ಅವರು 4 ಬಾರಿ ವಿಶ್ವಜಿತ್ ಅವರ ವಿಚಾರಣೆ ಮಾಡಿದ್ದರು. ಐದನೇ ಬಾರಿ ಕರೆದು ಹಣದ ಸಮೇತ ಬಂದರೆ ಪ್ರಕರಣ ಇತ್ಯರ್ಥಪಡಿಸಲಾಗುವುದು ಎಂದಿದ್ದರು. ಅದರಂತೆ ಸೋಮವಾರ ಹಣ ಪಡೆಯುವಾಗ ಆರೋಪಿ ವಶಕ್ಕೆ ಪಡೆಯಲಾಯಿತು' ಎಂದು ಮೂಲಗಳು ತಿಳಿಸಿವೆ.

'ಒಳಮೀಸಲು: ಗೊಂದಲ ಬಗೆಹರಿಸಿ'

ಪ್ರಜಾವಾಣಿ ವಾರ್ತೆ



ಆಂಜನೇಯ

ಚಿತ್ರದುರ್ಗ: 'ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ದಿನವಾದ ಏ.14ರೊಳಗೆ ಒಳ ಮೀಸಲಾತಿ ಕುರಿತ ಗೊಂದಲ ಬಗೆಹರಿಸಬೇಕು' ಎಂದು ಮಾಜಿ ಸಚಿವ ಎಚ್.ಆಂಜನೇಯ ಸೋಮವಾರ ಒತ್ತಾಯಿಸಿದ್ದಾರೆ.

'ಉಪ ಚುನಾವಣೆ ಮುಗಿದ ಕೂಡಲೇ ಸಂಪುಟ ಸಭೆ ನಡೆಸಿ ಗೊಂದಲಗಳಿಗೆ ತೆರೆ ಎಳೆಯಬೇಕು. ಶೇ 15ರಷ್ಟು ಮೀಸಲಾತಿ ಪ್ರಮಾಣದಲ್ಲಿ 'ಎ' ವರ್ಗಕ್ಕೆ ನ್ಯಾಯಯುತವಾಗಿ ಸಿಗಬೇಕಾದ ಶೇ 6ರಷ್ಟು ಒಳ ಮೀಸಲಾತಿ ನಿಗದಿ ಮಾಡಬೇಕು' ಎಂದು ಪತ್ರಿಕಾಗೋಷ್ಠಿಯಲ್ಲಿ ಕೋರಿದರು.

'ವಿಶೇಷ ಸಚಿವ ಸಂಪುಟ ಸಭೆ ಮುಂದೂಡಿರುವ ಕಾರಣ ಕೆಲವರು ಜಾಲತಾಣಗಳಲ್ಲಿ ವದಂತಿ ಹರಡುತ್ತಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸುವ ಮಾತುಗಳನ್ನಾಡುತ್ತಿದ್ದಾರೆ. ಅಂತಹ ವದಂತಿಗಳನ್ನು ಯಾರೂ ನಂಬಬಾರದು' ಎಂದು ಕೋರಿದರು.

'ಮೂರು ದಶಕಗಳಿಂದ ಹೋರಾಟನಡೆಸಿ ಒಳ ಮೀಸಲಾತಿಗೆ ಕಾದಿದ್ದೇವೆ. ಕೆಲವೇ ದಿನಗಳಲ್ಲಿ ನ್ಯಾಯ ಸಿಗಲಿದೆ. ಯಾರೂ ಪ್ರತಿಭಟಿಸಬಾರದು' ಎಂದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

DH DECCAN HERALD | ಪ್ರಜಾವಾಣಿ

*ಪ್ರವೇಶ ಉಚಿತ

ಎಡ್ಯುವರ್ಸ್™
ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ
ಪ್ರಾಯೋಜಕರು
AD6 advertising A Unit of Sri Sairam Enterprises

ಬೆಂಗಳೂರು: 04-05 ಏಪ್ರಿಲ್ 2026
ಗಾಯತ್ರಿ ಗ್ರಾಂಡ್, ಅರಮನೆ ಮೈದಾನ (Gate 4)
ಹುಬ್ಬಳ್ಳಿ: 11-12 ಏಪ್ರಿಲ್, 2026
ನೆಹರು ಕ್ರೀಡಾಂಗಣ, ಜೆ.ಸಿ. ನಗರ
ಸಮಯ: ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ

ಸಾಧ್ಯತೆಗಳ ಜಗತ್ತನ್ನೊಮ್ಮೆ ಅನ್ವೇಷಿಸಿ.
ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಕರೆ! ಇದೀಗ ನಿಮ್ಮ ಗುರಿ ರೂಪಿಸಿಕೊಳ್ಳುವ ಮತ್ತು ಉಜ್ವಲ ಭವಿಷ್ಯದ ಮಾರ್ಗ ನಿರ್ಮಿಸಿಕೊಳ್ಳುವ ಸಮಯ ಬಂದಿದೆ!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯ ಎಜುವರ್ಸ್ ವಿದ್ಯಾರ್ಥಿಗಳ ಉನ್ನತ ಭವಿಷ್ಯದ ಕನಸಿಗೊಂದು ಆಸರೆಯನ್ನು ನೀಡುತ್ತಿದೆ. ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಅಸಂಖ್ಯ ಕೋರ್ಸ್‌ಗಳ ಕುರಿತ ಮಾಹಿತಿಯನ್ನು ಒಂದೇ ಸೂರಿನಡಿ ಒಗ್ಗೂಡಿಸುತ್ತಿದೆ. ಇಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್ ಮಾತ್ರವಲ್ಲದೇ ಪ್ರಸ್ತುತ ಜಗತ್ತಿನ ಎಲ್ಲಾ ವೈವಿಧ್ಯಮಯ ಶೈಕ್ಷಣಿಕ ಅಧ್ಯಯನದ ಅವಕಾಶಗಳ ಮಾಹಿತಿಯನ್ನು 'ಎಜುವರ್ಸ್' ಒದಗಿಸಲಿದೆ. ಜತೆಗೆ, ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ತಜ್ಞರು ನಿಮ್ಮೆಲ್ಲಾ ಭವಿಷ್ಯದ ಕನಸಿಗೆ ಅಗತ್ಯ ಮಾರ್ಗದರ್ಶನ ಮಾಡಲಿದ್ದಾರೆ.
ಬನ್ನಿ, 'ಎಡ್ಯೂವರ್ಸ್' ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಳ್ಳಿ!

REGISTER NOW
CET & NEET ಮಾಕ್ ಪರೀಕ್ಷೆಗಾಗಿ
VISION PU COLLEGE BENGALURU
ಕೋಡ್ ಸ್ಕ್ಯಾನ್ ಮಾಡಿ

University Pavilion Sponsors
CMR UNIVERSITY · DAYANANDA SAGAR UNIVERSITY · GARDEN CITY UNIVERSITY · ICFAI Foundation for Higher Education · KLE ACADEMY OF HIGHER EDUCATION AND RESEARCH, BELAGAVI · MANIPAL ACADEMY of HIGHER EDUCATION BENGALURU · Parul University
PRESIDENCY UNIVERSITY · RAMAIAH UNIVERSITY OF APPLIED SCIENCES · REVA UNIVERSITY · RV UNIVERSITY · SAPTHAGIRI NPS UNIVERSITY · SHIV NADAR UNIVERSITY · SRM UNIVERSITY AP

Platinum Sponsor
VIT Vellore Institute of Technology

Gold Sponsors
CAMBRIDGE INSTITUTE OF TECHNOLOGY · EAST POINT GROUP OF INSTITUTIONS · KLE Technological University · KRUPANIDHI GROUP OF INSTITUTIONS · The Oxford Educational Institutions · SHRI DHARMASTHALA MANJUNATHESHWARA EDUCATIONAL SOCIETY (TRUST) (R)

Silver Sponsors
AMITY UNIVERSITY BENGALURU · BGU BIRLA GLOBAL UNIVERSITY Bhubaneswar · EAST WEST GROUP OF INSTITUTIONS · RAJARAJESWARI COLLEGE OF ENGINEERING · SAMBHRAM INSTITUTIONS

Exhibitors
ABBS · ACS COLLEGE OF ENGINEERING · AIMS INSTITUTES · AMRITA · ATRIA · DECCAN PU COLLEGE · IAS BABA · IDEMIR BUSINESS SCHOOL · ISB&M · VIVEKANANDA EDUCATIONAL INSTITUTIONS · KHAJA BANDANAWAZ UNIVERSITY · MITS · MIT-WPU · MIT WORLD PEACE UNIVERSITY · MS ENGINEERING COLLEGE · PES UNIVERSITY · PES Institute of Technology and Management · RAMAIAH College of Arts, Science & Commerce · R R INSTITUTIONS · SANJAY GHODAWAT UNIVERSITY · S.E.A GROUP OF INSTITUTIONS · S-VYASA · UNIVERSAL GROUP OF INSTITUTIONS · VVCE · vymak · Wonderspaces

ಸ್ಪಾನ್ಸರ್‌ಶಿಪ್ ಮತ್ತು ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ದಿನೇಶ್ - 9986006598 | ಬೆಂಗಳೂರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಜೀವಂತವಾದ ಯಾವುದೇ ಭಾಷೆಯೂ ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಂಪಾದಕೀಯ

ಎನ್‌ಜಿಒಗಳ ಮೇಲೆ ಬಿಗಿಹಿಡಿತ ಸರ್ಕಾರಕ್ಕೆ ಅನುಕೂಲಕರ ಮಸೂದೆ

ಲೋಕಸಭೆಯಲ್ಲಿ ಕಳೆದ ವಾರ ಮಂಡನೆ ಆಗಿರುವ 'ವಿದೇಶಿ ದೇಣಿಗೆ (ನಿಯಂತ್ರಣ) ತಿದ್ದುಪಡಿ ಮಸೂದೆ 2026' ಸರ್ಕಾರೇತರ ಸಂಸ್ಥೆಗಳ (ಎನ್‌ಜಿಒ) ಚಟುವಟಿಕೆ ಮೇಲೆ ನಿಯಂತ್ರಣ ಸಾಧಿಸಲು ಹಾಗೂ ಅವುಗಳ ಮೇಲಿನ ಹಿಡಿತವನ್ನು ಇನ್ನಷ್ಟು ಬಲಗೊಳಿಸಲು ಕೇಂದ್ರ ಸರ್ಕಾರಕ್ಕೆ ಅವಕಾಶ ಕಲ್ಪಿಸಲಿದೆ. ಕಾನೂನು ಪ್ರಕಾರ ನೋಂದಣಿ ರದ್ದುಗೊಂಡಿರುವ ಇಲ್ಲವೇ ನಿರ್ಬಂಧಕ್ಕೊಳಗಾಗಿರುವ ಎನ್‌ಜಿಒಗಳ ವಿದೇಶಿ ನಿಧಿಗಳು ಮತ್ತು ಸ್ವತ್ತುಗಳ ನಿರ್ವಹಣೆಗಾಗಿ 'ನಿರ್ದಿಷ್ಟ ಪ್ರಾಧಿಕಾರ'ವೊಂದನ್ನು ಸ್ಥಾಪಿಸಲು ಮಸೂದೆ ಉದ್ದೇಶಿಸಿದೆ. 2010ರ ಮೂಲಶಾಸನದಲ್ಲಿನ ಲೋಪಗಳನ್ನು ಸರಿಪಡಿಸುವುದು ಮಸೂದೆಯ ಉದ್ದೇಶವಾಗಿದೆ ಎಂದು ಸರ್ಕಾರ ಹೇಳಿದೆ. ವಿದೇಶಗಳಿಂದ ಪಡೆಯುವ ದೇಣಿಗೆಗಳ ಮೇಲ್ವಿಚಾರಣೆ ಹಾಗೂ ನಿರ್ವಹಣೆಗೆ 'ಉದ್ದೇಶಿತ ಪ್ರಾಧಿಕಾರ'ದ ಮೂಲಕ ಸಮಗ್ರ ಚೌಕಟ್ಟು ರೂಪಿಸುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಹೇಳಿದ್ದಾರೆ. ಆದರೆ, ವಾಸ್ತವದಲ್ಲಿ ಇದು ಎನ್‌ಜಿಒಗಳನ್ನು ದುರ್ಬಲಗೊಳಿಸಲಿದೆ ಹಾಗೂ ಅವುಗಳನ್ನು ಸರ್ಕಾರದ ಕಠಿಣ ನಿಯಂತ್ರಣಕ್ಕೆ ಒಳಪಡಿಸಲಿದೆ. ಎನ್‌ಜಿಒಗಳ ಕುರಿತ ಸರ್ಕಾರದ ಅಸಮಾಧಾನ ರಹಸ್ಯವೇನೂ ಅಲ್ಲ. ಉದ್ದೇಶಿತ ತಿದ್ದುಪಡಿಯು ಅವುಗಳನ್ನು ಮತ್ತಷ್ಟು ತೊಂದರೆಗೊಳಪಡಿಸಲು ಹೊಸ ಸಾಧನವನ್ನು ಸರ್ಕಾರಕ್ಕೆ ಒದಗಿಸಲಿದೆ. ಈ ಹಿಂದೆಯೂ ಸರ್ಕಾರ ಅಳವಡಿಸಿಕೊಂಡಿದ್ದ ನೀತಿಗಳು ಎನ್‌ಜಿಒಗಳ ಕಾರ್ಯಾಚರಣೆಯನ್ನು ಕಠಿಣಗೊಳಿಸಿದ್ದವು ಹಾಗೂ ಕೆಲವು ಸರ್ಕಾರೇತರ ಸಂಸ್ಥೆಗಳು ಮುಚ್ಚಲು ಕಾರಣವಾಗಿದ್ದವು.

ವಿದೇಶಿ ದೇಣಿಗೆ ತಿದ್ದುಪಡಿ ಮಸೂದೆಯು ಎನ್‌ಜಿಒಗಳ ಕಾರ್ಯಾಚರಣೆಯನ್ನು ನಿಯಂತ್ರಿಸುವ ಹಾಗೂ ಅವುಗಳ ಮೇಲಿನ ಸರ್ಕಾರದ ಹಿಡಿತವನ್ನು ಬಲಪಡಿಸುವ ಪ್ರಯತ್ನವಾಗಿದೆ.

ಪರವಾನಗಿ ರದ್ದಾಗಿರುವ ಅಥವಾ ಅಮಾನತುಗೊಂಡಿರುವ ಎನ್‌ಜಿಒಗಳಿಗೆ ಸೇರಿದ, ವಿದೇಶಿ ದೇಣಿಗೆಯನ್ನು ಬಳಸಿಕೊಂಡು ನಿರ್ಮಿಸಿರುವ ಆಸ್ತಿಗಳನ್ನು ವಶಕ್ಕೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವ ವಿವಾದಾಸ್ಪದ ಪ್ರಸ್ತಾವ ಮಸೂದೆಯಲ್ಲಿದೆ. ಅಂಥ ಆಸ್ತಿಗಳನ್ನು 'ಸಾರ್ವಜನಿಕ ಉದ್ದೇಶ'ಗಳಿಗಾಗಿ ಬಳಸುವ, ನಿರ್ವಹಿಸುವ, ವರ್ಗಾಯಿಸುವ ಅಥವಾ ವಿಲೇವಾರಿ ಮಾಡುವ ಅಧಿಕಾರ ಪ್ರಾಧಿಕಾರಕ್ಕೆ ದೊರೆಯಲಿದೆ. ಸರ್ಕಾರದ ಪೂರ್ವಾನುಮತಿ ಇಲ್ಲದೆ, ವಿದೇಶಿ ನಿಧಿಯಿಂದ ನಿರ್ಮಿಸಲಾದ ಸ್ವತ್ತುಗಳ ವರ್ಗಾವಣೆ ಅಥವಾ ವಿಲೇವಾರಿಗೂ ನಿರ್ಬಂಧ ವಿಧಿಸಲಾಗಿದೆ. ಈ ನಿರ್ಬಂಧಗಳು ಸರ್ಕಾರೇತರ ಸಂಸ್ಥೆಗಳ ಸ್ವಾಯತ್ತ ಕಾರ್ಯಾಚರಣೆಯ ಮೇಲೆ ದುಷ್ಪರಿಣಾಮ ಬೀರಲಿವೆ. ರಾಜ್ಯ ಸರ್ಕಾರಗಳು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ (ಎಎಫ್‌ಸಿಆರ್‌ಎ) ಸಂಬಂಧಿಸಿದ ಯಾವುದೇ ತನಿಖೆಯನ್ನು ಆರಂಭಿಸುವ ಮುನ್ನ ಕೇಂದ್ರದ ಅನುಮತಿಯನ್ನು ಪಡೆಯಬೇಕು ಎನ್ನುವ ನಿಯಮವು ರಾಜ್ಯಗಳ ಅಧಿಕಾರವನ್ನು ಮಿತಗೊಳಿಸುವಂತಿದೆ ಹಾಗೂ ಒಕ್ಕೂಟ ತತ್ತ್ವಕ್ಕೆ ವಿರುದ್ಧವಾದುದಾಗಿದೆ.

ಪ್ರಸಕ್ತ ಮಸೂದೆಯು 2010ರ ಕಾಯ್ದೆಯನ್ನು ಕಠಿಣಗೊಳಿಸುತ್ತಲೇ ಹೋಗಿರುವ 2016, 2018 ಮತ್ತು 2020ರಲ್ಲಿ ತರಲಾದ ತಿದ್ದುಪಡಿಗಳ ಮುಂದುವರಿಕೆಯಾಗಿದೆ. ನಿರ್ದಿಷ್ಟ ಪ್ರಾಧಿಕಾರಕ್ಕೆ ನೀಡಲಾಗುವ ಅಧಿಕಾರವು ವಿವೇಚನೆಗೆ ಒಳಪಟ್ಟಿದ್ದು, ಅನಿಯಂತ್ರಿತ ಹಾಗೂ ವ್ಯಕ್ತಿನಿಷ್ಠತೆಗೆ ಅವಕಾಶ ಕಲ್ಪಿಸುವ ಸಾಧ್ಯತೆಯಿದೆ. ಆಸ್ತಿ ಜಪ್ತಿ ಮಾಡುವ ಪರಮಾಧಿಕಾರವು, ಸಂಸ್ಥೆಯನ್ನು ಕೊನೆಗಾಣಿಸುವುದಕ್ಕೂ ಕಾರಣ ಆಗಬಹುದಾಗಿದೆ. ಸ್ವದೇಶಿ ನಿಧಿ ಹಾಗೂ ವಿದೇಶಿ ದೇಣಿಗೆ ಎರಡನ್ನೂ ಬಳಸಿಕೊಂಡು ಸ್ವತ್ತುಗಳನ್ನು ಸೃಜಿಸಿರುವ ಉದಾಹರಣೆಗಳೂ ಇದ್ದು, ತೊಡಗಿಸಿರುವ ಸಂಪನ್ಮೂಲವನ್ನು ಪ್ರತ್ಯೇಕಿಸಿ ನೋಡುವುದು ಸುಲಭವಲ್ಲ. ಈ ಮಸೂದೆಯು ಸರ್ಕಾರದ ಅನುಕೂಲಕ್ಕೆ ಪೂರಕವಾಗಿ ನಿಯಮಗಳನ್ನು ಪಾಲಿಸಲು ಒತ್ತಡವನ್ನು ಸೃಷ್ಟಿಸುವಂತಿದೆ. ಸದುದ್ದೇಶದ ನಿಯಮಗಳು ಹಾಗೂ ನಿಬಂಧನೆಗಳು ಸಹ ಸರ್ಕಾರದ ನೀತಿಗಳನ್ನು ಪ್ರಶ್ನಿಸುವ ಅಥವಾ ಸರ್ಕಾರಕ್ಕೆ ಇಷ್ಟವಿಲ್ಲದ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳನ್ನು ಗುರಿಯಾಗಿಸಲು ಅನುಕೂಲ ಆಗುವಂತೆ ತಪ್ಪಾಗಿ ಅರ್ಥೈಸಬಹುದು, ದುರುಪಯೋಗಕ್ಕೆ ಕಾರಣವಾಗಬಹುದು. ಮಾನವ ಹಕ್ಕುಗಳು ಹಾಗೂ ನಾಗರಿಕರ ಹಕ್ಕುಗಳ ರಕ್ಷಣೆಗಾಗಿ ಕಾರ್ಯ ನಿರ್ವಹಿಸುವ ಎನ್‌ಜಿಒಗಳು ಸದಾ ಹೆಚ್ಚಿನ ಸಂಕಷ್ಟಕ್ಕೆ ಗುರಿಯಾಗುತ್ತಿರುತ್ತವೆ. ಸುಮಾರು ಒಂದು ದಶಕದ ಅವಧಿಯಲ್ಲಿ 20,711 ಸಂಸ್ಥೆಗಳ ವಿದೇಶಿ ದೇಣಿಗೆಗಳ ಪರವಾನಗಿಗಳನ್ನು ರದ್ದುಪಡಿಸಲಾಗಿದೆ. ಪ್ರಸ್ತುತ ಎಫ್‌ಸಿಆರ್‌ಎ ಪ್ರಮಾಣಪತ್ರವನ್ನು ಹೊಂದಿರುವ 16,000 ಸಂಸ್ಥೆಗಳಷ್ಟೇ ಉಳಿದುಕೊಂಡಿವೆ. ಸರ್ಕಾರದ ಮತ್ತೊಂದು ರಾಜಕೀಯ ಆಯುಧವಾಗಿ ಎಫ್‌ಸಿಆರ್‌ಎ ಬಳಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿಯೇ, ವಿದೇಶಿ ದೇಣಿಗೆ ಮಸೂದೆಯನ್ನು 'ಅಪಾಯಕಾರಿ' ಎಂದು ಕರೆದಿರುವ ವಿರೋಧ ಪಕ್ಷಗಳ ಟೀಕೆ ಹಾಗೂ ನಾಗರಿಕ ಸಂಘಟನೆಗಳ ವ್ಯಾಪಕ ವಿರೋಧವನ್ನು ಗಮನಿಸಬೇಕಾಗಿದೆ.

ಶಾಸಕರಿಗೇಕೆ ವಿಐಪಿ ಕೋಡು?

ವಿಶ್ಲೇಷಣೆ

ಎಸ್. ಸುರೇಶ್ ಕುಮಾರ್

2025ರ ಜೂನ್ 4ರಂದು ವಿಧಾನ ಸೌಧದ ಪೂರ್ವ ಭಾಗದಲ್ಲಿರುವ ಗ್ರ್ಯಾಂಡ್ ಸ್ಟೆಪ್ಸ್ ಮೇಲ್ಭಾಗದಲ್ಲಿ ಒಂದು ಕಾರ್ಯಕ್ರಮ ನಡೆಯಿತು. ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಆದ 'ಆರ್‌ಸಿಬಿ' ತಂಡದ ಆಟಗಾರರಿಗೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮವದು. ವೇದಿಕೆಯ ಮೇಲೆ ಕ್ರಿಕೆಟ್ ಗಂಧ–ಗಾಳಿ ತಿಳಿಯದವರೂ ವಿಜೃಂಭಿಸುತ್ತಿದ್ದರು. ಅಲ್ಲಿ ಕಾಣಿಸಿಕೊಳ್ಳದಿದ್ದರೆ ನಾವೇನೋ ಕಳೆದುಕೊಳ್ಳುತ್ತೇವೆ ಎಂಬ ಭಾವನೆ ನೆರೆದಿದ್ದ ನಾಡಿನ ಪ್ರಮುಖರನ್ನು ಕಾಡುತ್ತಿದ್ದಂತಿತ್ತು. ಅದಕ್ಕೆ ಮೊದಲು ವಿಮಾನ ನಿಲ್ದಾಣದಿಂದ ಹೊರಟ ಮೆರವಣಿಗೆಯಲ್ಲಿ ಉಪಮುಖ್ಯಮಂತ್ರಿಗಳೇ ಆರ್‌ಸಿಬಿ ತಂಡದ ಬಾವುಟ ಹಿಡಿದು ಮುಂದೆ ಸಾಗಿದ್ದರು.

ಕಾರ್ಯಕ್ರಮ ನಡೆಯುತ್ತಿರುವಾಗಲೇ, ಸುಮಾರು 1 ಕಿ.ಮೀ. ದೂರದಲ್ಲಿರುವ ಚಿನ್ನಸ್ವಾಮಿ ಮೈದಾನದಲ್ಲಿ ಸೇರಿದ್ದ ಅಸಂಖ್ಯಾತ ಜನರ ಉತ್ಸಾಹ, ಅವಸರ ಮತ್ತು ವ್ಯವಸ್ಥೆಯ ಅವಿವೇಕತನದಿಂದ ನೂಕುನುಗ್ಗಲು ಉಂಟಾಯಿತು. 11 ಜನ ಅಮಾಯಕರು ಕಾಲ್ತುಳಿತದಲ್ಲಿ ಸಾವಿಗೀಡಾದರು.

ಕಾಲ್ತುಳಿತದ ಘಟನೆ ಸಂಭವಿಸಿದ ಹತ್ತು ತಿಂಗಳ ನಂತರದ ಬೆಳವಣಿಗೆ ನೋಡಿ: 2026ರ ಮಾರ್ಚ್ 26ರ ಮಧ್ಯಾಹ್ನ ವಿಧಾನಸಭೆಯಲ್ಲಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಜನರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಕುರಿತು ನಡೆದ ಚರ್ಚೆಗೆ ರಾಜ್ಯದ ಉಪಮುಖ್ಯಮಂತ್ರಿಗಳೂ ಆದ ಬೆಂಗಳೂರು ನಗರಾಭಿವೃದ್ಧಿ ಸಚಿವರು ಸರ್ಕಾರದ ಪರವಾಗಿ ಉತ್ತರ ನೀಡುತ್ತಿದ್ದರು. ಉತ್ತರದ ಕೊನೆಯ ಹಂತದಲ್ಲಿ, 'ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಚಿನ್ನಸ್ವಾಮಿ ಸ್ಟೇಡಿಯಂ ನಿರ್ಮಿಸಲು ಸರ್ಕಾರದಿಂದ ಕೊಟ್ಟಿರುವ ಸವಲತ್ತಿಗೆ ಪ್ರತಿರೂಪವಾಗಿ ಶಾಸಕರಿಗೆ ಮನ್ನಣೆ ಸಿಗುತ್ತಿಲ್ಲ. ಐಪಿಎಲ್ ಪಂದ್ಯಗಳನ್ನು ನೋಡಲು ಶಾಸಕರಿಗೆ ಉಚಿತ ಟಿಕೆಟ್‌ಗಳು ಸಿಗುತ್ತಿಲ್ಲ' ಎಂಬ ವಿಚಾರ ಪ್ರಸ್ತಾಪವಾಗಿ, ಚರ್ಚೆ ಬೇರೆಯದೇ ಹಾದಿಗೆ ಹೊರಳಿತು. ಓರ್ವ ಗೌರವಾನ್ವಿತ ಶಾಸಕರು, 'ನಾವು ಶಾಸಕರಾಗಿ ಐಪಿಎಲ್ ಟಿಕೆಟ್ ಪಡೆಯಲು ಕ್ಯೂನಲ್ಲಿ ನಿಂತುಕೊಳ್ಳಬೇಕೇ?' ಎಂದು ಪ್ರಶ್ನಿಸಿದರು. ಇನ್ನೋರ್ವ ಶಾಸಕರು, 'ಒಂದೊಮ್ಮೆ ಅವರು ಟಿಕೆಟ್ ಕಳುಹಿಸಿದರೂ ನನ್ನ ಹೆಸರು ಮುದ್ರಿಸಿ ಕಳುಹಿಸುತ್ತಾರೆ. ನನ್ನ ಬದಲು ನನ್ನ ಮಗನನ್ನು ಕಳುಹಿಸಲು ಸಾಧ್ಯವಾಗುವುದಿಲ್ಲ' ಎಂದು ಅಲವತ್ತುಕೊಂಡರು.

ಆಶ್ಚರ್ಯವೆಂಬಂತೆ, ಸದನದ ಘನತೆ ಕಾಪಾಡಬೇಕಿರುವ ಸಭಾಧ್ಯಕ್ಷರು, ಸದನದ ಸದಸ್ಯರ 'ಘನತೆ' ಕಾಪಾಡುವ ಉದ್ದೇಶದಿಂದ, ಪ್ರತಿ ಶಾಸಕರಿಗೆ ಕನಿಷ್ಠ 4 ಟಿಕೆಟ್ ದೊರಕುವಂತೆ ಕ್ರಮ ಕೈಗೊಳ್ಳಲು ಉಪಮುಖ್ಯಮಂತ್ರಿಗೆ ಸೂಚನೆ ನೀಡಿದರು. ಅದಾದ 24 ಗಂಟೆಯಲ್ಲಿ ಸರ್ಕಾರದಿಂದ ಪ್ರಕಟಣೆ ಹೊರಬಿತ್ತು. 'ಮೊದಲ ಮ್ಯಾಚಿಗೆ ಪ್ರತಿ ಶಾಸಕರಿಗೆ 2 ಟಿಕೆಟ್ ನೀಡುವುದು ಹಾಗೂ ಮುಂದಿನ ಮ್ಯಾಚುಗಳನ್ನು ನೋಡಲು ಪ್ರತಿ ಶಾಸಕರಿಗೆ ತಲಾ 5 ಉಚಿತ ಟಿಕೆಟ್‌ಗಳನ್ನು ನೀಡಿ ವಿವಿಐಪಿ ಗ್ಯಾಲರಿಯಲ್ಲಿ ಅವಕಾಶ ಕಲ್ಪಿಸಲಾಗುವುದು' ಎಂದು ಪ್ರಕಟಿಸಲಾಯಿತು. ಸಹಜವಾಗಿಯೇ ಈ ವಿದ್ಯಮಾನ ನಾಗರಿಕ ಸಮಾಜದಲ್ಲಿ ಆಕ್ರೋಶ ಉಂಟುಮಾಡಿತು. 'ವಿಧಾನಸಭೆಯಲ್ಲಿ ಜನಸಾಮಾನ್ಯರ ಬಗ್ಗೆ ಚರ್ಚೆ ಮಾಡಬೇಕೆ? ಅವರ ಅಳಲುಗಳ ನಿವಾರಣೆಗೆ ಪರಿಹಾರ ಕಂಡುಕೊಳ್ಳಬೇಕೆ? ಅಥವಾ ಶಾಸಕರು ತಮ್ಮ ಸವಲತ್ತುಗಳಿಗಾಗಿ ಬಡಿದಾಡಿಕೊಂಡು ಪರಿಹಾರ ಯಾಚಿಸಬೇಕೆ?' ಎಂಬುದು ಜನರ ಚರ್ಚೆಗೆ ವಿಷಯವಾಯಿತು.

ಪ್ರತಿಕ್ರಿಯೆಯೊಂದು ಹೀಗಿತ್ತು: 'ಶಾಸಕರು ಕ್ಯೂನಲ್ಲಿ ನಿಂತು ಟಿಕೆಟ್ ಪಡೆಯುವುದರಲ್ಲಿ ಅವಮಾನ ಏನಿದೆ? ನಾವು ಮತದಾರರು ಚುನಾವಣೆಯ ದಿನ ಕ್ಯೂನಲ್ಲಿ ಗಂಟೆಗಟ್ಟಲೆ ನಿಂತು ಮತ ಚಲಾಯಿಸಿ ಇವರನ್ನು ಶಾಸಕರನ್ನಾಗಿ ಮಾಡುವುದಿಲ್ಲವೆ?'. 'ಐಪಿಎಲ್ ಮ್ಯಾಚ್ ನಡೆಯುವಾಗ ವಿಧಾನಸಭಾ ಅಧಿವೇಶನವನ್ನು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಸಿಬಿಟ್ಟರೆ ಶಾಸಕರಿಗೆ ನಿಜವಾದ ಪರಿಹಾರ ದೊರಕೀತು!' ಎಂದು ಮತ್ತೊಬ್ಬರು ವ್ಯಂಗ್ಯವಾಡಿದರು. ಈ ಅಭಿಪ್ರಾಯಗಳು, ಚುನಾಯಿತ ಪ್ರತಿನಿಧಿಗಳ ಬಗ್ಗೆ, ಅದರಲ್ಲಿಯೂ ಪ್ರಸಕ್ತ ಸನ್ನಿವೇಶದಲ್ಲಿ ಶಾಸಕರ ಬಗ್ಗೆ ಜನಸಾಮಾನ್ಯರು ಹೊಂದಿರುವ ಅಭಿಪ್ರಾಯಗಳನ್ನು ಬಿಂಬಿಸುತ್ತವೆ.

> 'ಶಾಸಕ' ಎನ್ನುವ ಪದ ಶಾಸನ ರಚಿಸುವ ಜವಾಬ್ದಾರಿಯನ್ನು ಸೂಚಿಸುವಂತಹದ್ದು. ಜನರನ್ನು ಪ್ರತಿನಿಧಿಸುವವರು ನಾಗರಿಕರ ಸಮಸ್ಯೆಗಳಿಗೆ ಉತ್ತರದಾಯಿ ಆಗಿರಬೇಕು. ಜನಸೇವೆಯಲ್ಲಿ ತಮ್ಮ ಸ್ಥಾನದ ಸಾರ್ಥಕತೆ ಕಾಣಬೇಕು. ಆದರೆ, ಈಗಿನ ಶಾಸಕರು ತಮ್ಮ ಸ್ಥಾನವನ್ನು ಮನಸ್ಸಿಗೆ ಬಂದಂತೆ ಚಲಾಯಿಸಬಹುದಾದ ಅಧಿಕಾರ ಎಂದು ಭಾವಿಸಿರುವಂತಿದೆ.

ಹಿಂದೆ 'ಶಾಸಕ' ಎಂಬ ಸ್ಥಾನವನ್ನು, ಜನರಿಂದ ಆಯ್ಕೆಯಾಗಿ ಸೇವೆ ಸಲ್ಲಿಸುವ ಒಂದು ಜವಾಬ್ದಾರಿ ಎಂದು ಪರಿಗಣಿಸಲಾಗುತ್ತಿತ್ತು. ಈಗದು ಅಧಿಕಾರ ಚಲಾವಣೆಯ ಶಕ್ತಿಪೀಠವಾಗಿದೆ. ರಾಜಕೀಯ ವ್ಯವಸ್ಥೆಯೊಂದಿಗೆ 'ಗಣ್ಯ' ಮತ್ತು 'ಅತಿಗಣ್ಯ' ಎಂಬ ವಿಶೇಷ ಸಂಸ್ಕೃತಿ ನಿಧಾನವಾಗಿ ಬೆಳೆದು ನಿಂತಿರುವ ವಿಚಿತ್ರ ಬೆಳವಣಿಗೆಯನ್ನು ನೋಡುತ್ತಿದ್ದೇವೆ.

ಜನರಿಂದ ಆಯ್ಕೆಯಾಗುವ ಮೊದಲು ನಾವು ಮತದಾರ ದೇವರುಗಳ ಮನೆಬಾಗಿಲಿಗೆ ಹೋಗಿ ಕೈ ಮುಗಿದು ನಿಲ್ಲುತ್ತೇವೆ. ಆಯ್ಕೆಯಾದ ಕೂಡಲೇ ನಿಧಾನವಾಗಿ ಜನರಿಂದ ದೂರವಾಗುತ್ತಾ ಹೋಗುತ್ತೇವೆ. ನಮ್ಮ ನಡೆ–ನುಡಿಗಳು ಬದಲಾಗುತ್ತವೆ. ಅನೇಕ ಬಾರಿ ನಮ್ಮ ದಿರಿಸೂ ಬದಲಾವಣೆಯಾಗುತ್ತದೆ. ಚುನಾವಣೆಗೆ ಮುನ್ನ ಜನರಿಗೆ ಕೈ ಮುಗಿಯುತ್ತಿದ್ದ ನಾವು, ಈಗ ಜನ ನಮಗೆ ಕೈಮುಗಿಯಬೇಕೆಂದು ಅಪೇಕ್ಷಿಸುತ್ತೇವೆ. ಜೊತೆಗೆ ಸಹಜವಾಗಿ ದೊರಕುವ ಸೌಲಭ್ಯಗಳು, ವಿಶೇಷ ಗೌರವ, ಸಮಾರಂಭಗಳಲ್ಲಿ ವಿಶೇಷ ಪ್ರವೇಶಾವಕಾಶ, ಇವೆಲ್ಲವೂ ನಮ್ಮನ್ನು ಸಾಮಾನ್ಯ ಜನರಿಂದ ಬೇರ್ಪಡಿಸುತ್ತವೆ.

ಚುನಾವಣಾ ರಾಜಕಾರಣದಲ್ಲಿ ಆಯ್ಕೆಯಾಗಿ ದೊರಕುವ ಸ್ಥಾನ 'ಸೇವಾ ಅವಕಾಶ'ವೇ ಹೊರತು, 'ಸೌಲಭ್ಯಗಳ ಪಟ್ಟಿ' ಅಲ್ಲ. ಆದರೆ, ಅಂದು ಜವಾಬ್ದಾರಿಯಾಗಿದ್ದ ಸ್ಥಾನ ಇಂದು ಹಕ್ಕಾಗಿ ಪರಿವರ್ತನೆಗೊಂಡಿರುವುದು ಅನಪೇಕ್ಷಣೀಯ ಬೆಳವಣಿಗೆ. ಐಪಿಎಲ್ ಟಿಕೆಟ್ ಕೊಟ್ಟು ವಿಶೇಷ ಗ್ಯಾಲರಿಯಲ್ಲಿ ಕೂರಿಸಬೇಕು, ಪ್ರಸಿದ್ಧ ಕ್ಲಬ್‌ಗಳಲ್ಲಿ ಉಚಿತ ಸದಸ್ಯತ್ವ ಬೇಕು, ಹೆಸರಾಂತ ಶಾಲೆಗಳಲ್ಲಿ ನಾವು ಹೇಳಿದವರಿಗೆ ಪ್ರವೇಶ ಕೊಡಬೇಕು, ಎಲ್ಲೆಡೆ ವಿಐಪಿ ಪ್ರವೇಶ ದೊರಕಬೇಕು – ಈ ಮನೋಭಾವ ಸಾರ್ವಜನಿಕ ಜೀವನದಲ್ಲಿ ಬೆಳೆಯುತ್ತಿರುವುದು ದುರದೃಷ್ಟಕರ.

ಜನರಿಂದ ಆಯ್ಕೆಯಾದವರು ಜನರೊಂದಿಗೆ ಬೆರೆಯಬೇಕು, ಜನರೊಂದಿಗೆ ಇರಬೇಕು, ಜನರೊಂದಿಗೆ ಸದಾ ಸಂವಾದದಲ್ಲಿ ತೊಡಗಬೇಕು ಮತ್ತು ಅವರ ಅನಿಸಿಕೆಗಳನ್ನು ಆಲಿಸಬೇಕು ಎಂಬುದು ಸಾರ್ವಜನಿಕ ಕ್ಷೇತ್ರದಲ್ಲಿರುವವರ ನಂಬಿಕೆ ಹಾಗೂ ನಡವಳಿಕೆ ಆಗಬೇಕು. ಯಾವ ಪ್ರತಿನಿಧಿಯೂ ವಿಶೇಷ ಸೌಲಭ್ಯಗಳ ಗೋಡೆಗಳ ಒಳಗೆ ಬಂದಿಯಾಗಬಾರದು. 'ನಾವು ಯಾರು? ನಾವೆಲ್ಲಿದ್ದೇವೆ? ನಾವು ಸಾರ್ವಜನಿಕ ಕ್ಷೇತ್ರಕ್ಕೆ ಬಂದ ಕಾರಣವೇನು? ನಮ್ಮನ್ನು ಆಯ್ಕೆ ಮಾಡಿರುವ ಜನರ ಭಾವನೆ ಏನು? ಅವರ ಅಪೇಕ್ಷೆಗಳೇನು?' ಎಂಬುದನ್ನು ನಾವ್ಯಾರೂ ಮರೆಯಬಾರದು. ಹುದ್ದೆಗಳು ಶಾಶ್ವತವಲ್ಲ, ನಮ್ಮ ನಡೆ–ನುಡಿಗಳಷ್ಟೇ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತವೆ ಎಂಬ ಜಾಗೃತಿ ನಮ್ಮಲ್ಲಿರಬೇಕು. ಈ ನಿಟ್ಟಿನಲ್ಲಿ, ನನ್ನ ಗಮನಕ್ಕೆ ಬಂದ ಓರ್ವ ಮಹಾನುಭಾವರ ಪರಿಚಯವನ್ನು ಇಲ್ಲಿ ಮಾಡಿಕೊಡುತ್ತಿದ್ದೇನೆ.

ಪಿ. ಕಕ್ಕನ್ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಅಂದಿನ ಮದ್ರಾಸ್ ಪ್ರಾಂತ್ಯದ ಹಿರಿಯ ರಾಜಕೀಯ ನಾಯಕರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ, ಸಂವಿಧಾನ ಸಭೆಯ ಸದಸ್ಯರಾಗಿ, ಮದ್ರಾಸ್ ರಾಜ್ಯದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ವಿಧಾನಸಭಾ ಸದಸ್ಯರಾಗಿ, ಧೀಮಂತ ನಾಯಕರಾಗಿದ್ದ ಕಾಮರಾಜ್ ನಾಡಾರ್ ನೇತೃತ್ವದ ರಾಜ್ಯ ಸಚಿವ ಸಂಪುಟದಲ್ಲಿ ಸಚಿವರಾಗಿ ಕೆಲಸ ಮಾಡಿದವರು. ಸುಮಾರು 10 ವರ್ಷಗಳ ಕಾಲ ಸಚಿವರಾಗಿ ಕೆಲಸ ಮಾಡಿದ ಕಕ್ಕನ್ ಅವರು ಗೃಹ, ಕೃಷಿ, ಲೋಕೋಪಯೋಗಿ, ಶಿಕ್ಷಣ, ಕಾರ್ಮಿಕ ಹಾಗೂ ಹಣಕಾಸು ಖಾತೆಗಳಂತಹ ಪ್ರಮುಖ ಇಲಾಖೆಗಳನ್ನು ನಿಭಾಯಿಸಿದ್ದರು. ಲೋಕಸಭಾ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ಕಕ್ಕನ್ ಅವರು ಸಚಿವರಾಗಿದ್ದಾಗ ಒಮ್ಮೆ ತಿರುಚಿನಾಪಳ್ಳಿ ಜಿಲ್ಲೆಯ ಪ್ರವಾಸ ಕೈಗೊಂಡಿದ್ದರು. ರಾತ್ರಿ ಪ್ರವಾಸ ಮುಗಿಸಿಕೊಂಡು ರೈಲ್ವೆ ನಿಲ್ದಾಣ ತಲಪುವ ವೇಳೆಗೆ ಅಂದಿನ ಕೊನೆಯ ರೈಲು ಹೊರಟು ಬಿಟ್ಟಿತ್ತು. ಮುಂದಿನ ರೈಲು ಮಾರನೇ ದಿನ ಬೆಳಗ್ಗೆ ಹೊರಡುವುದಿತ್ತು. ವಾಸ್ತವ್ಯಕ್ಕಾಗಿ ರೈಲ್ವೆ ನಿಲ್ದಾಣದ ಯಾವ ಅಧಿಕಾರಿಯನ್ನೂ ಸಂಪರ್ಕಿಸುವ ಗೋಜಿಗೆ ಹೋಗದೆ, ಬೇರೆ ಯಾವುದೇ ಸರ್ಕಾರಿ ಅತಿಥಿಗೃಹಕ್ಕೂ ಹೋಗದೆ, ಕಕ್ಕನ್ ಅವರು ತಿರುಚಿನಾಪಳ್ಳಿ ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿದ್ದ ಬೆಂಚ್ ಒಂದರ ಮೇಲೆಯೇ ಮಲಗಿಬಿಟ್ಟರಂತೆ.

ಮಧ್ಯರಾತ್ರಿ ರೈಲ್ವೆ ಪೊಲೀಸರು ಬಂದು ಲಾಠಿಯಿಂದ ತಿವಿದು ಎಬ್ಬಿಸಿದರು. 'ಇಲ್ಲಿಂದ ಜಾಗ ಖಾಲಿ ಮಾಡು' ಎಂದು ಜೋರು ಮಾಡಿದರು. ಕಕ್ಕನ್ ಅವರು ನಿದ್ದೆಗಣ್ಣಿನಲ್ಲಿಯೇ ತಮ್ಮ ಪರಿಚಯ ಮಾಡಿಕೊಂಡರು. ತಾನು ಸಚಿವನೆಂದು, ರೈಲು ತಪ್ಪಿದ ಕಾರಣ ಮುಂದಿನ ರೈಲಿಗಾಗಿ ಕಾಯುತ್ತಾ ಮಲಗಿದ್ದೇನೆ ಎಂದು ತಿಳಿಸಿದಾಗ, ಪೊಲೀಸರು ಹೌಹಾರಿದರು. ಕ್ಷಮೆಯಾಚಿಸಿದರು. ರೈಲ್ವೆ ನಿಲ್ದಾಣ ದಲ್ಲಿದ್ದ ಫಸ್ಟ್ ಕ್ಲಾಸ್ ವೈಟಿಂಗ್ ರೂಮ್‌ನಲ್ಲಿ ಮಲಗಲು ಕೋರಿದರು. 'ನಾನು ಇಲ್ಲೇ ಆರಾಮಾಗಿದ್ದೇನೆ' ಎಂದು ಕಕ್ಕನ್ ಅಲ್ಲೇ ನಿದ್ರಿಸಿದರಂತೆ. ಮುಂದಿನ ರೈಲು ಹತ್ತುವವರೆಗೆ ಅವರಿಗೆ ಅದೇ ಪೊಲೀಸರು ರಕ್ಷಣೆ ನೀಡುತ್ತಾ ನಿಲ್ಲಬೇಕಾದುದು ಕುಚೋದ್ಯವೇ ಸರಿ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು (ನಾಗರಿಕರು) ಬಹಳ ಮುಖ್ಯ. ಚುನಾವಣೆ ಸಮಯದಲ್ಲಿ ಮತದಾರರಿಗೆ ಗೌರವ ಕೊಡುವಂತೆಯೇ ನಾವು ಪ್ರತಿಯೊಬ್ಬ ನಾಗರಿಕರಿಗೂ, ಅವರ ಭಾವನೆಗಳಿಗೂ ಮನ್ನಣೆ ನೀಡಬೇಕು. ಜನರಿಂದ ಆಯ್ಕೆಯಾಗುವ ನಾವು, ಜನರಿಗಾಗಿ ಕೆಲಸ ಮಾಡುತ್ತಾ, ಜನರ ಕಷ್ಟ–ಸುಖಕ್ಕೆ ಸ್ಪಂದಿಸುವಂತಿರಬೇಕು. ವಿಐಪಿ ಸಂಸ್ಕೃತಿ ಈ ಮೂಲಭೂತ ಕರ್ತವ್ಯವನ್ನು ಮರೆಮಾಚುತ್ತದೆ. ವಿಐಪಿ ಸಂಸ್ಕೃತಿ ಜನರ ದೃಷ್ಟಿಯಲ್ಲಿ ನಮ್ಮ ಅವನತಿಗೆ ಕಾರಣವಾಗುತ್ತದೆ ಎನ್ನುವುದು ಪ್ರತಿಯೊಬ್ಬ ಜನಪ್ರತಿನಿಧಿಯೂ ನೆನಪಿನಲ್ಲಿ ಇರಿಸಿಕೊಳ್ಳಬೇಕು.

ಲೇಖಕ: ಬಿಜೆಪಿ ಶಾಸಕ



ವಾಚಕರ ವಾಣಿ

ಸಂಚಾರ ನಿಯಮ: ಶಿಸ್ತಿನ ಶಿಕ್ಷಣ ಅತ್ಯಗತ್ಯ

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಇತ್ತೀಚೆಗೆ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವುದು ಕಳವಳಕಾರಿ. ಸಂಚಾರ ನಿಯಮಗಳ ಬಗ್ಗೆ ಅರಿವಿದ್ದರೂ ಕೆಲವರು ಹೆಲ್ಮೆಟ್ ಧರಿಸದೆ ಅತಿವೇಗವಾಗಿ ದ್ವಿಚಕ್ರ ವಾಹನ ಚಲಾಯಿಸಿ ಪ್ರಾಣಾಪಾಯಕ್ಕೆ ಸಿಲುಕುತ್ತಿದ್ದಾರೆ. ರಸ್ತೆ ಸುರಕ್ಷತೆಯು ದಂಡ ಪಾವತಿಸುವುದಕ್ಕೆ ಸೀಮಿತವಾಗಬಾರದು. ಪ್ರತಿಯೊಬ್ಬ ಸವಾರನೂ ತನ್ನ ಕುಟುಂಬದ ಜವಾಬ್ದಾರಿಯನ್ನು ನೆನಪಿನಲ್ಲಿ ಇಟ್ಟುಕೊಂಡು ಸಂಚಾರ ನಿಯಮಗಳನ್ನು ಪಾಲಿಸಬೇಕು. ಶಾಲಾ ಹಂತದಲ್ಲೇ ಮಕ್ಕಳಿಗೆ ಈ ಬಗ್ಗೆ ಪ್ರಾಯೋಗಿಕ ಶಿಕ್ಷಣ ನೀಡುವುದು ಅತ್ಯಗತ್ಯ.

ಮೊಹಮ್ಮದ್ ಅಜರುದ್ದೀನ್, ಅಕ್ಕಿಹೆಬ್ಬಾಳು

ಸಿಲಿಂಡರ್ ಮರುಭರ್ತಿ: ವಿಳಂಬ ಲೋಪ

ಎಲ್‌ಪಿಜಿ ಸಿಲಿಂಡರ್ ಮರುಪೂರಣಕ್ಕಾಗಿ ಮಾರ್ಚ್ 7ರಂದು ಕೋರಿಕೆ ಸಲ್ಲಿಸಿದ್ದೆ. ಅದಕ್ಕೆ ಮಾರ್ಚ್ 12ರಂದು ಬಿಲ್ ಮಾಡಲಾಗಿದ್ದು, 29ರಂದು ಸಿಲಿಂಡರ್ ವಿತರಿಸಲಾಗಿದೆ. ಬುಕ್ಕಿಂಗ್ ಮಾಡಿದ 22 ದಿನಗಳ ಬಳಿಕ ಸಿಲಿಂಡರ್ ಸಿಕ್ಕಿದೆ. ಮತ್ತೆ ಬುಕ್ಕಿಂಗ್‌ಗೆ ಪ್ರಯತ್ನಿಸಿದಾಗ ಮೇ 13ರ ನಂತರವಷ್ಟೆ ಬುಕ್ಕಿಂಗ್ ಮಾಡಲು ನಿಮಗೆ ಅವಕಾಶವಿದೆಯೆಂಬ ಸಂದೇಶ ಬರುತ್ತಿದೆ. ಅಂದರೆ, ಹಿಂದಿನ ಬಿಲ್ಲಿಂಗ್ ದಿನಾಂಕದಿಂದ ಸುಮಾರು ಎರಡು ತಿಂಗಳ ಬಳಿಕ ಬುಕ್ಕಿಂಗ್‌ಗೆ ಅವಕಾಶ ನೀಡಲಾಗುತ್ತಿದೆ. ಮರುಪೂರಣ ಬುಕ್ಕಿಂಗ್‌ಗೆ ನಗರಗಳಲ್ಲಿ 25 ದಿನ ಮತ್ತು ಗ್ರಾಮೀಣ ಪ್ರದೇಶದಲ್ಲಿ 45 ದಿನ ನಿಗದಿಪಡಿಸಲಾಗಿದೆ ಎಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಸ್ಪಷ್ಟಪಡಿಸಿತ್ತು. ಆದರೆ, ಬುಕ್ಕಿಂಗ್, ಬಿಲ್ಲಿಂಗ್, ಸಿಲಿಂಡರ್ ವಿತರಣಾ ದಿನಾಂಕದ ನಡುವೆ ಅತಾರ್ಕಿಕ ವ್ಯತ್ಯಾಸವಿದೆ. ಅಧಿಕಾರಿಗಳು ಈ ಲೋಪ ಸರಿಪಡಿಸಬೇಕಿದೆ.

ಜಿ. ನಾಗೇಂದ್ರ ಕಾವೂರು, ಸಂಡೂರು

ಶಾಸಕರ ಬೀದಿಮಾತು; ಜನಕ್ಕೆ ವಾಕರಿಕೆ

ರಾಜ್ಯದಲ್ಲಿ ವಿಧಾನಸಭೆ ಉಪಚುನಾವಣೆಯ ಕಾವು ಜೋರಾಗಿದೆ. ಇದರೊಂದಿಗೆ ಜುಗಲಬಂದಿ ನಡೆಸುವಂತೆ ಕೆಲವು ಶಾಸಕರು ಕೀಳುಮಟ್ಟದ ಭಾಷೆ ಬಳಸುವುದು ಅತಿಯಾಗಿದೆ. ಅರಸೀಕೆರೆ ಶಾಸಕ ಶಿವಲಿಂಗೇಗೌಡ ಅವರು ಸದನದಲ್ಲಿ ಅಸಂವಿಧಾನಿಕ ಶಬ್ದ ಬಳಸಿದ್ದುಂಟು. ಚಿಕ್ಕಬಳ್ಳಾಪುರದ ಶಾಸಕ ಪ್ರದೀಪ್ ಈಶ್ವರ್ ಅವರು ಉಪಚುನಾವಣೆಯ ಪ್ರಚಾರದ ವೇಳೆ ಕೆಟ್ಟ ಶಬ್ದ ಬಳಸಿರುವುದು ವರದಿಯಾಗಿದೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಸಮಯ ಸಿಕ್ಕಿದಾಗಲೆಲ್ಲ ಅಸಂಬದ್ಧ ಹೇಳಿಕೆ ನೀಡುತ್ತಾರೆ. ಶಾಸಕರ ಈ ವರ್ತನೆಯಿಂದ ಪ್ರಜ್ಞಾವಂತ ಮತದಾರರು ಮುಜುಗರ ಅನುಭವಿಸುವಂತಾಗಿದೆ. ಜನಪ್ರತಿನಿಧಿಗಳು ಬಳಸುವ ಭಾಷೆಯಲ್ಲಿ ಸಭ್ಯತೆ ಇರಬೇಕು. ಇಲ್ಲವಾದರೆ ಅವರ ಮಾತುಗಳು ಕ್ಷೇತ್ರದ ಮತದಾರರ ಮೇಲೂ ಪರಿಣಾಮ ಬೀರುತ್ತವೆ. ಶಾಸಕರ ಮಾತು ಮತ್ತು ನಡವಳಿಕೆಯಿಂದ ಉತ್ತೇಜನಗೊಂಡು ಕಾರ್ಯಕರ್ತರು ಮತ್ತು ಅಭಿಮಾನಿಗಳು ಸಂಘರ್ಷಕ್ಕಿಳಿಯುತ್ತಾರೆ.

ಡಿ.ವಿ. ಸಂಜಯ್, ಚಿಕ್ಕಮಗಳೂರು

ಕಾನ್‌ಸ್ಟೆಬಲ್‌ಗಳ ವರ್ಗ: ಸರ್ಕಾರದ ಮೌನ

ಸಾಮಾನ್ಯ ಪ್ರಕರಣದಡಿ ಅಂತರ ಜಿಲ್ಲಾ ವರ್ಗಾವಣೆ ಕೋರಿದ್ದ ಸಿವಿಲ್ ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಅವಕಾಶ ಸಿಗುತ್ತಿಲ್ಲ (ಪ್ರ.ವಾ., ಮಾರ್ಚ್ 28). ಬೆಂಗಳೂರಿನಲ್ಲಿ ಉತ್ತರ ಕರ್ನಾಟಕ ಭಾಗದ ಸಾಕಷ್ಟು ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎರಡು ಅಥವಾ ಮೂರು ಸಾರಿ ಬಡ್ತಿಗೆ ಅವಕಾಶ ಬಂದರೂ ಅದನ್ನು ತ್ಯಾಗ ಮಾಡಿ ವರ್ಗಾವಣೆಗಾಗಿ ದಶಕದಿಂದಲೂ ಕಾಯುತ್ತಿದ್ದಾರೆ. ವೈದ್ಯಕೀಯ ಸಮಸ್ಯೆಗಳು ಕೆಲವರ ಕುಟುಂಬಗಳನ್ನು ಮೆತ್ತಗಾಗಿಸಿವೆ. ಆದರೆ ಸಿಬ್ಬಂದಿ ಕೊರತೆ, ಬಂದೋಬಸ್ತ್ ಕಾರಣವನ್ನು ಮುಂದಿಟ್ಟುಕೊಂಡು ಹಿರಿಯ ಅಧಿಕಾರಿಗಳು ವರ್ಗಾವಣೆಗೆ ಅಡ್ಡಗೋಡೆಯಾಗಿದ್ದಾರೆ. ಸರ್ಕಾರವು ಈ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸಲಿ.

ಮಲ್ಲಿಕಾರ್ಜುನ್ ಟಿ., ಜಮಖಂಡಿ

> **ಜ್ವರ–ಬರ**
>
> ಕ್ರಿಕೆಟ್ ಪ್ರೇಮಿಗಳಿಗೆ
> ಬಂತು ಐಪಿಎಲ್ ಜ್ವರ
> ಇರಾನ್–ಇಸ್ರೇಲ್ ಸಮರ
> ಬಯಸದೇ ತಂತು
> ಗ್ರಾಹಕರಿಗೆ
> ಎಲ್‌ಪಿಜಿ ಬರ!
>
> **ಮ.ಗು. ಬಸವಣ್ಣ**, ಮೈಸೂರು

ತೃತೀಯ ಭಾಷೆ ಕಲಿಕೆಗೆ ಶಿಕ್ಷಕರು ಬೇಡವೆ?

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆಗೆ ಗ್ರೇಡ್ ನಿಗದಿಪಡಿಸಿರುವ ಬಗ್ಗೆ ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಟೀಕಿಸಿದ್ದಾರೆ. ರಾಜ್ಯದ ಶೇ 60ಕ್ಕೂ ಹೆಚ್ಚು ಶಾಲೆಗಳಲ್ಲಿ ಹಿಂದಿ ಶಿಕ್ಷಕರೇ ಇಲ್ಲ. ಕಾಗೇರಿ ಅವರು ಶಿಕ್ಷಣ ಸಚಿವರಾಗಿದ್ದಾಗ ಹಿಂದಿ ಶಿಕ್ಷಕರನ್ನು ನೇಮಕ ಮಾಡಲಿಲ್ಲ. ಬಹುತೇಕ ಗ್ರಾಮೀಣ ವಿದ್ಯಾರ್ಥಿಗಳಿಗೆ ಕನ್ನಡವೇ ಕಷ್ಟ ಆಗಿರುವಾಗ ಹಿಂದಿ ಅಕ್ಷರಾಭ್ಯಾಸ ಮಾಡಿಸುವವರು ಯಾರು?

ಎಂ.ಜಿ. ರಂಗಸ್ವಾಮಿ, ಹಿರಿಯೂರು

ನೇಮಕಾತಿ ನಿರ್ಲಕ್ಷ್ಯ: ಯುವಜನ ಆತಂಕ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟಕ್ಕೆ ಸಕಾರಾತ್ಮಕ ಸ್ಪಂದನ ಅತ್ಯಗತ್ಯ. ಮೀಸಲಾತಿಯು ಸಮಸಮಾಜದ ನಿರ್ಮಾಣಕ್ಕೆ ಶಕ್ತಿ ತುಂಬುವ ಆಶಯ ಹೊಂದಿರುವ ಅಂಶ. ಇದರ ಜಾರಿಯಲ್ಲಿ ವಿಳಂಬ ಧೋರಣೆ ಸರಿಯಲ್ಲ. ಒಳಮೀಸಲಾತಿಯ ಬಿಕ್ಕಟ್ಟಿನಿಂದಾಗಿ ಯುವ ಸ್ಪರ್ಧಾಕಾಂಕ್ಷಿಗಳು ಸಂಕಷ್ಟಕ್ಕೆ ಸಿಲುಕುತ್ತಿರುವುದು ಬೇಸರದ ಸಂಗತಿ. ಯಾವುದೇ ನೇಮಕಾತಿ ನಡೆಯದೆ ಯುವ ಮನಸ್ಸುಗಳ ಕನಸು ಕಮರಿಹೋಗುತ್ತಿದೆ. ಕಾಲಕ್ಕೆ ಸರಿಯಾಗಿ ಚುನಾವಣೆ ನಡೆದು ಪ್ರಜಾಪ್ರಭುತ್ವವನ್ನು ಭದ್ರಗೊಳಿಸಿಕೊಳ್ಳುವ ಆಡಳಿತ ವ್ಯವಸ್ಥೆಯು, ನೇಮಕಾತಿ ವಿಷಯದಲ್ಲಿ ನಿರ್ಲಕ್ಷ್ಯ ಧೋರಣೆ ತಳೆದು ರಾಜಪ್ರಭುತ್ವದಂತೆ ಆಗದಿರಲಿ.

ಅಶೋಕ ಗೌಡ, ಶಿರಸಿ

ಜಾಲತಾಣ

ಹಿಂದಿ ಬಲವಂತ ಏಕೆ?

ಮಹಾರಾಷ್ಟ್ರ, ತಮಿಳುನಾಡಿಗೆ ಬೇಡದ ಹಿಂದಿ ಭಾಷೆ ಅಥವಾ ಹಿಂದಿ ರಾಜ್ಯಗಳಿಗೆ ಬೇಡದ ತೃತೀಯ ಭಾಷೆಯು ಕರ್ನಾಟಕದ ಶಾಲೆಗಳಿಗೆ ಮಾತ್ರ ಯಾಕೆ? ಅದನ್ನು ಕಲಿಯಲು ಹಾಕುವ ಶ್ರಮ, ಸಮಯವನ್ನು ಉಪಯೋಗ ಆಗುವ ವಿಷಯ ಕಲಿಯುವುದಕ್ಕೆ ಬಳಸಲಿ.

ಪ್ರತಾಪ್ ಕಣಗಾಲ್, 'ಎಕ್ಸ್'ನಿಂದ

ಕಿಡಿನುಡಿ

ರಾಜ್ಯ ಸರ್ಕಾರ ಯಾವುದೇ ತೀರ್ಮಾನ ಕೈಗೊಂಡರೂ ವಿರೋಧಿಸಬೇಕು ಎಂಬುದೊಂದೇ ಬಿಜೆಪಿ ನಾಯಕರ ಗುರಿ. ಕೇಂದ್ರದ ನಾಯಕರನ್ನು ಮೆಚ್ಚಿಸಲು, ಮನವೊಲಿಸಲು ಅವರು ಹಿಂದಿ ಪರವಾಗಿ ಮಾತನಾಡುತ್ತಾರಷ್ಟೆ.

ಡಿ.ಕೆ. ಸುರೇಶ್, ಅಧ್ಯಕ್ಷ, ಬಮೂಲ್

25 ವರ್ಷಗಳ ಹಿಂದೆ

ಶನಿವಾರ, 31-3-2001

● **ದಲ್ಲಾಳಿ ಪಾರೇಖ್ ಬಂಧನ: ಮುಂಬೈ ಪೇಟೆ ಕುಸಿತ**

ಮುಂಬೈ, ಮಾರ್ಚ್ 30 (ಪಿಟಿಐ)– ದೇಶದಾದ್ಯಂತ ಷೇರುಪೇಟೆಗಳಲ್ಲಿ ಮತ್ತೊಂದು ಕರಾಳ ಶುಕ್ರವಾರ ದಾಖಲಾಯಿತು. ಮುಂಬೈ ಸಹಿತ ಎಲ್ಲಾ ಷೇರುಪೇಟೆಗಳೂ ಭಾರಿ ಕುಸಿತ ಕಂಡವು. ಮುಂಬೈ ಪೇಟೆಯಲ್ಲಿ ಮೊದಲ ಬಾರಿಯ 30 ಷೇರುಗಳ ಸಂವೇದಿ ಸೂಚ್ಯಂಕವು 147 ಅಂಶಗಳಷ್ಟು ಇಳಿಯಿತು.

ಬ್ಯಾಂಕ್ ಆಫ್ ಇಂಡಿಯಾಗೆ 130 ಕೋಟಿ ರೂಪಾಯಿಗಳ ವಾಪತಿ ಬಾಕಿ ಉಳಿಸಿಕೊಂಡಿರುವ ಮುಂಬೈನ ಪ್ರಮುಖ ಷೇರು ದಲ್ಲಾಳಿ ಕೇತನ್ ಪಾರೇಖ್ ಬಂಧನವಾಗಲಿದೆ ಎಂಬ ಗಾಳಿಸುದ್ದಿ ಹಬ್ಬಿದ್ದು, ಷೇರು ಬೆಲೆಗಳ ಭಾರೀ ಕುಸಿತಕ್ಕೆ ಕಾರಣವಾಯಿತು. ಸಂಜೆ ಸಿಬಿಐ ಅಧಿಕಾರಿಗಳು ಕೇತನ್ ಪಾರೇಖ್‌ರನ್ನು ಬಂಧಿಸಿದ್ದಾರೆ.

● **ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣದಲ್ಲಿ ಆದ್ಯತೆ**

ಬೆಂಗಳೂರು, ಮಾರ್ಚ್ 30– ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ವೃತ್ತಿಪರ ತರಗತಿಗಳಿಗೆ ಆದ್ಯತೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು, ವಿಧಾನ ಪರಿಷತ್ತಿನಲ್ಲಿ ಇಂದು ಭರವಸೆ ನೀಡಿದರು.

75 ವರ್ಷಗಳ ಹಿಂದೆ

ಶನಿವಾರ, 31-3-1951

● **ಕೊರಿಯಾದಲ್ಲಿ ಚೀಣಿ ಸೇನೆಗಳ ಪ್ರತಿದಾಳಿ**

ಟೋಕಿಯೋ, ಮಾರ್ಚ್ 30– ಕೊರಿಯಾದಲ್ಲಿ ಚೀಣಿ ಸೈನ್ಯಗಳು ಈ ದಿನ ವಿಶ್ವಸಂಸ್ಥೆ ಸೈನ್ಯಗಳ ಮೇಲೆ ಪ್ರತಿ ದಾಳಿ ನಡೆಸಿದುವು.

ಈ ದಿನ 38ನೆಯ ಅಕ್ಷಾಂಶಕ್ಕೆ ದಕ್ಷಿಣದಲ್ಲಿ ವಿಶ್ವಸಂಸ್ಥೆ ಪಡೆಗಳು ಚೀಣಿಯರ ಸಣ್ಣ ಪ್ರಮಾಣದ ಪ್ರತಿದಾಳಿಯನ್ನು ಶಮನ ಮಾಡಿದುವು. ಕಳೆದ ಕೆಲವು ದಿನಗಳಿಂದಲೂ ಕಮ್ಯುನಿಸ್ಟರು ತಮ್ಮ ಪ್ರತಿಭಟನ ಬಲ ಪಡಿಸಿಕೊಳ್ಳುತ್ತಿದ್ದ ಉಯಿಜೋಂಗ್ಬು ದಿನ ಉತ್ತರ ಪ್ರದೇಶದಲ್ಲಿ ಈ ಪ್ರತಿದಾಳಿ ನಡೆಯಿತು.

ಅಮೆರಿಕದ ಕಾವಲು ಪಡೆಯೊಂದು ಸಿಯೋಲ್–ವೊನ್ಸಾನ್ ಬಾಟಾ ಮಾರ್ಗದಲ್ಲಿ ಹೋಗುತ್ತಾ, 38ನೆಯ ಅಕ್ಷಾಂಶವನ್ನು ದಾಟಿತೆಂದು ರಣಕ್ಷೇತ್ರದ ಸುದ್ದಿಗಾರರಿಗೆ ಹೇಳಿ ಅಮೆರಿಕನ್ ಸೇನೆಯ ವಕ್ತಾರರು ಇದನ್ನು ಅಲ್ಲಗಳೆದರು.

ಚುರುಮುರಿ

ಲಂಚತಂತ್ರದ ಕಥೆಗಳು

● ಲಿಂಗರಾಜು ಡಿ.ಎಸ್.

ಗುಂಡಿಪುರವಾಸಿಗಳು ತಮ್ಮ ಕೆಲಸಗಳು ಕ್ಷಿಪ್ರವಾಗಿ ಪೂರ್ತಿಯಾಗಲೆಂದು ಔದಾರ್ಯದಿಂದ ಲಂಚ ಕೊಡುತ್ತಿದ್ದರು. ಇದೇ ಲಂಚವು ಈಗ ತುಸುಲಂಚ, ಮೃದುಲಂಚ ಮತ್ತು ಉಗ್ರಲಂಚಗಳ ಮುಸುಕಿನಲ್ಲಿ ನೂರಾರು ರೂಪಗಳನ್ನು ತಳೆದು ವ್ಯವಸ್ಥೆಯನ್ನು ಸುಡುತ್ತಿದೆ.

ಆಡಳಿತ ಮತ್ತು ವಿರೋಧಪಕ್ಷಗಳು ತಮ್ಮ ಕಾಲದಲ್ಲಿ ಯಾರೂ ಲಂಚ ಕೇಳಿಲ್ಲವೆಂಬ ಕಪಟನಾಟಕದಲ್ಲಿ ಮುಳುಗಿದ್ದರೆ, ಕ್ಷೇತ್ರದ ಬಗ್ಗೆ ಚಿಂತೆಯಿಲ್ಲದ ಜಡ ಶಾಸಕರು ಸದನಕ್ಕೆ ಬಾರದೇ ಬೂತುಚೇಷ್ಟೆಯಲ್ಲಿ ಕಳೆದುಹೋಗಿರುವರು.

ಆಡಳಿತವು ಬಜೆಟ್ ಭಾರ ತೂಗಿಸಲು ಜನತೆಯನ್ನು ಸಾಲವೆಂಬ ಶೂಲಕ್ಕೆ ಏರಿಸಲು ಮುಂದಾಗಿರುವುದು. ರೈತರ ಸಮಸ್ಯೆಗಳು, ನಿರುದ್ಯೋಗ, ಪರಿಸರ ಮಾಲಿನ್ಯ, ರಾಜಕೀಯ ಮಾಲಿನ್ಯಗಳು ವ್ಯವಸ್ಥೆಯ ನಾಶಕ್ಕೆ ಕಾರಣವಾಗುವವು.

ಕಾರ್ಯ ನಿರ್ವಹಣೆಯಲ್ಲಿ ತಪ್ಪು ಮಾಡಿ ಕೋಟಿ ಕೋಟಿ ತೆರಿಗೆ ಸೋರಿಕೆ ಆಗಿರುವುದೆಂಬ ಸಿಎಜಿ ವರದಿಗೆ ಬೆಲೆ ನೀಡದೆ ಸೋಗುಹಾಕಿ ಕಾಲಹರಣ ಮಾಡುತ್ತಾ ನ್ಯಾಯವನ್ನು ಕೊಲ್ಲುವ ಖುಷಿಯಲ್ಲಿ ಸರ್ಕಾರವು ಮತ್ತು ಅದರ ಅಧಿಕಾರಿಗಳು ಕೊಬ್ಬಿ ಹೋಗಿರುವರು.

ಗುತ್ತಿಗೆದಾರರು ಬಿಲ್ಲು ಪಾಸಾಗಲು ಕಾಲಕಾಲದಲ್ಲಿ ಕಮಿಶನ್ ಕೊಡಲಿ ಎಂದು ಬಕಾಸುರರು ಪೀಡಿಸತೊಡಗಿದ್ದರು. ಯಾವ ಸರ್ಕಾರವಿದ್ದರೂ ತಮ್ಮ ಸಂಕಟವು ಕೊನೆಗೊಳ್ಳದು ಎಂದು ಗುತ್ತಿಗೆದಾರರು ಬೆಸಗೊಳ್ಳಲಾಗಿ ರಸ್ತೆಗಳು ಹಾದಿತಪ್ಪಿ ಮುಗ್ಧರಿಗೆ ಪರಲೋಕ ಪ್ರಾಪ್ತಿಯಾಗುತ್ತಿರುವುದು.

ಜನರನ್ನು ಕಾಯಬೇಕಾದ ಪೊಲೀಸರೇ ಸುವರ್ಣ ಸಿದ್ಧಿಯನ್ನು ಪಡೆಯಲು ಮೊರೆ ಹೊಕ್ಕವರನ್ನು ಕಾಯುವುದನ್ನು ಬಿಟ್ಟು ಹಾವಭಾವ ವಿಲಾಸ ಮತ್ತು ಧನ ಸಂಪಾದನೆಗೆ ಮರುಳಾಗಿ ವೃತ್ತಿಭೇದದಲ್ಲಿ ತೊಡಗಿರುವುದು ಹಾನಿಕಾರಕ.

ಕೈದಿಗಳಿಗೆ ಸನ್ನಡತೆಯನ್ನು ಕಲಿಸಬೇಕಾದ ಜೈಲುಗಳು ಐಷಾರಾಮಿ ರೆಸಾರ್ಟುಗಳಾಗುತ್ತಿರುವ ಅಧರ್ಮವು ದುಷ್ಟಬುದ್ಧಿಗಳನ್ನು ಸುಡುವುದು.

ಕೊಲ್ಲಿ ಸಂಘರ್ಷದಲ್ಲಿ ಹಿತವಚನವನ್ನಾಲಿಸದೇ ಯುದ್ಧಕ್ಕೆ ಮುಂದಾಗುವವನು ಟ್ರಂಪಿನಂತೆ ಕಷ್ಟಕ್ಕೊಳಗಾಗುವನು. ಸುಮ್ಮನಿದ್ದ ಇರಾನನ್ನು ಪೀಡಿಸಿದರೆ ಅವನು ಯಾವ ಪಾತಕಕ್ಕೂ ಹೇಸುವುದಿಲ್ಲ.

ಜನತೆಯು ಸಂಕಟ ಕಾಲದಲ್ಲಿ ಆಡಳಿತದ ದೋಷಗಳ ಪರಿಹಾರಕ್ಕೆ ಲಂಚದಾನಿಗಳಾದರೆ ಲಂಚ ಪಾತಕಕ್ಕಿಂತ ಹೆಚ್ಚಿನ ಪಾತಕವಿಲ್ಲವೆಂದು ನೀತಿಬೋಧೆಯಲ್ಲಿ ಉಕ್ತವಾಗಿದ್ದು, ಅದನ್ನು ಅನೇಕ ಕಥಾನಕಗಳು ವಿವರಿಸಿವೆ.

ಸಂಗತ

ಅಭಿವ್ಯಕ್ತಿ ಸ್ವಾತಂತ್ರ್ಯ: ಟೀಕೆಗಳಿಗಿದು ಕಾಲವಲ್ಲ!

ಎಲ್ಲ ಕಾಲದಲ್ಲೂ ಅಭಿವ್ಯಕ್ತಿ ಸ್ವಾತಂತ್ರ್ಯ ಎರಡು ರೂಪಗಳಲ್ಲಿರುತ್ತದೆ. ಸರ್ಕಾರದಿಂದ ಸ್ವೀಕೃತವಾದುದು ಒಂದು ಬಗೆ. ನಿಷೇಧಕ್ಕೆ ಒಳಗಾಗುವುದು ಇನ್ನೊಂದು ಬಗೆ.

● ವಿಶಾಖ ಎನ್.

ಯಾವುದು ಅಭಿವ್ಯಕ್ತಿ ಸ್ವಾತಂತ್ರ್ಯ, ಯಾವುದು ಅಲ್ಲ ಎನ್ನುವುದನ್ನು ಆಡಳಿತ ವ್ಯವಸ್ಥೆ ಹೇಗೆಲ್ಲ ವ್ಯಾಖ್ಯಾನಿಸಬಹುದು ಎನ್ನುವುದಕ್ಕೆ ಇತ್ತೀಚಿನ ಎರಡು ಮಾದರಿಗಳು: ಪುಳಕಿತ್ ಮಣಿ ಅವರ ಹಾಸ್ಯದ ವಿಡಿಯೊ ಹಾಗೂ ಧುರಂಧರ್ ಸಿನಿಮಾ.

ಹಾಸ್ಯ ಕಲಾವಿದ ಪುಳಕಿತ್ ಮಣಿ ಎನ್ನುವವರು ಇತ್ತೀಚೆಗೆ ರೂಪಿಸಿದ ಒಂದು ರೀಲ್ ಕೋಟ್ಯಂತರ ಜನರ ಗಮನ ಸೆಳೆಯಿತು. ಪ್ರಧಾನಿ ನರೇಂದ್ರ ಮೋದಿ ಅವರು ವಿದೇಶಿ ಸಚಿವರ ಜೊತೆ ಯಾವ ರೀತಿ ನಡೆದುಕೊಳ್ಳುತ್ತಾರೆ ಎನ್ನುವುದನ್ನು ಅಣಕ ಮಾಡಿ, ಹಾಸ್ಯ ಪ್ರಸಂಗದ ರೀತಿಯಲ್ಲಿ ಪುಳಕಿತ್ ತೋರಿಸಿದ್ದರು. ಪ್ರಧಾನಿ ಅವರ ಮಾತು, ನಗು, ಅಪ್ಪಿಕೊಳ್ಳುವ ಶೈಲಿಯ ಅನುಕರಣೆ ಹಾಗೂ ಫೋಟೊಗೆ ನಿರ್ದಿಷ್ಟ ಭಂಗಿಯಲ್ಲಿ ನಿಲ್ಲುವ ಧೋರಣೆಯನ್ನು ವಿಡಿಯೊದಲ್ಲಿ ಅನುಕರಿಸಲಾಗಿತ್ತು. ಒಂದು ಕೋಟಿ 60 ಲಕ್ಷಕ್ಕೂ ಹೆಚ್ಚು ಮಂದಿ ಆ ವಿಡಿಯೊ ವೀಕ್ಷಿಸಿದ್ದರು.

ಮಾಹಿತಿ ಹಕ್ಕು ಕಾಯ್ದೆಯ 79(3)(ಬಿ) ಸೆಕ್ಷನ್ ಅನ್ನು ಉಲ್ಲಂಘಿಸಲಾಗಿದೆ ಎಂದು ಸರ್ಕಾರವು ನೋಟಿಸ್ ನೀಡಿ, ಆ ರೀಲ್ ಅನ್ನು ಕಿತ್ತುಹಾಕಿತು. ಆ ರೀಲ್ ಅನ್ನು ಅಪ್‌ಲೋಡ್ ಮಾಡಿದ್ದು ಮಾರ್ಚ್ 5ರಂದು. ಮಾರ್ಚ್ 18ರಂದು ಅದನ್ನು ಭಾರತದಲ್ಲಿ 'ಬ್ಲಾಕ್' ಮಾಡಲಾಯಿತು. ಅದೇ ಸಂದರ್ಭದಲ್ಲಿ ಕೆಲವು 'ಎಕ್ಸ್' ಖಾತೆಗಳನ್ನೂ ಭಾರತದಲ್ಲಿ ನಿಷ್ಕ್ರಿಯಗೊಳಿಸಲಾಯಿತು. ಹಾಗೆ ನಿಷ್ಕ್ರಿಯವಾದ ಬಹುತೇಕ ಖಾತೆಗಳಲ್ಲಿ ಸರ್ಕಾರದ ವಿರುದ್ಧ ಟೀಕೆಗಳಿದ್ದವು.

ಪುಳಕಿತ್ ಮಣಿ ಅವರ ವಿಡಿಯೊ ಕಿತ್ತುಹಾಕಿರುವುದನ್ನು ಪ್ರತಿಭಟಿಸಿ ರುವ ಜನಪ್ರಿಯ ಯೂಟ್ಯೂಬರ್ ಧ್ರುವ್ ರಾಠಿ ಅವರು, ತಮ್ಮ ಖಾತೆಯಲ್ಲಿ ಆ ವಿಡಿಯೊವನ್ನು ಮತ್ತೆ ಪೋಸ್ಟ್ ಮಾಡಿ, ಇನ್ನೊಂದು ರೀಲ್ ಮಾಡಿ ತೇಲಿಬಿಟ್ಟರು. ದಿಢೀರನೆ ದೊಡ್ಡ ಸಂಖ್ಯೆಯಲ್ಲಿ ಖಾತೆಗಳನ್ನು ಹೀಗೆ ಕಿತ್ತುಹಾಕುವ ವಿದ್ಯಮಾನದ ವಿರುದ್ಧ ಸಾಮಾಜಿಕ ಮಾಧ್ಯಮದಲ್ಲಿ ತಣ್ಣಗೆ ಪ್ರತಿಭಟನೆಯ ಅಲೆಯೊಂದು ಎದ್ದಿದೆ. ಆ ಪ್ರತಿರೋಧವನ್ನು ನಾವು ಒಂದು ಬಿಂದು ಎಂದು ಭಾವಿಸಿದರೆ, 'ಧುರಂಧರ್' ಹಿಂದಿ ಸಿನಿಮಾದ ಎರಡು ಭಾಗಗಳನ್ನು ಇನ್ನೊಂದು ಬಿಂದು ಎಂದು ನೋಡಬಹುದು.

'ಧುರಂಧರ್' ಸಿನಿಮಾದ ಎರಡನೆಯ ಭಾಗದಲ್ಲಿ ನೋಟು ಅಮಾನ್ಯೀಕರಣಕ್ಕೆ ಸಮರ್ಥನೆಯೊಂದನ್ನು ನೀಡಲಾಗಿದೆ. ಉತ್ತರ ಪ್ರದೇಶದಲ್ಲಿ ಚುನಾವಣೆಗೆ ಮೊದಲು ಚಲಾವಣೆ ಮಾಡಲೆಂದೇ ಪಾಕಿಸ್ತಾನದಲ್ಲಿ ಮುದ್ರಿಸಲಾಗಿದ್ದ ₹60 ಸಾವಿರ ಕೋಟಿ ಮೌಲ್ಯದ ನಕಲಿ ನೋಟುಗಳು ಭಾರತ ಪ್ರವೇಶಿಸದಂತೆ ತಡೆಯಲು ನೋಟು ಅಮಾನ್ಯೀಕರಣ ಮಾಡಲಾಯಿತು ಎನ್ನುವ ಪ್ರಧಾನಿ ಹೇಳಿಕೆಯ ತುಣುಕನ್ನೂ ಬಳಸಿಕೊಂಡು ಸಿನಿಮಾದಲ್ಲಿ ಬಿಂಬಿಸಲಾಗಿದೆ. ಈ ಹಿಂದೆ ಪ್ರಧಾನಿ ಸಚಿವಾಲಯವೂ ಇಂಥದ್ದೊಂದು ವಿದ್ಯಮಾನದ ಕುರಿತು ಮಾಹಿತಿ ನೀಡಿಲ್ಲ. ಜನಪ್ರಿಯ ಸಿನಿಮಾವೊಂದರಲ್ಲಿ ಇದನ್ನು ತೋರಿಸಿದಾಗ, ಸೆನ್ಸಾರ್ ಮಂಡಳಿ ಹೇಗೆ ಈ ದೃಶ್ಯವನ್ನು ಪ್ರದರ್ಶನಕ್ಕೆ ಹಾಗೆಯೇ ಬಿಟ್ಟಿತು ಎಂಬ ಪ್ರಶ್ನೆ ಮೂಡುತ್ತದೆ.



ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಎರಡು ಬಿಂದುಗಳಲ್ಲಿ ಒಂದು, ಸರ್ಕಾರದ ವಿರುದ್ಧವಾದುದು; ಇನ್ನೊಂದು ಪರವಾದುದು.

ಮೂರನೇ ಬಿಂದುವಿನ ರೂಪದಲ್ಲಿ ತಮಿಳಿನ ಜನಪ್ರಿಯ ನಟ ವಿಜಯ್ ಅವರ ಅಭಿನಯದ 'ಜನ ನಾಯಗನ್' ಸಿನಿಮಾವನ್ನು ಗಮನಿಸಬಹುದು. ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸಂಸ್ಥಾಪಕರೂ ಆದ ವಿಜಯ್ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ. ಅವರ ಜನಪ್ರಿಯತೆಯನ್ನು ಕಂಡು ಬಿಜೆಪಿ ಅವರೊಟ್ಟಿಗೆ ಚುನಾವಣಾ ಹೊಂದಾಣಿಕೆಗೆ ಮುಂದಾಗಿತ್ತು. ವಿಜಯ್ ಆ ಆಹ್ವಾನವನ್ನು ತಿರಸ್ಕರಿಸಿದರು ಎಂದು ಟಿವಿಕೆ ಪಕ್ಷದ ಪದಾಧಿಕಾರಿ ಆಧವ್ ಅರ್ಜುನ ಅವರು ಇತ್ತೀಚೆಗೆ ತಿಳಿಸಿದ್ದಾರೆ.

ಚುನಾವಣೆಯ ಸಂದರ್ಭದಲ್ಲಿ ವಿಜಯ್ ನಟನೆಯ ಸಿನಿಮಾ ತೆರೆಕಾಣುವುದು ಕೇಂದ್ರ ಸರ್ಕಾರಕ್ಕೆ ಬೇಕಾಗಿರಲಿಲ್ಲ. ಸಂಕ್ರಾಂತಿ ಸಂದರ್ಭದಲ್ಲಿ, ಜನವರಿ 9ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಘೋಷಿಸಿ, ಮುಂಗಡ ಟಿಕೆಟ್ ಕಾಯ್ದಿರಿಸುವಿಕೆಗೆ ಚಿತ್ರತಂಡ ಅವಕಾಶ ಕಲ್ಪಿಸಿತ್ತು. ಸೆನ್ಸಾರ್ ಮಂಡಳಿಯು ಸಿನಿಮಾದಲ್ಲಿನ ಕೆಲವು ಅಂಶಗಳಿಗೆ ಕತ್ತರಿ ಹಾಕಬೇಕೆಂದು ತಕರಾರೆತ್ತಿತು. ಮಂಡಳಿಯ ಸದಸ್ಯರೊಬ್ಬರು ಪರಿಶೀಲನಾ ಸಮಿತಿಗೆ ಪ್ರಮಾಣಪತ್ರ ನೀಡುವ ನಿರ್ಧಾರ ವರ್ಗಾಯಿಸಿದರು. ದೀರ್ಘಕಾಲದ ನಂತರವೂ ಪ್ರಮಾಣಪತ್ರ ಸಿಗದೆ ಹೋದಾಗ, ಸಿನಿಮಾ ನಿರ್ಮಾಣ ಸಂಸ್ಥೆ ಮದ್ರಾಸ್ ಹೈಕೋರ್ಟ್ ಮೊರೆಹೋಯಿತು. ಅಲ್ಲಿ ಕ್ಷಿಪ್ರ ನ್ಯಾಯದಾನ ಸಿಗಲಿಲ್ಲ. ಹೀಗಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಬೇಕಾಯಿತು. ಮದ್ರಾಸ್ ಹೈಕೋರ್ಟ್‌ನ ನಿರ್ಧಾರಕ್ಕೇ ಈ ವಿಚಾರದ ತೀರ್ಮಾನ ಬಿಡುವುದಾಗಿ ಸುಪ್ರೀಂ ಕೋರ್ಟ್ ಹೇಳಿತು. ಪರಿಶೀಲಿಸಿ, ನಿರ್ಧಾರ ಕೈಗೊಳ್ಳುವಂತೆ ಸೆನ್ಸಾರ್ ಮಂಡಳಿಗೆ ಮದ್ರಾಸ್ ಹೈಕೋರ್ಟ್ ಸೂಚಿಸಿದ ನಂತರವೂ ಸಿನಿಮಾ ಬಿಡುಗಡೆಗೆ ಮುಹೂರ್ತ ಕೂಡಿಬಂದಿಲ್ಲ.

ಚುನಾವಣಾ ಆಯೋಗದ ಅಧಿಕಾರಿಗಳ ಸಲಹೆಯನ್ನು ಸೆನ್ಸಾರ್ ಮಂಡಳಿ ಕೇಳಿದೆ ಎಂಬ ವರದಿಗಳು ಈಗ ಹರಿದಾಡುತ್ತಿವೆ. ಈಗ ಚುನಾವಣೆ ಹೊಸ್ತಿಲಲ್ಲಿ ಇರುವುದರಿಂದ, ಚುನಾವಣಾ ನೀತಿಸಂಹಿತೆಯೇ ಸಿನಿಮಾ ಬಿಡುಗಡೆಗೆ ಅವಕಾಶ ನೀಡುವುದಿಲ್ಲ.

ಮೊದಲ ಹಾಗೂ ಮೂರನೇ ಬಿಂದುಗಳು ಸರ್ಕಾರದ ವಿರುದ್ಧದ ದನಿ ಇರುವಂಥವು. ಎರಡನೆಯದು ಪರವಾದ ಬಿಂದು. ಹೀಗಾಗಿ ಅದಕ್ಕೆ ಸಮ್ಮತಿ. ಟೀಕೆ ಅಪಥ್ಯವಾದ್ದರಿಂದ ಅದು ಅಪಥ್ಯ. ಆಡಳಿತದ ಕಣ್ಣಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಒಂದೇ ಅರ್ಥ: ಸರ್ಕಾರಕ್ಕೆ ಮುಜುಗರ ಆಗದಂತೆ ನಡೆದುಕೊಳ್ಳುವುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hospete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟು; ಭಾರತದ ಆರ್ಥಿಕತೆಗೆ ಪೆಟ್ಟು?



ಪ್ರಜಾವಾಣಿ ವಾರ್ತೆ

ಪಶ್ಚಿಮ ಏಷ್ಯಾದಲ್ಲಿ ತಿಂಗಳಿಂದ ನಡೆಯುತ್ತಿರುವ ಯುದ್ಧದಿಂದ ಭಾರತದ ಹಲವು ವಲಯಗಳ ಮೇಲೆ ಪರಿಣಾಮ ಉಂಟಾಗುತ್ತಿದೆ. ಪೆಟ್ರೋಲ್ ಪಂಪ್‌ಗಳಲ್ಲಿ ಉದ್ದದ ಸಾಲುಗಳು, ಎಲ್‌ಪಿಜಿ ವಿತರಕರ ಕಚೇರಿಗಳಿಗೆ ಆತಂಕದ ಕರೆಗಳು, ವಾಣಿಜ್ಯ ಸಿಲಿಂಡರ್‌ಗಳ ಕೊರತೆ, ಬಾಗಿಲು ಮುಚ್ಚಿದ ರೆಸ್ಟೋರೆಂಟ್‌ಗಳು... ಕಳೆದ ಕೆಲವು ವಾರಗಳಿಂದ ಕರ್ನಾಟಕ, ತೆಲಂಗಾಣ, ಗುಜರಾತ್, ಉತ್ತರ ಪ್ರದೇಶ, ಜಮ್ಮು–ಕಾಶ್ಮೀರ ಸೇರಿದಂತೆ ದೇಶದ ಹಲವೆಡೆ ಈ ದೃಶ್ಯಗಳು ಕಂಡುಬರುತ್ತಿವೆ.

ಭಾರತವು ಇರಾನ್‌ನಿಂದ ತೈಲ ರಫ್ತು ಮಾಡಿಕೊಳ್ಳುವುದನ್ನು 2019ರಲ್ಲೇ ಬಹುತೇಕ ನಿಲ್ಲಿಸಿದೆ. ಆದರೆ, ದೇಶಕ್ಕೆ ಆಮದಾಗುವ ಶೇ 40ರಷ್ಟು ಕಚ್ಚಾ ತೈಲ, ಶೇ 80ರಷ್ಟು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಮತ್ತು ಶೇ 90ರಷ್ಟು ಅಡುಗೆ ಅನಿಲ (ಎಲ್‌ಪಿಜಿ) ಸಾಗಣೆಯಾಗುವುದು ಇರಾನ್ ಮತ್ತು ಒಮಾನ್ ನಡುವಿನ ಹೊರ್ಮುಜ್ ಜಲಸಂಧಿ ಮೂಲಕ. ದೇಶದ ಇಂಧನ ಮತ್ತು ಎಲ್‌ಪಿಜಿ ಅಗತ್ಯಗಳಿಗಾಗಿ ಹೆಚ್ಚಿನ ಪಾಲು ಆಮದನ್ನೇ ಅವಲಂಬಿಸಿರುವ ಭಾರತದಲ್ಲಿ ಇರಾನ್ ಯುದ್ಧವು ಹಲವು ರೀತಿಯ ಬಿಕ್ಕಟ್ಟುಗಳನ್ನು ಸೃಷ್ಟಿಸಿದೆ.

ಯುದ್ಧ ಆರಂಭವಾದ ನಂತರ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ದರ ಶೇ 75ರಷ್ಟು ಹೆಚ್ಚಳವಾಗಿದೆ. ಜಗತ್ತಿನ ಹಲವು ದೇಶಗಳಲ್ಲಿ ಇಂಧನ ಮತ್ತು ಎಲ್‌ಪಿಜಿ ದರ ಹೆಚ್ಚಿಸಲಾಗಿದೆ. ಅಮೆರಿಕ, ಕೆನಡಾ ಸೇರಿದಂತ ಉತ್ತರ ಅಮೆರಿಕದಲ್ಲಿ ಶೇ 30, ಆಗ್ನೇಯ ಏಷ್ಯಾದಲ್ಲಿ ಶೇ 30ರಿಂದ ಶೇ 50, ಯುರೋಪ್‌ನಲ್ಲಿ ಶೇ 20, ಆಫ್ರಿಕಾದ ರಾಷ್ಟ್ರಗಳಲ್ಲಿ ಶೇ 50ರಷ್ಟು ದರ ಹೆಚ್ಚಳವಾಗಿದೆ. ಭಾರತದಲ್ಲಿ ಅಡುಗೆ ಅನಿಲ, ಕೈಗಾರಿಕಾ ಡೀಸೆಲ್ ಮತ್ತು ಪ್ರೀಮಿಯಂ ಪೆಟ್ರೋಲ್ ದರಗಳಲ್ಲಿ ಹೆಚ್ಚಳವಾಗಿದೆ. ಆದರೆ, ಸಾಮಾನ್ಯ ಪೆಟ್ರೋಲ್, ಡೀಸೆಲ್ ದರ ಹೆಚ್ಚಳವಾಗಿಲ್ಲ. ಇದರಿಂದ ಇಂಧನ ಕಂಪನಿಗಳಿಗೆ ಲೀಟರ್ ಪೆಟ್ರೋಲ್‌ಗೆ ₹24 ಮತ್ತು ಲೀಟರ್ ಡೀಸೆಲ್‌ಗೆ ₹30 ನಷ್ಟ ಉಂಟಾಗುತ್ತಿದ್ದು, ಕಂಪನಿಗಳಿಗೆ ದಿನಕ್ಕೆ ₹2,400 ಕೋಟಿ ನಷ್ಟವಾಗುತ್ತಿದೆ ಎಂದು ಪೆಟ್ರೋಲಿಯಂ ಉತ್ಪನ್ನಗಳ ಸಚಿವ ಹರ್‌ದೀಪ್‌ಸಿಂಗ್ ಪುರಿ ತಿಳಿಸಿದ್ದಾರೆ.

ಇಂಧನ ಕಂಪನಿಗಳ ನಷ್ಟವನ್ನು ಕಡಿಮೆ ಮಾಡಲು ಕೇಂದ್ರವು ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕದಲ್ಲಿ ಲೀಟರ್‌ಗೆ ₹10 ಕಡಿಮೆ ಮಾಡಿದೆ. ಜತೆಗೆ ಹಲವು ರೀತಿಯ ಹೆಚ್ಚುವರಿ ಎಕ್ಸೈಸ್ ಸುಂಕವನ್ನೂ ಕಡಿತಗೊಳಿಸಿದೆ. ಇದರಿಂದ ಕೇಂದ್ರಕ್ಕೆ 15 ದಿನಕ್ಕೆ ಅಂದಾಜು ₹7,000 ಕೋಟಿ ಆದಾಯ ನಷ್ಟವಾಗಲಿದೆ. ಇದರಿಂದಾಗಿ 2026–27ರಲ್ಲಿ ₹1 ಲಕ್ಷ ಕೋಟಿಯಿಂದ ₹2 ಲಕ್ಷ ಕೋಟಿವರೆಗೆ ನಷ್ಟವಾಗಲಿದೆ.

ವ್ಯಾಪಕ ಪರಿಣಾಮ: ಪಶ್ಚಿಮ ಏಷ್ಯಾ ಬಿಕ್ಕಟ್ಟು ಪೆಟ್ರೋಲ್, ಡೀಸೆಲ್ ದರಗಳ ಆಚೆಗೂ ಭಾರತದ ಮೇಲೆ ಗಂಭೀರ ಪರಿಣಾಮ ಉಂಟುಮಾಡುವ ಸಂಭವವಿದೆ. ಕಚ್ಚಾ ಪದಾರ್ಥಗಳಿಗಾಗಿ ಕೊಲ್ಲಿ ರಾಷ್ಟ್ರಗಳನ್ನು ಅವಲಂಬಿಸಿರುವ ಸಿಮೆಂಟ್, ರಸಗೊಬ್ಬರ, ಔಷಧಿ ಇತ್ಯಾದಿ ಕೈಗಾರಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಜತೆಗೆ, ದೇಶದ ಆರ್ಥಿಕತೆಯ ಪ್ರಮುಖ ಸೂಚಕಗಳಾದ ಜಿಡಿಪಿ, ಹಣದುಬ್ಬರ, ವಿತ್ತೀಯ ಕೊರತೆ ಮತ್ತು ವ್ಯಾಪಾರ ಕೊರತೆ ಅಂತರ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂದು ವಿಶ್ಲೇಷಿಸಲಾಗಿದೆ. ತೆರಿಗೆ ಆದಾಯದಲ್ಲಿ ಇಳಿಮುಖವಾಗುವುದು, ಹೆಚ್ಚು ಸಬ್ಸಿಡಿ–ವಿನಾಯ್ತಿ ನೀಡುವುದು ಬಂಡವಾಳ ವೆಚ್ಚದ ಮೇಲೆ ಪರಿಣಾಮ ಬೀರಲಿದ್ದು, ಇದು ದೇಶದ ಬೆಳವಣಿಗೆಯ ಮೇಲೆ ಮಧ್ಯಮ ಅವಧಿ ಮತ್ತು ದೀರ್ಘಾವಧಿಯ ಪರಿಣಾಮಗಳನ್ನು ಉಂಟುಮಾಡಲಿದೆ ಎನ್ನುವ ಆತಂಕ ವ್ಯಕ್ತವಾಗಿದೆ.

ಜಿಡಿಪಿ ಕುಸಿತ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 2026ರ ಏಪ್ರಿಲ್–ಜೂನ್ ತ್ರೈಮಾಸಿಕಕ್ಕೆ ಶೇ 6.9ರಷ್ಟು ಮತ್ತು ಜುಲೈ–ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಶೇ 7ರಷ್ಟು ಜಿಡಿಪಿ ಬೆಳವಣಿಗೆ ದರವನ್ನು ಅಂದಾಜಿಸಿತ್ತು. ಕಚ್ಚಾ ತೈಲದ ದರ ಬ್ಯಾರಲ್‌ಗೆ 70 ಡಾಲರ್ ಆಧಾರದಲ್ಲಿ ಈ ಅಂದಾಜು ಮಾಡಲಾಗಿದೆ. ಆದರೆ, ಯುದ್ಧದಿಂದ ಕಚ್ಚಾ ತೈಲದ ದರ ಹೆಚ್ಚಾಗಿದೆ. ಕಚ್ಚಾ ತೈಲವು ಬ್ಯಾರಲ್‌ಗೆ 10 ಡಾಲರ್‌ಗೆ ಹೆಚ್ಚಾದರೆ, ಅದು ಆರ್ಥಿಕ ಬೆಳವಣಿಗೆಯನ್ನು 10 ಮೂಲಾಂಕಗಳಷ್ಟು ಕಡಿಮೆ ಮಾಡುತ್ತದೆ. ಬ್ಯಾರಲ್‌ಗೆ 120 ಡಾಲರ್ ಇದ್ದರೆ ಜಿಡಿಪಿ ಬೆಳವಣಿಗೆಯು ಶೇ 6.2ಕ್ಕೆ ಕುಸಿಯುತ್ತದೆ ಎಂದು ವಿಶ್ಲೇಷಿಸಲಾಗಿದೆ. ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ (ಒಇಸಿಡಿ) ಪ್ರಕಾರ, 2026–27ರಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರವು ಶೇ 6.1ಕ್ಕೆ ಕುಸಿಯಲಿದೆ. ಗೋಲ್ಡ್‌ಮನ್ ಸ್ಯಾಚ್ಸ್ ಶೇ 5.9ರ ಬೆಳವಣಿಗೆ ದರವನ್ನು ಅಂದಾಜಿಸಿದೆ.

ಹಣದುಬ್ಬರ ಏರಿಕೆ: ಇಂದನ ಬೆಲೆ ಹೆಚ್ಚಳ ಮಾಡಿದರೆ, ಅದು ಬಹುತೇಕ ಸರಕುಗಳು, ಗ್ರಾಹಕ ಉತ್ಪನ್ನಗಳು ಮತ್ತು ಸೇವೆಗಳ ದರ ಹೆಚ್ಚಳಕ್ಕೆ ಕಾರಣವಾಗುತ್ತದೆ. ವಿದ್ಯುತ್ ಉತ್ಪಾದನೆ, ರಾಸಾಯನಿಕಗಳು, ಪ್ಲಾಸ್ಟಿಕ್, ಸಿಂಥೆಟಿಕ್ ವಸ್ತುಗಳ ಉತ್ಪಾದನೆ ಮತ್ತು ಬೆಲೆಗಳ ಮೇಲೂ ಇದು ಪರಿಣಾಮ ಬೀರಲಿದೆ. ಇಂಧನ ದರ ಹೆಚ್ಚಳ ಮತ್ತು ಉತ್ಪನ್ನಗಳ ಬೆಲೆ ಹೆಚ್ಚಳವು ಹಲವು ಸರಕು/ಸೇವೆಗಳ ಬೇಡಿಕೆಯನ್ನು ಕಡಿಮೆ ಮಾಡಲಿದ್ದು, ಅದು ಆರ್ಥಿಕತೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಲಿದೆ.

ಹಣದುಬ್ಬರ ಕಳೆದೊಂದು ವರ್ಷದಲ್ಲಿ ಇಳಿಮುಖವಾಗುತ್ತಾ ಸಾಗಿತ್ತು. ಆದರೆ, ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು 10 ತಿಂಗಳಲ್ಲಿಯೇ ಅತಿಹೆಚ್ಚು (ಶೇ 3.21ರಷ್ಟು) ಏರಿಕೆ ಕಂಡಿದೆ. ಸಗಟು ಹಣದುಬ್ಬರವು 11 ತಿಂಗಳಲ್ಲಿಯೇ ಅತಿ ಹೆಚ್ಚು (ಶೇ 2.13) ಏರಿಕೆ ಕಂಡಿದೆ. ಆಹಾರ ಪದಾರ್ಥಗಳು ಮತ್ತು ಇಂಧನ ಬೆಲೆಗಳು ಇತ್ತೀಚೆಗೆ ಹಣದುಬ್ಬರವನ್ನು ನಿಯಂತ್ರಣದಲ್ಲಿಟ್ಟಿದ್ದವು. ಆದರೆ, ಮುಂದಿನ ದಿನಗಳಲ್ಲಿ ಪರಿಸ್ಥಿತಿ ವ್ಯತಿರಿಕ್ತವಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಅರ್ನ್ಸ್ಟ್ ಆ್ಯಂಡ್ ಯಂಗ್ ಪ್ರಕಾರ, ಪಶ್ಚಿಮ ಏಷ್ಯಾದ ಬಿಕ್ಕಟ್ಟು ಆರ್ಥಿಕ ವರ್ಷದ ಉದ್ದಕ್ಕೂ ವಿಸ್ತರಿಸಿದರೆ, ಭಾರತದ ಜಿಡಿಪಿ ಶೇ 6ಕ್ಕೆ ಕುಸಿಯಲಿದ್ದು, ಸಿಪಿಐ ಹಣದುಬ್ಬರ ಶೇ 5.5ಕ್ಕೆ ಏರಲಿದೆ.





ಪ್ರಮುಖ ವಲಯಗಳ ಮೇಲೆ ಆರ್ಥಿಕ ಪರಿಣಾಮ

1. ಇಂಧನ ಮತ್ತು ಸರಕುಗಳು

- ಭಾರತವು ಆಮದು ಮಾಡುವ ಕಚ್ಚಾ ತೈಲದಲ್ಲಿ ಶೇ 60ರಷ್ಟು ಹೊರ್ಮುಜ್ ಮೂಲಕವೇ ಬರುತ್ತದೆ. ಕಚ್ಚಾ ತೈಲದ ಬೆಲೆ ಹೆಚ್ಚಾಗಿರುವುದರಿಂದ ಇಂಧನ ವೆಚ್ಚ ಜಾಸ್ತಿಯಾಗಿದೆ. ಇದರಿಂದ ಹಣದುಬ್ಬರವೂ ಏರಿಕೆಯಾಗಲಿದೆ
- ಭಾರತವು ಶೇ 90ರಷ್ಟು ಎಲ್‌ಪಿಜಿಯನ್ನು ಕೊಲ್ಲಿ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಪೆಟ್ರೋರಾಸಾಯನಿಕಗಳಿಂದ ಸಿಗುವ ಎಲ್ಲ ಪ್ರೊಪೇನ್ ಮತ್ತು ಬ್ಯೂತೇನ್ ಅನಿಲಗಳನ್ನು ಅಡುಗೆ ಅನಿಲ ತಯಾರಿಕೆಗೆ ಬಳಸುವಂತೆ ಸರ್ಕಾರ ಎಲ್ಲ ಕಚ್ಚಾ ತೈಲ ಸಂಸ್ಕರಣ ಘಟಕಗಳಿಗೆ ಸೂಚಿಸಿದೆ

2. ವ್ಯಾಪಾರ, ಹಡಗು ಸರಕು ಸಾಗಣೆ

- ಯುದ್ಧದಿಂದಾಗಿ ಹಡಗುಗಳ ಮೂಲಕ ಸರಕು ಸಾಗಣೆಗೆ ಅಡಚಣೆಯಾಗಿದೆ. ಇದರಿಂದ ಸಾಗಣೆ ವೆಚ್ಚ ಹೆಚ್ಚಾಗಿದ್ದು, ಸರಕು ಸಾಗಣೆ ವಿಳಂಬವಾಗಿದೆ
- ಬಾಸ್ಮತಿ ಅಕ್ಕಿ, ಸೇಬು, ಬಾದಾಮಿ ಹಾಗೂ ಇನ್ನಿತರ ಕೃಷಿ ಉತ್ಪನ್ನಗಳ ಸಾಗಣೆಗೆ ತೊಂದರೆಯಾಗಿದೆ. ಸರಕುಗಳನ್ನು ಸಾಗಿಸುವ ಹಡಗುಗಳಿಗೆ ವಿಮೆಯೂ ಸಿಗುತ್ತಿಲ್ಲ
- ಭಾರತವು ಕೊಲ್ಲಿ ರಾಷ್ಟ್ರಗಳಿಗೆ ಮಾಡುವ ರಫ್ತು ಅಪಾಯಕ್ಕೆ ಸಿಲುಕಿದೆ
- ಸರಕುಗಳ ಪೂರೈಕೆಯಲ್ಲಿ ವ್ಯತ್ಯಯವಾಗಿರುವುದರಿಂದ ರಸಗೊಬ್ಬರಗಳು, ಪೆಟ್ರೋರಾಸಾಯನಿಕಗಳು ಮತ್ತು ವಿವಿಧ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳ ಕೊರತೆ ಉಂಟಾಗಿದೆ

3. ಕೃಷಿ

- ರಸಗೊಬ್ಬರಗಳ ಕೊರತೆಯಿಂದಾಗಿ ಕೃಷಿ ಉತ್ಪಾದನಾ ವೆಚ್ಚ ಹೆಚ್ಚಾಗಬಹುದು. ಅಗತ್ಯ ವಸ್ತುಗಳ ಕೊರತೆಯಿಂದ ಉತ್ಪಾದನೆ ಶೇ 10ರಿಂದ 15ರಷ್ಟು ಕುಸಿಯಬಹುದು. ಇದು ಕಚ್ಚಾ ವಸ್ತುಗಳ ಬೆಲೆ ಮತ್ತು ಆಮದು ವೆಚ್ಚವನ್ನು ಹೆಚ್ಚಿಸಬಹುದು. ಸಬ್ಸಿಡಿಗಾಗಿ ಕೇಂದ್ರ ಸರ್ಕಾರ ₹20 ಸಾವಿರ ಕೋಟಿಯಿಂದ ₹25 ಸಾವಿರ ಕೋಟಿ ಹೆಚ್ಚು ವ್ಯಯಿಸಬೇಕಾಗಿ ಬರಬಹುದು
- 2025–26ನೇ ಸಾಲಿನ ಮೊದಲ ಒಂಬತ್ತು ತಿಂಗಳಲ್ಲಿ ಶೇ 40ರಷ್ಟು ಯೂರಿಯಾ ಮತ್ತು ಡಿಎಪಿಯನ್ನು ಭಾರತ ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ಆಮದು ಮಾಡಿಕೊಂಡಿದೆ
- ಶೇ 60ರಿಂದ ಶೇ 65ರಷ್ಟು ಎಲ್‌ಎನ್‌ಜಿ ಮತ್ತು ಶೇ 75ರಿಂದ 80ರಷ್ಟು ಅಮೋನಿಯವನ್ನು ಈ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳಲಾಗಿದೆ

4. ಕೈಗಾರಿಕೆ, ಎಂಎಸ್‌ಎಂಇ

- ದೇಶದ ಎಂಎಸ್‌ಎಂಇಗಳು, ಆಮದು ಮಾಡಿದ ರಾಸಾಯನಿಕಗಳು, ಲೋಹಗಳು ಮತ್ತು ಜವಳಿ ಉತ್ಪನ್ನಗಳನ್ನು ಅವಲಂಬಿಸಿವೆ. ಇವುಗಳಿಗೆ ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿದ್ದು, ಹೆಚ್ಚು ವೆಚ್ಚ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ
- ವಿಮಾನ ಇಂಧನ ದರ ಏರಿಕೆ ಮತ್ತು ಹಡಗುಗಳಲ್ಲಿ ಸರಕು ಸಾಗಣೆ ವೆಚ್ಚದಲ್ಲಿ ಹೆಚ್ಚಳವಾಗಿರುವುದರಿಂದ ಉದ್ದಿಮೆಗಳ ಲಾಭಾಂಶ ಕಡಿಮೆಯಾಗಲಿದೆ

5. ಜಿಸಿಸಿ, ಎಫ್‌ಎಂಸಿಜಿ

- ಭಾರತವು ಜಿಸಿಸಿ ರಾಷ್ಟ್ರಗಳ ಜೊತೆ ಪ್ರಬಲ ವ್ಯಾಪಾರ ಸಂಬಂಧ ಹೊಂದಿದೆ. ಭಾರತೀಯರು ದೊಡ್ಡ ಸಂಖ್ಯೆಯಲ್ಲಿ ಅಲ್ಲಿ ನೆಲಸಿದ್ದಾರೆ. ಆದರೆ, ಈಗ ಯುದ್ಧದ ಪರಿಸ್ಥಿತಿಯಿಂದಾಗಿ ವ್ಯಾಪಾರಕ್ಕೆ ಹೊಡೆತ ಬಿದ್ದಿದೆ. ಬೇಡಿಕೆಗೆ ತಕ್ಕ ಪೂರೈಕೆಯಾಗುತ್ತಿಲ್ಲ. ಅಲ್ಲಿರುವ ಭಾರತೀಯರು ಊರಿಗೆ ಕಳುಹಿಸುವ ಹಣದ ಮೇಲೂ ಪರಿಣಾಮ ಬೀರಲಿದೆ
- ಅಗತ್ಯ ವಸ್ತುಗಳ ಪ್ಯಾಕೇಜಿಂಗ್, ಸಾಗಣೆ ಸೇರಿದಂತೆ ಇನ್ನಿತರ ವೆಚ್ಚಗಳು ಹೆಚ್ಚಾಗುವುದರಿಂದ ಲಾಭ ಕಡಿಮೆಯಾಗಲಿದೆ

ರೂಪಾಯಿ ಮೌಲ್ಯ ₹100ಕ್ಕೆ?

ಡಾಲರ್ ಎದುರು ರೂಪಾಯಿ ಮೌಲ್ಯವು ದಿನೇ ದಿನೇ ಕುಸಿಯುತ್ತಿದೆ. ಸೋಮವಾರ ಇದು ₹94.70 ಆಗಿದೆ. ಯುದ್ಧ ಆರಂಭವಾದ ನಂತರ ರೂಪಾಯಿ ಮೌಲ್ಯದಲ್ಲಿ ಶೇ 3.6ರಷ್ಟು ಕುಸಿತವಾಗಿದೆ. ಬಿಕ್ಕಟ್ಟು ಇದೇ ರೀತಿ ಮುಂದುವರಿದರೆ, ಡಾಲರ್ ಎದುರು ರೂಪಾಯಿ ಮೌಲ್ಯವು ₹100ಗೆ ಕುಸಿಯಬಹುದು ಎನ್ನಲಾಗಿದೆ.



ಚುನಾವಣೆ ನಂತರ ಪೆಟ್ರೋಲ್, ಡೀಸೆಲ್ ತುಟ್ಟಿ?

ಕೇಂದ್ರ ಸರ್ಕಾರವು ಬೆಲೆ ಹೆಚ್ಚಳಕ್ಕಾಗಿ ಸೂಕ್ತ ಸಮಯಕ್ಕಾಗಿ ಕಾಯುತ್ತಿದೆ; ಐದು ರಾಜ್ಯಗಳ ವಿಧಾನಸಭೆ/ಕೇಂದ್ರಾಡಳಿತ ಪ್ರದೇಶದ ಚುನಾವಣೆ ಮುಗಿದ ನಂತರ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಲಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ನರೇಂದ್ರ ಮೋದಿ ಅವರ ಸರ್ಕಾರವು ರಷ್ಯಾ–ಉಕ್ರೇನ್ ಯುದ್ಧದ ಸಮಯದಲ್ಲೂ ಇದೇ ರೀತಿ ಮಾಡಿತ್ತು. ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿದ ಮೇಲೆ (2022ರ ಮೇನಲ್ಲಿ) ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿತ್ತು.

ಎಲ್ಲರ ಕೆಲಸವೂ ಮುಖ್ಯ

ನುಡಿ ಬೆಳಗು

ದೀಪಾ ಹಿರೇಗುತ್ತಿ

ಶಾಲೆಯೊಂದರ ತರಗತಿಯ ಗೋಡೆ ಮೇಲೆ ದೊಡ್ಡ ಗಡಿಯಾರವೊಂದಿತ್ತು. ಅದರೊಳಗೆ ಮೂರು ಮುಳ್ಳುಗಳಿದ್ದವು. ಗಂಟೆಯ ಮುಳ್ಳು, ನಿಮಿಷದ ಮುಳ್ಳು ಮತ್ತು ಸೆಕೆಂಡಿನ ಮುಳ್ಳು. ಪ್ರತೀ ದಿನವೂ ಈ ಮೂರೂ ಮುಳ್ಳುಗಳು ತಿರುಗುತ್ತ ಮಕ್ಕಳಿಗೆ ತರಗತಿಯ ಬಗ್ಗೆ, ಊಟದ ಬಿಡುವಿನ ಬಗ್ಗೆ ಮತ್ತು ಆಟದ ಅವಧಿಯ ಬಗ್ಗೆ ಮಾಹಿತಿ ನೀಡುತ್ತಿದ್ದವು.

ಸೆಕೆಂಡಿನ ಮುಳ್ಳು ಬಹಳ ವೇಗವಾಗಿ ತಿರುಗುತ್ತಿತ್ತು. ನಿಮಿಷ ಮತ್ತು ಗಂಟೆಯ ಮುಳ್ಳುಗಳು ಸ್ವಲ್ಪ ನಿಧಾನವಾಗಿ ಚಲಿಸುತ್ತಿದ್ದವು. ಒಂದು ದಿನ ಸೆಕೆಂಡಿನ ಮುಳ್ಳು ಜೋರಾಗಿ ಮಾತಾಡಿತು: ‘ಅಲ್ಲ, ನಾನು ಮಾತ್ರ ಇಲ್ಲಿ ಜಾಸ್ತಿ ಕೆಲಸ ಮಾಡಬೇಕು. ಟಿಕ್ ಟಿಕ್ ಟಿಕ್ ಅಂತ ಸುತ್ತಿ ಸುತ್ತಿ ಬೇಜಾರಾಗುತ್ತದೆ. ನಿಮಿಷದ ಮುಳ್ಳಿಗೂ ನನ್ನಷ್ಟು ಕೆಲಸವಿಲ್ಲ. ಗಂಟೆಯ ಮುಳ್ಳಂತೂ ಆರಾಮಾಗಿ ತಿರುಗುತ್ತದೆ’.

ನಿಮಿಷದ ಮುಳ್ಳು ಹೇಳಿತು: ‘ಹೌದು, ಆದರೆ ನಾನು ಗಂಟೆಯ ಮುಳ್ಳಿಗಿಂತ ಜಾಸ್ತಿ ಕೆಲಸ ಮಾಡುತ್ತೇನೆ’.

ಗಂಟೆಯ ಮುಳ್ಳು ಮೌನವಾಗಿತ್ತು.

ಅದಾದ ಮೇಲೆ ತರಗತಿ ಮಕ್ಕಳಿಂದ ತುಂಬಿತು. ಶಿಕ್ಷಕರು ಹೇಳಿದರು: ‘ಹನ್ನೆರಡು ಗಂಟೆಗೆ ತರಗತಿ ಮುಗಿಯುತ್ತದೆ, ನೀವೆಲ್ಲ ಮೈದಾನಕ್ಕೆ ಹೋಗಬೇಕು’. ಸೆಕೆಂಡಿನ ಮುಳ್ಳು ತಿರುಗಿತು. ನಿಮಿಷದ ಮುಳ್ಳು ಹಿಂಬಾಲಿಸಿತು. ಗಂಟೆಯ ಮುಳ್ಳು ತನ್ನ ಕೆಲಸ ತಾನು ಮಾಡಿತು.

ಮಧ್ಯಾಹ್ನ ಹನ್ನೆರಡು ಗಂಟೆಯಾಯಿತು. ಶಾಲೆಯ ಗಂಟೆ ಬಾರಿಸಿತು. ಮಕ್ಕಳೆಲ್ಲ ಖುಷಿಯಿಂದ ಕೂಗುತ್ತ ಮೈದಾನಕ್ಕೆ ಓಡಿದರು.

ಸೆಕೆಂಡಿನ ಮುಳ್ಳು ಒಂದು ಕ್ಷಣ ಯೋಚಿಸಿ ಹೇಳಿತು. ‘ನಾವು ಮೂವರೂ ಸೇರಿ ಈಗ ಸಮಯ ಹನ್ನೆರಡು ಗಂಟೆಯಾಯಿತು ಅಂತ ಹೇಳಿದ್ವಿ ಅಲ್ವಾ?’ ಗಂಟೆಯ ಮುಳ್ಳು ನಸುನಕ್ಕಿತು: ‘ನೀನು ವೇಗವಾಗಿ ಹೋಗಿ ಪ್ರತೀ ಸೆಕೆಂಡನ್ನೂ ಲೆಕ್ಕ ಮಾಡುತ್ತೀ. ನಿಮಿಷದ ಮುಳ್ಳು ನಿಮಿಷವಾಗಿದ್ದನ್ನು ತೋರಿಸುತ್ತದೆ. ನಾನು ಗಂಟೆಯ ಬದಲಾವಣೆಯನ್ನು ನಿಧಾನವಾಗಿ ಸೂಚಿಸುತ್ತೇನೆ. ಪ್ರತಿಯೊಬ್ಬರಿಗೂ ಅವರದ್ದೇ ಆದ ಜವಾಬ್ದಾರಿ ಇದೆ’.

ನಿಮಿಷದ ಮುಳ್ಳು ಹೇಳಿತು: ‘ನಮ್ಮ ಮೂವರಲ್ಲಿ ಯಾರು ನಿಂತರೂ ಗಡಿಯಾರ ಕೆಲಸ ಮಾಡುವುದಿಲ್ಲ’

ಸೆಕೆಂಡಿನ ಮುಳ್ಳು ಸಂಕೋಚದಿಂದ ಹೇಳಿತು: ‘ನನಗೆ ಈಗ ಅರ್ಥವಾಯಿತು. ವೇಗವೊಂದೇ ಯಾವುದನ್ನೂ ಮುಖ್ಯವಾಗಿಸುವುದಿಲ್ಲ. ಕೆಲವೊಂದರಲ್ಲಿ ವೇಗ ಮುಖ್ಯವಾದರೆ, ಇನ್ನು ಕೆಲವೊಮ್ಮೆ ನಿಧಾನವೇ ಪ್ರಧಾನ. ಹೀಗಾಗಿ ಇಲ್ಲಿ ಪ್ರತಿ ಪಾತ್ರವೂ ಮುಖ್ಯ’.

ಅವತ್ತಿನಿಂದ ಮೂರೂ ಮುಳ್ಳುಗಳೂ ಸೇರಿ ಖುಷಿಯಿಂದ ಒಟ್ಟಾಗಿ ಕೆಲಸ ಮಾಡಿದವು. ತಮ್ಮ ಸಂಘಟಿತ ಕೆಲಸದಿಂದ ಸಮಯವನ್ನು ಸರಿಯಾಗಿ ತೋರಿಸುತ್ತಿದ್ದೇವೆಂದು ಸಂತಸಪಟ್ಟವು.

ನಮ್ಮ ಜೀವನದಲ್ಲೂ ಅಷ್ಟೇ; ಕೆಲವರು ಬೇಗನೇ ಗುರಿ ತಲುಪುತ್ತಾರೆ, ಮತ್ತೆ ಕೆಲವರು ನಿಧಾನವಾಗಿ ತಲುಪುತ್ತಾರೆ. ಕೆಲವರು ಸೆಕೆಂಡಿನ ಮುಳ್ಳಿನ ಥರ ಬಹಳ ಚುರುಕಾಗಿರುತ್ತಾರೆ, ಬೇಗ ಬೇಗ ಮುಂದುವರಿಯುತ್ತಾರೆ. ಮತ್ತೆ ಕೆಲವರು ನಿಮಿಷದ ಮುಳ್ಳಿನಂತೆ ಹದವಾದ ವೇಗದಲ್ಲಿ ಸಾಗುತ್ತಾರೆ. ಇನ್ನು ಕೆಲವರು ಮೌನವಾಗಿ ನಿಧಾನವಾಗಿಯೇ ದೊಡ್ಡ ಬದಲಾವಣೆ ತರುತ್ತಾರೆ. ವೇಗವಾಗಿ ಹೋಗುವವರು ಜಾಸ್ತಿ ಕೆಲಸ ಮಾಡುತ್ತಾರೆಂದೂ, ನಿಧಾನಿಸುವವರು ಕಡಿಮೆ ಕೆಲಸ ಮಾಡುತ್ತಾರೆಂದೂ ಅರ್ಥವಲ್ಲ. ಈ ಪ್ರಕೃತಿಯಲ್ಲಿ ಬಸವನಹುಳುವಿಗೂ ಮಹತ್ವವಿದೆ, ಚಿರತೆಗೂ ಪ್ರಾಮುಖ್ಯತೆಯಿದೆ. ಹೀಗಾಗಿ ಬೇರೆಯವರೊಂದಿಗೆ ಹೋಲಿಕೆ ಮಾಡಿಕೊಳ್ಳುತ್ತ ತಮ್ಮ ಕೆಲಸ ವೇಗವಾಗಿದೆ ಎಂದು ಜಂಭ ಪಡುವುದು, ತಾವು ಹಿಂದುಳಿದಿದ್ದೇವೆ ಎಂದು ದುಃಖ ಪಡುವುದು ನಿರರ್ಥಕ. ಕಾರಣ ಪ್ರತಿಯೊಬ್ಬರ ಪ್ರಯಾಣವೂ ವಿಭಿನ್ನ ಮತ್ತು ಎಲ್ಲ ಪಯಣಗಳೂ ಅರ್ಥಪೂರ್ಣ.

ಗುಂಡಣ್ಣ

ಪದಬಂಧ 6359

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಯಸ್ಸಿನಿಂದ ಹಿರಿಯನಾದವನು (4)
3.ನೂರು ಹೆಜ್ಜೆ ನಡೆಯುವುದು (4)
5.ಬೆಳಗಿನ ಜಾವವಿದು (3)
6.ಎಳ್ಳು ನೀರು ಬಿಡುವಿಕೆ (4)
8.ಹಿಗ್ಗು ಇಲ್ಲಿ ಉಲ್ಟಾ ಪಲ್ಟಾ ಆಗಿದೆ (3)
10.ಮನವು ಹೀಗೆ ಕೋತಿಯಂತೆ! (3)
12.ತುಸುವೇ ಬೀರಿರುವ ಮಂದಹಾಸ (4)
15.ಕೊನೆಗೆ ಸರವಿದ್ದರೆ ಇದು ಅಂದ! (3)
16.ಈತ ಬಟ್ಟೆಗಳನ್ನು ಮಡಿ ಮಾಡುವವನು (4)
17.ಅತ್ಯಂತ ಪರಾಕ್ರಮಿಯು ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ

1.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
2.ಕನ್ನ ಹಾಕಿ ಕದ್ದಿರುವ ಚಿನ್ನ (3)
3.ಮುಂದಾಗುವುದನ್ನು ತಿಳಿಸುವುದು (3)
4.ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ (2)
7.ಯಾವ ಉದ್ದೇಶವೂ ಇಲ್ಲದ್ದು (5)
9.ಅಂತಶ್ಶಕ್ತಿಯಿದು (5)
11.ವಂಚನೆಯ ಮಾತು (3)
12.ಪಾಪಿಗಳ ಲೋಕ (3)
13.ನೆಲವನ್ನು ಅಗೆಯುವ ಕಬ್ಬಿಣದ ಸಾಧನ (3)
14.ಸುಗಮವಾಗಿ ಕಿತ್ತಿರುವ ಹೂವು (2)



6358ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಐಹಿಕ 4.ಮಸ್ತಕ 6.ರವಿಕಿರಣ 7.ತಡ 9.ನಾಯಿ 10.ನಾರಿ 11.ಕದ 16.ನರಭಕ್ಷಕ 17.ಕಡಲು 18.ವಿನಾಶ

ಮೇಲಿಂದ ಕೆಳಕ್ಕೆ:
1.ಐರಾವತ 2.ಕರಡಿ 3.ಕಿಂಕಿಣಿ 4.ಮಣಕ 5.ಕಸುಗಾಯಿ 8.ಡಬರಿ 9.ನಾಸ್ತಿಕ 10.ನಾಗರಿಕ 12.ದಶಮಾಂಶ 13.ಹೊನಲು 14.ಸಂಭವ 15.ಕುಕವಿ

ಸುಡೊಕು 6743

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	5			9		7		
	1		4		7			2
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1				

6742 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

31 ಮಾರ್ಚ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ತ್ರಯೋದಶಿ ಗಂ. 6-56 ನಕ್ಷತ್ರ: ಪೂರ್ವಫಲ್ಗುನಿ ಗಂ. 15-21 ಯೋಗ: ಗಂಡ ಗಂ. 15-42 ಕರಣ: ತೈತಿಲ ಗಂ 6-56 ಮೀನ ಮಾಸದ 16 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-31 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 11 ಶವ್ವಾಲ್, ದಿನ ವಿಶೇಷ : ಮಹಾವೀರ ಜಯಂತಿ, ಅದೃಷ್ಟ ಸಂಖ್ಯೆ : 7, 4

ಮೇಷ: ಪರಿಸ್ಥಿತಿಗಳನ್ನು ಸುಧಾರಣೆಗೆ ತರುವ ಪ್ರಯತ್ನದಿಂದ ಕೆಲಸದ ಕಡೆಗೆ ಗಮನ ಕೊಡಲು ಸಾಧ್ಯವಾಗದಂತಾಗಲಿದೆ. ಆರೋಗ್ಯ ಸುಧಾರಿಸಿ ಮನಸ್ಸಿಗೆ ನೆಮ್ಮದಿ ಸಿಗುವುದು. ರೇಡಿಯೊದಲ್ಲಿ ಕಾರ್ಯಕ್ರಮಕ್ಕೆ ಕರೆ ಬರುವುದು.

ವೃಷಭ: ವಿಷಯಗಳನ್ನು ಗೌಪ್ಯವಾಗಿ ಇರಿಸಿದಲ್ಲಿ ಭವಿಷ್ಯದಲ್ಲಿ ತೊಂದರೆಯನ್ನು ಅನುಭವಿಸುವಂತೆ ಆಗುವುದು. ಉತ್ತಮ ಸಂಧಾನಕಾರರಾಗಿರುವ ನಿಮಗೆ ಇಂದಿನ ಸಮಸ್ಯೆ ಕಬ್ಬಿಣದ ಕಡಲೆ ಆಗಬಹುದು.

ಮಿಥುನ: ಶ್ರಮಕ್ಕೆ ಸರಿಸಮಾನದ ಧನಾಗಮನಕ್ಕೆ ಯಾವುದೇ ತೊಂದರೆಯಿಲ್ಲ. ಸ್ನೇಹಪರ ಮನೋಭಾವದಿಂದ ಸ್ಥಾನಮಾನಗಳು ಲಭಿಸಲಿವೆ. ಮಹಾಗಣಪತಿ ಆರಾಧನೆಯಿಂದ ಮನೋಕಾಮನೆಗಳು ಈಡೇರಲಿವೆ.

ಕರ್ಕಾಟಕ: ತುಮಲಗಳನ್ನು ಮನಸ್ಸಿಗೆ ಹತ್ತಿರವಾದವರಲ್ಲಿ ಹೇಳಿಕೊಳ್ಳುವುದರಿಂದ ಕಡಿಮೆಯಾಗುವುದು. ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ.

ಸಿಂಹ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವಿರಿ. ನಿತ್ಯದ ಸಿಬ್ಬಂದಿ ವರ್ಗದವರಿಂದ ಸಹಕಾರ ನಿರೀಕ್ಷಿಸಬೇಡಿ. ಸರ್ಕಾರಿ ಗುತ್ತಿಗೆ ಕೆಲಸಗಳು ನಿಮ್ಮದಾಗಲಿವೆ.

ಕನ್ಯಾ: ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ಸಂಗಾತಿಯಲ್ಲಿ ಒಪ್ಪಿಗೆ ಪಡೆಯಿರಿ. ಶುಭ ಕಾರ್ಯಗಳಿಗಾಗಿ ಅಥವಾ ಕ್ಷೇತ್ರ ದರ್ಶನಕ್ಕಾಗಿ ಖರ್ಚಿನ ಸಂಭವವಿರುವುದು. ಹಿರಿಯರ ಮಾರ್ಗದರ್ಶನ ಪಡೆಯುವುದು ಉತ್ತಮ.

ತುಲಾ: ಗೊತ್ತಿಲ್ಲದ ವಿಷಯವನ್ನು ಗುರುಹಿರಿಯರ ಬಳಿಯಲ್ಲಿ ಕೇಳಿ ತಿಳಿಯುವುದು ಅಗೌರವವೆಂದು ಭಾವಿಸಬೇಡಿ. ಯಾವುದೇ ಟೀಕೆಗಳಿಗೆ ಕಿವಿಯೊಡ್ಡಬೇಡಿ, ಪ್ರಾಮಾಣಿಕತೆಯಿಂದ ಕಾರ್ಯ ಮುಂದುವರಿಸಿ.

ವೃಶ್ಚಿಕ: ನಡೆಯುವ ಕೆಲವು ಸೂಕ್ಷ್ಮವಾದ ಸನ್ನಿವೇಶಗಳು ಸಂಕುಚಿತ ಮನೋಭಾವನೆಯನ್ನು ದೂರಮಾಡುತ್ತವೆ. ಇದರಿಂದ ಎಲ್ಲವನ್ನು ಹಾಗೂ ಎಲ್ಲರನ್ನೂ ಎದುರಿಸುವ ಮನೋಸ್ಥೈರ್ಯವನ್ನು ತಂದು ಕೊಡುತ್ತದೆ.

ಧನು: ವೃತ್ತಿಯಲ್ಲಿ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ಕಾರ್ಯದ ಒತ್ತಡದಿಂದ ಭೋಜನದ ಸಮಯದಲ್ಲಿ ವ್ಯತ್ಯಯಗಳು ಸಂಭವಿಸಬಹುದು. ಬಂಧನದ ಭೀತಿಯಿಂದ ಹೊರಬರುವಿರಿ.

ಮಕರ: ಶಿಕ್ಷಕ ವೃತ್ತಿಯನ್ನು ಮಾಡುತ್ತಿರುವವರಿಗೆ ಹೆಮ್ಮೆಯ ಸಂದರ್ಭ ಬರಲಿದೆ. ಪತ್ನಿಯ ಸಹಕಾರದಿಂದ ಕೆಲಸಗಳು ಅಚ್ಚುಕಟ್ಟಾಗಿ ಮುಗಿಯಲಿವೆ. ಸಂತೃಪ್ತಿಯ ಜೀವನವನ್ನು ಮುನ್ನಡೆಸಿ.

ಕುಂಭ: ಸಮೀಪವರ್ತಿಗಳ ದುರ್ಬುದ್ಧಿಯಿಂದ ವ್ಯಾಪಾರ ವಹಿವಾಟುಗಳಲ್ಲಿ ವಂಚನಾಕಾರ್ಯ ನಡೆದಾವು. ಅತಿಯಾಗಿ ನಂಬಲು ಹೋಗದೆ ಇರುವುದು ಒಳ್ಳೆಯದು. ತಂಡವನ್ನು ನಿಭಾಯಿಸುವಲ್ಲಿ ಯಶಸ್ವಿಯಾಗುತ್ತೀರಿ.

ಮೀನ: ವೃತ್ತಿಯಲ್ಲಿ ಅನುಭವ ಹಾಗೂ ಪರಿಶ್ರಮ ಸೂಕ್ತ ಸಮಯದಲ್ಲಿ ಬೆಳಕಿಗೆ ಬಂದು ಉಪಯೋಗವಾಗುವುದು. ಕಾರ್ಮಿಕರ ಬೇಡಿಕೆಗಳನ್ನು ಅಲ್ಲಗಳೆಯದೆ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಿ.

ಜೂನ್ 26ಕ್ಕೆ 'ಮೋಡ ಕವಿದ ವಾತಾವರಣ'

'ಗತವೈಭವ' ಸಿನಿಮಾ ಬಳಿಕ ನಿರ್ದೇಶಕ ಸುನಿ ನಿರ್ದೇಶನದ ಹೊಸ ಸಿನಿಮಾ ತೆರೆಗೆ ಬರಲು ಸಜ್ಜಾಗಿದೆ. ಶೀಲಂ ಎಂ.ಸ್ವಾಮಿ ನಾಯಕರಾಗಿ ನಟಿಸಿರುವ 'ಮೋಡ ಕವಿದ ವಾತಾವರಣ' ಸಿನಿಮಾ ಜೂನ್ 26ಕ್ಕೆ ತೆರೆಕಾಣಲಿದೆ.

ಕೆಲ ತಿಂಗಳ ಹಿಂದೆ ಸಿನಿಮಾದ 'ನನ್ನದೆಯಾ ಹಾಡೊಂದನು..' ಎಂಬ ಸಿಂಗಲ್ ಟೀಕ್ ಹಾಡನ್ನು ಚಿತ್ರತಂಡ ಬಿಡುಗಡೆ ಮಾಡಿತ್ತು. ಸುನಿ ಅವರ ಜೊತೆಯೇ ಹಲವು ವರ್ಷಗಳಿಂದ ಸಹ ನಿರ್ದೇಶಕರಾಗಿ ಕೆಲಸ ಮಾಡಿರುವ ಶೀಲಂ ಈ ಸಿನಿಮಾ ಮೂಲಕ ನಾಯಕನಾಗಿ ತೆರೆ ಮೇಲೆ ಬರುತ್ತಿದ್ದಾರೆ. ಕಾಲೇಜು ಹುಡುಗನಾಗಿ ಅವರು ಕಾಣಿಸಿಕೊಂಡಿದ್ದು, ರಿವರ್ಸ್ ಸ್ಕ್ರೀನ್‌ಪ್ಲೇಯಲ್ಲಿ ಈ ಸಿನಿಮಾ ಕಥೆ ಸಾಗಲಿದೆ. ಸೈಂಟಿಫಿಕ್ ಫಿಕ್ಷನ್ ಲವ್ ಸ್ಟೋರಿ ಹೊಂದಿರುವ ಈ ಸಿನಿಮಾದಲ್ಲಿ ಶೀಲಂಗೆ ಜೋಡಿಯಾಗಿ 'ಕೋಟಿ' ಸಿನಿಮಾ ಖ್ಯಾತಿಯ ಮೋಕ್ಷ ಕುಶಾಲ್ ಹಾಗೂ ಸಾತ್ವಿಕ ನಟಿಸಿದ್ದಾರೆ.

'ಒಂದು ಸರಳ ಪ್ರೇಮಕತೆ' ಚಿತ್ರದ ನಿರ್ಮಾಪಕರಾದ ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೆಳವಾಡಿ ಹಾಗೂ ಗೋವಾ ರಮೇಶ್ ಜೊತೆಗೂಡಿ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಸುನಿ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ಗೀತೆಗಳನ್ನು ಬರೆದಿದ್ದಾರೆ. ಜೂಡಾ ಸ್ಯಾಂಡಿ ಸಂಗೀತ ನಿರ್ದೇಶನ, ಸಂತೋಷ್ ರೈ ಪಾತಾಜೆ ಛಾಯಾ-ಚಿತ್ರಗ್ರಹಣ ಚಿತ್ರಕ್ಕಿದೆ. ಸರೆಗಮ ಒಳ್ಳೆಯ ಮೊತ್ತಕ್ಕೆ ಚಿತ್ರದ ಆಡಿಯೊ ಹಕ್ಕನ್ನು ಖರೀದಿಸಿದೆ. ❖

ಶೀಲಂ, ಮೋಕ್ಷ

ಏಪ್ರಿಲ್ 2ಕ್ಕೆ 'ರಾಮಾಯಣ' ತುಣುಕು

ರಣ್‌ಬೀರ್ ಕಪೂರ್ ಹಾಗೂ ಯಶ್ ನಟನೆಯ 'ರಾಮಾಯಣ' ಸಿನಿಮಾದ ತುಣುಕು ಇದೇ ಏ.2ರಂದು ಹನುಮ ಜಯಂತಿ ಸಂದರ್ಭದಲ್ಲಿ ಬಿಡುಗಡೆಯಾಗಲಿದೆ.

'ರಾಮ'ನ ಪಾತ್ರದ ವಿಶೇಷ ತುಣುಕನ್ನು ಬಿಡುಗಡೆ ಮಾಡುವುದಾಗಿ ನಿರ್ಮಾಪಕ ನಮಿತ್ ಮಲ್ಹೋತ್ರ ಘೋಷಿಸಿದ್ದಾರೆ. 'ದಂಗಲ್' ಸಿನಿಮಾ ಖ್ಯಾತಿಯ ನಿರ್ದೇಶಕ ನಿತೀಶ್ ತಿವಾರಿ ನಿರ್ದೇಶಿಸುತ್ತಿರುವ ಈ ಸಿನಿಮಾ ಅದ್ದೂರಿಯಾಗಿ ದೃಶ್ಯ ರೂಪದಲ್ಲಿ ಬರಲಿದೆ. ಬಹುಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರವನ್ನು ಯಶ್ ಅವರ ಮಾನ್‌ಸ್ಟರ್‌ಮೈಂಡ್ ಕ್ರಿಯೇಷನ್ ಹಾಗೂ ನಮಿತ್ ಮಲ್ಹೋತ್ರಾ ಸಾರಥ್ಯದ ಪ್ರೈಮ್ ಫೋಕಸ್ ಸ್ಟುಡಿಯೊ ನಿರ್ಮಿಸುತ್ತಿದೆ.

ಎರಡು ಭಾಗಗಳಲ್ಲಿ ಈ ಸಿನಿಮಾ ತೆರೆಕಾಣುತ್ತಿದ್ದು, 2026ರ ದೀಪಾವಳಿಗೆ ಮೊದಲ ಭಾಗ ಬಿಡುಗಡೆಯಾಗಲಿದೆ. 2027ರ ದೀಪಾವಳಿಗೆ ಎರಡನೇ ಭಾಗ ತೆರೆಕಾಣಲಿದೆ. ಚಿತ್ರದಲ್ಲಿ ರಣಬೀರ್ ಕಪೂರ್ 'ರಾಮ'ನ ಪಾತ್ರದಲ್ಲಿ, ಸಾಯಿ ಪಲ್ಲವಿ 'ಸೀತೆ'ಯಾಗಿ ಹಾಗೂ ಯಶ್ 'ರಾವಣ'ನ ಪಾತ್ರಧಾರಿಯಾಗಿ ನಟಿಸಿದ್ದಾರೆ. ಸನ್ನಿ ಡಿಯೋಲ್ 'ಹನುಮಂತ'ನಾಗಿ ಮತ್ತು ರವಿ ದುಬೆ 'ಲಕ್ಷ್ಮಣ'ನಾಗಿ ಬಣ್ಣಹಚ್ಚಿದ್ದಾರೆ. ಚಿತ್ರತಂಡವು ಅತ್ಯಾಧುನಿಕ ವಿಎಫ್‌ಎಕ್ಸ್ ತಂತ್ರಜ್ಞಾನವನ್ನು ಬಳಸಿಕೊಂಡು ಪೌರಾಣಿಕ ಕಥೆಯನ್ನು ಆಕರ್ಷಕವಾಗಿ ತೆರೆಗೆ ತರುತ್ತಿದೆ. ❖

ಗಣೇಶ್

ರಾಧ ಜೊತೆ ಗಣೇಶ್ ಹೆಜ್ಜೆ

ಇತ್ತೀಚೆಗೆ ತೆರೆಕಂಡ ಗಣೇಶ್ ನಟನೆಯ 'ಬೃಂದಾವಿಹಾರಿ' ಸಿನಿಮಾದ 'ಹೇ ರಾಮ ರಾಮ' ಹಾಡು ಯುಟ್ಯೂಬ್‌ನಲ್ಲಿ 10ಲಕ್ಷಕ್ಕೂ ಅಧಿಕ ವೀಕ್ಷಣೆ ಪಡೆದಿದೆ.

'ಕೃಷ್ಣಂ ಪ್ರಣಯ ಸಖಿ' ಖ್ಯಾತಿಯ ಶ್ರೀನಿವಾಸರಾಜು ನಿರ್ದೇಶನದ ಈ ಸಿನಿಮಾದ ಎಲ್ಲಾ ಹಾಡುಗಳಿಗೆ ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಸಂಗೀತ ಸಂಯೋಜಿಸಿದ್ದಾರೆ.

ಅನುರಾಗ್ ಕುಲಕರ್ಣಿ ಹಾಡಿರುವ ಹಾಡಿಗೆ ಶೇಖರ್ ಮಾಸ್ಟರ್ ನೃತ್ಯ ನಿರ್ದೇಶಿಸಿದ್ದಾರೆ. ವಿ.ನಾಗೇಂದ್ರ ಪ್ರಸಾದ್ ಹಾಗೂ ಶೇಖರ್ ಮಾಸ್ಟರ್ ಕಾಂಬಿನೇಷನ್‌ನಲ್ಲೇ 'ದ್ವಾಪರ' ಹಾಡು ಹಿಟ್ ಆಗಿತ್ತು. ಈ ಹಾಡಿನ ಹುಕ್‌ಸ್ಟೆಪ್ ಕೂಡಾ ಆಕರ್ಷಕವಾಗಿ ಮೂಡಿಬಂದಿದೆ. ವಿರಾಟ್ ಸಾಯಿ ಕ್ರಿಯೇಷನ್ಸ್ ಅರ್ಪಿಸುವ ಈ ಚಿತ್ರವನ್ನು ಸಮೃದ್ಧಿ ವಿ. ಮಂಜುನಾಥ್ ನಿರ್ಮಾಣ ಮಾಡಿದ್ದಾರೆ. ವೆಂಕಟ್ ಪ್ರಸಾದ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಗಣೇಶ್‌ಗೆ ಜೋಡಿಯಾಗಿ 'ರಾಧ' ಪಾತ್ರದಲ್ಲಿ ದೇವಿಕಾ ಭಟ್ ಹಾಗೂ ಮಾಳವಿಕ ಶರ್ಮ ಅಭಿನಯಿಸಿದ್ದಾರೆ. ❖

ಕೆಂಡದ ಸೆರಗು ಏಪ್ರಿಲ್ 17ಕ್ಕೆ ಬಿಡುಗಡೆ

'ಬಿಗ್‌ಬಾಸ್' ಖ್ಯಾತಿಯ ಭೂಮಿ ಶೆಟ್ಟಿ ನಟಿಸಿರುವ ಕಾದಂಬರಿ ಆಧಾರಿತ ಸಿನಿಮಾ 'ಕೆಂಡದ ಸೆರಗು' ಏ.17ರಂದು ಬಿಡುಗಡೆಯಾಗಲಿದೆ.

ಈ ಚಿತ್ರದಲ್ಲಿ ಭೂಮಿ ಕುಸ್ತಿಪಟುವಾಗಿಯೂ, ಮಾಲಾಶ್ರೀ ಪೊಲೀಸ್ ಅಧಿಕಾರಿಯಾಗಿಯೂ ನಟಿಸಿದ್ದಾರೆ. ರಾಕಿ ಸೋಮ್ಲಿ ನಿರ್ದೇಶಿಸಿರುವ ಈ ಚಿತ್ರವು ಸಾಮಾಜಿಕ ಸಂದೇಶದೊಂದಿಗೆ ಕ್ರೈಂ ತನಿಖೆಯ ಅಂಶವನ್ನೂ ಒಳಗೊಂಡಿದೆ. 'ಚಿತ್ರದಲ್ಲಿ ಮಹಿಳೆಯ ಆತ್ಮಗೌರವ ಮತ್ತು ಹೋರಾಟದ ಕಥೆಯ ಜೊತೆಗೆ ಇಂದಿನ ಸಮಾಜದಲ್ಲಿ ಯುವತಿಯರಿಗೆ ಆಗುತ್ತಿರುವ ಮೋಸ ಮತ್ತು ಅಪಾಯಗಳನ್ನು ತೋರಿಸಲಾಗಿದೆ' ಎಂದಿದೆ ಚಿತ್ರತಂಡ.

ಶ್ರೀ ಮುತ್ತು ಟಾಕೀಸ್ ಬ್ಯಾನರ್‌ನಲ್ಲಿ ಕೋಟ್ರೇಶ್ ಗೌಡ ನಿರ್ಮಿಸಿರುವ ಈ ಚಿತ್ರದಲ್ಲಿ ಶೋಭಿತ, ಪ್ರತಿಮಾ ಠಾಕೂರ್, ಮೋಹನ್ ಕುಮಾರ್, ವರ್ಧನ್, ಯಶ್ ಶೆಟ್ಟಿ, ಸಿಂಧು ಲೋಕನಾಥ್, ಹರೀಶ್ ಅರಸು ಮುಂತಾದವರು ನಟಿಸಿದ್ದಾರೆ. ಚಿತ್ರಕ್ಕೆ ವಿಪಿನ್ ಛಾಯಾಚಿತ್ರಗ್ರಹಣ, ವೀರೇಶ್ ಕಂಬಳಿ ಸಂಗೀತ ನಿರ್ದೇಶನವಿದೆ. ❖

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	22,819
ಇಂದಿನ ಅಂತ್ಯ:	22,331
ದಿನದ ಕನಿಷ್ಠ:	22,283
	488

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹450
12 ಕ್ಕೆ	₹60
ಮೈಸೂರು: 100 ಕ್ಕೆ	₹455

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹216
ಆರ್‌ಎಸ್‌ಎಸ್-5	₹210
ಗುಡ್ ಲಾಟ್	₹191

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹425-745
ದ್ವಿತಳಿ (ಬಿ.ವಿ)	₹366-840

ಮುದ್ರೆಮನೆ ಕಾಫಿ	
ಎಪಿ	₹24000
ಎಸಿ	₹14150
ಆರ್‌ಪಿ	₹18650
ಆರ್‌ಸಿ	₹9950

ದಿವಾಳಿತನ ಮಸೂದೆಗೆ ಲೋಕಸಭೆ ಒಪ್ಪಿಗೆ

ಸಂಹಿತೆಯಲ್ಲಿ 12 ತಿದ್ದುಪಡಿ: ಆಡಳಿತ ಸುಧಾರಣೆಗೆ ಸಹಕಾರಿ

ನವದೆಹಲಿ (ಪಿಟಿಐ): ದಿವಾಳಿತನ ಮತ್ತು ದಿವಾಳಿತನ ಸಂಹಿತೆ ತಿದ್ದುಪಡಿ ಮಸೂದೆಗೆ ಲೋಕಸಭೆ ಸೋಮವಾರ ಒಪ್ಪಿಗೆ ನೀಡಿದೆ.

ನಿರ್ಮಲಾ ಸೀತಾರಾಮನ್

ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಿದರು.

2016ರಲ್ಲಿ ಜಾರಿಗೊಂಡಿದ್ದ ದಿವಾಳಿತನ ಮತ್ತು ದಿವಾಳಿತನ ಸಂಹಿತೆಗೆ (ಐಬಿಸಿ) 12 ತಿದ್ದುಪಡಿಗಳನ್ನು ಮಾಡಲಾಗುತ್ತಿದೆ. ಇದು ಪಾಲುದಾರರ ಮೌಲ್ಯವನ್ನು ಗರಿಷ್ಠಗೊಳಿಸಲು ಮತ್ತು ಆಡಳಿತ ಪ್ರಕ್ರಿಯೆಯನ್ನು ಸುಧಾರಿಸಲು ಸಹಾಯ ಮಾಡಲಿದೆ ಎಂದು ಅವರು ತಿಳಿಸಿದರು.

ತಿದ್ದುಪಡಿಗಳು ಅಸ್ತಿತ್ವದಲ್ಲಿರುವ ದಿವಾಳಿತನ ಚೌಕಟ್ಟನ್ನು ಬಲಪಡಿಸಲು, ಎದುರಾಗುವ ಸವಾಲುಗಳನ್ನು ಪರಿಹರಿಸಲು ಹಾಗೂ ವಿಕಸನಗೊಳ್ಳುತ್ತಿರುವ ಜಾಗತಿಕ ರೂಢಿಗಳನ್ನು ಅಳವಡಿಸಲು ಯತ್ನಿಸುತ್ತವೆ ಎಂದು ಹಣಕಾಸು ಸಚಿವರು ಹೇಳಿದರು.

ದೇಶದ ಬ್ಯಾಂಕಿಂಗ್ ಕ್ಷೇತ್ರದ ಆರೋಗ್ಯ ಸುಧಾರಿಸುವಲ್ಲಿ ಈ ಕಾಯ್ದೆಯು ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ನಿರ್ಮಲಾ ಅವರು ತಿಳಿಸಿದರು.

ದಿವಾಳಿತನ ಮತ್ತು ದಿವಾಳಿತನ ಸಂಹಿತೆ (ತಿದ್ದುಪಡಿ) ಮಸೂದೆ–2025 ಅನ್ನು ಲೋಕಸಭೆಯು ಅಂಗೀಕರಿಸಿದೆ.

ಐಬಿಸಿ ತಿದ್ದುಪಡಿ ಮಾಡಲು ಸರ್ಕಾರವು 2025ರ ಆಗಸ್ಟ್ 12ರಂದು ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸಿತ್ತು.

ದಿವಾಳಿತನ ಪರಿಹಾರ ಅರ್ಜಿಗಳನ್ನು ವಿಲೇವಾರಿಗೊಳಿಸಲು ತೆಗೆದುಕೊಳ್ಳುವ ಸಮಯವನ್ನು ಕಡಿಮೆ ಮಾಡುವ ನಿಬಂಧನೆಗಳು ಒಳಗೊಂಡಂತೆ ಹಲವು ಬದಲಾವಣೆಗಳನ್ನು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿತ್ತು.

ಈ ಮಸೂದೆಯನ್ನು ಲೋಕಸಭೆಯ ಪರಿಶೀಲನಾ ಸಮಿತಿಗೆ ಕಳುಹಿಸಲಾಗಿತ್ತು. ಸಮಿತಿಯು 2025ರ ಡಿಸೆಂಬರ್‌ನಲ್ಲಿ ತನ್ನ ವರದಿ ಸಲ್ಲಿಸಿತ್ತು.

ಸಮಿತಿಯ ಎಲ್ಲ ಶಿಫಾರಸುಗಳನ್ನು ಅಂಗೀಕರಿಸಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಅವರು ತಿಳಿಸಿದ್ದಾರೆ.

ಮಸೂದೆಯಲ್ಲಿನ ಪ್ರಮುಖ ಅಂಶಗಳು

- ದಿವಾಳಿತನ ಪರಿಹಾರ ಪ್ರಕ್ರಿಯೆ ಆರಂಭಿಸುವ ಅರ್ಜಿಯನ್ನು 14 ದಿನಗಳಲ್ಲಿ ಒಪ್ಪಿಕೊಳ್ಳಬೇಕು
- ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು ಐಬಿಸಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ಮೂರು ತಿಂಗಳೊಳಗೆ ಇತ್ಯರ್ಥಪಡಿಸಬೇಕು
- ಹೂಡಿಕೆದಾರರ ವಿಶ್ವಾಸ ಉತ್ತೇಜಿಸಲು ಕ್ರಮ
- ಪ್ರಕ್ರಿಯೆ ವಿಳಂಬ, ಕ್ಷುಲ್ಲಕ ದೂರಿಗೆ ದಂಡ
- ಈವರೆಗೆ ಏಳು ಬಾರಿ ಐಬಿಸಿ ತಿದ್ದುಪಡಿ

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಕುಸಿದ ಮೌಲ್ಯ

95 ದಾಟಿದ್ದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರದ ವಹಿವಾಟಿನ ವೇಳೆ 95 ದಾಟಿತ್ತು. ನಂತರ ಮೌಲ್ಯವು ಚೇತರಿಕೆ ಕಂಡು ವಹಿವಾಟಿನ ಅಂತ್ಯಕ್ಕೆ 94.70 ಆಗಿದೆ.

ಪಶ್ಚಿಮ ಏಷ್ಯಾ ಸಂಘರ್ಷ, ಡಾಲರ್ ಮೌಲ್ಯ ಮತ್ತು ಕಚ್ಚಾ ತೈಲದ ದರ ಹೆಚ್ಚಳವು ರೂಪಾಯಿ ಮೇಲೆ ಒತ್ತಡ ಹೇರಿದೆ ಎಂದು ವರ್ತಕರು ತಿಳಿಸಿದ್ದಾರೆ.

ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು 93.57 ಇತ್ತು. ದಿನದ ನಡುವೆ ಅದು 95.22ಕ್ಕೆ ಇಳಿದು, ವಹಿವಾಟಿನ ಕೊನೆಯಲ್ಲಿ ಮೌಲ್ಯವು 94.70 ಆಗಿದೆ. ವಹಿವಾಟಿನ ವೇಳೆ 165 ಪೈಸೆ ಏರಿಕೆ ಕಂಡಿತ್ತು.

ಶುಕ್ರವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 89 ಪೈಸೆ ಇಳಿಕೆಯಾಗಿ, 94.85 ಆಗಿತ್ತು. ಇದಕ್ಕೆ ಹೋಲಿಸಿದರೆ ಸೋಮವಾರ 15 ಪೈಸೆ ಏರಿಕೆ ಆಗಿದೆ.

ಶೇ 9.88ರಷ್ಟು ಇಳಿಕೆ: 2025–26ರ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಮಾರ್ಚ್ 27ರವರೆಗೆ ಡಾಲರ್ ಎದುರು ರೂಪಾಯಿ ಮೌಲ್ಯ ಶೇ 9.88ರಷ್ಟು ಕುಸಿದಿದೆ. ಇದು ಕಳೆದ 14 ವರ್ಷದಲ್ಲಿ ಅತಿದೊಡ್ಡ ವಾರ್ಷಿಕ ಇಳಿಕೆ ಆಗಿದೆ. 2011–12ರಲ್ಲಿ ಶೇ 12.4ರಷ್ಟು ಮೌಲ್ಯ ಇಳಿದಿತ್ತು.

ರೂಪಾಯಿ ಸ್ಥಿತಿ ಉತ್ತಮ: ಕೇಂದ್ರ

ನವದೆಹಲಿ (ಪಿಟಿಐ): 'ದೇಶದ ಆರ್ಥಿಕತೆಯ ಅಂಶಗಳು ಸದೃಢವಾಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಕರೆನ್ಸಿಗೆ ಹೋಲಿಸಿದರೆ ರೂಪಾಯಿ ಸ್ಥಿತಿ ಉತ್ತಮವಾಗಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಫೆಬ್ರುವರಿ 28ರಂದು ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾಯಿತು. ಅಂದಿನಿಂದ ಮಾರ್ಚ್ 27ರವರೆಗೆ ರೂಪಾಯಿ ಮೌಲ್ಯದಲ್ಲಿ ಶೇ 4.1ರಷ್ಟು ಇಳಿದಿದ್ದು, ರೂಪಾಯಿ ಮೌಲ್ಯ 94.82 ಆಗಿದೆ.

ಲೋಕಸಭೆಯಲ್ಲಿ ಪೂರಕ ಪ್ರಶ್ನೆಗೆ ಉತ್ತರಿಸಿದ ಸಚಿವರು, ದೇಶದ ಆರ್ಥಿಕತೆ ಮತ್ತು ವಿತ್ತೀಯ ಸ್ಥಿತಿಯು ಸದೃಢವಾಗಿದೆ. ಇಡೀ ವಿಶ್ವವೇ ಭಾರತದ ವಿತ್ತೀಯ ಕೊರತೆಯ ನಿರ್ವಹಣೆಯನ್ನು ಶ್ಲಾಘಿಸುತ್ತಿದ್ದು, ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಸದೃಢವಾಗಿದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಏಷ್ಯಾದ ಪ್ರಮುಖ ಕರೆನ್ಸಿಗಳ ಮೌಲ್ಯವು ಸಹ ಇಳಿದಿದೆ. ದಕ್ಷಿಣ ಕೊರಿಯಾದ ಕರೆನ್ಸಿ ವೊನ್, ಥಾಯ್ಲೆಂಡ್‌ನ ಬಹ್ತ್ ಮತ್ತು ಫಿಲಿಪ್ಪೀನ್ಸ್‌ನ ಪೆಸೊ ಮೌಲ್ಯವು ಡಾಲರ್ ಎದುರು ಕ್ರಮವಾಗಿ ಶೇ 4.6, ಶೇ 5.5 ಮತ್ತು ಶೇ 4.8ರಷ್ಟು ಇಳಿದಿದೆ ಎಂದು ಹೇಳಿದ್ದಾರೆ.

ರೂಪಾಯಿ ಮೌಲ್ಯವು ಮಾರುಕಟ್ಟೆ ಆಧಾರಿತವಾಗಿದ್ದು ಮತ್ತು ಹಲವು ಅಂಶಗಳು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರುತ್ತವೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ.

ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ರೂಪಾಯಿ ಮೌಲ್ಯದ ಮೇಲೆ ತೀವ್ರ ನಿಗಾ ಇಡುತ್ತಿವೆ ಎಂದು ತಿಳಿಸಿದ್ದಾರೆ.

2020–21ರ ಆರ್ಥಿಕ ವರ್ಷದಲ್ಲಿ ದೇಶದ ಚಿಲ್ಲರೆ ಹಣದುಬ್ಬರವು ಸರಾಸರಿ ಶೇ 6.2ರಷ್ಟಿತ್ತು. ಇದು 2024–25ರ ವೇಳೆಗೆ ಶೇ 4.6ಕ್ಕೆ ಇಳಿದಿದ್ದು, 2025–26ರ ಏಪ್ರಿಲ್‌ನಿಂದ ಫೆಬ್ರುವರಿ ಅವಧಿಯಲ್ಲಿ ಶೇ 1.9ಕ್ಕೆ ಕಡಿಮೆ ಆಗಿದೆ. ಅನೇಕ ಅಗತ್ಯ ವಸ್ತುಗಳ ಬೆಲೆ ಸ್ಥಿರವಾಗಿವೆ ಅಥವಾ ಇಳಿಕೆ ಆಗುತ್ತಿದೆ ಎಂದು ಹೇಳಿದ್ದಾರೆ.

ಬ್ಯಾಂಕ್ ಲಾಕರ್‌ಗೆ 'ಪ್ರತ್ಯೇಕ' ವಿಮೆ ಅಸಾಧ್ಯ: ಕೇಂದ್ರ

ನವದೆಹಲಿ (ಪಿಟಿಐ): ಗ್ರಾಹಕನೊಬ್ಬ ತನ್ನ ಲಾಕರ್‌ನಲ್ಲಿ ಎಷ್ಟು ಬೆಲೆಬಾಳುವ ವಸ್ತುಗಳನ್ನು ಇಡುತ್ತಿದ್ದಾನೆ ಎಂಬುವುದನ್ನು ದಾಖಲಿಸುವುದು ಬ್ಯಾಂಕಿಂಗ್ ನಿಯಮಗಳ ಉಲ್ಲಂಘನೆಯಾಗಿದ್ದು, ಹೀಗಾಗಿ ಲಾಕರ್‌ನಲ್ಲಿರುವ ವಸ್ತುಗಳ ಮೌಲ್ಯದ ಆಧಾರದ ಮೇಲೆ ಪ್ರತ್ಯೇಕ ವಿಮಾ ಸೌಲಭ್ಯ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ತಿಳಿಸಿದ್ದಾರೆ.

ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಗಢ್‌ಚಿರೋಲೀ ಚಿಮುರ್ ಲೋಕಸಭೆ ಕ್ಷೇತ್ರದ ಸಂಸದ (ಕಾಂಗ್ರೆಸ್) ನಾಮ್‌ದೇವ್ ದಸರಮ್ ಕಿರ್‌ಸಾನ್ ಅವರು ಕೇಳಿದ ಪೂರಕ ಪ್ರಶ್ನೆಗೆ ಉತ್ತರಿಸಿದ ಅವರು, 'ಬ್ಯಾಂಕ್ ಲಾಕರ್‌ಗಳ ವಿಷಯದಲ್ಲಿ ಯಾವುದೇ ನಷ್ಟ ಸಂಭವಿಸಿದರೆ, ವಾರ್ಷಿಕ ಲಾಕರ್ ಬಾಡಿಗೆಯ 100 ಪಟ್ಟು ಮೊತ್ತವನ್ನು ಪ್ರಮಾಣಿತ ವಿಮೆಯಾಗಿ ನಿಗದಿಪಡಿಸಲಾಗಿದೆ' ಎಂದು ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

30-03-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1780 (1775)
ಒಂದು ವಾರದ ಡೆಲಿವರಿ	1775 (1770)
ಪಾಮ್ ವಾರದ ಡೆಲಿವರಿ	1448 (1433)
ಸೂರ್ಯಕಾಂತಿ ಎಣ್ಣೆ ಕಚ್ಚಾ	1610 (1605)
ಚಿನ್ನ - ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,46,000 (1,45,400)
ಬೆಳ್ಳಿ ಕೆ.ಜಿಗೆ	2,29,000 (2,28,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

₹18.60 ಲಕ್ಷ ಕೋಟಿ ಕರಗಿದ ಸಂಪತ್ತು

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಕೊನೆಯ ವಹಿವಾಟಿನ ದಿನವಾದ ಸೋಮವಾರವೂ ದೇಶದ ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿವೆ.

ಮಹಾವೀರ ಜಯಂತಿ ಅಂಗವಾಗಿ ಮಂಗಳವಾರ ಷೇರುಪೇಟೆಗೆ ರಜೆ ಇರಲಿದೆ.

ಪಶ್ಚಿಮ ಏಷ್ಯಾದ ಸಂಘರ್ಷ, ಕಚ್ಚಾ ತೈಲದ ಬೆಲೆ ಏರಿಕೆ, ಏಷ್ಯಾದ ಮಾರುಕಟ್ಟೆಗಳು ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯ ಕಂಡಿರುವುದು ಮತ್ತು ವಿದೇಶಿ ಬಂಡವಾಳದ ಹೊರಹರಿವು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಇವು ದೇಶದ ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿವೆ ಎಂದು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,635 ಅಂಶ (ಶೇ 2.22ರಷ್ಟು) ಇಳಿಕೆಯಾಗಿ, 71,947ಕ್ಕೆ ವಹಿವಾಟು ಅಂತ್ಯಗೊಂಡಿದೆ. ದಿನದ ವಹಿವಾಟಿನಲ್ಲಿ 1,809 ಅಂಶ ಕುಸಿತವಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 488 ಅಂಶ (ಶೇ 2.14ರಷ್ಟು) ಕಡಿಮೆಯಾಗಿ, 22,331ಕ್ಕೆ ಕೊನೆಗೊಂಡಿದೆ.

ಹಿಂದಿನ ವಹಿವಾಟಿನ ದಿನದಲ್ಲೂ (ಶುಕ್ರವಾರ) ಷೇರುಪೇಟೆ ಸೂಚ್ಯಂಕಗಳು ಇಳಿಕೆ ಕಂಡಿದ್ದವು. ಎರಡು ದಿನದ ವಹಿವಾಟಿನಲ್ಲಿ ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ₹18.60 ಲಕ್ಷ ಕೋಟಿ ಕರಗಿದೆ.

ಬಡ್ಡಿ ಆದಾಯಕ್ಕೂ ಟಿಡಿಎಸ್ ಕಡಿತ

ನವದೆಹಲಿ (ಪಿಟಿಐ): 1949ರ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯಲ್ಲಿನ 'ಬ್ಯಾಂಕಿಂಗ್ ಕಂಪನಿ' ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಬರುವ ಎಲ್ಲ ಹಣಕಾಸು ಸಂಸ್ಥೆಗಳು ₹ 50,000ಕ್ಕಿಂತ ಹೆಚ್ಚಿನ ಮೊತ್ತದ ಬಡ್ಡಿ ವರಮಾನದ ಮೇಲೆ ಇನ್ನು ಮೂಲದಲ್ಲೇ ತೆರಿಗೆ ಕಡಿತ (ಟಿಡಿಎಸ್) ಮಾಡಲಿವೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಬ್ಯಾಂಕ್ ಅಥವಾ ಅಂಚೆ ಕಚೇರಿ ಠೇವಣಿಗಳಿಂದ ಬರುವ ಬಡ್ಡಿ ಆದಾಯವು ಆರ್ಥಿಕ ವರ್ಷವೊಂದರಲ್ಲಿ ಸಾಮಾನ್ಯ ನಾಗರಿಕರಿಗೆ ₹50,000 ಮತ್ತು ಹಿರಿಯ ನಾಗರಿಕರಿಗೆ ₹1 ಲಕ್ಷದ ಮಿತಿ ಮೀರಿದರೆ ಅದರಿಂದ ಟಿಡಿಎಸ್ ಕಡಿತಗೊಳಿಸಲಾಗುವುದು. 2025ರ ಆದಾಯ ತೆರಿಗೆ ಕಾಯ್ದೆಯ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲಾಖೆ 'ಎಕ್ಸ್' ಪೋಸ್ಟ್‌ನಲ್ಲಿ ಮಾಹಿತಿ ನೀಡಿದೆ.

ವಿತ್ತೀಯ ಕೊರತೆ ₹12.52 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿ ವರೆಗೆ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 80.4ರಷ್ಟಾಗಿದೆ. ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ಇದು ₹12.52 ಲಕ್ಷ ಕೋಟಿಯಾಗಿದೆ.

2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ಶೇ 85.8ರಷ್ಟಿತ್ತು ಎಂದು ಸೋಮವಾರ ಬಿಡುಗಡೆ ಆಗಿರುವ ಲೆಕ್ಕಪತ್ರಗಳ ಮಹಾನಿಯಂತ್ರಕರ ವರದಿ ತಿಳಿಸಿದೆ.

ಏಪ್ರಿಲ್‌ನಿಂದ ಫೆಬ್ರುವರಿ ವರೆಗೆ ಸರ್ಕಾರವು ₹27.91 ಲಕ್ಷ ಕೋಟಿ ವರಮಾನ ಸ್ವೀಕರಿಸಿದೆ. ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚವು ₹40.44 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

'ಅಸಂಘಟಿತ ವಲಯಕ್ಕೂ ಪಿಂಚಣಿ: ಚರ್ಚೆಯಲ್ಲಿವೆ'

ನವದೆಹಲಿ (ಪಿಟಿಐ): ಅಸಂಘಟಿತ ವಲಯವನ್ನು ನೌಕರರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಮತ್ತು ನೌಕರರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ವ್ಯಾಪ್ತಿಗೆ ತರುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಶೋಭಾ ಕರಂದ್ಲಾಜೆ

ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಿದ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, 'ಮುಂದಿನ ದಿನಗಳಲ್ಲಿ ಅಸಂಘಟಿತ ಕಾರ್ಮಿಕರಿಗೆ ಪಿಂಚಣಿ ನೀಡಬೇಕು ಎಂದು ಕಾರ್ಮಿಕ ಇಲಾಖೆಯಲ್ಲಿ ಚರ್ಚೆ ನಡೆಸಲಾಗುತ್ತಿದೆ. ಕೆಲಸ ಮಾಡುವ ಎಲ್ಲರೂ ಪಿಂಚಣಿ ಪಡೆಯಬೇಕು ಮತ್ತು ಅವರು ಇಪಿಎಫ್‌ಒ ಮತ್ತು ಇಎಸ್‌ಐಸಿ ವ್ಯಾಪ್ತಿಗೆ ಬರಬೇಕು ಎಂದು ಪ್ರಧಾನಿ ಮೋದಿ ಬಯಸುತ್ತಿದ್ದಾರೆ' ಎಂದು ಹೇಳಿದ್ದಾರೆ.

ಮನೆ ಬಾಗಿಲಿಗೆ ಬಂದು ಉಚಿತ ಸೇವೆ ನೀಡುವ ಯೋಜನೆ ಪ್ರಾರಂಭಿಸುವುದು ಸೇರಿದಂತೆ ಪಿಂಚಣಿ ಯೋಜನೆಯಲ್ಲಿ ಹಲವು ಸುಧಾರಣೆಗಳು ಆಗುತ್ತಿವೆ. ಮುಂಬರುವ ದಿನಗಳಲ್ಲಿ ಆನ್‌ಲೈನ್ ಉದ್ಯಮದಲ್ಲಿ ಕೆಲಸ ಮಾಡುವವರಿಗೂ ಪಿಂಚಣಿ ನೀಡುವ ಬಗ್ಗೆ ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ.

ಎಲ್‌ಪಿಜಿ ಬದಲು ಸೀಮೆಎಣ್ಣೆ ವಿತರಿಸಲು ಕೇಂದ್ರ ನಿರ್ಧಾರ: ಭವಿಷ್ಯದ ಇಂಧನ ಕ್ಷಾಮದ ಸೂಚನೆಯೇ?

ಹೌದು | ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಕೈಗಾರಿಕಾ ಉತ್ಪಾದನೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆಯು (ಐಐಪಿ) ಫೆಬ್ರುವರಿ ತಿಂಗಳಿನಲ್ಲಿ ಏರಿಕೆಯಾಗಿದ್ದು, ಶೇ 5.2ರಷ್ಟು ದಾಖಲಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಅಂಕಿ–ಅಂಶಗಳು ಸೋಮವಾರ ತಿಳಿಸಿವೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಕೈಗಾರಿಕಾ ಉತ್ಪಾದನೆಯ ಪ್ರಗತಿ ಶೇ 2.7ರಷ್ಟಿತ್ತು. ತಯಾರಿಕಾ ವಲಯದ ಉತ್ಪಾದನೆಯಲ್ಲಿನ ಹೆಚ್ಚಳವು ಬೆಳವಣಿಗೆಗೆ ಕಾರಣ ಎಂದು ತಿಳಿಸಿದೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ತಯಾರಿಕಾ ವಲಯದ ಉತ್ಪಾದನೆ ಶೇ 2.8ರಷ್ಟಿತ್ತು. ಅದು ಈ ಫೆಬ್ರುವರಿಯಲ್ಲಿ ಶೇ 6ಕ್ಕೆ ಏರಿಕೆಯಾಗಿದೆ. ಗಣಿಗಾರಿಕೆ ವಲಯದ ಉತ್ಪಾದನೆ ಶೇ 1.6ರಿಂದ ಶೇ 3.1ಕ್ಕೆ ಹೆಚ್ಚಳವಾಗಿದೆ. 2025–26ರ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿವರೆಗೆ ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆ ಶೇ 4.1ರಷ್ಟಾಗಿದೆ.

8ನೇ ಬಾರಿಯೂ ಬಡ್ಡಿ ದರ ಯಥಾಸ್ಥಿತಿ

ನವದೆಹಲಿ (ಪಿಟಿಐ): ಏಪ್ರಿಲ್ 1ರಿಂದ ಆರಂಭವಾಗಲಿರುವ ತ್ರೈಮಾಸಿಕದಲ್ಲೂ ಪಿಪಿಎಫ್, ಎನ್‌ಎಸ್‌ಸಿ ಸೇರಿದಂತೆ ವಿವಿಧ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಯಥಾಸ್ಥಿತಿಯಲ್ಲಿ ಇರಿಸಿದೆ.

ಈ ಬಡ್ಡಿ ದರವು ಏಪ್ರಿಲ್ 1ರಿಂದ ಜೂನ್ 30ರವರೆಗೆ ಇರಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಅಧಿಸೂಚನೆಯಲ್ಲಿ ಸೋಮವಾರ ಹೇಳಿದೆ.

ಇದರಿಂದಾಗಿ ಈ ಯೋಜನೆಗಳ ಬಡ್ಡಿ ದರವು ಸತತ ಎಂಟು ತ್ರೈಮಾಸಿಕಗಳಲ್ಲಿ ಯಥಾಸ್ಥಿತಿಯಲ್ಲಿ ಉಳಿದಂತೆ ಆಗಲಿದೆ.

ಸುಕನ್ಯಾ ಸಮೃದ್ಧಿ ಯೋಜನೆಯ ಅಡಿ ಶೇ 8.2ರಷ್ಟು, ಮೂರು ವರ್ಷಗಳ ಅವಧಿ ಠೇವಣಿಯು ಶೇ 7.1ರಷ್ಟು, ಪಿಪಿಎಫ್ ಶೇ 7.1ರಷ್ಟು, ಕಿಸಾನ್ ವಿಕಾಸ ಪತ್ರ ಶೇ 7.5ರಷ್ಟು, ಎನ್‌ಎಸ್‌ಸಿ ಶೇ 7.7ರಷ್ಟು, ಮಾಸಿಕ ಆದಾಯ ಯೋಜನೆಯು ಶೇ 7.4ರಷ್ಟು ಬಡ್ಡಿ ನೀಡಲಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೋರಿಯರ್ ಸೌಲಭ್ಯವಿದೆ. 9964322833.

General

ರಾಜ್ಯಾದ್ಯಂತ ಮ್ಯಾಕ್ ಡೊನಲ್ಡ್, ಟಾಟಾಗೆ ಅಭ್ಯರ್ಥಿಗಳು ಸಂಬಳ 30000 - 60000 ಉಚಿತ ವಸತಿಯೂಟವಿರುತ್ತದೆ. ಕರ್ನಾಟಕ ಉದ್ಯೋಗ (ಸರ್ಕಾರಿ ನೋಂದಾಯಿತ) ಸಂಪರ್ಕಿಸಿ: 080-29909699, 9606155699.

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ವೈಯಕ್ತಿಕ

Change of Name

ನಾನು, ಡಿ0014, ಬ್ರಿಗೇಡ್ ಲೇಕ್‌ಫ್ರಂಟ್, ಮಹದೇವಪುರ, ಬೆಂಗಳೂರು, 560048 ರಲ್ಲಿ ವಾಸಿಸುತ್ತಿರುವ ಕೌಸ್ತುಭ್ ರಿಷಿ ನನ್ನ ಅಪ್ರಾಪ್ತ ಮಗನ ಹೆಸರನ್ನು ಆಹಾನ್ ನಿಂದ ಆಹಾನ್ ರಿಷಿ ಎಂದು ಬದಲಾಯಿಸಿದ್ದೇವೆ.

ಪ್ರವಾಸ

Travel

23.04.2026 09.05.2026 22.05.2026 10.06.2026 ರಿಂದ 14/8 ದಿನಗಳ ದೋಧಾಮ್ ಚಾರ್‌ಧಾಮ್. 08.05.2026 ರಿಂದ 6/9 ದಿನಗಳ ವೈದ್ಯನಾಥ ಜ್ಯೋತಿರ್ಲಿಂಗಗಳು ಕಾಶಿ,ಗಯಾ,ಅಯೋಧ್ಯ. 26.06.2026 ರಿಂದ 13/8/6 ರಿಂದ ದಿನಗಳ ಅಮರನಾಥ್ ಯಾತ್ರೆ. ಸಂಪರ್ಕಿಸಿ. ಏಷ್ಯಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಬೆಂಗಳೂರು. 9342287551 9986624447 9986254573

PRIYA CEMENT™
STRENGTH THAT ROARS
CELEBRATING 40 YEARS OF STRENGTH
VENDORS REQUIRED
WITH EXPERTISE IN WALL PAINTING, DEALER BOARDS & POSM
We are a large and reputed cement manufacturing company, inviting vendors with experience in:
High-Rise Wall Paints - Shop Paints - Dealer Boards (ACP Boards, Glow Sign Boards, Non-Lit Flex Boards, Foam Boards etc.)
In-store branding at dealer outlets, Printing Leaflets, Certificates, Brochures etc.
Interested vendors may apply / call
Srikanth Marri - 7022030619, srikanth.marri@priyacement.com
Abhimanyu Singh - 8517979409, abhimanyu.s@priyacement.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ
ಟೀಚರ್ಸ್ ಟ್ರೈನಿಂಗ್ ಕೋರ್ಸ್
ಪ್ರೈಮರಿ ಟೀಚರ್ಸ್ ಟ್ರೈನಿಂಗ್ [PTT]
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

‘ದೇಶ ಈಗ ಬಹುತೇಕ ನಕ್ಸಲ್ ಮುಕ್ತ’

ಲೋಕಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಘೋಷಣೆ • ಕಾಂಗ್ರೆಸ್ ವಿರುದ್ಧ ವಾಗ್ದಾಳಿ

ನವದೆಹಲಿ (ಪಿಟಿಐ): ‘ನಕ್ಸಲರ ತಾಣವಾಗಿದ್ದ ಛತ್ತೀಸಗಢದ ಬಸ್ತರ್ ಪ್ರದೇಶವೂ ಸೇರಿದಂತೆ ಇಡೀ ಭಾರತ ಈಗ ಬಹುತೇಕ ನಕ್ಸಲ್ ಮುಕ್ತವಾಗಿದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಲೋಕಸಭೆಯಲ್ಲಿ ಘೋಷಿಸಿದರು.

‘2026ರ ಮಾರ್ಚ್ 31ಕ್ಕೆ ಭಾರತವನ್ನು ನಕ್ಸಲರಿಂದ ಮುಕ್ತಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ’ ಎಂದು ಕೇಂದ್ರ ಸರ್ಕಾರ ಹೇಳಿತ್ತು. ಈ ಗುರಿಯನ್ನು ಸಂಪೂರ್ಣವಾಗಿ ಸಾಧಿಸಿದ ಬಳಿಕ ದೇಶದೊಂದಿಗೆ ಮಾಹಿತಿ ಹಂಚಿಕೊಳ್ಳುವುದಾಗಿ ಅಮಿತ್ ಶಾ ಲೋಕಸಭೆಯಲ್ಲಿ ಪ್ರಕಟಿಸಿದರು.

‘ಎಡಪಂಥೀಯ ತೀವ್ರವಾದದಿಂದ ಭಾರತವನ್ನು ಮುಕ್ತಗೊಳಿಸುವ ಯತ್ನಗಳು’ ವಿಷಯದ ಕುರಿತು ಲೋಕಸಭೆಯಲ್ಲಿ ಇಡೀ ದಿನ ಚರ್ಚೆ ನಡೆಯಿತು. ಈ ವೇಳೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಆರೋಪ ಪ್ರತ್ಯಾರೋಪ ನಡೆಯಿತು. ‘ನಕ್ಸಲ್‌ವಾದದ ಪರಿಣಾಮಗಳ ಗಾಂಭೀರ್ಯ ತಿಳಿದಿದ್ದರೂ ಅದನ್ನು ಅಂತ್ಯಗೊಳಿಸುವಲ್ಲಿ ಕಾಂಗ್ರೆಸ್ ಯಾವುದೇ ಕೆಲಸ ಮಾಡಿಲ್ಲ’ ಎಂದು ಶಾ ಆರೋಪಿಸಿದರು.

‘ಬಸ್ತರ್‌ನಿಂದ ನಕ್ಸಲ್‌ವಾದವು ಹೆಚ್ಚುಕಮ್ಮಿ ನಾಶವಾಗಿದೆ. ಇಲ್ಲಿನ ಪ್ರತಿಯೊಂದು ಹಳ್ಳಿಯಲ್ಲಿಯೂ ಶಾಲಾ ಕಟ್ಟಡವನ್ನು ನಿರ್ಮಿಸಲೂ, ಪಡಿತರ ಅಂಗಡಿಗಳನ್ನು ಆರಂಭಿಸಲೂ ಅಭಿಯಾನ ಕೈಗೊಳ್ಳಲಾಗಿದೆ. ಕೆಂಪು ಉಗ್ರವಾದದ ಕರಿನೆರಳಿನಿಂದ ಈ ಪ್ರದೇಶವು ಮುಕ್ತವಾಗಿ ಅಭಿವೃದ್ಧಿಯ ಬೆಳಕು ಕಾಣುತ್ತಿದೆ’ ಎಂದರು.

‘ಕೆಂಪು ಕಾರಿಡಾರ್‌ಗಳಾಗಿ 12 ರಾಜ್ಯಗಳು ಬದಲಾಗಿದ್ದವು. ಹಲವು ವರ್ಷಗಳಿಂದ 12 ಕೋಟಿ ಜನರು ಬಡತನದಲ್ಲಿದ್ದಾರೆ. 5,000 ಭದ್ರತಾ ಸಿಬ್ಬಂದಿ ಸೇರಿ 20 ಸಾವಿರ ಮಂದಿ ನಕ್ಸಲರಿಂದ ಹತ್ಯೆಯಾಗಿದ್ದಾರೆ. 75 ವರ್ಷಗಳಲ್ಲಿ 60 ವರ್ಷ ನೀವೇ (ಕಾಂಗ್ರೆಸ್) ಆಡಳಿತ ನಡೆಸಿದ್ದೀರಿ. ಬುಡಕಟ್ಟು ಜನರು ಯಾಕೆ ಅಭಿವೃದ್ಧಿ ಕಾಣಲಿಲ್ಲ? ಪ್ರಧಾನಿ ಮೋದಿ ಅವರು ಈಗ ಅವರ ಅಭಿವೃದ್ಧಿ ಮಾಡುತ್ತಿದ್ದಾರೆ’ ಎಂದರು.

‘ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳ ಸಮಸ್ಯೆಗಳಿಗಿಂತ ನಕ್ಸಲ್‌ವಾದವೇ ದೊಡ್ಡ ಸವಾಲು’ ಎಂದು ದೇಶದೆದುರು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರೇ ಒಪ್ಪಿಕೊಂಡಿದ್ದರು. ಆದರೆ, ಕಾಂಗ್ರೆಸ್ ಮಾತ್ರ ಏನನ್ನೂ ಮಾಡಲಿಲ್ಲ. ಬುಡಕಟ್ಟು ಜನರಿಗೆ ಮನೆ ಕೊಡಲಿಲ್ಲ, ನೀರು ಕೊಡಲಿಲ್ಲ, ಶಾಲೆ ಕಟ್ಟಿಸಿ ಕೊಡಲಿಲ್ಲ, ಬ್ಯಾಂಕ್ ಸೌಲಭ್ಯ ನೀಡಲಿಲ್ಲ’ ಎಂದು ಅಮಿತ್ ಶಾ ಕಾಂಗ್ರೆಸ್ ಅನ್ನು ದೂರಿದರು.

‘ನಕ್ಸಲರ ವಿರುದ್ಧದ ಕಾರ್ಯಾಚರಣೆಯ ಯಶಸ್ಸು, ಕೋಬ್ರಾ ಪಡೆ ಮತ್ತು ಸಿಆರ್‌ಪಿಎಫ್ ಸೇರಿ ಎಲ್ಲ ಸಿಎಪಿಎಫ್ ಸಿಬ್ಬಂದಿ, ಭದ್ರತಾ ಸಂಸ್ಥೆಗಳು, ಛತ್ತೀಸಗಢ ಪೊಲೀಸರು, ಡಿಆರ್‌ಜಿ ಸಿಬ್ಬಂದಿ ಮತ್ತು ಬುಡಕಟ್ಟು ಸಮುದಾಯಗಳ ಜನರಿಗೆ ಸಲ್ಲಬೇಕು’ ಎಂದರು.

ಇಂದಿರಾ ಪ್ರಭಾವಿತರಾಗಿದ್ದರು: ‘ಆಂಧ್ರ ಪ್ರದೇಶದಲ್ಲಿ 1970ರಲ್ಲಿ ನಡೆದಿದ್ದ ಚುನಾವಣೆವೊಂದರಲ್ಲಿ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ನಕ್ಸಲರ ಸಹಕಾರವನ್ನು ಸ್ವೀಕರಿಸಿದ್ದರು. ಅವರು ನಕ್ಸಲರ ಸಿದ್ಧಾಂತದಿಂದ ಪ್ರಭಾವಿತರಾಗಿದ್ದರು. ರಾಹುಲ್ ಗಾಂಧಿ ಅವರು ಸಾರ್ವಜನಿಕವಾಗಿಯೇ ನಕ್ಸಲರ ಕುರಿತು ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಹಲವು ವಿಡಿಯೊಗಳನ್ನು ಅವರು ಹಂಚಿಕೊಂಡಿದ್ದಾರೆ’ ಎಂದು ಅಮಿತ್ ಶಾ ಆರೋಪಿಸಿದರು.

ಪ್ರಧಾನಿ ಮೋದಿ ಸರ್ಕಾರದ ದೊಡ್ಡ ಸಾಧನೆ ಎಂದರೆ, ಅದು ನಕ್ಸಲ್ ಮುಕ್ತ ಭಾರತ. ಯಾವ ಸಂಶೋಧಕ ಕೂಡ ಇದನ್ನು ಒಪ್ಪಿಕೊಳ್ಳಲೇಬೇಕು
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಗೃಹ ಸಚಿವರು ಅತ್ಯುತ್ತಮ ಭಾಷಣ ಮಾಡಿದ್ದಾರೆ. ಪ್ರಮುಖ ಸತ್ಯಗಳು, ಐತಿಹಾಸಿಕ ಸಂದರ್ಭಗಳನ್ನು ನೀಡಿದ್ದಾರೆ. ಜೊತೆಗೆ ದಶಕದ ಸರ್ಕಾರದ ಯತ್ನವನ್ನೂ ಸಾಬೀತು ಮಾಡಿದ್ದಾರೆ
ನರೇಂದ್ರ ಮೋದಿ, ಪ್ರಧಾನಿ (‘ಎಕ್ಸ್’ ಪೋಸ್ಟ್)

ಕಾಂಗ್ರೆಸ್‌ಗೆ ಹತ್ತಿರವಾಗಿದ್ದ ಕೆಲವು ಬುದ್ಧಿಜೀವಿಗಳು ನಕ್ಸಲರನ್ನು ‘ಬಂದೂಕುಗಳಿಲ್ಲದ ಗಾಂಧಿವಾದಿಗಳು’ ಎಂದು ಕರೆದಿದ್ದರು. ಸೋನಿಯಾ ಗಾಂಧಿ ನೇತೃತ್ವದ ರಾಷ್ಟ್ರೀಯ ಸಲಹಾ ಮಂಡಳಿಯಲ್ಲಿ ನಗರ ನಕ್ಸಲರಿದ್ದರು
ಸಂಬಿತ್ ಪಾತ್ರಾ, ಬಿಜೆಪಿ ಸಂಸದ

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಭಾರತದ ಮೇಲೆ ನೇರ ಪರಿಣಾಮ ಬೀರುತ್ತಿದೆ. ಎಲ್‌ಪಿಜಿ ಮತ್ತು ತೈಲದ ಕೊರತೆ ಇದೆ. ಇಂಥಾ ಹೊತ್ತಿನಲ್ಲಿ ನಾವು ನಕ್ಸಲ್‌ವಾದದ ಕುರಿತು ಯಾಕೆ ಮಾತನಾಡುತ್ತಿದ್ದೇವೆ
ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

‘ಕಾಂಗ್ರೆಸ್ ರಾಜಿ ಮಾಡಿಕೊಂಡಿತ್ತು’

ಹಿಂದಿನ ಸರ್ಕಾರಗಳು ಸೂಕ್ತ ಸಮಯದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದರೆ, ಪರಿಸ್ಥಿತಿಯು ಬೇರೆಯದೇ ಆಗಿರುತ್ತಿತ್ತು. ಹೀಗೆ ಆಗಲಿಲ್ಲ ಯಾಕೆಂದರೆ, ಹಿಂದಿನ ಸರ್ಕಾರಗಳು ‘ಮಜ್ಬೂತ್’ (ಶಕ್ತಿಶಾಲಿ) ಆಗಿರಲಿಲ್ಲ; ‘ಮಜ್ಬೂರ್’ (ಅಸಹಾಯಕ) ಆಗಿದ್ದವು. ದೇಶವನ್ನು ಒಳಗಿಂದಲೇ ಶಕ್ತಿಹೀನ ಮಾಡುವುದರ ಕಡೆಗೇ ನಿಮ್ಮ (ಕಾಂಗ್ರೆಸ್) ಯತ್ನ ಇತ್ತು. ವಿದೇಶಿ ಪಿತೂರಿ ಕೆಲಸ ಮಾಡುತ್ತಿದ್ದವು, ದೇಶದ ಭದ್ರತೆಯೊಂದಿಗೆ ಕಾಂಗ್ರೆಸ್ ರಾಜಿ ಮಾಡಿಕೊಂಡಿತ್ತು
ಶ್ರೀಕಾಂತ್ ಶಿಂದೆ, ಶಿವಸೇನಾ ಸಂಸದ

‘ನಕ್ಸಲ್‌ವಾದದ ಸಂತ್ರಸ್ತ ಪಕ್ಷ ನಮ್ಮದು’

ಕಮಾಂಡೊ ಬೆಟಾಲಿಯನ್ ಫಾರ್ ರೆಸಲ್ಯೂಟ್ ಆ್ಯಕ್ಷನ್ (ಕೋಬ್ರಾ) ಅನ್ನು ರೂಪಿಸಿದ್ದು ಕಾಂಗ್ರೆಸ್. ಜೊತೆಗೆ, ‘ಆಪರೇಷನ್ ಗ್ರೀನ್ ಹಂಟ್’ ಅನ್ನೂ ಆರಂಭಿಸಿದ್ದೆವು. ನಕ್ಸಲ್‌ವಾದದ ಕಾರಣಕ್ಕೆ ಛತ್ತೀಸಗಢದಲ್ಲಿ ಪಕ್ಷವು ಹಲವು ಹಿರಿಯ ನಾಯಕರನ್ನು ಕಳೆದುಕೊಂಡಿದೆ. ನಕ್ಸಲ್‌ವಾದದ ಸಂತ್ರಸ್ತ ಪಕ್ಷ ನಮ್ಮದು. ಅಭಿವೃದ್ಧಿ ಮತ್ತು ಭದ್ರತೆ ಎರಡಕ್ಕೂ ಕಾಂಗ್ರೆಸ್ ಸಮಾನವಾದ ಮಹತ್ವ ನೀಡಿತ್ತು. ನಕ್ಸಲ್‌ವಾದವನ್ನು ಗುಂಡುಗಳಿಂದ ನಿಲ್ಲಿಸಲು ಸಾಧ್ಯವಿಲ್ಲ ಎಂಬುದು ಪಕ್ಷದ ನಿಲುವು
ಸಪ್ತಗಿರಿ ಉಲಕಾ, ಕಾಂಗ್ರೆಸ್ ಸಂಸದ

ಎಂಎಲ್‌ಸಿ ಸ್ಥಾನಕ್ಕೆ ನಿತೀಶ್ ರಾಜೀನಾಮೆ

ಶಾಸಕ ಸ್ಥಾನ ತೊರೆದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್

ಪಟ್ನಾ (ಪಿಟಿಐ): ರಾಜ್ಯಸಭೆಗೆ ಆಯ್ಕೆಯಾದ ಎರಡು ವಾರಗಳ ಬಳಿಕ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಸೋಮವಾರ ಬಿಹಾರ ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರೂ ಸೋಮವಾರ ವಿಧಾನ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಿತಿನ್ ನವೀನ್ ಮತ್ತು ನಿತೀಶ್ ಕುಮಾರ್ ಅವರು ಮಾರ್ಚ್ 16ರಂದು ರಾಜ್ಯಸಭೆಗೆ ಆಯ್ಕೆಯಾಗಿದ್ದರು.

ಬಂಕಿಪುರ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ನಿತಿನ್ ಅವರ ರಾಜೀನಾಮೆಯನ್ನು ಬಿಹಾರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಂಜಯ್ ಸರಾವೊಗಿ ಅವರು ವಿಧಾನಸಭೆ ಸ್ಪೀಕರ್ ಪ್ರೇಮ್ ಕುಮಾರ್ ಅವರಿಗೆ ಸಲ್ಲಿಸಿದರು.

ನಿತೀಶ್ ಕುಮಾರ್

ನಿತಿನ್ ನವೀನ್

ಸುದ್ದಿಗಾರರೊಂದಿಗೆ ಮಾತನಾಡಿದ ಪ್ರೇಮ್ ಕುಮಾರ್, ‘ನಿತಿನ್ ನವೀನ್ ಅವರ ರಾಜೀನಾಮೆ ಪತ್ರವನ್ನು ಸರಾವೊಗಿ ಅವರು ನನಗೆ ಸಲ್ಲಿಸಿದ್ದಾರೆ. ಅದನ್ನು ಅಂಗೀಕರಿಸಲಾಗಿದ್ದು, ಮುಂದಿನ ಪ್ರಕ್ರಿಯೆಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸಿದ್ದೇನೆ’ ಎಂದು ಹೇಳಿದರು.

‘ಬಂಕಿಪುರ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ನನ್ನ ತಂದೆ ದಿವಂಗತ ನವೀನ್ ಕಿಶೋರ್ ಪ್ರಸಾದ್ ಸಿನ್ಹಾ ಅವರು ಸಮರ್ಪಣಾ ಮನೋಭಾವದಿಂದ ಅಭಿವೃದ್ಧಿಪಡಿಸಿದ ಈ ಕ್ಷೇತ್ರದ ಬೆಳವಣಿಗೆಗೆ ನಾನು ಕಳೆದ 20 ವರ್ಷಗಳಿಂದ ನಿರಂತರವಾಗಿ ಶ್ರಮಿಸಿದ್ದೇನೆ. ನನ್ನ ಕ್ಷೇತ್ರ ಮತ್ತು ಬಿಹಾರ ರಾಜ್ಯದ ಅಭಿವೃದ್ಧಿಗೆ ನಾನು ಯಾವಾಗಲೂ ಸಂಪೂರ್ಣ ಬದ್ಧತೆಯಿಂದ ಕೆಲಸ ಮಾಡಿದ್ದೇನೆ. ಪಕ್ಷವು ನನಗೆ ಹೊಸ ಜವಾಬ್ದಾರಿ ನೀಡಿದೆಯಾದರೂ, ಬಂಕಿಪುರ ಕ್ಷೇತ್ರದ ಅಭಿವೃದ್ಧಿಗೆ ಮುಂದೆಯೂ ಬದ್ಧನಾಗಿದ್ದೇನೆ’ ಎಂದು ನಿತಿನ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜೆಡಿಯು ಅಧ್ಯಕ್ಷ ನಿತೀಶ್ ಅವರು ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ನೀಡುವುದರೊಂದಿಗೆ, ಬಿಹಾರ ಮುಖ್ಯಮಂತ್ರಿ ಹುದ್ದೆಯಿಂದ ನಿರ್ಗಮಿಸಲು ಕ್ಷಣಗಣನೆ ಆರಂಭವಾಗಿದೆ ಎಂದು ವಿಶ್ಲೇಷಿಸಲಾಗಿದೆ.

ನಾಳೆಯಿಂದ ಮೊದಲ ಹಂತದ ಜನಗಣತಿ

ಒಂದನೇ ಪುಟದಿಂದ...

ಸ್ವಯಂ ಎಣಿಕೆ ಪ್ರಕ್ರಿಯೆಯ ಸಂದರ್ಭದಲ್ಲಿ, ವ್ಯಕ್ತಿಯು ಪೋರ್ಟಲ್‌ನಲ್ಲಿ ತಮ್ಮ ಮನೆಯ ವಿವರಗಳನ್ನು ಭರ್ತಿ ಮಾಡಬೇಕು. ಬಳಿಕ ಸ್ವಯಂ ಗಣತಿಯ ಸಂಖ್ಯೆ ಲಭ್ಯವಾಗುತ್ತದೆ. ಈ ಸಂಖ್ಯೆಯನ್ನು ಗಣತಿದಾರರಿಗೆ ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ನೀಡಬೇಕು ಮತ್ತು ಸ್ವಯಂ ಎಣಿಕೆಯ ದತ್ತಾಂಶಗಳನ್ನು ದೃಢೀಕರಿಸಿದ ನಂತರ ಗಣತಿದಾರರು ಇದನ್ನು ಮೂಲ ದತ್ತಾಂಶದಲ್ಲಿ ಸೇರಿಸುತ್ತಾರೆ.

ಪಶ್ಚಿಮ ಬಂಗಾಳ ಹೊರತುಪಡಿಸಿ, ಚುನಾವಣೆ ನಡೆಯಲಿರುವ ರಾಜ್ಯಗಳ ಗಣತಿ ವೇಳಾಪಟ್ಟಿಯನ್ನು ಸಹ ಪ್ರಕಟಿಸಲಾಗಿದೆ. ಪುದುಚೇರಿಯಲ್ಲಿ ಮೇ 17ರಿಂದ ಸ್ವಯಂ ಎಣಿಕೆ ಮತ್ತು ಜೂನ್ 1ರಿಂದ ಮನೆ ಮನೆಗೆ ತೆರಳಿ ಎಣಿಕೆ ನಡೆಯಲಿದೆ. ಕೇರಳದಲ್ಲಿ ಕ್ರಮವಾಗಿ ಜೂನ್ 16 ಮತ್ತು ಜುಲೈ 1ರಂದು ಗಣತಿ ನಡೆಯಲಿದೆ. ತಮಿಳುನಾಡಿನಲ್ಲಿ ಕ್ರಮವಾಗಿ ಜುಲೈ 17 ಮತ್ತು ಆಗಸ್ಟ್ 1 ರಂದು ಹಾಗೂ ಅಸ್ಸಾಂನಲ್ಲಿ ಆಗಸ್ಟ್ 2 ಮತ್ತು ಆಗಸ್ಟ್ 17 ರಂದು ಗಣತಿ ಜರುಗಲಿದೆ. ಸ್ವಯಂ ಗಣತಿ ಆರಂಭವಾಗುವ (ಆಗಸ್ಟ್ 17ರಿಂದ) ಮತ್ತು ಮನೆ ಮನೆ ಎಣಿಕೆ ಪ್ರಕ್ರಿಯೆ (ಸೆಪ್ಟೆಂಬರ್ 1ರಿಂದ 30) ಪೂರ್ಣಗೊಳಿಸುವ ಕೊನೆಯ ರಾಜ್ಯ ಮಣಿಪುರವಾಗಲಿದೆ.

ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಿಜಿಸ್ಟ್ರಾರ್ ಜನರಲ್ ಮತ್ತು ಭಾರತದ ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ್, ‘ಮೊದಲ ಹಂತದ ಜನಗಣತಿಗೆ 33 ಪ್ರಶ್ನೆಗಳನ್ನು ಸೇರಿಸಲಾಗಿದೆ. ಎರಡನೇ ಹಂತದಲ್ಲಿ ಕೇಳಲಾಗುವ ಜಾತಿ ಸೇರಿದಂತೆ ಇತರ ಪ್ರಶ್ನೆಗಳನ್ನು ನಂತರ ಸೇರಿಸಲಾಗುವುದು’ ಎಂದರು.

ಜಾತಿ ಗಣತಿ ಹೇಗೆ ನಡೆಯುತ್ತದೆ ಎಂಬ ಪ್ರಶ್ನೆಗಳಿಗೆ ಉತ್ತರಿಸದ ಅವರು, ‘ಅಂತಹ ವಿವರಗಳನ್ನು ಮುಂದಿನ ದಿನಗಳಲ್ಲಿ ಬಹಿರಂಗಗೊಳಿಸಲಾಗುವುದು’ ಎಂದರು.

ಸಾಮೂಹಿಕ ವಿವಾಹ

ಪಿಟಿಐ ಚಿತ್ರ

ಲಾಡ್ಲಿ ಫೌಂಡೇಷನ್ ಟ್ರಸ್ಟ್ ಮತ್ತು ಅವಧೇಶಾನಂದಜಿ ಮಿಷನ್ ನವದೆಹಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಹಲವು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದವು

ಪಶ್ಚಿಮ ಏಷ್ಯಾ ಸಂಘರ್ಷ; 8 ಭಾರತೀಯರ ಸಾವು

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದ ವಿವಿಧ ದುರ್ಘಟನೆಗಳಲ್ಲಿ ಇದುವರೆಗೆ 8 ಮಂದಿ ಭಾರತೀಯರು ಮೃತಪಟ್ಟಿದ್ದು, ಒಬ್ಬರು ಕಣ್ಮರೆಯಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ಸೋಮವಾರ ತಿಳಿಸಿದೆ.

ಪಶ್ಚಿಮ ಏಷ್ಯಾದ ಪರಿಸ್ಥಿತಿ ಕುರಿತಂತೆ ಅಂತರ್‌ಸಚಿವಾಲಯದ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಹೆಚ್ಚುವರಿ ಕಾರ್ಯದರ್ಶಿ (ಕೊಲ್ಲಿ ರಾಷ್ಟ್ರ) ಅಸೀಮ್ ಆರ್. ಮಹಾಜನ್, ‘ಕುವೈತ್‌ನ ವಿದ್ಯುತ್ ಘಟಕದ ಮೇಲೆ ಭಾನುವಾರ ರಾತ್ರಿ ನಡೆದ ದಾಳಿಯಲ್ಲಿ ಭಾರತೀಯರೊಬ್ಬರನ್ನು ಕಳೆದುಕೊಂಡಿದ್ದೇವೆ’ ಎಂದು ತಿಳಿಸಿದ್ದಾರೆ. ಆದರೆ, ಸಾವಿನ ಸಂದರ್ಭಗಳ ಕುರಿತಂತೆ ಹೆಚ್ಚಿನ ವಿವರ ನೀಡಲಿಲ್ಲ.

‘ದುರಂತದಲ್ಲಿ ಮೃತಪಟ್ಟ ಕುಟುಂಬಕ್ಕೆ ತೀವ್ರ ಸಂತಾಪ ಸಲ್ಲಿಸುತ್ತೇವೆ. ಕುವೈತ್‌ನ ರಾಯಭಾರ ಕಚೇರಿಯ ಸಿಬ್ಬಂದಿ ಮೃತರ ಕುಟುಂಬಸ್ಥರ ಜೊತೆಗೆ ನಿಕಟ ಸಂಪರ್ಕದಲ್ಲಿದ್ದು, ಮೃತದೇಹವನ್ನು ಆದಷ್ಟು ಬೇಗ ಭಾರತಕ್ಕೆ ತರಲು ಎಲ್ಲ ರೀತಿಯ ನೆರವು ನೀಡಲಾಗುವುದು’ ಎಂದು ತಿಳಿಸಿದ್ದಾರೆ.

5.5 ಲಕ್ಷ ಭಾರತೀಯರು ಸ್ವದೇಶಕ್ಕೆ: ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಸಂಘರ್ಷದ ಬಳಿಕ 5.5 ಲಕ್ಷ ಭಾರತೀಯರು ಸ್ವದೇಶಕ್ಕೆ ಹಿಂತಿರುಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯವು ತಿಳಿಸಿದೆ.

‘ಕೊಲ್ಲಿ ರಾಷ್ಟ್ರ ಹಾಗೂ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಕುರಿತಂತೆ ವಿದೇಶಾಂಗ ಇಲಾಖೆ ಸೂಕ್ಷ್ಮ ನಿಗಾ ವಹಿಸಿದೆ. ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗದ ಮೂಲಕ ಸಂಘರ್ಷ ಕೊನೆಗೊಳಿಸಲು ನಿರಂತರ ಪ್ರಯತ್ನ ನಡೆಸಲಾಗುವುದು’ ಎಂದು ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಪ್ರಧಾನಿ ಮಾತುಕತೆ: ‘ಮಾರ್ಚ್ 28 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಸೌದಿ ಅರೇಬಿಯಾದ ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಜೊತೆಗೆ ಸಂಘರ್ಷದ ಕುರಿತಂತೆ ಮಾತುಕತೆನಡೆಸಿ, ಜಲಮಾರ್ಗಗಳಮುಕ್ತಸಂಚಾರದ ಅಗತ್ಯತೆ ಕುರಿತು ಪ್ರತಿಪಾದಿಸಿದರು ಎಂದು ಜೈಸ್ವಾಲ್ ಹೇಳಿದ್ದಾರೆ.

ಸಹಾಯವಾಣಿ ಸಕ್ರಿಯ: ‘ಕೊಲ್ಲಿ ರಾಷ್ಟ್ರಗಳಲ್ಲಿ ಸಿಲುಕಿರುವ ಭಾರತೀಯರಿಗೆ ನೆರವಾಗಲು ತೆರೆದಿರುವ ವಿಶೇಷ ಸಹಾಯವಾಣಿ ಕೇಂದ್ರಗಳು ಈಗಲೂ ಸಕ್ರಿಯವಾವಾಗಿವೆ. ಅಲ್ಲಿನ ರಾಯಭಾರ ಕಚೇರಿಗಳು, ಸಹಾಯವಾಣಿ ಕೇಂದ್ರಗಳು 24X7 ಕಾರ್ಯನಿರ್ವಹಿಸುತ್ತಿವೆ. ಅಲ್ಲಿರುವ ಎಲ್ಲ ಭಾರತೀಯ ಕಂಪನಿ, ಭಾರತೀಯ ಸಮುದಾಯ ಹಾಗೂ ಸಂಘಟನೆಗಳಿಗೆ ನಿರಂತರ ಸಲಹೆಗಳನ್ನು ನೀಡಲಾಗುತ್ತಿದೆ’ ಎಂದು ಹೆಚ್ಚುವರಿ ಕಾರ್ಯದರ್ಶಿ (ಕೊಲ್ಲಿ ರಾಷ್ಟ್ರಗಳು) ಅಸೀಮ್ ಆರ್. ಮಹಾಜನ್ ತಿಳಿಸಿದ್ದಾರೆ.

85 ವಿಮಾನಗಳ ಹಾರಾಟ: ‘ಯುಎಇ ಹಾಗೂ ಭಾರತದ ನಡುವೆ ನಿರ್ದಿಷ್ಟ ವೇಳಾಪಟ್ಟಿ ಇಲ್ಲದ ವಿಮಾನಗಳು ಹಾರಾಟ ನಡೆಸುತ್ತಿದ್ದು, ಮಂಗಳವಾರದಿಂದ 85 ವಿಮಾನಗಳು ಹಾರಾಟ ನಡೆಸುವ ನಿರೀಕ್ಷೆಯಿದೆ’ ಎಂದು ಮಹಾಜನ್ ತಿಳಿಸಿದ್ದಾರೆ.

‘ಸೌದಿ ಅರೇಬಿಯಾ ಹಾಗೂ ಒಮಾನ್‌ನ ವಿವಿಧ ವಿಮಾನ ನಿಲ್ದಾಣಗಳಿಂದ ವಿಮಾನಗಳು ಹಾರಾಟ ನಡೆಸುತ್ತಿವೆ. ಕತಾರ್‌ನ ವಾಯುಪ್ರದೇಶವು ಭಾಗಶಃ ತೆರೆದಿದ್ದು, ಮಾರ್ಚ್ 30ರಿಂದ 10 ವಿಮಾನಗಳು ಹಾರಾಟ ನಡೆಸುವ ಸಾಧ್ಯತೆಯಿದೆ’ ಎಂದು ಹೇಳಿದ್ದಾರೆ.

‘ಕುವೈತ್ – ಬಹರೇನ್‌ನ ವಾಯುಪ್ರದೇಶ ಈಗಲೂ ಮುಚ್ಚಿದೆ. ಸೌದಿ ಅರೇಬಿಯಾದ ವಿವಿಧ ವಿಮಾನ ನಿಲ್ದಾಣಗಳಿಂದ ಜಜೀರಾ ಏರ್‌ವೇಸ್‌ನ ವಿಮಾನಗಳು ಭಾರತದ ವಿವಿಧ ನಗರಗಳಿಗೆ ನಿಗದಿತವಲ್ಲದ ವಿಮಾನಗಳ ಹಾರಾಟ ಆರಂಭಿಸಿವೆ’ ಎಂದು ಎಂಇಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ವಿಮಾನಗಳ ಹಾರಾಟ ನಿರ್ಬಂಧ ಹಾಗೂ ವಾಯುಪ್ರದೇಶ ಮುಚ್ಚಿದ್ದರಿಂದ ಇರಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಅರ್ಮೇನಿಯಾ, ಅಜರ್‌ಬೈಜಾನ್ ಮೂಲಕ, ಇಸ್ರೇಲ್‌ನಲ್ಲಿ ಸಿಲುಕಿರುವವರನ್ನು ಈಜಿಪ್ಟ್, ಜೋರ್ಡನ್ ಮೂಲಕ ವ್ಯವಸ್ಥೆ ಮಾಡಲಾಗಿದೆ. ಇರಾಕ್‌ನಿಂದ ಜೋರ್ಡನ್, ಸೌದಿ ಅರೇಬಿಯಾ ಹಾಗೂ ಕುವೈತ್, ಬಹರೇನ್‌ನಲ್ಲಿರುವವರನ್ನು ಸೌದಿ ಅರೇಬಿಯಾದ ಮೂಲಕ ಕರೆತರಲು ವ್ಯವಸ್ಥೆ ಮಾಡಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಕೊಲ್ಲಿ ಹಾಗೂ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ನೆಲಸಿರುವ ಭಾರತೀಯರ ಸುರಕ್ಷತೆ, ಭದ್ರತೆಯೇ ಭಾರತದ ಅತ್ಯಂತ ಪ್ರಮುಖ ಆದ್ಯತೆಯಾಗಿದೆ
ಅಸೀಮ್ ಆರ್. ಮಹಾಜನ್, ಹೆಚ್ಚುವರಿ ಕಾರ್ಯದರ್ಶಿ (ಕೊಲ್ಲಿ ರಾಷ್ಟ್ರ)

‘ಒಪ್ಪಂದ ಬೇಡವೆಂದರೆ ವಿನಾಶ’

ಒಂದನೇ ಪುಟದಿಂದ...

ಪಾಕಿಸ್ತಾನದ ಮಾತುಕತೆ ಬೆಂಬಲಿಸಿದ ಚೀನಾ: ಇರಾನ್– ಅಮೆರಿಕ ನಡುವಣ ಸಂಘರ್ಷವನ್ನು ಕೊನೆಗಾಣಿಸುವುದಕ್ಕಾಗಿ ಪಾಕಿಸ್ತಾನದ ಪ್ರಯತ್ನವನ್ನು ಚೀನಾವು ಬೆಂಬಲಿಸಿದೆ. ಪಾಕಿಸ್ತಾನವು ಮಧ್ಯಸ್ಥಿಕೆಯನ್ನು ಮುಂದುವರಿಸಲಿದೆ’ ಎಂದು ಚೀನಾದ ವಿದೇಶಾಂಗ ಇಲಾಖೆಯ ವಕ್ತಾರೆ ಮಾವೊ ನಿಂಗ್ ತಿಳಿಸಿದ್ದಾರೆ.

‘ಪಾಕಿಸ್ತಾನ ಸೇರಿದಂತೆ ಇತರೆ ದೇಶಗಳ ಜೊತೆಗೆ ಸಮನ್ವಯಕ್ಕೆ ಚೀನಾವು ಸಿದ್ಧವಿದೆ. ಪ್ರಾದೇಶಿಕ ಶಾಂತಿ ಹಾಗೂ ಸ್ಥಿರತೆ ಸ್ಥಾಪಿಸುವ ದಿಸೆಯಲ್ಲಿ ಈ ಮಾತುಕತೆ ಮಹತ್ವದ್ದಾಗಿದೆ’ ಎಂದು ತಿಳಿಸಿದೆ.

ಅಮೆರಿಕ ಹಾಗೂ ಇರಾನ್ ನಡುವೆ ಮಾತುಕತೆ ನಡೆಸಲು ವೇದಿಕೆ ಸಿದ್ಧಪಡಿಸಲಾಗುವುದು ಎಂದು ಪಾಕಿಸ್ತಾನ ಭಾನುವಾರ ಘೋಷಿಸಿತ್ತು. ಈ ಪ್ರಸ್ತಾವವನ್ನು ಇರಾನ್ ಸ್ಪಷ್ಟವಾಗಿ ತಿರಸ್ಕರಿಸಿದ್ದು, ಅಮೆರಿಕ ಇದುವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

‘ಯುದ್ಧ ನಿಲ್ಲಲಿ’: ‘ಇರಾನ್ ಜೊತೆಗೆ ಕದನ ವಿರಾಮದ ಬದಲಾಗಿ, ಯುದ್ಧ ನಿಲ್ಲಿಸುವುದನ್ನು ಎದುರು ನೋಡುತ್ತಿದ್ದೇವೆ’ ಎಂದು ಸಂಯುಕ್ತ ಅರಬ್ ಒಕ್ಕೂಟದ ವಿದೇಶಾಂಗ ಇಲಾಖೆಯ ವಕ್ತಾರ ನೌರಾ ಕಾಬಿ ತಿಳಿಸಿದ್ದಾರೆ.

‘ನಮಗೆ ಸಾಮಾನ್ಯ ನೆರೆಯ ರಾಷ್ಟ್ರ ಬೇಕಿದೆ; ಜಾಗತಿಕ ವ್ಯಾಪಾರದ ಮೇಲೆ ಖಂಡಾಂತರ ಕ್ಷಿಪಣಿ ದಾಳಿ ನಡೆಸುತ್ತಿರುವ ಈಗಿನ ಇರಾನ್ ಸ್ವೀಕಾರಾರ್ಹವಲ್ಲ. ಇಂತಹ ಬೆಳವಣಿಗೆಯು ಮುಂದೆ ನಡೆಯುವುದಿಲ್ಲ ಎಂಬ ಖಾತರಿ ಬೇಕಿದೆ’ ಎಂದು ಸರ್ಕಾರಿ ಸ್ವಾಮ್ಯದ ‘ದಿ ನ್ಯಾಷನಲ್ ನ್ಯೂಸ್‌ಡಾಟ್ ಕಾಮ್’ಗೆ ಬರೆದ ಅಂಕಣದಲ್ಲಿ ತಿಳಿಸಿದ್ದಾರೆ.

ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದದಿಂದ (ಎನ್‌ಪಿಟಿ) ಹೊರಬನ್ನಿ: ‘ಇರಾನ್ ಕೂಡಲೇ ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದದಿಂದ ಹೊರಬರಬೇಕು’ ಎಂದು ಹಿರಿಯ ಸಂಸದ ಅಲೆದ್ದೀನ್ ಬೊರೌಜೆರ್ದಿ ಕರೆ ನೀಡಿದ್ದಾರೆ.

‘ನಾವು ಏಕೆ ನಿರ್ಬಂಧಗಳನ್ನು ಒಪ್ಪಬೇಕು. ನಾವು ಹೇಗಿದ್ದರೂ ಪರಮಾಣು ಅಸ್ತ್ರವನ್ನು ತಯಾರಿಸುತ್ತಿಲ್ಲ. ಅವರು ನಮ್ಮ ಮೇಲೆ ಬಾಂಬ್ ಹಾಕುತ್ತಿದ್ದರೂ ಈ ನಿರ್ಬಂಧದಂತೆ ನಾವು ಏಕೆ ನಡೆದುಕೊಳ್ಳಬೇಕು’ ಎಂದು ಪ್ರಶ್ನಿಸಿದ್ದಾರೆ.

ಬಾಗ್ದಾದ್ ವಿಮಾನ ನಿಲ್ದಾಣದ ಮೇಲೆ ರಾಕೆಟ್ ದಾಳಿ

ಒಂದನೇ ಪುಟದಿಂದ...

ಲೆಬನಾನ್ ಮೇಲೆ ಇಸ್ರೇಲ್ ದಾಳಿ: ದೇಶದ ದಕ್ಷಿಣದಲ್ಲಿರುವ ಸೇನೆಯ ತಪಾಸಣಾ ಕೇಂದ್ರವನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ಸೇನೆ ದಾಳಿ ನಡೆಸಿದೆ ಎಂದು ಲೆಬನಾನ್‌ನ ಸೇನೆ ತಿಳಿಸಿದೆ.

ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿರಿಸಿ ಇಸ್ರೇಲ್ ಇದುವರೆಗೂ ದಾಳಿ ನಡೆಸುತ್ತಿತ್ತು. ಇದೇ ಮೊದಲ ಸಲ ಲೆಬನಾನ್ ಸೇನಾ ನೆಲೆಯ ಮೇಲೆ ದಾಳಿ ನಡೆಸಿದ್ದು, ಐದು ಮಂದಿ ಯೋಧರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮತ್ತೊಂದೆಡೆ, ಟೆಹರಾನ್‌ನ ಸೇನಾ ನೆಲೆಗಳನ್ನು ಗುರಿಯಾಗಿರಿಸಿಕೊಂಡು ಇಸ್ರೇಲ್ ಸೋಮವಾರ ಕೂಡ ದಾಳಿ ಮುಂದುವರಿಸಿದೆ. ಇದಕ್ಕೆ ಪ್ರತ್ಯುತ್ತರವಾಗಿ, ಇಸ್ರೇಲ್‌ನ ಪರಮಾಣು ಕೇಂದ್ರಗಳನ್ನು ಗುರಿಯಾಗಿರಿಸಿ ಇರಾನ್ ದಾಳಿ ನಡೆಸಿದೆ.

ಕಥಾಸ್ಪರ್ಧೆ: ಫಲಿತಾಂಶ ಪ್ರಕಟ

ಬೆಂಗಳೂರು: ಸಮಾಜಮುಖಿ ಪ್ರಕಾಶನವು 2025ನೇ ಸಾಲಿನ ವಾರ್ಷಿಕ ಕಥಾಸ್ಪರ್ಧೆಯ ಫಲಿತಾಂಶ ಪ್ರಕಟಿಸಿದೆ. ಐದು ಕಥೆಗಳು ತಲಾ ₹5,000 ಬಹುಮಾನಕ್ಕೆ ಆಯ್ಕೆಯಾಗಿವೆ.

ಉಡುಪಿಯ ಶೀಲಾ ಪೈ ಅವರ ‘ಗ್ಲೋರಿಯೊಸಾ ಸುಪರ್ಬ’, ಮೈಸೂರಿನ ಎಂ.ಎಸ್. ಶೇಖರ್ ಅವರ ‘ದೊಡ್ಕೆರೆ ಬೇಟೆ’, ಬೆಂಗಳೂರಿನ ಜಯರಾಮಾಚಾರಿ ಅವರ ‘ಸಾಕವ್ವಳ ರಸ್ತೆ ಪುರಾಣ’ ಮತ್ತು ಮಂಜುನಾಥ ನಾಯ್ಕ ಅವರ ‘ಕಾಫಿತೋಟದ ಆ ಕಾರ್ಮಿಕನೂ, ಕಬ್ಬೆಕ್ಕಿನ ಕಬಾಬೂ’, ಮುಂಬೈಯ ದೇವೇಂದ್ರ ಅಬ್ಬಿಗೇರಿ ಅವರ ‘ಮೋರ್ಸ್ ಕೋಡ್’ ಆಯ್ಕೆಯಾದ ಕಥೆಗಳು.

ರಮ್ಯ ಎಸ್., ಸ. ಹರೀಶ, ರಮೇಶ್ ಟಿ.ಎಂ., ಗೌರಿ ಚಂದ್ರಕೇಸರಿ, ನಿರ್ಮಲಾ ಸುರತ್ಕಲ್, ಪ್ರವೀಣ್ ಕುಮಾರ್ ಜಿ., ಸಂತೆಬೆನ್ನೂರು ಫೈಜ್ನಟ್ರಾಜ್, ಪಾಪುಗುರು, ಹನುಮಂತ ಹೆರೂರು ಮತ್ತು ಭೋಜರಾಜ ಎಚ್.ಸೊಪ್ಪಿಮಠ ಅವರ ಕಥೆಗಳು ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದಿದ್ದು, ಸಮಾಜಮುಖಿ ವಾರ್ಷಿಕ ಕಥಾಸಂಕಲನಕ್ಕೆ ಆಯ್ಕೆಯಾಗಿವೆ.

ಸ್ಪರ್ಧೆಯಲ್ಲಿ ಒಟ್ಟು 357 ಕಥೆಗಾರರು ಭಾಗವಹಿಸಿದ್ದರು. ಸಾಹಿತಿ ಶರೀಫ್ ಕಾಡುಮಠ ತೀರ್ಪುಗಾರರಾಗಿದ್ದರು.

‘ವಿಬಿ ಜಿ ರಾಮ್ ಜಿ’ ಜಾರಿ ಲಕ್ಷಣ ಕಾಣಿಸುತ್ತಿಲ್ಲ- ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮೀಣ ಭಾರತಕ್ಕೆ ಎರಡು ದಶಕಗಳ ಜೀವನಾಡಿಯಾಗಿದ್ದ ನರೇಗಾ ಯೋಜನೆ ಮಾರ್ಚ್ 31ರಂದು ಕೊನೆಗೊಳ್ಳಲಿದೆ. ಆದರೆ, ಏಪ್ರಿಲ್ 1ರಿಂದ ‘ವಿಬಿ ಜಿ ರಾಮ್ ಜಿ’ ಯೋಜನೆ ಜಾರಿಯಾಗುವ ಸಣ್ಣ ಲಕ್ಷಣಗಳೂ ಕಾಣಿಸುತ್ತಿಲ್ಲ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಪ್ರಿಯಾಂಕ್ ಖರ್ಗೆ

‘ವಿಬಿ ಜಿ ರಾಮ್ ಜಿ ಯೋಜನೆಯನ್ನು ಗ್ರಾಮೀಣ ಕಾರ್ಮಿಕರಿಗೆ, ಗ್ರಾಮಗಳಿಗೆ ತಲುಪಿಸಲು ಬೇಕಾದ ಅಗತ್ಯ ರೂಪುರೇಷೆಗಳನ್ನು ಕೇಂದ್ರ ಸರ್ಕಾರ ಈಗಾಗಲೇ ಸಿದ್ಧಪಡಿಸಬೇಕಿತ್ತು, ಆದರೆ, ಇನ್ನೂ ಯಾವುದೇ ನಿಯಮಗಳು ರೂಪುಗೊಂಡಿಲ್ಲ. ನಿಧಿ ಹಂಚಿಕೆಯ ಬಗ್ಗೆ ಸ್ಪಷ್ಟತೆ ಇಲ್ಲ. ಗ್ರಾಮ ಪಂಚಾಯಿತಿಗಳನ್ನು ವರ್ಗೀಕರಿಸಲು ಯಾವುದೇ ಅಂತಿಮ ನಿಯತಾಂಕಗಳು ತಯಾರಾಗಿಲ್ಲ. ಸಾಮಾಜಿಕ ಲೆಕ್ಕಪರಿಶೋಧನೆಯಂತಹ ಪ್ರಮುಖ ಪ್ರಕ್ರಿಯೆಗಳು ಕೂಡಾ ವ್ಯಾಖ್ಯಾನಿಸಲ್ಪಟ್ಟಿಲ್ಲ’ ಎಂದು ಅವರು ಕಿಡಿಕಾರಿದ್ದಾರೆ.

‘ಬೇಸಿಗೆ ಸಮಯವು ಗ್ರಾಮೀಣ ಜನರಿಗೆ ಉದ್ಯೋಗದ ಗರಿಷ್ಠ ಬೇಡಿಕೆಯ ತಿಂಗಳುಗಳಾಗಿವೆ. ಉದ್ಯೋಗ ಖಾತರಿಗೆ ಹೆಚ್ಚು ಅವಲಂಬನೆ ವ್ಯಕ್ತಗೊಳ್ಳುವ ಸಮಯ. ಇಂತಹ ಸಮಯದಲ್ಲೇ ಉದ್ಯೋಗ ಒದಗಿಸುವ ಯೋಜನೆ ಸ್ಥಗಿತಗೊಂಡಿದೆ. ಅನುಮೋದನೆಗಳು ವಿಳಂಬವಾಗುತ್ತಿವೆ. ಅಲ್ಲದೆ, ಬೇಡಿಕೆಯ ಹೊರತಾಗಿಯೂ ಕುಟುಂಬಗಳು ಉದ್ಯೋಗ ಪಡೆಯಲಾಗುತ್ತಿಲ್ಲ ಎಂಬ ವರದಿಗಳು ಬಂದಿವೆ. ಕೇಂದ್ರ ಸರ್ಕಾರವು ಕಾನೂನಾತ್ಮಕ ಉದ್ಯೋಗದ ಖಾತರಿಯನ್ನು ತೆಗೆದು, ನಿಯಮ ಆಧಾರಿತ ಹಂಚಿಕೆಯಾಗಿ ಬದಲಾವಣೆ ಮಾಡಿರುವುದು ನಕಾರಾತ್ಮಕ ಪರಿಣಾಮ ತೋರಿಸಲು ಆರಂಭಿಸಿದೆ’ ಎಂದು ಪ್ರಿಯಾಂಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಕೇಂದ್ರದ ಬಿಜೆಪಿ ಸರ್ಕಾರ ವಿಬಿ ಜಿ ರಾಮ್ ಜಿ ಯೋಜನೆಯು ಗ್ರಾಮೀಣ ಭಾರತವನ್ನು ಪರಿವರ್ತಿಸುತ್ತದೆ ಎಂದು ಹೇಳಿಕೊಂಡಿತ್ತು. ಆದರೆ, ಅದು ಹೀಗೆ ಜನರ ಜೀವನೋಪಾಯಕ್ಕೆ ಮಾರಕವಾಗಿ ಮತ್ತು ನಕಾರಾತ್ಮಕ ಪರಿವರ್ತನೆ ಎನ್ನುವುದು ವಾಸ್ತವವಾಗಿ ಕಂಡುಬರುತ್ತಿದೆ’ ಎಂದಿದ್ದಾರೆ.

‘ಒಬಿಸಿ ಮೀಸಲಾತಿ ಮುಸ್ಲಿಮರ ಪಾಲು’

ನವದೆಹಲಿ (ಪಿಟಿಐ): ‘ಮುಸ್ಲಿಮರಿಗೆ ಮೀಸಲಾತಿ ನೀಡಲೇಬೇಕು ಎಂಬ ಉದ್ದೇಶದಿಂದ ಕರ್ನಾಟಕ, ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ ಮತ್ತು ತೆಲಂಗಾಣದಲ್ಲಿ ಮುಸ್ಲಿಮರನ್ನು ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿಸಲಾಗಿದೆ. ಧರ್ಮಾಧಾರಿತ ಮೀಸಲಾತಿಗೆ ಸಂವಿಧಾನದಲ್ಲಿ ಅವಕಾಶವಿಲ್ಲ’ ಎಂದು ಬಿಜೆಪಿ ಸದಸ್ಯ ಕೆ.ಲಕ್ಷ್ಮಣ್ ರಾಜ್ಯಸಭೆಯಲ್ಲಿ ಹೇಳಿದರು.

ಬಿಜೆಪಿಯ ಒಬಿಸಿ ಮೋರ್ಚಾ ಅಧ್ಯಕ್ಷರೂ ಆಗಿರುವ ಲಕ್ಷ್ಮಣ್ ಮಾತನಾಡಿ, ‘ಈ ರಾಜ್ಯಗಳು ಮೀಸಲಾತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಈ ಬಗ್ಗೆ ಕೇಂದ್ರ ಸರ್ಕಾರವು ಪರಿಶೀಲನೆ ನಡೆಸಿ ಆದೇಶವೊಂದನ್ನು ನೀಡಬೇಕು’ ಎಂದರು. ಇವರ ಮಾತಿಗೆ ವಿರೋಧ ಪಕ್ಷಗಳ ಹಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಮಾತನಾಡಲು ಅವಕಾಶ ನೀಡದ ಕಾರಣ ವಿಪಕ್ಷಗಳು ಸಭಾತ್ಯಾಗ ಮಾಡಿದವು.

ಹಿಂದಿಗೆ ಗ್ರೇಡ್ ಪದ್ಧತಿ ಬೇಡ: ಹೊರಟ್ಟಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಅಂಕಗಳ ಬದಲಿಗೆ ಗ್ರೇಡಿಂಗ್ ನೀಡುವ ಸರ್ಕಾರದ ನಿರ್ಧಾರ ತಪ್ಪು. ಹಿಂದಿನ ವ್ಯವಸ್ಥೆಯನ್ನೇ ಮುಂದುವರಿಸಬೇಕು’ ಎಂದು ವಿಧಾನ ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಇಲ್ಲಿ ಅಭಿಪ್ರಾಯಪಟ್ಟರು.

‘ಶಿಕ್ಷಕ ಪ್ರತಿನಿಧಿಗಳ ಜೊತೆ ಚರ್ಚಿಸದೆ, 1961ರಿಂದ ಇರುವ ಅಂಕ ಪದ್ಧತಿ ಬದಲಿಸಲು ನಿರ್ಧರಿಸಿದ್ದು ಸರಿಯಲ್ಲ. ಮುಖ್ಯಮಂತ್ರಿ, ಶಿಕ್ಷಣ ಸಚಿವರ ಜೊತೆ ಇದರ ಬಗ್ಗೆ ಚರ್ಚಿಸುವೆ’ ಎಂದು ಸೋಮವಾರ ಅವರು ಸುದ್ದಿಗಾರರಿಗೆ ತಿಳಿಸಿದರು.

‘ದ್ವಿಭಾಷಾ ನೀತಿ ಆಡಳಿತದಲ್ಲಿ ಸರಿ. ಶಿಕ್ಷಣದಲ್ಲಿ ಸರಿಯಲ್ಲ. ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಹಿಂದಿ ಅಧ್ಯಯನ ವಿಭಾಗ ಇದೆ. ಅವುಗಳನ್ನೂ ಮುಚ್ಚುತ್ತೀರಾ’ ಎಂದೂ ಪ್ರಶ್ನಿಸಿದರು.

‘ಗ್ರೇಡಿಂಗ್ ನೀಡುವ ಕ್ರಮದಿಂದ ಹಿಂದಿ ಅಲ್ಲದೇ ತೃತೀಯ ಭಾಷೆಯಾಗಿ ಓದುವ ಕನ್ನಡ, ಉರ್ದು, ಉರ್ದು, ತಮಿಳು ಇನ್ನಿತರ ವಿಷಯಗಳಿಗೂ ಸಮಸ್ಯೆ ಆಗುತ್ತದೆ. ಹಿಂದಿ ಬಾರದಿದ್ದರೆ ಸಂಸದರಿಗೆ ಸಮಸ್ಯೆ ಆಗುತ್ತದೆ. ವಿವಿಧ ರಾಜ್ಯಗಳಿಗೆ ಹೋದಾಗ ಸಂವಹನಕ್ಕೆ ಹಿಂದಿ ಅವಶ್ಯ’ ಎಂದರು.

ರೋನ್ ರೋಚ್

ರಾಮದಾಸ್ ಡಿ. ಗುಲ್ವಾಡಿ

ಆಂಡ್ರ್ಯೂ ಎಲ್ ಡಿಕುನ್ಹಾ



ಸೈರು ಪುತ್ತು ನಾಯ್ಕ್

ರೋಶನ್ ಮೆಲ್ಕಿ ಸಿಕ್ವೇರಾ

ರಿಚರ್ಡ್ ಅಲ್ವಾರಿಸ್

ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳ ಪ್ರಕಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, 2025ನೇ ಸಾಲಿನ ಗೌರವ ಪ್ರಶಸ್ತಿಗೆ ಸಾಹಿತಿ ರೋನಾಲ್ಡ್ ರೋಚ್ (ರೋನ್ ರೋಚ್ ಕಾಸ್ಸಿಯಾ), ಸಂಗೀತ ಕಲಾವಿದ ರಾಮದಾಸ ದತ್ತಾತ್ರೇಯ ಗುಲ್ವಾಡಿ ಹಾಗೂ ಜಾನಪದ ಖೇಳ ಕಲಾವಿದ ಸೈರು (ಮುರಳೀಧರ) ಪುತ್ತು ನಾಯ್ಕ ಅವರನ್ನು ಆಯ್ಕೆ ಮಾಡಿದೆ.

ಕೊಂಕಣಿ ಪುಸ್ತಕ ಪುರಸ್ಕಾರಕ್ಕೆ ಕವಿ ಆ್ಯಂಡ್ರ್ಯೂ ಎಲ್. ಡಿಕುನ್ಹಾ ಅವರ 'ಉಜ್ವಾಡಾಚ್ಯೆ ವೆಂಗೆಂತ್' ಕೃತಿ, ಲೇಖನ ಪುರಸ್ಕಾರಕ್ಕೆ ರೋಶನ್ ಮೆಲ್ಲಿ ಸಿಕ್ವೇರಾ ಅವರ 'ಕೊಂಕ್ಣಿ ಸರ್ಕಸ್' ಕೃತಿ ಹಾಗೂ ಸಣ್ಣ ಕಥೆ ಪುರಸ್ಕಾರಕ್ಕೆ ರಿಚರ್ಡ್ ಅಲ್ವಾರಿಸ್ ಅವರ ‘ಫಿತುರಿ’ ಕೃತಿ ಆಯ್ಕೆಯಾಗಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್, ‘ಗೌರವ ಪ್ರಶಸ್ತಿ ₹ 50 ಸಾವಿರ ನಗದು ಹಾಗೂ ಪುಸ್ತಕ ಪುರಸ್ಕಾರ ₹ 25 ಸಾವಿರ ಒಳಗೊಂಡಿದೆ. ಉಡುಪಿ ಜಿಲ್ಲೆಯ ಉದ್ಯಾವರ ಚರ್ಚ್ ವಠಾರದಲ್ಲಿ ಏ.29ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಸದಸ್ಯರಾದ ನವೀನ್ ಲೋಬೊ, ರೊನಾಲ್ಡ್ ಕ್ರಾಸ್ತಾ ಮತ್ತು ಮಾಧ್ಯಮ ಸಲಹೆಗಾರ ಎಲಿಯಾಸ್ ಫರ್ನಾಂಡಿಸ್ ಭಾಗವಹಿಸಿದ್ದರು.

ಈಜಲು ಹೋಗಿದ್ದ ಪಿಯುಸಿ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ರೋಣ (ಗದಗ ಜಿಲ್ಲೆ): ತಾಲ್ಲೂಕಿನ ಹಿರೇಹಾಳ ಗ್ರಾಮ ಬಳಿ ಸೋಮವಾರ ಹಳ್ಳದಲ್ಲಿ ಮುಳುಗಿ ಪಿಯುಸಿ ವಿದ್ಯಾರ್ಥಿ ಲಾಲುಪ್ರಸಾದ್ ಮಾದರ (18) ಮೃತಪಟ್ಟಿದ್ದಾರೆ.

ಸ್ನೇಹಿತರೊಂದಿಗೆ ಈಜಲು ಹೋಗಿದ್ದ ವೇಳೆ ದುರ್ಘಟನೆ ನಡೆದಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ನೆರವಿನಿಂದ ಮೃತದೇಹ ಹೊರತೆಗೆಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಆಂಧ್ರಪ್ರದೇಶದ ವಿಶಾಖಪಟ್ಟಣದ ಗಾಜುವಾಕದಲ್ಲಿ ಘಟನೆ • ಸ್ನೇಹಿತನ ಸಲಹೆಯಂತೆ ಪೊಲೀಸರ ಮುಂದೆ ಶರಣು

ಯುವತಿ ಕೊಂದು ಫ್ರಿಜ್‌ನಲ್ಲಿಟ್ಟ ನೌಕಾಪಡೆ ಉದ್ಯೋಗಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಆಂಧ್ರಪ್ರದೇಶದ ಗಾಜುವಾಕದಲ್ಲಿ ಭಾರತೀಯ ನೌಕಾಪಡೆಯ ಉದ್ಯೋಗಿಯೊಬ್ಬ ಯುವತಿಯನ್ನು ಕೊಂದು, ಅವರ ದೇಹವನ್ನು ಕತ್ತರಿಸಿ ಎರಡು ಚೀಲಗಳಲ್ಲಿ ತುಂಬಿಸಿ ಫ್ರಿಜ್‌ನಲ್ಲಿಟ್ಟು, ತಲೆಯನ್ನು ಸುಟ್ಟುಹಾಕಿ ನಂತರ ಪೊಲೀಸರ ಮುಂದೆ ಶರಣಾಗಿದ್ದಾನೆ.

ನೌಕಾಪಡೆಯಲ್ಲಿ ಟೆಕ್ನೀಷಿಯನ್ ಆಗಿದ್ದ ವಿಜಯನಗರ ಜಿಲ್ಲೆಯ ರಾಜಮ್‌ನ ಚಿಂತಾಡ ರವೀಂದ್ರ (35) ಆರೋಪಿ. ವಿಶಾಖಪಟ್ಟಣದಲ್ಲಿ ಸರ್ಕಾರಿ ಬ್ಯಾಂಕ್ ಉದ್ಯೋಗಿಯಾಗಿದ್ದ ಮೌನಿಕಾ (29) ಬರ್ಬರವಾಗಿ ಕೊಲೆಯಾದವರು.

ವಿಶಾಖಪಟ್ಟಣದ ಗಾಜುವಾಕ ಪ್ರದೇಶದ ಎಲ್.ವಿ. ನಗರದಲ್ಲಿರುವ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದ ಆರೋಪಿಯ ಪತ್ನಿ ಹೆರಿಗೆಗಾಗಿ ತಿಂಗಳ ಹಿಂದೆ ವಿಜಯನಗರದಲ್ಲಿರುವ ತನ್ನ ಹೆತ್ತವರ ಮನೆಗೆ ಹೋಗಿದ್ದರು. ಈ ಮೊದಲೇ ಪರಿಚಿತರಾಗಿದ್ದ ಯುವತಿಯನ್ನು ಆರೋಪಿಯು ತನ್ನ ಫ್ಲ್ಯಾಟ್‌ಗೆ ಆಹ್ವಾನಿಸಿದ್ದ.

ಭಾನುವಾರ ಮಧ್ಯಾಹ್ನ ಫ್ಲ್ಯಾಟ್‌ಗೆ ಬಂದಿದ್ದ ಯುವತಿ ಮತ್ತು ಆರೋಪಿ ಮಧ್ಯೆ ತೀವ್ರ ವಾಗ್ವಾದ ನಡೆದಿದ್ದು, ಈ ವೇಳೆ ರವೀಂದ್ರ ಯುವತಿಗೆ ಇರಿದು ಕೊಲೆ ಮಾಡಿದ್ದ. ನಂತರ ಯುವತಿಯ ಶರೀರವನ್ನು ತುಂಡುಗಳಾಗಿ ಕತ್ತರಿಸಿ ಕೆಲವನ್ನು ಚೀಲದಲ್ಲಿ ತುಂಬಿಸಿ, ಉಳಿದ ಭಾಗವನ್ನು ಫ್ರಿಜ್‌ನಲ್ಲಿ ಸಂಗ್ರಹಿಸಿದ್ದ. ನಂತರ ಹತ್ತಿರದ ಪೊಲೀಸ್ ಠಾಣೆಗೆ ತೆರಳಿ ಎಲ್ಲವನ್ನೂ ವಿವರಿಸಿ ಅಧಿಕಾರಿಗಳ ಮುಂದೆ ಶರಣಾಗಿದ್ದಾನೆ.

ಆರೋಪಿಯ ಹೆಸರನ್ನು ಇದೇ ಮೊದಲ ಬಾರಿಗೆ ಕೇಳುತ್ತಿದ್ದು, ಇಂತಹ ವ್ಯಕ್ತಿಯೊಂದಿಗೆ ಯುವತಿ ಸಂಪರ್ಕದಲ್ಲಿರುವುದು ತಮಗೆ ತಿಳಿದಿರಲಿಲ್ಲ ಎಂದು ಯುವತಿಯ ಕುಟುಂಬದವರು ಹೇಳಿದ್ದಾರೆ. ಪೊಲೀಸರು ಅಪಾರಾಧ ಸ್ಥಳಕ್ಕೆ ಆರೋಪಿಯನ್ನು ಕರೆತಂದಾಗ ಯುವತಿಯ ಸಂಬಂಧಿಕರು ಆತನ ಮೇಲೆ ಹಲ್ಲೆಗೆ ಪ್ರಯತ್ನಿಸಿದ್ದಾರೆ.

ಡೇಟಿಂಗ್ ಆ್ಯಪ್ ಮೂಲಕ ಪರಿಚಯ

ರವೀಂದ್ರ ಮತ್ತು ಮೌನಿಕಾ 2020ರಲ್ಲಿ ಕೋವಿಡ್–19ರ ಲಾಕ್‌ಡೌನ್ ವೇಳೆ ಡೇಟಿಂಗ್ ಆ್ಯಪ್ ಮೂಲಕ ಪರಿಚಿತರಾಗಿದ್ದರು. ಯುವತಿಗೆ ಈಗಾಗಲೆ ₹3.5 ಲಕ್ಷವನ್ನು ತಾನು ನೀಡಿದ್ದು, ಹೆಚ್ಚಿನ ಹಣಕ್ಕಾಗಿ ಬೇಡಿಕೆ ಇಡುತ್ತಿದ್ದರು ಎಂದು ರವೀಂದ್ರ ಹೇಳಿದ್ದಾನೆ.

ಆರೋಪಿಯು ಕೊಲೆಗೆ ಬಳಸಿದ ಚಾಕುವನ್ನು ಮೊದಲೆ ಖರೀದಿಸಿದ್ದ. ಇದು ಪೂರ್ವಯೋಜಿತ ಕೃತ್ಯ ಎಂದು ಪೊಲೀಸರು ಹೇಳಿದ್ದಾರೆ.

ಮೌನಿಕಾ ಅವರ ಶರೀರವನ್ನು ಮೂರು ಭಾಗಗಳಾಗಿ ಕತ್ತರಿಸಿದ್ದ ಆರೋಪಿಯು ಎರಡು ಭಾಗವನ್ನು ಫ್ರಿಜ್‌ನಲ್ಲಿ ಇಟ್ಟು, ತಲೆಯನ್ನು ವಿಶಾಖಪಟ್ಟಣದ ದರಪಾಲದಲ್ಲಿ ಸುಟ್ಟು ಹಾಕಿದ್ದಾನೆ.

ಕೊಲೆಯ ನಂತರ ರಕ್ತವನ್ನು ಸ್ವಚ್ಛ ಮಾಡಿ, ವಾಸನೆ ಇಲ್ಲವಾಗಿಸಲು ಸುಗಂಧ ದ್ರವ್ಯ ಬಳಸಿದ್ದ ಆರೋಪಿ, ನಂತರ ತನ್ನ ಗೆಳೆಯನೊಬ್ಬನಿಗೆ ಕರೆ ಮಾಡಿ ನಡೆದ ಘಟನೆಯನ್ನು ವಿವರಿಸಿದ್ದ. ಈ ವೇಳೆ ಆತನ ಸಲಹೆಯಂತೆ ಪೊಲೀಸರ ಮುಂದೆ ಶರಣಾಗಿದ್ದಾನೆ.

ಫ್ರಿಜ್‌ನಲ್ಲಿತ್ತು ಎರಡು ಚೀಲ

ಆರೋಪಿಯನ್ನು ಅಪರಾಧ ನಡೆದ ಸ್ಥಳಕ್ಕೆ ಕರೆತಂದ ಪೊಲೀಸರು ಫ್ರಿಜ್‌ನಲ್ಲಿ ಸಂಗ್ರಹಿಸಿಟ್ಟಿದ್ದ ಎರಡು ಚೀಲಗಳನ್ನು ವಶಕ್ಕೆ ಪಡೆದಿದ್ದಾರೆ. ಹಣಕ್ಕಾಗಿ ಪೀಡಿಸುತ್ತಿದ್ದ ಯುವತಿಯ ಒತ್ತಡವನ್ನು ತಾಳಲಾಗದೆ ಕೊಲೆ ಮಾಡಿದ್ದಾಗಿ ಆರೋಪಿ ಹೇಳಿದ್ದಾನೆ.

ಸರ್ಕಾರಿ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಮಗಳ ಮದುವೆಗಾಗಿ ವರನನ್ನು ಹುಡುಕುತ್ತಿದ್ದೆವು. ಏನೂ ತಪ್ಪು ಮಾಡದವಳನ್ನು ಕೊಲೆ ಮಾಡಿದ ಆತನಿಗೆ ಸರಿಯಾದ ಶಿಕ್ಷೆ ಆಗಬೇಕು
ವೇಣುಗೋಪಾಲ್, ಮೃತ ಯುವತಿಯ ತಂದೆ

ಪಂಜಾಬ್ ಕಿಂಗ್ಸ್‌ಗೆ ಗುಜರಾತ್ ಟೈಟನ್ಸ್ ಸವಾಲು ಇಂದು

ಗಿಲ್, ಶ್ರೇಯಸ್ ಆಟದತ್ತ ಚಿತ್ತ

ಮುಲ್ಲನಪುರ (ಪಿಟಿಐ): ಭಾರತ ಟಿ20 ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆಯಲು ವಿಫಲರಾದ ಬ್ಯಾಟರ್‌ಗಳಾದ ಶುಭಮನ್ ಗಿಲ್ ಮತ್ತು ಶ್ರೇಯಸ್ ಅಯ್ಯರ್ ಅವರು ಮಂಗಳವಾರ ಇಲ್ಲಿ ನಡೆಯುವ ಐಪಿಎಲ್ ಹಾಲಿ ಆವೃತ್ತಿಯ ಆರಂಭಿಕ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುವ ಉತ್ಸಾಹದಲ್ಲಿದ್ದಾರೆ. ಈ ಇಬ್ಬರು ಕ್ರಮವಾಗಿ ಗುಜರಾತ್ ಟೈಟನ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳನ್ನು ಮುನ್ನಡೆಸಲಿದ್ದಾರೆ.


ಶುಭಮನ್ ಗಿಲ್

ಭಾರತ ಟೆಸ್ಟ್ ಮತ್ತು ಏಕದಿನ ತಂಡಗಳ ಸಾರಥಿಯಾಗಿರುವ ಗಿಲ್ ಅವರು ಟಿ20 ಮಾದರಿಗೂ ಉಪನಾಯಕರಾಗಿದ್ದರು. ಆದರೆ, ಟಿ20 ವಿಶ್ವಕಪ್‌ನಲ್ಲಿ ಸಂಜು ಸ್ಯಾಮ್ಸನ್ ಅವರಿಗೆ ಸ್ಥಾನ ಕಲ್ಪಿಸುವ ಸಲುವಾಗಿ ಅವರು ತಂಡದಿಂದ ಹೊರಗುಳಿದಿದ್ದರು. ಇದೀಗ ಚುಟುಕು ಮಾದರಿಯಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸುವ ಸವಾಲು ಗಿಲ್ ಮುಂದಿದೆ.

2023ರಿಂದ ಐಪಿಎಲ್‌ನಲ್ಲಿ ವಿರಾಟ್ ಕೊಹ್ಲಿ ಮಾತ್ರ ಗಿಲ್ ಅವರಿಗಿಂತ ಹೆಚ್ಚು ರನ್ ಗಳಿಸಿದ್ದಾರೆ. ಆದರೆ, ಸ್ಥಿರ ಪ್ರದರ್ಶನ ನೀಡುವಲ್ಲಿ ವಿಫಲರಾಗಿದ್ದಾರೆ. ಟಿ20 ವೃತ್ತಿಜೀವನದಲ್ಲಿ 138ರ ಸ್ಟ್ರೈಕ್ ರೇಟ್ ಹೊಂದಿರುವ ಅವರು, ಕಳೆದ ಋತುವಿನಲ್ಲಿ ಚೇತರಿಕೆಯ ಪ್ರದರ್ಶನ ನೀಡಿದ್ದಾರೆ. ಆಸ್ಟ್ರೇಲಿಯಾದ ದಿಗ್ಗಜ ಮ್ಯಾಥ್ಯೂ ಹೇಡನ್ ಈ ಬಾರಿ ಟೈಟನ್ಸ್‌ನ ಬ್ಯಾಟಿಂಗ್ ಕೋಚ್ ಜವಾಬ್ದಾರಿ ಹೊತ್ತಿದ್ದು, ಗಿಲ್ ಆಕ್ರಮಣಕಾರಿಯಾಗುವರೇ ಎಂಬ ಕುತೂಹಲವಿದೆ.

2023ರಲ್ಲಿ ಟೈಟನ್ಸ್ ತಂಡದಿಂದ ಹಾರ್ದಿಕ್ ಪಾಂಡ್ಯ ನಿರ್ಗಮಿಸಿದ ಬಳಿಕ ನಾಯಕತ್ವ ಗಿಲ್ ಹೆಗಲೇರಿದೆ. 2022ರ ತನ್ನ ಚೊಚ್ಚಲ ಋತುವಿನಲ್ಲೇ ಚಾಂಪಿಯನ್ ಆಗಿದ್ದ ತಂಡವು ಮರುವರ್ಷ ರನ್ನರ್ ಅಪ್ ಆಗಿತ್ತು. ಐಪಿಎಲ್‌ನಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿರುವ ತಂಡಗಳಲ್ಲಿ ಇದೂ ಒಂದಾಗಿದೆ.

ಕಳೆದ ಋತುವಿನಲ್ಲಿದ್ದ 20 ಆಟಗಾರರನ್ನು ತಂಡವು ಉಳಿಸಿಕೊಂಡಿದ್ದು, ಸ್ಥಿರ ಪ್ರದರ್ಶನದ ವಿಶ್ವಾಸದಲ್ಲಿದೆ. ಕಳೆದ ಆವೃತ್ತಿಯಲ್ಲಿ 759 ರನ್ ಗಳಿಸಿ ಅತ್ಯಧಿಕ ಸ್ಕೋರರ್ ಎನಿಸಿದ್ದ ಸಾಯಿ ಸುದರ್ಶನ್ ಮತ್ತು ಗಿಲ್ ತಂಡದ ಆರಂಭದ ಶಕ್ತಿಯಾಗಿದ್ದಾರೆ.

ಹಾಲಿ ರನ್ನರ್ಸ್ ಅಪ್ ಪಂಜಾಬ್ ತಂಡವು ಮತ್ತೆ ಶ್ರೇಯಸ್ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ. ಅವರು ಮೂರು ಬೇರೆ ಬೇರೆ ತಂಡಗಳನ್ನು ಫೈನಲ್‌ಗೆ ಮುನ್ನಡೆಸಿ ಯಶಸ್ವಿ ನಾಯಕ ಎನಿಸಿದ್ದಾರೆ.

ಶ್ರೇಯಸ್ ಅವರ ಸ್ಥಿರ ಪ್ರದರ್ಶನದ ಹೊರತಾಗಿಯೂ ಟಿ20 ವಿಶ್ವಕಪ್‌ಗೆ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿಯು ಕಡೆಗಣಿಸಿತ್ತು. 2023ರಲ್ಲಿ ಅವರು ಕೊನೆಯ ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿದ್ದಾರೆ. ಕಳೆದ ಐಪಿಎಲ್‌ನಲ್ಲಿ ಅವರು 175ಕ್ಕಿಂತ ಹೆಚ್ಚಿನ ಸ್ಟ್ರೈಕ್ ರೇಟ್‌ನಲ್ಲಿ 604 ರನ್ ಬಾರಿಸಿದ್ದರು.

ಪಂಜಾಬ್ ತಂಡದ ಬ್ಯಾಟಿಂಗ್ ವಿಭಾಗ ಮೇಲ್ನೋಟಕ್ಕೆ ಬಲಿಷ್ಠವಾಗಿದೆ. ಆರಂಭಿಕ ಆಟಗಾರರಾದ ಪ್ರಭಸಿಮ್ರನ್ ಸಿಂಗ್ ಮತ್ತು ಪ್ರಿಯಾಂಶ್ ಆರ್ಯ ಅವರು ಕಳೆದ ಋತುವಿನಲ್ಲಿ ಯಶಸ್ವಿ ಜೋಡಿ ಎನಿಸಿದ್ದರು. ಅವರಿಬ್ಬರು 169 ಸ್ಟ್ರೈಕ್ ರೇಟ್‌ನಲ್ಲಿ ಒಟ್ಟು 1,024 ರನ್ ಗಳಿಸಿದ್ದರು. ನೇಹಲ್ ವಧೇರಾ, ಶಶಾಂಕ್ ಸಿಂಗ್ ಮತ್ತು ಸೂರ್ಯಾಂಶ್ ಶೆಡಗೆ ಅವರು ಮಧ್ಯಮ ಕ್ರಮಾಂಕದಲ್ಲಿ ತಂಡಕ್ಕೆ ಬಲ ತುಂಬುವರು.

ಕಳೆದ ಋತುವಿನಲ್ಲಿ ಪಂಜಾಬ್ ತಂಡವು ಫೈನಲ್ ತಲುಪಿದ್ದರೂ ಮುಲ್ಲನಪುರದಲ್ಲಿ ನಡೆದ ಐದು ಪಂದ್ಯಗಳಲ್ಲಿ ಎರಡರಲ್ಲಿ ಮಾತ್ರ ಗೆಲುವು ಸಾಧಿಸಿತ್ತು. ಈ ಬಾರಿ ಸುಧಾರಿತ ಪ್ರದರ್ಶನದ ಛಲದಲ್ಲಿದೆ.

ಶ್ರೇಯಸ್ ಅಯ್ಯರ್

ಬಲಾಬಲ

ಒಟ್ಟು ಪಂದ್ಯ	6
ಪಂಜಾಬ್ ಗೆಲುವು	3
ಗುಜರಾತ್ ಜಯ	3

ಇಂದಿನ ಪಂದ್ಯ

ಗುಜರಾತ್ ಟೈಟನ್ಸ್ V/s ಪಂಜಾಬ್ ಕಿಂಗ್ಸ್

ತಾಣ: ಮುಲ್ಲನಪುರ,
ಆರಂಭ: ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ವೈಭವ್ ಮಿಂಚು; ರಾಯಲ್ಸ್ ಶುಭಾರಂಭ

ಅಲ್ಪಮೊತ್ತಕ್ಕೆ ಕುಸಿದ ಚೆನ್ನೈ ಸೂಪರ್ ಕಿಂಗ್ಸ್

• ರಾಜಸ್ಥಾನ ಬೌಲರ್‌ಗಳ ಬಿಗುದಾಳಿ

ಗುವಾಹಟಿ (ಪಿಟಿಐ): ಬೌಲರ್‌ಗಳ ಸಾಂಘಿಕ ಪ್ರದರ್ಶನದ ನಂತರ ವೈಭವ್ ಸೂರ್ಯವಂಶಿ ಅವರು ಬ್ಯಾಟಿಂಗ್‌ನಲ್ಲಿ ಮಿಂಚು ಹರಿಸಿದರು. ಇದರಿಂದಾಗಿ, ರಾಜಸ್ಥಾನ ರಾಯಲ್ಸ್ ತಂಡವು ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ 8 ವಿಕೆಟ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸಿ, ಶುಭಾರಂಭ ಮಾಡಿತು.

ಬರ್ಸಾಪರ ಕ್ರೀಡಾಂಗಣದಲ್ಲಿ ಮಳೆಯಿಂದಾಗಿ ಪಿಚ್ ಮೇಲೆ ಹೊದಿಕೆ ಹಾಕಲಾಗಿದ್ದು ತೇವಾಂಶವೂ ಇತ್ತು. ಟಾಸ್ ಗೆದ್ದು ಫೀಲ್ಡಿಂಗ್ ಮಾಡುವ ನಾಯಕ ರಿಯಾನ್ ಪರಾಗ್ ಅವರ ನಿರ್ಧಾರ ಸಮರ್ಥಿಸುವಂತೆ ಬೌಲರ್‌ಗಳು ಬೇಗನೇ ಯಶಸ್ಸು ಪಡೆದರು. ಸಿಎಸ್‌ಕೆ ತಂಡವನ್ನು 127 ರನ್‌ಗಳ ಅಲ್ಪ ಮೊತ್ತಕ್ಕೆ ಉರುಳಿಸಿದರು.

ಸುಲಭ ಗುರಿ ಬೆನ್ನಟ್ಟಿದ ರಿಯಾನ್ ಪಡೆಗೆ ವೈಭವ್ (52; 36ಎ, 4x3, 6x1) ಹಾಗೂ ಯಶಸ್ವಿ ಜೈಸ್ವಾಲ್ ಉತ್ತಮ ಆರಂಭ ನೀಡಿದರು. ಈ ಜೋಡಿಯು ಮೊದಲ ವಿಕೆಟ್‌ಗೆ 6.2 ಓವರ್‌ಗಳಲ್ಲಿ 75 ರನ್ ಸೂರೆ ಮಾಡಿತು. ಜೈಸ್ವಾಲ್ ಅವರು ಧ್ರುವ್ ಜುರೆಲ್ ಹಾಗೂ ರಿಯಾನ್ ಜೊತೆಗೂಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ರಾಜಸ್ಥಾನ ತಂಡವು ಇನ್ನೂ 47 ಎಸೆತಗಳಿರುವಂತೆ ಜಯ ಸಾಧಿಸಿತು.

ರಾಯಲ್ಸ್ ವೇಗಿಗಳ ಮಿಂಚು: ಇದಕ್ಕೆ ಮುನ್ನ, ವೇಗದ ಬೌಲರ್‌ಗಳಾದ ಜೋಫ್ರಾ ಆರ್ಚರ್, ನಾಂಡ್ರೆ ಬರ್ಗರ್ ಮತ್ತು ರಾಯಲ್ಸ್ ತಂಡಕ್ಕೆ ಮರಳಿದ ಜಡೇಜ ತಲಾ ಎರಡು ವಿಕೆಟ್‌ಗಳನ್ನು ಪಡೆದರು.

ಟಿ20 ವಿಶ್ವಕಪ್ ಗೆಲುವಿನಲ್ಲಿ ಮಿಂಚಿದ್ದ ಸಂಜು ಸ್ಯಾಮ್ಸನ್ (6) ಅವರಿಗೆ ಸೂಪರ್ ಕಿಂಗ್ಸ್ ಪರ ಪದಾರ್ಪಣೆ ಸ್ಮರಣೀಯವಾಗಲಿಲ್ಲ. ಎರಡನೇ ಓವರಿನಲ್ಲೇ ದಕ್ಷಿಣ ಆಫ್ರಿಕಾದ ವೇಗಿ ಬರ್ಗರ್ ಅವರ ಎಕ್ಸ್‌ಪ್ರೆಸ್ ವೇಗದ ಎಸೆತವನ್ನು ಮಿಡ್‌ವಿಕೆಟ್ ಮೇಲೆ ಎತ್ತುವ ಭರದಲ್ಲಿ ಆಫ್ ಸ್ಟಂಪ್ ಕಳೆದುಕೊಂಡರು. ನಾಯಕ ಋತುರಾಜ್ ಗಾಯಕವಾಡ ಅವರೂ ಪರದಾಡಿದರು. ಅವರನ್ನು ಮೂರನೇ ಓವರಿನಲ್ಲಿ ಆರ್ಚರ್ ಬೌಲ್ಡ್ ಮಾಡಿದರು.

ಆಯುಷ್ ಮ್ಹಾತ್ರೆ ಬಂದ ಹಾಗೆಯೇ, ಬರ್ಗರ್ ಬೌಲಿಂಗ್‌ನಲ್ಲಿ ವಿಕೆಟ್‌ಕೀಪರ್‌ಗೆ ಕ್ಯಾಚಿತ್ತಾಗ ಚೆನ್ನೈ ಮೊತ್ತ 3.1 ಓವರುಗಳಲ್ಲಿ 3 ವಿಕೆಟ್‌ಗೆ 19. ಎಂಟನೇ ಓವರಿನಲ್ಲಿ ದಾಳಿಗಿಳಿದ ರವೀಂದ್ರ ಜಡೇಜ (18ಕ್ಕೆ2), ಸರ್ಫರಾಜ ಖಾನ್ ಅವರನ್ನು ಎಲ್‌ಬಿ ಬಲೆಗೆ ಕೆಡವಿದರು. ಅದೇ ಓವರಿನಲ್ಲಿ ಅವರು ವಿಶ್ವಕಪ್ ತಾರೆ ಶಿವಂ ದುಬೆ (6, 4ಎ) ಅವರ ವಿಕೆಟ್ ಸಹ ಕಬಳಿಸಿದರು. ಆಗ ಮೊತ್ತ 57ಕ್ಕೆ6. ಇಂಗ್ಲೆಂಡ್‌ನ ವೇಗದ ಬೌಲಿಂಗ್ ಆಲ್‌ರೌಂಡರ್ ಜೇಮಿ ಓವರ್ಟನ್ (43, 36ಎ) ತಂಡದ ನೆರವಿಗೆ ಬಂದಿದ್ದರಿಂದ ನೂರರ ಗಡಿ ದಾಟಲು ಸಾಧ್ಯವಾಯಿತು.

ವೈಭವ್ ಸೂರ್ಯವಂಶಿ

ಸಂಜು ಸ್ಯಾಮ್ಸನ್ ವಿಕೆಟ್ ಪಡೆದ ಸಂಭ್ರಮದಲ್ಲಿ ನಾಂಡ್ರೆ ಬರ್ಗರ್ (ಎಡ) ಚಿತ್ರಗಳು: ಪಿಟಿಐ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್: 127 (19.4 ಓವರ್‌ಗಳಲ್ಲಿ)
ಸಂಜು ಬಿ ಬರ್ಗರ್ 6 (7ಎ, 4x1)
ಗಾಯಕವಾಡ್ ಬಿ ಆರ್ಚರ್ 6 (11ಎ, 4x1)
ಆಯುಷ್ ಬಿ ಜುರೇಲ್ ಬಿ ಬರ್ಗರ್ 0 (1ಎ)
ಮ್ಯಾಥ್ಯೂ ಸಿ ಜೈಸ್ವಾಲ್ ಬಿ ಸಂದೀಪ್ 2 (7ಎ)
ಸರ್ಫರಾಜ್ ಎಲ್‌ಬಿಡಬ್ಲ್ಯು ಬಿ ಜಡೇಜ 17 (12ಎ, 4x2, 6x1)
ಕಾರ್ತಿಕ್ ಎಲ್‌ಬಿಡಬ್ಲ್ಯು ಬಿ ಬ್ರಿಜೇಶ್ 18 (15ಎ, 6x1)
ಶಿವಂ ಸಿ ಬಿಷ್ಣೋಯಿ ಬಿ ಜಡೇಜ 6 (4ಎ, 6x1)
ಓವರ್ಟನ್ ರನೌಟ್ (ಹೆಟ್ಮೆಯರ್/ಜುರೇಲ್) 43 (36ಎ, 4x2, 6x2)
ನೂರ್ ಸಿ ಜುರೇಲ್ ಬಿ ಆರ್ಚರ್ 1 (9ಎ)
ಮ್ಯಾಟ್ ಸಿ ಅಂಡ್ ಬಿ ಬಿಷ್ಣೋಯಿ 5 (7ಎ, 4x1)
ಅನ್ಶುಲ್ ಕಂಬೋಜ್ ಔಟಾಗದೇ 7 (10ಎ, 4x1)
ಇತರೆ: 16 (ಲೆಗ್‌ಬೈ 9, ನೋಬಾಲ್ 1, ವೈಡ್ 6)
ವಿಕೆಟ್ ಪತನ: 1-14 (ಸಂಜು ಸ್ಯಾಮ್ಸನ್, 1.6), 2-19 (ಋತುರಾಜ್ ಗಾಯಕವಾಡ್, 2.6), 3-19 (ಆಯುಷ್ ಮ್ಹಾತ್ರೆ, 3.1), 4-38 (ಮ್ಯಾಥ್ಯೂ ಶಾರ್ಟ್, 5.3), 5-51 (ಸರ್ಫರಾಜ್ ಖಾನ್, 7.2), 6-57 (ಶಿವಂ ದುಬೆ, 7.6), 7-74 (ಕಾರ್ತಿಕ್ ಶರ್ಮಾ, 10.3), 8-82 (ನೂರ್ ಅಹ್ಮದ್, 12.5), 9-94 (ಮ್ಯಾಟ್ ಹೆನ್ರಿ, 15.3), 10-127 (ಜೇಮಿ ಓವರ್ಟನ್, 19.4)
ಬೌಲಿಂಗ್: ಜೋಫ್ರಾ ಆರ್ಚರ್ 4-0-19-2, ನಾಂಡ್ರೆ ಬರ್ಗರ್ 4-0-26-2, ಬ್ರಿಜೇಶ್ ಶರ್ಮಾ 3-0-17-1, ಸಂದೀಪ್ ಶರ್ಮಾ 2.4-0-22-1, ರವಿ ಬಿಷ್ಣೋಯಿ 3-0-16-1, ರವೀಂದ್ರ ಜಡೇಜ 3-0-18-2

ರಾಜಸ್ಥಾನ ರಾಯಲ್ಸ್: 2 ವಿಕೆಟ್‌ಗೆ 128 (12.1 ಓವರ್‌ಗಳಲ್ಲಿ)
ಯಶಸ್ವಿ ಜೈಸ್ವಾಲ್ ಔಟಾಗದೇ 38 (36ಎ, 4x3, 6x1)
ವೈಭವ್ ಸಿ ಸರ್ಫರಾಜ್ ಬಿ ಕಂಬೋಜ್ 52 (17ಎ, 4x4, 6x5)
ಜುರೇಲ್ ಬಿ ಕಂಬೋಜ್ 18 (9ಎ, 4x4)
ರಿಯಾನ್ ಪರಾಗ್ ಔಟಾಗದೇ 14 (11ಎ, 4x1, 6x1)
ಇತರೆ: 6 (ಬೈ 4, ಲೆಗ್‌ಬೈ 1, ವೈಡ್ 1)
ವಿಕೆಟ್ ಪತನ: 1-75 (ವೈಭವ್ ಸೂರ್ಯವಂಶಿ 6.2), 2-99 (ಧ್ರುವ ಜುರೇಲ್, 8.3)
ಬೌಲಿಂಗ್: ಮ್ಯಾಟ್ ಹೆನ್ರಿ 3-0-40-0, ಖಲೀಲ್ ಅಹಮ್ಮದ್ 3-0-17-0, ಅನ್ಶುಲ್ ಕಂಬೋಜ್ 3-0-27-2, ನೂರ್ ಅಹಮ್ಮದ್ 2-0-24-0, ಜೇಮಿ ಓವರ್ಟನ್ 1-0-14-0, ಮ್ಯಾಥ್ಯು ಶಾರ್ಟ್ 0.1-0-1-0
ಪಂದ್ಯದ ಆಟಗಾರ: ನಾಂಡ್ರೆ ಬರ್ಗರ್.

ಕ್ರಿಕೆಟ್ ಆಸ್ಟ್ರೇಲಿಯಾ ಬಗ್ಗೆ ಅಜಿಂಕ್ಯ ಅಸಮಾಧಾನ

ಮುಂಬೈ (ಎಎಫ್‌ಪಿ): ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮೆರಾನ್ ಗ್ರೀನ್ ಅವರು ಬೌಲಿಂಗ್ ಮಾಡಲು ಆಗದ್ದಕ್ಕೆ ಕೋಲ್ಕತ್ತ ನೈಟ್ ರೈಡರ್ಸ್ ನಾಯಕ ಅಜಿಂಕ್ಯ ರಹಾನೆ ಅವರು ಕ್ರಿಕೆಟ್ ಆಸ್ಟ್ರೇಲಿಯಾದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೂರು ಬಾರಿಯ ಚಾಂಪಿಯನ್ ನೈಟ್ ರೈಡರ್ಸ್ ತಂಡವು 26 ವರ್ಷ ವಯಸ್ಸಿನ ಗ್ರೀನ್ ಅವರನ್ನು ಡಿಸೆಂಬರ್‌ನಲ್ಲಿ ನಡೆದ ಹರಾಜಿನಲ್ಲಿ ಸುಮಾರು ₹25 ಕೋಟಿಗೆ ಖರೀದಿ ಮಾಡಿತ್ತು. ಅವರು ಅತಿ ಹೆಚ್ಚಿನ ಮೌಲ್ಯಕ್ಕೆ ಬಿಡ್ ಆದ ವಿದೇಶಿ ಆಟಗಾರ ಎನಿಸಿದ್ದರು. ಬೌಲಿಂಗ್ ಆಯ್ಕೆಯಾಗಿ ಗ್ರೀನ್ ಅವರನ್ನು ಬಳಸಿಕೊಳ್ಳದಿರುವ ಬಗ್ಗೆ ಪಂದ್ಯದ ನಂತರ ಕೇಳಿದ ಪ್ರಶ್ನೆಗೆ, 'ಇದನ್ನು ಕ್ರಿಕೆಟ್ ಆಸ್ಟ್ರೇಲಿಯಾಕ್ಕೆ ಕೇಳಿಕೊಳ್ಳಿ' ಎಂದು ರಹಾನೆ ಖಾರವಾಗಿ ಪ್ರತಿಕ್ರಿಯಿಸಿದರು.

'ಬೆನ್ನಿನ ಕೆಳಭಾಗದ ನೋವಿನಿಂದಾಗಿ ಗ್ರೀನ್ ಅವರಿಗೆ ಕೆಲಸಮಯ ಬೌಲಿಂಗ್‌ನಿಂದ ದೂರವಿರಬೇಕಾದ ಅಗತ್ಯವಿದೆ. ನೈಟ್‌ರೈಡರ್ಸ್ ತಂಡಕ್ಕೆ ಈ ಮೊದಲೇ ಮಾಹಿತಿ ನೀಡಲಾಗಿದೆ' ಎಂದು ಕ್ರಿಕೆಟ್ ಆಸ್ಟ್ರೇಲಿಯಾ ವಕ್ತಾರರೊಬ್ಬರು ತಿಳಿಸಿದ್ದಾರೆ.

ಕ್ಯಾಂಡಿಡೇಟ್ಸ್ ಚೆಸ್: ವೀ ಯಿ ಜತೆ ಡ್ರಾ ಸಾಧಿಸಿದ ಪ್ರಜ್ಞಾನಂದ

ಪಾಫೋಸ್ (ಸೈಪ್ರಸ್), (ಪಿಟಿಐ): ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಸೋಮವಾರ ಓಪನ್ ವಿಭಾಗದ ಎಲ್ಲ ಪಂದ್ಯಗಳು ಡ್ರಾ ಆದವು. ಅಂತೆಯೇ ಸತತ ಎರಡನೇ ದಿನ ಮಹಿಳೆಯರ ವಿಭಾಗದಲ್ಲೂ ನಿರ್ಣಾಯಕ ಫಲಿತಾಂಶಗಳು ದಾಖಲಾಗಲಿಲ್ಲ. ಭಾರತದ ಆರ್.ಪ್ರಜ್ಞಾನಂದ ಅವರು ಎರಡನೇ ಸುತ್ತಿನಲ್ಲಿ ಚೀನಾದ ವೀ ಯಿ ಜೊತೆ ಡ್ರಾ ಮಾಡಿಕೊಂಡರು.

ಪ್ರಜ್ಞಾನಂದ, ಅಮೆರಿಕದ ಫ್ಯಾಬಿಯಾನೊ ಕರುವಾನ ಮತ್ತು ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ತಲಾ 1.5 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ದಿವ್ಯಾ ದೇಶಮುಖ್ ಅವರು ಸ್ವದೇಶದ ಆರ್. ವೈಶಾಲಿ ಅವರನ್ನು ಮಣಿಸುವ ಅವಕಾಶವನ್ನು ಕೈಚೆಲ್ಲಿದರು.

ಏಷ್ಯಾಕಪ್ ಅರ್ಹತಾ ಪಂದ್ಯ: ಭಾರತಕ್ಕೆ ಹಾಂಗ್‌ಕಾಂಗ್ ಸವಾಲು

ರಯಾನ್ ವಿಲಿಯಮ್ಸ್ ಮೇಲೆ ಗಮನ

ಕೊಚ್ಚಿ (ಪಿಟಿಐ): ಭಾರತ ತಂಡವು ಎಎಫ್‌ಸಿ ಏಷ್ಯನ್ ಕಪ್ ಅರ್ಹತಾ ಸುತ್ತಿನ ರೇಸ್‌ನಿಂದ ಹೊರಬಿದ್ದಿದೆ. ಆದರೆ ಮಂಗಳವಾರ ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯಲಿರುವ ಹಾಂಗ್‌ಕಾಂಗ್ ಎದುರಿನ ಕೊನೆಯ ಪಂದ್ಯದಲ್ಲಿ ಎಲ್ಲರ ಕಣ್ಣು ಆಸ್ಟ್ರೇಲಿಯಾ ಸಂಜಾತ ಆಟಗಾರ ರಯಾನ್ ವಿಲಿಯಮ್ಸ್ ಅವರ ಮೇಲಿದೆ.

ರಯಾನ್ ಅವರಿಗೆ ಭಾರತ ತಂಡಕ್ಕೆ ಆಡಲು ಫಿಫಾ ಅನುಮತಿ ನೀಡಿದ್ದು, ಅವರು ಹಾಂಗ್‌ಕಾಂಗ್ ವಿರುದ್ಧದ ಪಂದ್ಯಕ್ಕೆ ಬಹುನಿರೀಕ್ಷಿತ ಪದಾರ್ಪಣೆ ಮಾಡಲಿದ್ದಾರೆ. ಪರ್ತ್‌ನಲ್ಲಿ ಜನಿಸಿದ್ದ 32 ವರ್ಷ ವಯಸ್ಸಿನ ಆಟಗಾರ 11ನೇ ನಂಬರ್ ಜರ್ಸಿಯೊಡನೆ ಕಣಕ್ಕಿಳಿಯುವುದು ಖಚಿತವಾಗಿದೆ.

ಭಾರತ ತಂಡದ ಜೊತೆ ಹಾಂಗ್‌ಕಾಂಗ್ ಕೂಡ 2027ರ ಏಷ್ಯನ್ ಕಪ್ ಟೂರ್ನಿಯ ಅರ್ಹತಾ ಸುತ್ತಿನಿಂದ ಈಗಾಗಲೇ ಹೊರಬಿದ್ದಿದೆ. ಆದರೆ ಫಿಫಾ ರ‍್ಯಾಂಕಿಂಗ್ ಪಾಯಿಂಟ್ಸ್ ದೃಷ್ಟಿಯಿಂದ ಈ ಪಂದ್ಯ ಉಭಯ ತಂಡಗಳಿಗೆ ಮಹತ್ವದ್ದು.

ಭಾರತದಲ್ಲಿ ಫುಟ್‌ಬಾಲ್ ಆಟದ ಪ್ರಮುಖ ಕೇಂದ್ರವಾಗಿರುವ ಕೊಚ್ಚಿಯಲ್ಲಿ ಒಂದು ದಶಕದ ನಂತರ ಅಂತರರಾಷ್ಟ್ರೀಯ ಮಟ್ಟದ ಫುಟ್‌ಬಾಲ್ ಪಂದ್ಯ ನಡೆಯುತ್ತಿದೆ. ಹೀಗಾಗಿ ಸ್ಥಳೀಯ ಫುಟ್‌ಬಾಲ್ ಪ್ರಿಯರು ಭಾರಿ ಸಂಖ್ಯೆಯಲ್ಲಿ ಕ್ರೀಡಾಂಗಣಕ್ಕೆ ಬರುವ ನಿರೀಕ್ಷೆಯಿದೆ.

ಹಾಂಗ್‌ಕಾಂಗ್ ಎದುರು ಅತ್ಯುತ್ತಮವಾಗಿ ಆಡುವ ಮೂಲಕ ಭಾರತ ತಂಡವು ಈ ಅಭಿಯಾನವನ್ನು ಸಕಾರಾತ್ಮಕ ರೀತಿಯಲ್ಲಿ ಕೊನೆಗೊಳಿಸುವ ವಿಶ್ವಾಸದಲ್ಲಿದೆ.

ರಯಾನ್ ವಿಲಿಯಮ್ಸ್ (ಎಡ) ಅವರು ಸಹ ಆಟಗಾರರೊಂದಿಗೆ ಅಭ್ಯಾಸ ನಡೆಸಿದರು 'ಎಕ್ಸ್' ಚಿತ್ರ

ಕ್ರೀಡಾಂಗಣದ ನಿರ್ವಹಣೆ ವಹಿಸುವ ಗ್ರೇಟರ್ ಕೊಚ್ಚಿನ್ ಪ್ರಾಧಿಕಾರಕ್ಕೆ ಕೇರಳ ಫುಟ್‌ಬಾಲ್ ಸಂಸ್ಥೆಯು ಕಡ್ಡಾಯ ಭದ್ರತಾ ಠೇವಣಿ ಜಮೆ ಮಾಡಿರಲಿಲ್ಲ. ಹೀಗಾಗಿ ಭಾರತ ತಂಡದ ಮೂವರು ಆಟಗಾರರು, ಕೋಚ್ ಖಾಲಿದ್ ಜಮಿಲ್ ಅವರಿಗೆ ಮಾಧ್ಯಮಗೋಷ್ಠಿ ನಡೆಸಲು ಬಂದಾಗ ಕ್ರೀಡಾಂಗಣ ಪ್ರವೇಶ ನಿರಾಕರಿಸಲಾಗಿತ್ತು. ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಮಧ್ಯಸ್ಥಿಕೆ ವಹಿಸಿದ ನಂತರ ಪಾವತಿ ವಿಚಾರ ಬಗೆಹರಿದಿದೆ. ಈಗ ಇದರಿಂದ ಹೊರಬಂದು ತಂಡವು ತವರಿನ ಕೊನೆಯ ಪಂದ್ಯದಲ್ಲಿ ಉತ್ತಮ ಆಟವಾಡುವುದೇ ಎಂಬ ಕುತೂಹಲವಷ್ಟೇ ಉಳಿದಿದೆ.

ಭಾರತ ಇದುವರೆಗಿನ ಲೀಗ್ ಪಂದ್ಯಗಳಲ್ಲಿ ಒಂದರಲ್ಲೂ ಜಯಗಳಿಸಿಲ್ಲ. ಅದನ್ನು ನೀಗಿಸಲು ಈಗ ಅವಕಾಶವಿದೆ.

ವಿಲಿಯಮ್ಸ್ 2025ರಲ್ಲಿ ಆಸ್ಟ್ರೇಲಿಯಾದ ಪೌರತ್ವ ತೊರೆದಿದ್ದರು. ಅವರ ತಾಯಿ ಆಂಗ್ಲೊ ಇಂಡಿಯನ್ ಆದ ಕಾರಣ ಅವರಿಗೆ ಪೌರತ್ವ ಪಡೆಯಲು ನೆರವಾಯಿತು. ವಿಲಿಯಮ್ಸ್ ಅವರ ಅಜ್ಜ ಮುಂಬೈಯಲ್ಲಿ 1950ರ ದಶಕದಲ್ಲಿ ಫುಟ್‌ಬಾಲರ್ ಆಗಿದ್ದರು. 2023ರಲ್ಲಿ ಅವರು ಐಎಸ್‌ಎಲ್‌ಗೆ ಬೆಂಗಳೂರು ಎಫ್‌ಸಿ ಮೂಲಕ ಪದಾರ್ಪಣೆ ಮಾಡಿದ್ದರು.

ಹಾಂಗ್‌ಕಾಂಗ್ ತಂಡಕ್ಕೆ ಬಿಎಫ್‌ಸಿಯ ಮಾಜಿ ಮ್ಯಾನೇಜರ್ ಆ್ಯಶ್ಲೆ ವೆಸ್ಟ್‌ವುಡ್ ಕೋಚ್ ಆಗಿದ್ದಾರೆ. ಈ ತಂಡ ಕ್ವಾಲಿಫೈರ್ಸ್‌ನ ಆರಂಭದಲ್ಲಿ ಭಾರತ ವಿರುದ್ಧ 1-0 ಗೆಲುವು ಪಡೆದಿದ್ದು, ಪುನರಾವರ್ತನೆಯ ನಿರೀಕ್ಷೆಯಲ್ಲಿದೆ.

ಪಂದ್ಯ ಆರಂಭ: ರಾತ್ರಿ 7.00

ಆದಿವಾಸಿ ಕ್ರೀಡೆ: ರೋಹನ್, ಮನೀಷಾಗೆ ಚಿನ್ನ

ರಾಯಪುರ (ಪಿಟಿಐ): ಕರ್ನಾಟಕ ರೋಹನ್ ದೊಡ್ಡಮನಿ ಮತ್ತು ಮನೀಷಾ ಸಿದ್ಧಿ ಅವರು ಇಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಸಾಧನೆ ಮೆರೆದರು. ಇದರೊಂದಿಗೆ ರಾಜ್ಯದ ಸ್ವರ್ಣ ಪದಕ 17ಕ್ಕೆ ಏರಿಕೆಯಾಗಿದೆ.

ಇಲ್ಲಿನ ಅಂಬಿಕಾಪುರದಲ್ಲಿ ಸೋಮವಾರ ನಡೆದ 60 ಕೆಜಿ ವಿಭಾಗದ ಗ್ರೀಕೊ ರೋಮನ್ ಕುಸ್ತಿ ಫೈನಲ್‌ನಲ್ಲಿ ರೋಹನ್ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ರಾಜಸ್ಥಾನದ ದಿನೇಶ್ ಸೋಲಂಕಿ ಅವರನ್ನು ಸೋಲಿಸಿದರು. ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ ಮನೀಷಾ 12-8ರಿಂದ ಹಿಮಾಚಲ ಪ್ರದೇಶದ ಮುಸ್ಕಾಮ್ ಅವರನ್ನು ಮಣಿಸಿದರು.

17 ಚಿನ್ನ, 6 ಬೆಳ್ಳಿ ಮತ್ತು 5 ಕಂಚು ಸೇರಿದಂತೆ ಒಟ್ಟು 28 ಪದಕಗಳನ್ನು ಗೆದ್ದಿರುವ ಕರ್ನಾಟಕ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಸಿದೆ. ಒಡಿಶಾ (9 ಚಿನ್ನ, 4 ಬೆಳ್ಳಿ ಮತ್ತು 10 ಕಂಚು) ನಂತರದ ಸ್ಥಾನದಲ್ಲಿದೆ.

ಮನೀಷಾ ಸಿದ್ಧಿ

ರೋಹನ್ ದೊಡ್ಡಮನಿ

ಏತನ್ಮಧ್ಯೆ, ಪುರುಷರ 65 ಕೆಜಿ ಫ್ರೀಸ್ಟೈಲ್ ಫೈನಲ್‌ನಲ್ಲಿ ಮುಲಾಯಂ ಖಾರ್ವಾರ್ ಅವರು ರಾಜಸ್ಥಾನದ ರಾಕೇಶ್ ಮೀನಾ ವಿರುದ್ಧ ಗೆಲುವು ಸಾಧಿಸಿ ಬಿಹಾರಕ್ಕೆ ಚಿನ್ನದ ಪದಕ ಗೆದ್ದುಕೊಟ್ಟರು. ಕರ್ನಾಟಕದ ಕೆ.ವಿ. ಕೆಂಪಣ್ಣವರ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ರಾಯ್‌ಪುರದ ಅಂತರರಾಷ್ಟ್ರೀಯ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪುರುಷರ ಹಾಕಿ ಸೆಮಿಫೈನಲ್‌ನಲ್ಲಿ ಒಡಿಶಾ ತಂಡವು 8-0 ಅಂತರದಿಂದ ಮಧ್ಯಪ್ರದೇಶವನ್ನು ಸೋಲಿಸಿದರೆ, ಮಿಜೋರಾಂ ತಂಡವು 3-2 ಅಂತರದಿಂದ ಜಾರ್ಖಂಡ್ ತಂಡವನ್ನು ಮಣಿಸಿತು.

ವಿಶ್ವ ವುಶು: ಭಾರತಕ್ಕೆ 3 ಸ್ವರ್ಣ

ಟಿಯಾಂಜಿನ್ (ಚೀನಾ, ಪಿಟಿಐ): ಭಾರತದ ಅಥ್ಲೀಟ್‌ಗಳು ಇಲ್ಲಿ ನಡೆಯುತ್ತಿರುವ 10ನೇ ವಿಶ್ವ ಜೂನಿಯರ್ ವುಶು ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನ ಸೇರಿ 10 ಪದಕಗಳನ್ನು ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.

ಸ್ಯಾಂಡಾ (ಕುಸ್ತಿ) ಸ್ಪರ್ಧೆಯಲ್ಲಿ ಪಾರಮ್ಯ ಸಾಧಿಸಿದ ಭಾರತದ ಅಥ್ಲೀಟ್‌ಗಳು ಮೂರು ಚಿನ್ನದ ಪದಕ ಬಾಚಿದರು. ಉಪೇಂದ್ರೊ ತೌಗಮ್ (ಬಾಲಕರ 45 ಕೆ.ಜಿ.), ನೊಂಗಮೈಥೆಮ್ ಪಮ್‌ಹೀಬಾ (ಜೂನಿಯರ್ ಬಾಲಕರ 52 ಕೆ.ಜಿ.) ಹಾಗೂ ಲಾಯ್ಟಂಗ್‌ಬಮ್ ವಿಕ್ಟರ್ (ಯುವ ಬಾಲಕರು 52 ಕೆ.ಜಿ.) ಸೋಮವಾರ ಸ್ವರ್ಣಕ್ಕೆ ಮುತ್ತಿಕ್ಕಿದರು.

ಬಾಲಕರ 48 ಕೆ.ಜಿ. ವಿಭಾಗದಲ್ಲಿ ಯುವರಾಜ್ ಬೆಳ್ಳಿ ಜಯಿಸಿದರು. ಗೌತಮ್ ಮಂಕಾಸ್ (ಜೂನಿಯರ್ ಬಾಲಕರ 48 ಕೆ.ಜಿ.) ಹಾಗೂ ಅನು (ಯುವ ಬಾಲಕಿಯರು 48 ಕೆ.ಜಿ.) ಅವರು ಭಾನುವಾರ ಕಂಚು ಜಯಿಸಿದ್ದರು.

ಟೌಲೊ (ಕಲಾತ್ಮಕ) ಸ್ಪರ್ಧೆಗಳಲ್ಲಿ ಕೊಂಥೌಜಮ್ ದೇವಿಕರಣಿ ದೇವಿ ಅವರು ತಲಾ ಒಂದು ಬೆಳ್ಳಿ ಹಾಗೂ ಕಂಚಿನ ಪದಕ ಗೆದ್ದರು. ರಾಜಕುಮಾರಿ ಲಾನ್‌ಚೆನ್ಬಿ ಚಾನು ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಶೀತಲ್ ವರ್ಷದ 'ಪ್ಯಾರಾ ಆರ್ಚರ್'

ಲುಸಾನ್ (ಪಿಟಿಐ): ಕಾಲುಗಳ ನೆರವಿನಿಂದ ಬಾಣ ಪ್ರಯೋಗಿಸುವ ಭಾರತದ ಬಿಲ್ಗಾರ್ತಿ ಶೀತಲ್ ದೇವಿ ಅವರನ್ನು ವಿಶ್ವ ಆರ್ಚರಿ ಸಂಸ್ಥೆಯು '2025ರ ವರ್ಷದ ಪ್ಯಾರಾ ಆರ್ಚರ್' ಗೌರವಕ್ಕೆ ಆಯ್ಕೆ ಮಾಡಿದೆ.



19 ವರ್ಷ ವಯಸ್ಸಿನ ಜಮ್ಮು-ಕಾಶ್ಮೀರದ ಪ್ರತಿಭಾನ್ವಿತೆಯ ಅಸಾಧಾರಣ ಸಾಧನೆಗಳ ಪಟ್ಟಿಗೆ ಈಗ ಈ ಗೌರವ ಸೇರ್ಪಡೆಯಾಗಿದೆ. ಕೈಗಳಿಲ್ಲದೇ ಜನಿಸಿದ್ದ ಅವರಿಗೆ ಪಾದ, ಕಾಲುಗಳು ಮತ್ತು ಭುಜದ ನೆರವು ಪಡೆದು ಬಾಣ ಪ್ರಯೋಗಿಸುವ ಕೌಶಲ ಸಿದ್ಧಿಸಿದೆ.

ದಕ್ಷಿಣ ಕೊರಿಯಾದ ಗ್ವಾಂಗ್‌ಝುನಲ್ಲಿ 2025ರ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವ ಪ್ಯಾರಾ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಅವರು ಮಹಿಳೆಯರ ವಿಭಾಗದ ಕಾಂಪೌಂಡ್ ವೈಯಕ್ತಿಕ ಸ್ಪರ್ಧೆಯಲ್ಲಿ ಚಾಂಪಿಯನ್ ಆಗಿದ್ದರು. ಕಾಂಪೌಂಡ್ ಆರ್ಚರಿಯ ಬಿಲ್ಲು ಆಧುನಿಕ ರೀತಿಯದಾಗಿದ್ದು, ಸಣ್ಣ ರಾಟೆ, ಕೇಬಲ್‌ಗಳನ್ನು ಹೊಂದಿದೆ. ರಿಕರ್ವ್‌ಗಿಂತ ವೇಗ, ನಿಖರತೆ ಹೊಂದಿದೆ.

ಗ್ವಾಂಗ್‌ಝುನಲ್ಲಿ ಅವರು ವೈಯಕ್ತಿಕ ಚಿನ್ನದ ಜೊತೆ ತಂಡ ವಿಭಾಗದ ಬೆಳ್ಳಿ ಮತ್ತು ಮಿಶ್ರ ತಂಡ ವಿಭಾಗದ ಕಂಚು ಗೆದ್ದಿದ್ದರು.

'ಭಾರತದ ಶೀತಲ್ ದೇವಿ ಅವರು ವಿಶ್ವ ಕಿರೀಟದ ಜೊತೆ ಕಳೆದ ಸಾಲಿನಲ್ಲಿ ತೋರಿದ ಅಮೋಘ ಸಾಧನೆಗಾಗಿ ವರ್ಷದ ಪ್ಯಾರಾ ಆರ್ಚರ್ ಗೌರವಕ್ಕೆ ಪಾತ್ರರಾಗಿದ್ದಾರೆ' ಎಂದು ವಿಶ್ವ ಆರ್ಚರಿ ತಿಳಿಸಿದೆ.

'ವಿಶ್ವದ ಶ್ರೇಷ್ಠ ಪ್ಯಾರಾ ಆರ್ಚರಿ ಸ್ಪರ್ಧಿಗಳೊಂದಿಗೆ ನಾಮ ನಿರ್ದೇಶನ... ಈಗ ಶ್ರೇಷ್ಠ ಪ್ಯಾರಾ ಆರ್ಚರ್ ಗೌರವಕ್ಕೆ ಆಯ್ಕೆ. ಹೃದಯ ತುಂಬಿಬಂದಿದೆ. ಧನ್ಯವಾದಗಳು' ಎಂದು ಶೀತಲ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆಯಾ ವರ್ಷ ಅತ್ಯುತ್ತಮ ಸಾಧನೆ ತೋರುವ ಆರ್ಚರಿ ಸ್ಪರ್ಧಿಗಳನ್ನು ಗೌರವಿಸುವ ಈ ಪ್ರಶಸ್ತಿಗಳನ್ನು 2011ರಲ್ಲಿ ಆರಂಭಿಸಲಾಗಿತ್ತು.

ವೈಜ್ಞಾನಿಕ ಪಿಚ್; ಕರ್ನಾಟಕದ ಹೆಗ್ಗಳಿಕೆ

ಕೆಎಸ್‌ಸಿಎ ಮಾಜಿ ಕ್ಯೂರೇಟರ್ ನಾರಾಯಣರಾಜು ನುಡಿ

• ಗಿರೀಶ ದೊಡ್ಡಮನಿ

ಬೆಂಗಳೂರು: 'ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್ ನಿರ್ಮಾಣವಾಗಿರುವುದು ವೈಜ್ಞಾನಿಕ ಆಧಾರದ ಮೇಲೆ. ಇಡೀ ದೇಶದಲ್ಲಿ ವೈಜ್ಞಾನಿಕ ರೀತಿಯಲ್ಲಿ ಪಿಚ್ ನಿರ್ಮಾಣ ಮಾಡುವುದನ್ನು ಮೊದಲಿಗೆ ಆರಂಭಿಸಿದ್ದು ಕರ್ನಾಟಕದ ಹೆಗ್ಗಳಿಕೆ. 25 ವರ್ಷಗಳ ಹಿಂದೆ ಮಂಡ್ಯದ ಮಣ್ಣನ್ನು ಬಳಸಿ ಪಿಚ್ ಮಾಡಿದ್ದರಿಂದ ಉತ್ತಮ ಫಲಿತಾಂಶಗಳು ಬಂದಿವೆ'–

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮಾಜಿ ಪಿಚ್ ಕ್ಯೂರೇಟರ್ ಎಸ್. ನಾರಾಯಣರಾಜು ಅವರ ಹೆಮ್ಮೆಯ ನುಡಿಗಳು ಇವು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಟೂರ್ನಿಯ 19ನೇ ಆವೃತ್ತಿಯ ಉದ್ಘಾಟನೆ ಪಂದ್ಯದಲ್ಲಿ ಒಟ್ಟು 404 ರನ್‌ಗಳು ದಾಖಲಾದವು. 13 ವಿಕೆಟ್‌ಗಳೂ ಉರುಳಿದವು. ಬ್ಯಾಟಿಂಗ್ ಹಾಗೂ ಬೌಲಿಂಗ್‌ಗಳೆರಡಕ್ಕೂ ನೆರವು ನೀಡುವ ಪಿಚ್ ಇದಾಗಿದೆ. ಈ ಅಂಕಣದಲ್ಲಿರುವ ಸತ್ವ ಎಂತಹದು ಎಂಬುದರ ಬಗ್ಗೆ ನಾರಾಯಣರಾಜು 'ಪ್ರಜಾವಾಣಿ'ಗೆ ವಿವರಿಸಿದ್ದಾರೆ.

'ಚೆನ್ನಾಗಿ ನಿರ್ವಹಣೆ ಮಾಡಿದರೆ ನೂರು ವರ್ಷ ಕೂಡ ಬಾಳಿಕೆ ಬರುತ್ತದೆ. ಅಂತಹ ಶಕ್ತಿ ಮಂಡ್ಯದಲ್ಲಿ ಸಿಗುವ ಮಣ್ಣಿಗೆ ಇದೆ. 2001ರಲ್ಲಿ ಪದಾಧಿಕಾರಿಯಾಗಿದ್ದ ಬ್ರಿಜೇಶ್ ಅವರು ನನ್ನನ್ನು ಕ್ಯೂರೇಟರ್ ಆಗಿ ನೇಮಕ ಮಾಡಿದರು. ಪಿಚ್ ನವೀಕರಣಕ್ಕೆ ಸೂಚಿಸಿದರು. ಅದೇ ಸಂದರ್ಭದಲ್ಲಿ ಸಿಂಗಪುರದಲ್ಲಿ ಟೂರ್ನಿಯೊಂದಕ್ಕೆ ರಾಜ್ಯ ತಂಡದ ಮ್ಯಾನೇಜರ್ ಆಗಿ ಹೋಗಿದ್ದೆ. ಅಲ್ಲಿದ್ದ ಪಿಚ್ ಚೆನ್ನಾಗಿತ್ತು. ಆ ಅಂಕಣಕ್ಕೆ ಮೆಲ್ಬರ್ನ್‌ನಿಂದ ತಂದ ಮಣ್ಣು ಹಾಕಿದ್ದರು. ಅದರ ಮಾದರಿಯನ್ನು ಭಾರತಕ್ಕೆ ತೆಗೆದುಕೊಂಡು ಬಂದೆ. ಇಲ್ಲಿಯ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾದಲ್ಲಿ ಪರೀಕ್ಷೆ ಮಾಡಿಸಲಾಯಿತು. ದಕ್ಷಿಣ ಭಾರತದಲ್ಲಿ ಈ ತರಹದ ಮಣ್ಣು ಎಲ್ಲಿ ಸಿಗಬಹುದು ಎಂಬ ಮಾಹಿತಿ ಪಡೆದುಕೊಂಡೆವು. ನಂತರ ಎಲ್ಲ ಕಡೆ ಓಡಾಡಿ 40 ಮಾದರಿಗಳನ್ನು ತೆಗೆದುಕೊಂಡು ಬಂದೆ. ಅದರಲ್ಲಿ ರಾಯಚೂರು ಜಿಲ್ಲೆಯ ಸಾವಂತಗೇರಿಯಿಂದ ತಂದ ಮಣ್ಣು ಚೆನ್ನಾಗಿತ್ತು. ಚಿನ್ನಸ್ವಾಮಿ ಕ್ರೀಡಾಂಗಣದ ಬಿ ಮೈದಾನದಲ್ಲಿ ಅಭ್ಯಾಸಕ್ಕಾಗಿ ಪಿಚ್ ನಿರ್ಮಿಸಲಾಯಿತು' ಎಂದು ಹೇಳಿದರು.


ನಾರಾಯಣರಾಜು

ಚಿನ್ನಸ್ವಾಮಿ ಕ್ರೀಡಾಂಗಣದ ಪಿಚ್‌ಅನ್ನು ಹದಗೊಳಿಸುತ್ತಿರುವುದು ಸಂಗ್ರಹ ಚಿತ್ರ

'ಅದೇ ಸಂದರ್ಭದಲ್ಲಿ ಮುಖ್ಯ ಮೈದಾನದ ಪಿಚ್ ನವೀಕರಣ ಮಾಡಲು ನಿರ್ಧರಿಸಲಾಯಿತು. ಅದಕ್ಕಾಗಿ ಉತ್ತಮ ಮಣ್ಣನ್ನು ಹುಡುಕಲು ಆರಂಭಿಸಿದೆವು. ನ್ಯೂಜಿಲೆಂಡ್‌ನ ಸ್ಪೋರ್ಟ್ಸ್ ಟರ್ಫ್ ಸಂಸ್ಥೆಯ ಬ್ಲೇರ್ ಕ್ರಿಸ್ಟಿಯಾನ್ಸೆನ್ ಅವರನ್ನು ಕರೆಸಿದ ಬ್ರಿಜೇಶ್ ಪಟೇಲ್ ಅವರು ಅಭಿಪ್ರಾಯ ಪಡೆದರು. ಅದೊಂದು ಬಾರಿ ನಾವು ಮೈಸೂರಿಗೆ ಹೋಗಿ ಬರುವಾಗ ಮಂಡ್ಯದ ಸಮೀಪದಲ್ಲಿದ್ದ ಹೊಳಲು ಎಂಬ ಕೆರೆಯ ಬಳಿ ಇರುವ ಮಣ್ಣು ನೋಡಿದೆ. ಅದನ್ನು ಪರೀಕ್ಷೆಗಾಗಿ ತೆಗೆದುಕೊಂಡು ಬಂದೆವು. ಅಲ್ಲಿಯ ಶಾಸಕರೊಬ್ಬರು ನಮಗೆ ಸಹಾಯ ಮಾಡಿದರು. ಜಿಗುಟುತನ, ನೀರಿನ ಧಾರಣೆಯ ಸಾಮರ್ಥ್ಯ ಆ ಮಣ್ಣಿಗಿತ್ತು. ಅದನ್ನು ಬಳಸಲು ಬ್ಲೇರ್ ಕೂಡ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲಿಂದ ಇದೇ ಮಣ್ಣನ್ನು ಪಿಚ್‌ಗೆ ಹಾಕಲಾಯಿತು. ಬಹಳಷ್ಟು ಅಂತರರಾಷ್ಟ್ರೀಯ ಆಟಗಾರರು ಈ ಪಿಚ್‌ನಲ್ಲಿ ಆಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಐಪಿಎಲ್ ಟೂರ್ನಿಗಳಲ್ಲಿ ಶ್ರೇಷ್ಠ ಪಿಚ್ ಎಂಬ ಗೌರವ ಪಡೆದಿದ್ದು ನನ್ನ ವೃತ್ತಿಜೀವನದ ಅವಿಸ್ಮರಣೀಯ ಸಾಧನೆಗಳಾಗಿವೆ' ಎಂದರು.

ಯುವ ಅಥ್ಲೆಟಿಕ್ಸ್: ತುಮಕೂರಿನಲ್ಲಿ ಅಂತಿಮ ಟ್ರಯಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಜೂನಿಯರ್ (20 ವರ್ಷದೊಳಗಿನವರ) ಅಥ್ಲೆಟಿಕ್ ಕೂಟವು ಮಂಗಳೂರಿನ ಬದಲು ತುಮಕೂರಿನಲ್ಲಿ ನಡೆಯಲಿದೆ. ಆದರೆ ಈ ಕೂಟವು ನಿಗದಿಯಂತೆ ಏಪ್ರಿಲ್ 24 ರಿಂದ 26ರವರೆಗೆ ನಡೆಯಲಿದೆ.

ಮಂಗಳೂರಿನ ಕ್ರೀಡಾಂಗಣವು ಈ ಕೂಟಕ್ಕೆ ಸಿದ್ಧಗೊಂಡಿರಲಿಲ್ಲ. ಆದರೆ ಭಾರತ ಅಥ್ಲೆಟಿಕ್ ಫೆಡರೇಷನ್‌ನ ವೇಳಾಪಟ್ಟಿಯಲ್ಲಿ ಮಂಗಳೂರನ್ನು ತಾಣ ಎಂದು ತಪ್ಪಾಗಿ ಪ್ರಕಟಿಸಲಾಗಿತ್ತು ಎಂದು ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ಈ ಕೂಟವನ್ನು ಕರ್ನಾಟಕ ಅಥ್ಲೆಟಿಕ್ ಸಂಸ್ಥೆ ನಂತರ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಸಲು ಉದ್ದೇಶಿಸಿತು. ಆದರೆ ಏಪ್ರಿಲ್ 25ರಂದು ಈ ಕ್ರೀಡಾಂಗಣದಲ್ಲಿ ಬೆಂಗಳೂರು ಎಫ್‌ಸಿ ಮತ್ತು ಮುಂಬೈ ಸಿಟಿ ನಡುವಣ ಐಎಸ್‌ಎಲ್ ಪಂದ್ಯಕ್ಕೆ ನಿಗದಿಯಾಗಿರುವ ಕಾರಣ ಅಲಭ್ಯವಾಗಿತ್ತು. ಹೀಗಾಗಿ ತುಮಕೂರಿನ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ನಡೆಸಲು ನಿರ್ಧರಿಸಲಾಯಿತು.

ಮೂರು ದಿನಗಳ ಕೂಟವು, 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಅಂತಿಮ ಟ್ರಯಲ್ಸ್ ಆಗಲಿದೆ. ಈ ವಿಶ್ವ ಚಾಂಪಿಯನ್‌ಷಿಪ್ ಅಮೆರಿಕದ ಒರೆಗಾನ್‌ನಲ್ಲಿ ಆಗಸ್ಟ್ 5 ರಿಂದ 9ರವರೆಗೆ ನಡೆಯಲಿದೆ.

'ಐಪಿಎಲ್: ಶಾಸಕರಿಗೆ 3 ಟಿಕೆಟ್'

ಒಂದನೇ ಪುಟದಿಂದ...

'ಸುಮಾರು ಶೇ 50ರಿಂದ 60ರಷ್ಟು ಟಿಕೆಟ್‌ಗಳನ್ನು ಸರ್ಕಾರಿ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ವರ್ಗದವರಿಗೆ ವಿತರಿಸಲಾಗುತ್ತಿದೆ. ಅವರಿಗೆ ಹೋಲಿಕೆ ಮಾಡಿದರೆ ನಮ್ಮಲ್ಲಿ ಹಸ್ತಕ್ಷೇಪ ಕಡಿಮೆ ಇದೆ' ಎಂದೂ ಹೇಳಿದರು.

ಆಸನ ಸಂಖ್ಯೆ ಹೆಚ್ಚಳ: 'ಚಿನ್ನಸ್ವಾಮಿ ಕ್ರೀಡಾಂಗಣದ ಬಗ್ಗೆಯೂ ಚರ್ಚೆ ಮಾಡಿದ್ದೇವೆ. ಯಾವ ರೀತಿ ಆಸನಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಮಾತನಾಡಿದ್ದೇವೆ. ಬೇರೆ ಕಡೆ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ಗುರುತಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಆಯುಕ್ತರ ಜತೆ ಚರ್ಚಿಸಲಾಗಿದೆ. ಈ ಕುರಿತ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸಿದ ಬಳಿಕ ಚರ್ಚಿಸಿ ಅಗತ್ಯ ಅನುಮತಿ ನೀಡಲಾಗುವುದು. 20 ಸಾವಿರ ಆಸನಗಳ ಸಂಖ್ಯೆ ಹೆಚ್ಚಳ ಮಾಡಿದರೆ ಜನರಿಗೂ ಅನುಕೂಲ ಆಗಲಿದೆ' ಎಂದು ತಿಳಿಸಿದರು.

ಹಸ್ತಕ್ಷೇಪ ಇಲ್ಲ: ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಶಾಸಕರು ಹಾಗೂ ಸಚಿವರಿಗೆ ಪ್ರತ್ಯೇಕ ಗ್ಯಾಲರಿ ಮಾಡಬೇಕು ಎಂಬ ಬೇಡಿಕೆ ಬಗ್ಗೆ ಕೇಳಿದಾಗ, 'ನಾನು ಆ ವಿಚಾರಕ್ಕೆ ಹೋಗುವುದಿಲ್ಲ. ಅದು ಕೆಎಸ್‌ಸಿಎ ಪದಾಧಿಕಾರಿಗಳಿಗೆ ಬಿಟ್ಟ ವಿಚಾರ. ಅವರ ವ್ಯವಹಾರಗಳಲ್ಲಿ ಅತಿಯಾಗಿ ಹಸ್ತಕ್ಷೇಪ ಮಾಡುವುದಿಲ್ಲ. ನಾವು ಶಾಸಕರು, ಸಂಸದರಾಗಿರಬಹುದು. ಶಾಸಕರಿಂದ ಟಿಕೆಟ್ ಮನವಿ ಬಂದ ಕಾರಣ ಚರ್ಚೆ ಮಾಡಿದ್ದೇನೆ' ಎಂದರು.

'ಈಗಾಗಲೇ ಸರ್ಕಾರ ಕ್ರೀಡಾಂಗಣ ನಿರ್ಮಿಸಲು ನಿರ್ಧರಿಸಿದ್ದು, ಕೆಎಸ್‌ಸಿಎಗೂ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗ ನೀಡಲಾಗುವುದೇ' ಎಂಬ ಪ್ರಶ್ನೆಗೆ, 'ನಾವು ಈಗಾಗಲೇ ಕೆಎಸ್‌ಸಿಎಯವರಿಗೆ 25 ಎಕರೆ ಜಾಗ ನೀಡಿದ್ದೇವೆ. ತುಮಕೂರು, ಮೈಸೂರಿನಲ್ಲಿ ಜಾಗ ನೀಡಿದ್ದೇವೆ. ಬೆಂಗಳೂರಿನಲ್ಲಿ ಸೂರ್ಯನಗರದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ' ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದ ನಿವಾಸದಲ್ಲಿ ಸೋಮವಾರ ಭೇಟಿ ಮಾಡಿದರು. ಡಿಎನ್‌ಎ ತಂಡದ ಎಂ.ಡಿ. ವೆಂಕಟ್, ಆರ್‌ಸಿಬಿ ಸಿಇಒ ರಾಜೇಶ್ ಮೆನನ್ ಮತ್ತು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಭಾಗವಹಿಸಿದ್ದರು